ಶನಿವಾರ, ಮೇ 28, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಾವು ಮೇಳ

ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮಾವು ಮತ್ತು ಹಲಸು ಮೇಳದಲ್ಲಿ ಬಾಲಕಿಯೊಬ್ಬಳು ಮಾವಿನ ಹಣ್ಣು ಹಿಡಿದು ಸಂಭ್ರಮಿಸಿದಳು

30ಕ್ಕೆ ಸರ್ಕಾರಿ ನೌಕರರ ಕ್ರೀಡಾಕೂಟ

ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಮೇ 30 ಮತ್ತು 31 ಹಾಗೂ ಜೂನ್ 1ರಂದು ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ರಾಜ್ಯದ ಹತ್ತು ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಈ ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ. ರಾಜ್ಯಮಟ್ಟದ ಈ ಕ್ರೀಡಾಕೂಟಕ್ಕೆ ಆಯ್ಕೆಯಾಗಿ ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಂಡಿರುವ ಎಲ್ಲ ಕ್ರೀಡಾಪಟುಗಳಿಗೆ ಗುರುತಿನ ಚೀಟಿ ಬ್ಯಾಡ್ಜ್ ಮತ್ತು ಕ್ಯಾಪ್ ನೀಡಲಾಗುವುದು ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ತಿಳಿಸಿದ್ದಾರೆ.

ಈ ಸ್ಪರ್ಧೆಗಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೆಜಿಐಡಿ ಇಲಾಖೆಯ ಆನ್‌ಲೈನ್ ಸೇವೆ ಹಾಗೂ ಎಚ್‌ಆರ್‌ಎಂಎಸ್ ಮೂಲಕ ನೌಕರರ ಮಾಸಿಕ ವೇತನ ಭತ್ಯೆಗಳ ಮಾಹಿತಿ ಯೋಜನೆಯನ್ನು ಲೋಕಾರ್ಪಣೆ ಮಾಡಲಿದ್ದಾರೆ ಎಂದು ಷಡಾಕ್ಷರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 30ರಂದು ಸಂಜೆ 7ಕ್ಕೆ ಖ್ಯಾತ ಗಾಯಕ ವಿಜಯ ಪ್ರಕಾಶ್ ಅವರಿಂದ ಸಂಗೀತ ರಸ ಸಂಜೆ ಕಾರ್ಯಕ್ರಮ ನಡೆಯಲಿದೆ. 31ರಂದು ಜನಪದೋತ್ಸವ ಕಾರ್ಯಕ್ರಮ ನಡೆಯಲಿದೆ

ಸೇಂಟ್ ಮಾರ್ಕ್ಸ್ ರಸ್ತೆ ಪಕ್ಕದ ಪಾದಚಾರಿ ಮಾರ್ಗದಲ್ಲಿ ಹೊಂಡ ನಿರ್ಮಾಣವಾಗಿರುವುದು (ಎಡ ಚಿತ್ರ), ಪಾದಚಾರಿ ಮಾರ್ಗದ ದುಸ್ಥಿತಿ. –ಪ್ರಜಾವಾಣಿ ಚಿತ್ರಗಳು/ರಂಜು ಪಿ.

ಕಟ್ಟಡ ಕಾಮಗಾರಿ: ಸೇಂಟ್ ಮಾರ್ಕ್ಸ್ ರಸ್ತೆಯ ಪಾದಚಾರಿ ಮಾರ್ಗ ಹಳ್ಳ–ಗುಂಡಿಗಳ ತಾಣ

‘ಸ್ಮಾರ್ಟ್’ ಪಾದಚಾರಿ ಮಾರ್ಗಕ್ಕೆ ಕುತ್ತು

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿ ಟೆಂಡರ್ ಶ್ಯೂರ್ ಯೋಜನೆಯಡಿ ನಿರ್ಮಿಸಿದ್ದ ಅಂತರಾಷ್ಟ್ರೀಯ ದರ್ಜೆಯ ಸುಸಜ್ಜಿತ ಪಾದಚಾರಿ ಮಾರ್ಗ ಈಗ ಹಳ್ಳ-ಗುಂಡಿಗಳ ತಾಣವಾಗಿ ಮಾರ್ಪಟ್ಟಿದೆ.

ನಗರದ ಕೇಂದ್ರ ವಾಣಿಜ್ಯ ಪ್ರದೇಶದ (ಸಿಬಿಡಿ) ರಸ್ತೆ ಮತ್ತು ಪಾದಚಾರಿ ಮಾರ್ಗಗಳನ್ನು ಅಂತರಾಷ್ಟ್ರೀಯ ದರ್ಜೆಯಲ್ಲಿ ನಿರ್ಮಿಸಲು ಬಿಬಿಎಂಪಿ 41 ರಸ್ತೆಗಳನ್ನು ಆಯ್ಕೆ ಮಾಡಿಕೊಂಡಿತ್ತು. ಒಟ್ಟು 30.40 ಕಿ.ಮೀ. ಉದ್ದದ ರಸ್ತೆಯನ್ನು ಟೆಂಡರ್ ಶ್ಯೂರ್ ಯೋಜನೆಯಡಿ ಅಭಿವೃದ್ಧಿಪಡಿಸಲಾಗಿದೆ. ಅವುಗಳಲ್ಲಿ ಸೇಂಟ್ ಮಾರ್ಕ್ಸ್ ರಸ್ತೆಯೂ ಒಂದು.

ನಿರ್ಮಾಣವಾಗಿ ನಾಲ್ಕೇ ವರ್ಷಗಳಲ್ಲಿ ಸೇಂಟ್ ಮಾರ್ಕ್ಸ್ ರಸ್ತೆಯ ಪಾದಚಾರಿ ಮಾರ್ಗದ ಸ್ಥಿತಿ ಅಧೋಗತಿಗೆ ತಲುಪಿದೆ. ಮ್ಯೂಸಿಯಂ ರಸ್ತೆಯಲ್ಲಿ ಅಂಚೆ ಕಚೇರಿ ದಾಟಿ ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿ ಮುಂದೆ ಸಾಗಿದರೆ ಹೋಟೆಲ್ ವಾಣಿಜ್ಯ ಸಂಕೀರ್ಣದ ತನಕ ಅದೇ ಸ್ಥಿತಿ ಇದೆ.

ಚೌಕಾಕಾರದ ಹಾಸುಗಲ್ಲುಗಳು(ಜಾಯಿಂಟ್ ಲಾಕ್) ಕೆಲವೆಡೆ ಮೇಲಕ್ಕೆದ್ದು ಬಂದಿವೆ. ಇನ್ನು ಕೆಲವೆಡೆ ಅವು ಒಂದೂವರೆ ಅಡಿಯಷ್ಟು ಆಳಕ್ಕೆ ಕುಸಿದು ಗುಂಡಿಗಳು ನಿರ್ಮಾಣವಾಗಿವೆ.

‘ಇನ್ನೂ ಕೆಲವೆಡೆ ಹಾಸುಗಲ್ಲುಗಳೇ ಇಲ್ಲವಾಗಿದ್ದು, ಕೆಸರು ತುಂಬಿಕೊಂಡಿದೆ. ಅಲ್ಲಲ್ಲಿ ಸಿಮೆಂಟ್ ಉದುರಿ ಬಿದ್ದಿದ್ದರೆ, ಬೊಲ್ಲಾರ್ಡ್‌ಗಳಿಗೂ ಸಿಮೆಂಟ್ ಮೆತ್ತಿಕೊಂಡಿದೆ. ಒಂದೆರಡು ಕಡೆ ಹೊಂಡಗಳೇ ನಿರ್ಮಾಣವಾಗಿದ್ದು, ಅದನ್ನು ದಾಟಿಕೊಂಡು ಜನ ಓಡಾಡಬೇಕಾದ ಸ್ಥಿತಿ ಇದೆ.

‘ಇಂಡಿಯಾ ಗ್ಯಾರೇಜ್ ಇದ್ದ ಜಾಗದಲ್ಲಿ ಹೊಸ ಕಟ್ಟಡವೊಂದು ನಿರ್ಮಾಣವಾಗುತ್ತಿದ್ದು, ಅಲ್ಲಿಗೆ ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಸಾಗಿಸುವ ಭರದಲ್ಲಿ ಪಾದಚಾರಿ ಮಾರ್ಗ ಹಾಳಾಗಿದೆ. ಸುಂದರವಾಗಿದ್ದ ಪಾದಚಾರಿ ಮಾರ್ಗ ಹಾಳಾಗಿದ್ದನ್ನು ನೋಡಿಯೂ ಬಿಬಿಎಂಪಿ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ’ ಎಂಬುದು ಪಾದಚಾರಿಗಳ ಆಕ್ಷೇಪ.

ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ ಮತ್ತು ಚರ್ಚ್ ಸ್ಟ್ರೀಟ್‌ನಲ್ಲಿ ಸದಾ ಪಾದಚಾರಿಗಳ ಓಡಾಟ ಹೆಚ್ಚಿರುತ್ತದೆ. ಈ ರಸ್ತೆಗಳ ಪಕ್ಕದಲ್ಲೇ ಇರುವ ಸೇಂಟ್ ಮಾರ್ಕ್ಸ್ ರಸ್ತೆ ಕೂಡ ಪಾದಚಾರಿಗಳಿಗೆ ಪ್ರಿಯವಾದ ರಸ್ತೆ. ಆದರೀಗ ಇಲ್ಲಿ ನಡೆದುಕೊಂಡು ಸಾಗುವುದೇ ದುಸ್ತರವಾಗಿದೆ. ಪಾದಚಾರಿ ಮಾರ್ಗ ಸಂಚಾರಕ್ಕೆ ಯೋಗ್ಯವಿಲ್ಲದಂತಾಗಿದೆ.

‘ಕಾಮಗಾರಿ ನಿರ್ವಹಿಸುವ ಸಂದರ್ಭದಲ್ಲಿ ಪಾದಚಾರಿ ಮಾರ್ಗ ಹಾಳಾಗುವುದು ಸಹಜ. ಕಾಮಗಾರಿ ಪೂರ್ಣಗೊಂಡ ಬಳಿಕ ಸರಿಪಡಿಸುತ್ತೇವೆ’ ಎಂಬುದು ಕಟ್ಟಡ ಕಾಮಗಾರಿ ನಿರ್ವಹಣೆ ಮಾಡುತ್ತಿರುವವರು ನೀಡುವ ಸಮಜಾಯಿಷಿ.

‘ಇಂಡಿಯಾ ಗ್ಯಾರೇಜ್ ಇದ್ದ ಜಾಗದಲ್ಲಿ ಕಟ್ಟಡವೊಂದು ನಿರ್ಮಾಣವಾಗುತ್ತಿದೆ. ಆ ಸ್ಥಳದಲ್ಲಿ ಪಾದಚಾರಿ ಮಾರ್ಗ ಹಾಳಾಗಿದ್ದರೆ, ಸ್ಥಳ ಪರಿಶೀಲನೆ ನಡೆಸಿ ಸರಿಪಡಿಸಲಾಗುವುದು. ಪಾದಚಾರಿ ಮಾರ್ಗ ಹಾಳು ಮಾಡಿದವರಿಗೆ ದಂಡ ಹಾಕಲು ಅವಕಾಶ ಇದೆ. ಸ್ಥಳ ಪರಿಶೀಲನೆ ನಡೆಸಿದ ಬಳಿಕ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಬಿಬಿಎಂಪಿ ಪೂರ್ವ ವಲಯದ ಮುಖ್ಯ ಎಂಜಿನಿಯರ್ ಮೋಹನ್ ಕೃಷ್ಣ ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

ನಕಲಿ ವಿಮರ್ಶೆ: ಆನ್‌ಲೈನ್ ಗ್ರಾಹಕರ ರಕ್ಷಣೆಗೆ ‘ಎಸ್‌ಒಪಿ’

ನವದೆಹಲಿ (ಪಿಟಿಐ): ಆನ್‌ಲೈನ್ ಮೂಲಕ ಉತ್ಪನ್ನಗಳು ಮತ್ತು ಸೇವೆಗಳನ್ನು ಖರೀದಿಸುವ ಗ್ರಾಹಕರನ್ನು, ಅವುಗಳ ಕುರಿತ ನಕಲಿ ವಿಮರ್ಶೆಯಿಂದ ರಕ್ಷಿಸುವ ಸಲುವಾಗಿ ನಿರ್ದಿಷ್ಟ ಕಾರ್ಯಾಚರಣೆ ಪ್ರಕ್ರಿಯೆಗಳನ್ನು (ಎಸ್‌ಒಪಿ) ತರಲು ಕೇಂದ್ರ ಸರ್ಕಾರ ಶುಕ್ರವಾರ ನಿರ್ಧರಿಸಿದೆ.

ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಅವರು ವರ್ಚುವಲ್ ಮೂಲಕ ಶುಕ್ರವಾರ ಸಭೆ ನಡೆಸಿದರು. ಇ-ಕಾಮರ್ಸ್ ಕಂಪನಿಗಳ ಪ್ರತಿನಿಧಿಗಳು, ಗ್ರಾಹಕ ಒಕ್ಕೂಟಗಳು, ಕಾನೂನು ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಪ್ರತಿಯೊಬ್ಬರೂ ತಮ್ಮ ಸಲಹೆಗಳನ್ನು ನೀಡುವಂತೆ ಸಚಿವಾಲಯವು ಕೇಳಿದೆ. ಅದರ ಆಧಾರದ ಮೇಲೆ ಎಸ್‌ಒಪಿ ಸಿದ್ಧಪಡಿಸಲಾಗುವುದು ಎಂದು ತಿಳಿಸಿದೆ.

‘ಇ-ಕಾಮರ್ಸ್ ಕಂಪನಿಗಳು ಉತ್ಪನ್ನ ಮತ್ತು ಸೇವೆಗಳ ಕುರಿತಾದ ನಕಾರಾತ್ಮಕ ವಿಮರ್ಶೆಗಳನ್ನು ತೆಗೆದುಹಾಕುವ ಅಥವಾ ವಿಮರ್ಶೆಯ ಪಟ್ಟಿಯಲ್ಲಿ ಕೆಳಕ್ಕೆ ಬರುವಂತೆ ಮಾಡುತ್ತಿವೆ ಎಂದು ಗ್ರಾಹಕ ಒಕ್ಕೂಟಗಳು ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿವೆ.

ಸೌಹಾರ್ದಕ್ಕೆ ಸಾಕ್ಷಿಯಾದ ಮದುವೆ

ಮೈಸೂರು: ನಗರದಲ್ಲಿ ಶುಕ್ರವಾರ ಎಐಡಿಎಸ್‌ಒ ಜಿಲ್ಲಾ ಉಪಾಧ್ಯಕ್ಷೆ ಆಸಿಯಾ ಬೇಗಂ ಮತ್ತು ಎಐಡಿವೈಒ ಜಿಲ್ಲಾ ಉಪಾಧ್ಯಕ್ಷ ನಿರಂಜನ್ ಎಸ್.ಹಿರೇಮಠ್ ದಾಂಪತ್ಯ ಜೀವನಕ್ಕೆ ಕಾಲಿಟ್ಟು ಕೋಮು ಸೌಹಾರ್ದಕ್ಕೆ ಸಾಕ್ಷಿಯಾದರು.

ವಿಶೇಷ ವಿವಾಹ ಕಾಯ್ದೆ ಅಡಿಯಲ್ಲಿ ಮಧ್ಯಾಹ್ನ ನೋಂದಣಿ ಮಾಡಿಕೊಂಡ ಈ ಇಬ್ಬರ ಮದುವೆಯ ಔತಣಕೂಟದಲ್ಲಿ ಪಾಲ್ಗೊಂಡ ವಿವಿಧ ಸಂಘಟನೆಗಳ ಮುಖಂಡರು, ‘ಸೌಹಾರ್ದ ಪರಂಪರೆ ಮುಂದುವರಿಯಲಿ’ ಎಂದು ಶುಭ ಹಾರೈಸಿದರು.

‘ಕೋಮು ಸಾಮರಸ್ಯಕ್ಕೆ ಹಲವು ಅಡೆತಡೆಗಳು ಎದುರಾಗುತ್ತಿರುವ ಹೊತ್ತಿನಲ್ಲಿ ನಡೆದಿರುವ ಮದುವೆ ಕರ್ನಾಟಕದ ಮಟ್ಟಿಗೆ ಪ್ರಮುಖ ಘಟನೆ. ಸಾಮಾಜಿಕ ಸಾಮರಸ್ಯ ಮತ್ತು ದಾಂಪತ್ಯ ಸಾಮರಸ್ಯಕ್ಕೆ ದಂಪತಿಯು ಮಾದರಿಯಾಗಲಿ. ಅವರಿಗೆ ಎಲ್ಲರ ಬೆಂಬಲ ದೊರಕಲಿ’ ಎಂದು ಕನ್ನಡ ಪರ ಹೋರಾಟಗಾರ ಪ.ಮಲ್ಲೇಶ್, ಎಐಯುಟಿಯುಸಿ ಮುಖಂಡ ಶೇಷಾದ್ರಿ, ಲೇಖಕಿ ಲತಾ, ರೈತ ಸಂಘದ ಮುಖಂಡ ಹೊಸಕೋಟೆ ಬಸವರಾಜ್ ಪ್ರತಿಪಾದಿಸಿದರು.

ಶಿಕ್ಷಣ ಇಲಾಖೆ ಅಧೀನ ಕಾರ್ಯದರ್ಶಿಗೂ ಬ್ಲ್ಯಾಕ್‌ಮೇಲ್

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಡಿವೈಎಸ್ಪಿ ಹೆಸರಿನಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಕರೆ ಮಾಡಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪದಡಿ ಇಬ್ಬರು ಆರೋಪಿಗಳನ್ನು ಬೆಳಗಾವಿ ಪೊಲೀಸರು ಬಂಧಿಸಿದ್ದಾರೆ. ಇದೇ ಆರೋಪಿಗಳು ಶಿಕ್ಷಣ ಇಲಾಖೆ ಅಧೀನ ಕಾರ್ಯದರ್ಶಿ ಎಂ. ಧನಂಜಯ್ ಅವರಿಗೆ ಬ್ಲ್ಯಾಕ್‌ಮೇಲ್ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ.

‘ರಾಜ್ಯದ 40ಕ್ಕೂ ಹೆಚ್ಚು ಸರ್ಕಾರಿ ಅಧಿಕಾರಿಗಳಿಗೆ ಕರೆ ಮಾಡಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪದಡಿ ಬೆಳಗಾವಿ ಜಿಲ್ಲೆಯ ಸದಲಗಾದ ಮುರಿಗೆಪ್ಪ ಕುಂಬಾರ (56) ಹಾಗೂ ಹಾಸನ ಜಿಲ್ಲೆಯ ಬಾಗೇಹೊಬಳಿಯ ರಜನಿಕಾಂತ್ (46) ಅವರನ್ನು ಬಂಧಿಸಲಾಗಿದೆ. ಇದೇ ಆರೋಪಿಗಳು ಎಂ. ಧನಂಜಯ್ ಹಾಗೂ ಅವರ ಸಹೋದ್ಯೋಗಿಗಳಿಗೂ ಕರೆ ಮಾಡಿ ಬೆದರಿಸಿದ್ದು, ಈ ಬಗ್ಗೆ ವಿಧಾನಸೌಧ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಪ್ರವಾಸಕ್ಕೆ ಹಣ ಕೇಳಿದ್ದ: ‘ಮೇ 23ರಂದು ಧನಂಜಯ್ ಅವರಿಗೆ ಕರೆ ಮಾಡಿದ್ದ ಆರೋಪಿ, ‘ರಾಜ್ಯದ ಕೆಲ ಜಿಲ್ಲೆಗಳ ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಮ್ಮ ಮೇಲೆ ದೂರು ನೀಡಿದ್ದಾರೆ. ಈಗಾಗಲೇ ಪ್ರಕರಣ ದಾಖಲಿಸಿಕೊಂಡು, ಸಮೀಕ್ಷೆ ಮಾಡುತ್ತಿದ್ದೇವೆ. ಸದ್ಯದಲ್ಲೇ ನಿಮ್ಮ ಮನೆ ಹಾಗೂ ಕಚೇರಿ ಮೇಲೆ ದಾಳಿ ಮಾಡಲಿದ್ದೇವೆ’ ಎಂಬುದಾಗಿ ಬೆದರಿಸಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಿಮ್ಮ ಮೇಲೆ ದಾಳಿ ನಡೆಯದಂತೆ ನೋಡಿಕೊಳ್ಳುತ್ತೇನೆ. ಸದ್ಯ ನಮ್ಮ ತನಿಖಾಧಿಕಾರಿ ಹಾಗೂ ಇತರರು, ಶ್ರೀಲಂಕಾ ಪ್ರವಾಸಕ್ಕೆ ಹೊರಟಿದ್ದಾರೆ. ಅದಕ್ಕೆ ಹಣದ ವ್ಯವಸ್ಥೆ ಮಾಡಿಸಿ’ ಎಂದೂ ಆರೋಪಿ ಬೇಡಿಕೆ ಇರಿಸಿದ್ದ. ಈ ಬಗ್ಗೆ ಧನಂಜಯ್, ಸಹೋದ್ಯೋಗಿಗಳ ಜೊತೆ ಚರ್ಚಿಸಿದ್ದರು. ತಮಗೂ ಬ್ಲ್ಯಾಕ್‌ಮೇಲ್ ಕರೆ ಬಂದಿರುವುದಾಗಿ ಅವರು ಹೇಳಿದ್ದರು’ ಎಂದೂ ತಿಳಿಸಿವೆ.

‘ಮುರಿಗೆಪ್ಪ ಹಾಗೂ ರಜನಿಕಾಂತ್ ವಿರುದ್ಧ ರಾಜ್ಯದ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ. ಕೆಲ ಪ್ರಕರಣಗಳಲ್ಲಿ ಜೈಲಿಗೂ ಹೋಗಿ ಜಾಮೀನು ಮೇಲೆ ಆರೋಪಿಗಳು ಹೊರಬಂದಿದ್ದರು’ ಎಂದೂ ಹೇಳಿವೆ.

ಹನಿಟ್ರ್ಯಾಪ್: ವೈದ್ಯನಿಂದ ₹1.16 ಕೋಟಿ ಸುಲಿಗೆ

ಎಂಬಿಬಿಎಸ್ ಸೀಟು ಕೊಡಿಸುವ ನೆಪ, ಪೊಲೀಸರ ಸೋಗಿನಲ್ಲಿ ವಸತಿಗೃಹದ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕಲಬುರಗಿ ಜಿಲ್ಲೆಯ ಆಳಂದದ ವೈದ್ಯರೊಬ್ಬರನ್ನು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಿ ₹ 1.16 ಕೋಟಿ ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಆಳಂದದ ನಾಗರಾಜ್ ಬೋರುಪಿ, ಬೆಂಗಳೂರಿನ ಮಧು ಹಾಗೂ ಓಂಪ್ರಕಾಶ್ ಬಂಧಿತರು. ಸಂತ್ರಸ್ತ ವೈದ್ಯ ಶಂಕರ್ ಬಾಬು ರಾವ್ ನೀಡಿದ್ದ ದೂರು ಆಧರಿಸಿ ಉಪ್ಪಾರಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ತನಿಖೆ ಕೈಗೆತ್ತಿಕೊಂಡು ಮೂವರು ಆರೋಪಿಗಳನ್ನು ಬಂಧಿಸಲಾಗಿದ್ದು, ಮತ್ತಷ್ಟು ಮಂದಿ ತಲೆಮರೆಸಿಕೊಂಡಿದ್ದಾರೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

ಎಂಬಿಬಿಎಸ್ ಸೀಟು ಕೊಡಿಸುವ ನೆಪ: ‘ವೈದ್ಯ ಶಂಕರ್, ತಮ್ಮ ಮಗನನ್ನು ಎಂಬಿಬಿಎಸ್ ಓದಿಸಲು ಯೋಚಿಸಿದ್ದರು. ಪರಿಚಯಸ್ಥನಾದ ನಾಗರಾಜ್, ಬೆಂಗಳೂರಿನ ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಕೊಡಿಸುವುದಾಗಿ ಭರವಸೆ ನೀಡಿದ್ದ. ಅದಕ್ಕಾಗಿ 2021ರ ಫೆಬ್ರುವರಿಯಲ್ಲಿ ಹಂತ ಹಂತವಾಗಿ ₹ 66 ಲಕ್ಷ ಪಡೆದಿದ್ದ. ಆದರೆ, ಯಾವುದೇ ಸೀಟು ಕೊಡಿಸಿರಲಿಲ್ಲ. ಹಣ ವಾಪಸು ನೀಡುವಂತೆ ವೈದ್ಯ ಒತ್ತಾಯಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

ವಸತಿಗೃಹದಲ್ಲಿ ಹನಿಟ್ರ್ಯಾಪ್: ‘ಹಣ ವಾಪಸು ಕೊಡುವುದಾಗಿ ಹೇಳಿದ್ದ ನಾಗರಾಜ್, ವೈದ್ಯ ಶಂಕರ್ ಅವರನ್ನು 2022ರ ಜನವರಿಯಲ್ಲಿ ಬೆಂಗಳೂರಿಗೆ ಕರೆದುಕೊಂಡು ಬಂದಿದ್ದ. ಇನ್ನೊಬ್ಬ ಆರೋಪಿ ಮಧು ಪರಿಚಯ ಮಾಡಿಸಿದ್ದ. ನಂತರ, ವೈದ್ಯನಿಗೆ ಉಳಿದುಕೊಳ್ಳಲು ಮೆಜೆಸ್ಟಿಕ್‌ನಲ್ಲಿರುವ ಯು.ಟಿ ವಸತಿಗೃಹದಲ್ಲಿ ಕೊಠಡಿ ಮಾಡಿಕೊಡಲಾಗಿತ್ತು’ ಎಂದು ಮೂಲಗಳು ಹೇಳಿವೆ.

‘ನಾಗರಾಜ್ ಹಾಗೂ ವೈದ್ಯ ಶಂಕರ್ ಮಾತ್ರ ಕೊಠಡಿಯಲ್ಲಿದ್ದರು. ನಸುಕಿನ ಸಮಯದಲ್ಲಿ ಇಬ್ಬರು ಯುವತಿಯರು ಏಕಾಏಕಿ ಕೊಠಡಿಗೆ ಬಂದು ಶಂಕರ್ ಅಕ್ಕ-ಪಕ್ಕದಲ್ಲಿ ಕುಳಿತಿದ್ದರು. ಅದೇ ಸಮಯಕ್ಕೆ ಪೊಲೀಸರ ಸೋಗಿನಲ್ಲಿ ಮೂವರು ಕೊಠಡಿಗೆ ಬಂದಿದ್ದರು. ವೇಶ್ಯಾವಾಟಿಕೆ ನಡೆಯುತ್ತಿದ್ದ ಮಾಹಿತಿ ಮೇರೆಗೆ ವಸತಿಗೃಹದ ಮೇಲೆ ದಾಳಿ ಮಾಡಿರುವುದಾಗಿ ಹೇಳಿದ್ದರು. ವೈದ್ಯ ಹಾಗೂ ಯುವತಿಯರ ಫೋಟೊ ಕ್ಲಿಕ್ಕಿಸಿಕೊಂಡಿದ್ದರು’ ಎಂದೂ ತಿಳಿಸಿವೆ.

‘ವೇಶ್ಯಾವಾಟಿಕೆ ಆರೋಪದಡಿ ಬಂಧಿಸಲಾಗುವುದೆಂದು ಶಂಕರ್ ಅವರನ್ನು ಆರೋಪಿಗಳು ಹೆದರಿಸಿದ್ದರು. ನಂತರ, ಅವರ ಬಳಿಯ ಚಿನ್ನಾಭರಣ ಹಾಗೂ ₹ 35 ಸಾವಿರ ನಗದು ಕಿತ್ತುಕೊಂಡಿದ್ದರು. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸುವ ಬೆದರಿಕೆಯೊಡ್ಡಿ, ₹ 70 ಲಕ್ಷಕ್ಕೆ ಬೇಡಿಕೆ ಇರಿಸಿದ್ದರು. ಮರ್ಯಾದೆಗೆ ಹೆದರಿದ್ದ ವೈದ್ಯ, ಊರಿಗೆ ಹೋಗಿ ₹ 50 ಲಕ್ಷ ಹೊಂದಿಸಿ ಕೊಡುವುದಾಗಿ ಒಪ್ಪಿದ್ದರು’ ಎಂದೂ ಮೂಲಗಳು ವಿವರಿಸಿವೆ.

ಮನೆ ಅಡವಿಟ್ಟು ₹ 50 ಲಕ್ಷ ಸಾಲ: ‘ಬೆಂಗಳೂರು ಪೊಲೀಸರ ಸೋಗಿನಲ್ಲಿ ಕಲಬುರಗಿಗೆ ಹೋಗಿದ್ದ ಆರೋಪಿಗಳು, ವೈದ್ಯನನ್ನು ಭೇಟಿಯಾಗಿ ಹಣ ನೀಡುವಂತೆ ಕೇಳಿದ್ದರು. ಮನೆ ದಾಖಲೆಗಳನ್ನು ಛತ್ರಪತಿ ಶಿವಾಜಿ ಮಹಾರಾಜ ಸೊಸೈಟಿಯಲ್ಲಿ ಅಡವಿಟ್ಟಿದ್ದ ವೈದ್ಯ, ₹ 50 ಲಕ್ಷ ಸಾಲ ಪಡೆದುಕೊಂಡು ಕಲಬುರಗಿ ಎಸ್ಪಿ ಕಚೇರಿ ಬಳಿಯೇ ಆರೋಪಿಗಳಿಗೆ ನೀಡಿದ್ದರು’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಪ್ರಕರಣದಲ್ಲಿ ಯುವತಿಯರಿಗೆ ಜಾಮೀನು ಕೊಡಿಸಬೇಕೆಂದು ಹೇಳಿ ಪುನಃ ₹ 20 ಲಕ್ಷಕ್ಕೆ ಆರೋಪಿಗಳು ಬೇಡಿಕೆ ಇರಿಸಿದ್ದರು. ಹಣವಿಲ್ಲವೆಂದು ವೈದ್ಯ ಹೇಳಿದ್ದರು. ಯುವತಿಯರ ಸಮೇತ ಊರಿಗೆ ಹೋಗಿದ್ದ ಆರೋಪಿಗಳು, ಮನೆ ಎದುರು ಗಲಾಟೆ ಮಾಡಿದ್ದರು. ಸ್ಥಳೀಯರು ಆರೋಪಿಗಳನ್ನು ಹಿಡಿದುಕೊಂಡು ಠಾಣೆಗೆ ಕರೆದೊಯ್ಯಲು ಮುಂದಾಗಿದ್ದರು. ಆದರೆ, ಆರೋಪಿಗಳು ಓಡಿ ಹೋಗಿದ್ದರು’ ಎಂದೂ ತಿಳಿಸಿವೆ.

‘ಆರೋಪಿಗಳು ವ್ಯವಸ್ಥಿತ ಸಂಚು ರೂಪಿಸಿ ಕೃತ್ಯ ಎಸಗಿದ್ದಾರೆ. ವೈದ್ಯ ಶಂಕರ್ ರೀತಿಯಲ್ಲೇ ಮತ್ತಷ್ಟು ಮಂದಿಗೆ ವಂಚನೆ ಮಾಡಿರುವ ಮಾಹಿತಿ ಇದ್ದು, ತನಿಖೆ ಮುಂದುವರಿದಿದೆ’ ಎಂದೂ ಹೇಳಿವೆ.

ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ ಮಾವು ಮತ್ತು ಹಲಸು ಮೇಳದಲ್ಲಿ ಯುವತಿಯರು ಮಾವು ಖರೀದಿಸಿದರು – ಪ್ರಜಾವಾಣಿ ಚಿತ್ರ

ಮಾವು, ಹಲಸು ಮಾರಾಟ ಮೇಳ

ಬೆಂಗಳೂರು: ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ಕೆಎಸ್‌ಎಂಡಿಎಂಸಿಎಲ್) ಆಯೋಜಿಸಿದರುವ ಮಾವು ಮತ್ತು ಹಲಸು ಮೇಳಕ್ಕೆ ಲಾಲ್‌ಬಾಗ್‌ನಲ್ಲಿ ಶುಕ್ರವಾರ ಚಾಲನೆ ನೀಡಲಾಯಿತು.

ರೈತರು ನೇರವಾಗಿ ಗ್ರಾಹಕರಿಗೆ ಉತ್ಪನ್ನಗಳನ್ನು ಮಾರಾಟ ಮಾಡಲು ಮೇಳದಲ್ಲಿ ಅವಕಾಶ ಕಲ್ಪಿಸಲಾಗಿದೆ. ಜೂನ್ 13ರವರೆಗೆ ಮೇಳ ನಡೆಯಲಿದೆ.

ಸುಮಾರು 30 ಮಾವಿನ ತಳಿಗಳು ಮತ್ತು ಹಲಸಿನ 12 ತಳಿಗಳು ಮೇಳದಲ್ಲಿ ಲಭ್ಯ. ರೈತರು ಮತ್ತು ಗ್ರಾಹಕರನ್ನು ಒಳಗೊಂಡ ಸಮಿತಿಯು ಹಣ್ಣಿನ ದರಗಳನ್ನು ನಿಗದಿಪಡಿಸಿದೆ. ಇದರಿಂದ ಗ್ರಾಹಕರಿಗೆ ಹೊರೆಯಾಗುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ತೋಟಗಾರಿಕೆ ಸಚಿವ ಮುನಿರತ್ನ ಅವರು, ‘ಮಾವು ಮತ್ತು ಹಲಸು ಮೇಳದಲ್ಲಿ ನಿಗಮ ನಿಗದಿಪಡಿಸಿರುವ ಬೆಲೆಗಿಂತ ಹೆಚ್ಚು ಹಣ ಪಡೆದಲ್ಲಿ ಕ್ರಮ ಕೈಗೊಳ್ಳಲಾಗುವುದು. ಮಾವು ಪ್ರಿಯರಿಗೆ ಹೊರೆಯಾಗದಂತೆ ಮತ್ತು ರೈತರಿಗೆ ನಷ್ಟವಾಗದಂತೆ ಬೆಲೆ ನಿಗದಿ ಮಾಡಲಾಗಿದೆ. ಆ ಬೆಲೆಗೆ ಮಾತ್ರ ಮಾರಾಟ ಮಾಡಬೇಕು’ ಎಂದು ತಿಳಿಸಿದರು.

ಮಾವು ಬೆಲೆ ಪ್ರತಿ ಕೆಜಿಗೆ	
ಬಾದಾಮಿ	100
ರಸಪುರಿ	80
ಮಲ್ಲಿಕಾ	100
ಸಕ್ಕರೆ ಗುತ್ತಿ	150
ಮಲ್ಗೋವಾ	125
ದಶೇರಿ	100
ತೋತಾಪುರಿ	30

‘ಮಧ್ಯವರ್ತಿಗಳ ಹಾವಳಿ ಇಲ್ಲದೆ ಗ್ರಾಹಕರಿಗೆ ಉತ್ತಮ ಬೆಲೆಗೆ ಮಾವಿನ ಹಣ್ಣು ಸಿಗಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ. ಆದ್ದರಿಂದ ಗ್ರಾಹಕರು ಮತ್ತು ರೈತರಿಗೆ ನೆರವಾಗುವ ಉದ್ದೇಶದಿಂದ ಮೇಳ ಆಯೋಜಿಸಲಾಗಿದೆ’ ಎಂದು ವಿವರಿಸಿದರು.

ಶಾಸಕ ಉದಯ್ ಗರುಡಾಚಾರ್, ತೋಟಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ತೋಟಗಾರಿಕೆ ಇಲಾಖೆ ನಿರ್ದೇಶಕ ಕೆ.ನಾಗೇಂದ್ರ ಪ್ರಸಾದ್, ಮಾವು ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ವಿ.ನಾಗರಾಜ್, ವ್ಯವಸ್ಥಾಪಕ ನಿರ್ದೇಶಕ ಡಾ.ಸಿ.ಜಿ.ನಾಗರಾಜ್ ಇದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ ಶೇ 70ಕ್ಕಿಂತ ಹೆಚ್ಚು ಅಂಕ ಗಳಿಕೆಗಾಗಿ ಹಸಿರು ದಳ ಶುಕ್ರವಾರ ಆಯೋಜಿಸಿದ್ದ ವಿದ್ಯಾ ಸ್ಪಂದನ ಕಾರ್ಯಕ್ರಮದಲ್ಲಿ ಅಭಿನಂದನೆಗೆ ಪಾತ್ರರಾದ ಕಸ ಆಯುವವರ ಮಕ್ಕಳು ಸಂಭ್ರಮಿಸಿದ್ದು ಹೀಗೆ –ಪ್ರಜಾವಾಣಿ ಚಿತ್ರ

ಡೆಂಗಿ: 20 ದಿನಗಳಲ್ಲಿ 304 ಮಂದಿಗೆ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕಾಲಿಕ ಮಳೆಯಿಂದಾಗಿ ರಾಜ್ಯದಲ್ಲಿ 20 ದಿನಗಳಲ್ಲಿ 304 ಮಂದಿ ಡೆಂಗಿ ಪೀಡಿತರಾಗಿರುವುದು ದೃಢಪಟ್ಟಿದೆ. ಈವರೆಗೆ ವರದಿಯಾದ ಡೆಂಗಿ ಪ್ರಕರಣಗಳ ಒಟ್ಟು ಸಂಖ್ಯೆ 1,542ಕ್ಕೆ ಏರಿಕೆಯಾಗಿದೆ.

29 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 12,527 ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 12,627 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 302 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಈ ವರ್ಷ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. 2021ರಲ್ಲಿ 7,189 ಮಂದಿ ಡೆಂಗಿ ಪೀಡಿತರಾಗಿದ್ದರು. ಅವರಲ್ಲಿ ಐವರು ಮೃತಪಟ್ಟಿದ್ದರು.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಪ್ರಕರಣಗಳ ಸಂಖ್ಯೆ ಮೂರು ಜಿಲ್ಲೆಗಳಲ್ಲಿ ಮೂರಂಕಿ, 24 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಉಡುಪಿಯಲ್ಲಿ 183, ಮೈಸೂರಿನಲ್ಲಿ 147, ಕೊಪ್ಪಳದಲ್ಲಿ 93, ಬಳ್ಳಾರಿಯಲ್ಲಿ 89, ಚಿತ್ರದುರ್ಗದಲ್ಲಿ 87, ವಿಜಯಪುರ ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ 64, ದಾವಣಗೆರೆ ಹಾಗೂ ಶಿವಮೊಗ್ಗದಲ್ಲಿ ತಲಾ 54, ಕೋಲಾರದಲ್ಲಿ 44, ತುಮಕೂರಿನಲ್ಲಿ 34, ರಾಯಚೂರಿನಲ್ಲಿ 30, ಯಾದಗಿರಿ ಹಾಗೂ ಬಾಗಲಕೋಟೆಯಲ್ಲಿ ತಲಾ 28, ಹಾವೇರಿ, ಗದಗ ಹಾಗೂ ಬೆಳಗಾವಿಯಲ್ಲಿ ತಲಾ 25, ಕಲಬುರ್ಗಿಯಲ್ಲಿ 22 ಹಾಗೂ ಚಿಕ್ಕಬಳ್ಳಾಪುರದಲ್ಲಿ 20 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 20ಕ್ಕಿಂತ ಕಡಿಮೆ ಇವೆ.

26 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 8 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 5 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 385 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ. ವಿಜಯಪುರದಲ್ಲಿ 76, ಕೋಲಾರದಲ್ಲಿ 63, ಬೆಂಗಳೂರು ಗ್ರಾಮಾಂತರದಲ್ಲಿ 38, ತುಮಕೂರಿನಲ್ಲಿ 34, ಚಿತ್ರದುರ್ಗದಲ್ಲಿ 24, ದಾವಣಗೆರೆಯಲ್ಲಿ 17, ಹಾಸನದಲ್ಲಿ 15 ಹಾಗೂ ರಾಮನಗರದಲ್ಲಿ 13 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆ ಇವೆ.

ನಗರದಲ್ಲಿ ಇಂದು

ಜೈನರ ಜಾಗತಿಕ ಶೃಂಗ ಸಭೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಮುಖ್ಯ ಅತಿಥಿಗಳು: ಆಚಾರ್ಯ ಚಂದನಶ್ರೀ, ತೇಜಸ್ವಿ ಸೂರ್ಯ, ಆಯೋಜನೆ: ಜೈನ್ ಇಂಟರ್‌ನ್ಯಾಷನಲ್ ಟ್ರೇಡ್ ಆರ್ಗನೈಸೇಷನ್, ಸ್ಥಳ: ಚಾಮರ ವಜ್ರ, ಅರಮನೆ ಮೈದಾನ, ಬೆಳಿಗ್ಗೆ 9.

ಅಂತರ್ಜಾತಿ ವಿವಾಹ ಸುವರ್ಣ ಮಹೋತ್ಸವ: ರಾಮಣ್ಣ ಕೋಡಿಹೊಸಹಳ್ಳಿ, ಎಂ.ವಿ. ಗಾಯತ್ರಿ, ಚಾಲನೆ: ವೀರಭದ್ರ ಚನ್ನಮಲ್ಲ ಸ್ವಾಮೀಜಿ, ನೇತೃತ್ವ: ಹಂ.ಪ. ನಾಗರಾಜಯ್ಯ, ಕಮಲಾ ಹಂಪನಾ, ಸ್ಥಳ: ಪ್ರಕಾಶ್ ಕೆಫೆ ಹೋಟೆಲ್, ಚಾಮರಾಜಪೇಟೆ, ಬೆಳಿಗ್ಗೆ 10.30

ಅಮೃತ ಭಾರತಿಗೆ ಕನ್ನಡದಾರತಿ ಅಭಿಯಾನ: ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ವಿಶೇಷ ಆಹ್ವಾನಿತರು: ನಿರ್ಮಲಾ ಸೀತಾರಾಮನ್, ರಾಜೀವ್ ಚಂದ್ರಶೇಖರ್, ಉಪಸ್ಥಿತಿ: ವಿ. ಸುನೀಲ್ ಕುಮಾರ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಆಯೋಜನೆ: ಬೆಂಗಳೂರು ನಗರ ಜಿಲ್ಲೆ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11

ನಾ.ಸು. ಹರ್ಡೀಕರ್ ಅವರ 133ನೇ ಜನ್ಮದಿನಾಚರಣೆ: ಉದ್ಘಾಟನೆ: ಎನ್. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ: ಭಾರತ ಸೇವಾದಳ ರಾಜ್ಯ ಮಟ್ಟದ ಅಭಿಮಾನಿ ಬಳಗ, ಶೇಷಾದ್ರಿಪುರ ಕಾಲೇಜು, ಗಾಂಧಿ ಅಧ್ಯಯನ ಕೇಂದ್ರ, ರಾಷ್ಟ್ರೀಯ ಸೈನ್ಯ ದಳ, ರಾಷ್ಟ್ರೀಯ ಸೇವಾ ಯೋಜನೆ, ಸ್ಥಳ: ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 11



‘ರಾಜಾ ರುದ್ರಕೋಪ’ ಯಕ್ಷಗಾನ

‘ರಾಜಾ ರುದ್ರಕೋಪ’ ಯಕ್ಷಗಾನ: ಆಯೋಜನೆ: ಸಿರಿಕಲಾ ಮೇಳ, ಸ್ಥಳ: ಕ್ಲಾಸಿಕ್ ಆರ್ಚರ್ಡ್ಸ್ ಕನ್ನಡ ಬಳಗ, ಮೀನಾಕ್ಷಿ ದೇವಸ್ಥಾನದ ಹಿಂಭಾಗ, ಬನ್ನೇರುಘಟ್ಟ, ಸಂಜೆ 5

ನಾಟ್ಯ ಕುಸುಮಾಂಜಲಿ ಸಂಪ್ರದಾಯ ನೃತ್ಯೋತ್ಸವ: ಮುಖ್ಯ ಅತಿಥಿಗಳು: ರಮೇಶ್ ಚಂದ್ರಶೇಖರ್, ವಿ.ಎನ್. ಹೆಗಡೆ, ಸರಸ್ವತಿ ರವಿತೇಜ್, ಎಚ್.ಎನ್. ಗುರುರಾಜ್, ರೂಪಾ ಹೇಮಂತ್, ಗೀತಾ, ಆಯೋಜನೆ: ನಾಟ್ಯ ಕುಸುಮಾಂಜಲಿ ಸಾಂಸ್ಕೃತಿಕ ವೇದಿಕೆ, ನವ್ಯ ನಾಟ್ಯ ಸಂಗಮ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 2.30

ಪುಸ್ತಕಗಳ ಬಿಡುಗಡೆ: ಮಾಲೂರು ಜಿ.ವಿ. ನರಸಿಂಹಮೂರ್ತಿ ಅವರ ‘ಜೀವನಯಾನ’ ಕವನಸಂಕಲನ, ಜ್ಞಾನಶ್ರೀ ಲಕ್ಷ್ಮೀಕಾಂತಮ್ಮ ಅವರ ‘ಕಾಮನಬಿಲ್ಲು’ ಕಥಾಸಂಕಲನ ಮತ್ತು ‘ಭವ್ಯ ಭಾರತದ ರಾಣಿಯರು’, ಉದ್ಘಾಟನೆ: ವಿ. ಸೋಮಣ್ಣ, ಅಧ್ಯಕ್ಷತೆ: ಹಂಸಲೇಖ, ಮುಖ್ಯ ಅತಿಥಿಗಳು: ಮಲ್ಲೇಪುರಂ ಜಿ. ವೆಂಕಟೇಶ, ಎಚ್.ಎಸ್. ವೆಂಕಟೇಶಮೂರ್ತಿ, ಕೆ.ಜಿ. ಲಕ್ಷ್ಮೀನಾರಾಯಣಪ್ಪ, ಮೊಳಕಾಲ್ಮೂರು ಶ್ರೀನಿವಾಸಮೂರ್ತಿ, ಬಿ.ಸಿ. ರಾಜಕುಮಾರ್, ಡಾ.ನಾಗರಾಜಮೂರ್ತಿ, ನಾಗೇಂದ್ರ ಪ್ರಸಾದ್, ಸ್ಥಳ: ಶಿವಕುಮಾರ ಸ್ವಾಮೀಜಿ ಜ್ಞಾನಸೌಧ, ವಿವೇಕಾನಂದ ಪಾರ್ಕ್, ಕಲ್ಯಾಣ ನಗರ, ಸಂಜೆ 4

ಗರುಡೋತ್ಸವ: ನರ್ತನಗಳ ಹಬ್ಬ, ಉಪಸ್ಥಿತಿ: ಮಹೇಶ ಜೋಶಿ, ಟಿ.ಎಸ್. ನಾಗಾಭರಣ, ಪ್ರಕಾಶ್ ಗರುಡ, ಎಸ್.ಎನ್. ಸುಶೀಲಾ, ಎಸ್. ರಂಗಪ್ಪ, ಶ್ರೀಧರ್ ಭಾಗವತ್, ಹನುಮೇಶ್ ಯಾವಗಲ್, ಗಣಪತಿ ಅಗ್ನಿಹೋತ್ರಿ, ಆಯೋಜನೆ: ಗರುಡ ನಾಟ್ಯ ಸಂಘ, ಸ್ಥಳ: ನಯನ ರಂಗ ಮಂದಿರ, ಕನ್ನಡ ಭವನ, ಸಂಜೆ 4.30

ಇತಿಹಾಸ ಮತ್ತು ಸಮಕಾಲೀನ ಸವಾಲುಗಳು–ವಿಚಾರಗೋಷ್ಠಿ ಹಾಗೂ ಬೆಂಗಳೂರು ಪರಂಪರೆ ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಪ್ರೊ.ಎಸ್. ಚಂದ್ರಶೇಖರ್, ಉಪಸ್ಥಿತಿ: ಎಸ್.ಕೆ. ಅರುಣಿ, ಆಯೋಜನೆ: ಇತಿಹಾಸ ದರ್ಪಣ ಪ್ರಕಾಶನ, ಬೆಂಗಳೂರು ಹಿಸ್ಟೋರಿಯನ್ಸ್ ಸೊಸೈಟಿ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಸಂಜೆ 4.45

ರಾಷ್ಟ್ರೀಯ ಸಮ್ಮೇಳನ: ‘ಫ್ಯಾಸಿಸಮ್‌ನ ದಾಳಿಯನ್ನು ಎದುರಿಸುವುದರಲ್ಲಿ ವಕೀಲರ ಪಾತ್ರ’, ಭಾಷಣಕಾರ: ಮಿಹೀರ್ ದೇಸಾಯಿ, ಆಯೋಜನೆ: ಅಖಿಲ ಭಾರತ ವಕೀಲರ ಸಂಘ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಅಗ್ರಿಕಲ್ಚರಲ್ ಟೆಕ್ನಾಲಜಿಸ್ಟ್ಸ್, ವಸಂತನಗರ, ಸಂಜೆ 5

‘ದ್ವೈತ’ ನೃತ್ಯ ಪ್ರದರ್ಶನ: ಶೀತಲ್ ಆರ್. ಉಂಬ್ರೆ, ದೀಪಾ ಭಾಸ್ಕರ್, ಆಯೋಜನೆ: ಪ್ರಭಾತ್ ಆರ್ಟ್ ಇಂಟರ್‌ನ್ಯಾಷನಲ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 6

‘ಚಿದಂಬರ ರಹಸ್ಯ’ ನಾಟಕ ಪ್ರದರ್ಶನ: ಅಭಿಯಂತರರು, ಸ್ಥಳ: ರಂಗಶಂಕರ, ಜೆ.ಪಿ.ನಗರ, ಮಧ್ಯಾಹ್ನ 3.30 ಹಾಗೂ ಸಂಜೆ 7.30

ಎಂಟು ಪಕ್ಷಗಳ ಮಾನ್ಯತೆ ರದ್ದು

ಬೆಂಗಳೂರು: ಕೇಂದ್ರ ಚುನಾವಣಾ ಆಯೋಗ ರಾಜ್ಯದ 8ರಾಜಕೀಯ ಪಕ್ಷಗಳ ಮಾನ್ಯತೆ ರದ್ದುಪಡಿಸಿ, ರಾಜಕೀಯ ಪಕ್ಷಗಳ ಪಟ್ಟಿಯಿಂದ ಕೈಬಿಟ್ಟಿದೆ.

ಮಾನ್ಯತೆ ಕಳೆದುಕೊಂಡ ಪಕ್ಷಗಳು– ಇಂಡಿಯನ್ ವೋಟರ್ಸ್ ವೆಲ್‌ಫೇರ್ ಪಾರ್ಟಿ, ಕರ್ನಾಟಕ ಕ್ರಾಂತಿ ದಳ, ನವ ನಿರ್ಮಾಣ ನಾಗರಿಕ ಸಮಿತಿ, ರಾಷ್ಟ್ರೀಯ ಜನಾಂದೋಲನ ಪಕ್ಷ, ಸ್ವರ್ಣ ಯುಗ ಪಕ್ಷ, ಟಿಪ್ಪು ಸುಲ್ತಾನ್ ನ್ಯಾಷನಲ್ ಪಬ್ಲಿಕ್ ಪಾರ್ಟಿ, ಯುನೈಟೆಡ್ ಇಂಡಿಯನ್ ಡೆಮಾಕ್ರಟಿಕ್ ಕೌನ್ಸಿಲ್, ಅರಸ್ ಸಂಯುಕ್ತ ಪಕ್ಷ.

ಈ ಪಕ್ಷಗಳು ತಕರಾರುಗಳಿದ್ದಲ್ಲಿ 30 ದಿನಗಳೊಳಗಾಗಿ ಆಯೋಗದ ಕಚೇರಿ ಸಂಪರ್ಕಿಸಬಹುದು ಎಂದು ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಹೇಳಿದ್ದಾರೆ.

ಬೆಂಗಳೂರು ರೇಸ್

ಮಿರಾಕಲ್ ಗೆಲ್ಲುವ ನಿರೀಕ್ಷೆ

ಸ್ಪೀಕರ್ಸ್ ಕಪ್ ಶನಿವಾರದಿಂದ ಪ್ರಾರಂಭವಾಗಲಿರುವ ಬೇಸಿಗೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಿರಾಕಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡ್ರಮ್ಸ್ ಆಫ್ ವಾರ್ 1, ರಾಪ್ಸೋಡಿ ಇನ್ ಗ್ರೀನ್ 3, ಶಾನ್ ಎ ಅಜೀಮ್ 4
2ನೇ ರೇಸ್: ಏರ್ಬ್ಲಾಸ್ಟ್ 3, ಲಾಟರ್ಬ್ರನ್ನೆನ್ 5, ತೆನಾಲಿ 6
3ನೇ ರೇಸ್: ನಾಟಿ ಸಿಟಿ 4, ವಿಂಡ್‌ಸ್ಟಾರ್ಮ್ 2, ಏರ್ಕ್ರಾಫ್ಟ್ 9
4ನೇ ರೇಸ್: ಪ್ಲೇಸ್ ವೆಂಡೋಮ್ 6, ಮಿರ್ರಾ 5, ಕೊನಬಾಸ್ 4
5ನೇ ರೇಸ್: ಕಿಂಗ್ಸ್ ರಾನ್ಸಮ್ 10, ಆರ್ಥುರ್ 11, ಎನ್.ಆರ್.ಐ ಸೂಪರ್ ಪವರ್ 9
6ನೇ ರೇಸ್: ಮಿರಾಕಲ್ 1, ಆಲ್ ಅಟ್ರ್ಯಾಕ್ಟಿವ್ 5, ಪ್ರೈಡ್ಸ್ ಏಂಜೆಲ್ 6
7ನೇ ರೇಸ್: ಎಟೋಶಾ (2), ಸೀಜ್ ಪೆರಿಲಸ್ 7, ವಿನ್ ಮೈ ಲವ್ 8
8ನೇ ರೇಸ್: ಶಬೆಲ್ 4, ಸ್ಟಾರ್ ಅಡ್ಮಿರಲ್ 6, ಬೆನಿಡಿಕ್ಟನ್ 1

ಉತ್ತಮ ಬೆಟ್: ಶಬೆಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಸಿಯುಇಟಿ: ಗಡುವು ವಿಸ್ತರಣೆ

ನವದೆಹಲಿ: ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ವಿ.ವಿ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಯುಇಟಿ–ಯುಜಿ) ಅರ್ಜಿ ಸಲ್ಲಿಸುವ ಗಡುವನ್ನು ಮೇ 31ರವರೆಗೆ ವಿಸ್ತರಿಸಿದೆ. ಈಗಾಗಲೇ 11.5 ಲಕ್ಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ ಎಂದು ಯುಜಿಸಿ ಅಧ್ಯಕ್ಷ ಎಂ.ಜಗದೀಶ್ ಕುಮಾರ್ ಅವರು ತಿಳಿಸಿದ್ದಾರೆ.

ಅಧ್ಯಕ್ಷರಾಗಿ ಕಾಗೇರಿ ನೇಮಕ

ಬೆಂಗಳೂರು: ಅತ್ಯುತ್ತಮ ವಿಧಾನಪರಿಷತ್ತು, ವಿಧಾನಸಭೆ ಪ್ರಶಸ್ತಿಗೆ ಮಾನದಂಡ ಸೂಚಿಸಲು ಪೀಠಾಸೀನ ಅಧಿಕಾರಿಗಳ ಸಮಿತಿ ರಚಿಸಿದ್ದು, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಸಮಿತಿಯ ಸದಸ್ಯರು– ರಾಮ್ ನಿವಾಸ್ ಗೋಯಲ್, ಸಭಾಧ್ಯಕ್ಷ, ದೆಹಲಿ ವಿಧಾನಸಭೆ, ರಾಮ ರಾಜೆ ಪ್ರತಾಪ್ ಸಿಂಗ್ ನಾಯಕ್ ನಿಂಬಾಳ್ಕರ್, ಸಭಾಪತಿ, ಮಹಾರಾಷ್ಟ್ರ ವಿಧಾನಪರಿಷತ್ತು, ವಿಜಯ್‌ಕುಮಾರ್ ಸಿನ್ಹ, ಸಭಾಧ್ಯಕ್ಷ, ಬಿಹಾರ್ ವಿಧಾನಸಭೆ, ಬಿಶ್ವಜಿತ್ ಡೈಮರಿ, ಸಭಾಧ್ಯಕ್ಷ, ಅಸ್ಸಾಂ ವಿಧಾನಸಭೆ, ಡಾ.ನಿಮಾಬೆನ್ ಆಚಾರ್ಯ, ಸಭಾಧ್ಯಕ್ಷೆ, ಗುಜರಾತ್ ವಿಧಾನಸಭೆ, ಎಂ.ಅಪ್ಪಾವು, ಸಭಾಧ್ಯಕ್ಷ, ತಮಿಳುನಾಡು ವಿಧಾನಸಭೆ.

ಯುವಿಸಿಇಗೆ ಹಣ ವರ್ಗಾವಣೆಗೆ ವಿರೋಧ

ಬೆಂಗಳೂರು ವಿ.ವಿ. ವಿದ್ಯಾರ್ಥಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಮತ್ತು ಸಿಂಡಿಕೇಟ್ ಸದಸ್ಯರು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ಆವರಣದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ವಿಶ್ವವಿದ್ಯಾಲಯದ ಅಭಿವೃದ್ಧಿ ಚಟುವಟಿಕೆಗಳಿಗೆ ಮೀಸಲಿಟ್ಟಿದ್ದ ಹಣವನ್ನು ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ (ಯುವಿಸಿಇ) ಮೆಕ್ಯಾನಿಕಲ್ ವಿಭಾಗದ ಕಟ್ಟಡ ನಿರ್ಮಾಣಕ್ಕೆ ವರ್ಗಾಯಿಸಲು ನಿರ್ಧಾರ ಕೈಗೊಂಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಈ ಪ್ರತಿಭಟನೆ ನಡೆಸಲಾಯಿತು. ಹಣಕಾಸು ಅಧಿಕಾರಿಗಳ ಕಚೇರಿಗೆ ನುಗ್ಗಿದ ಪ್ರತಿಭಟನಕಾರರು ಕೊಠಡಿಗೆ ಬೀಗ ಹಾಕಿದರು.

‘ಅಧಿಕಾರ ದುರುಪಯೋಗ ಮಾಡಿಕೊಂಡು ಹಣವನ್ನು ವರ್ಗಾವಣೆ ಮಾಡಲಾಗುತ್ತಿದೆ. ಇತರ ಶೀರ್ಷಿಕೆಗಳ ಅಡಿಯಲ್ಲಿ ಮೀಸಲಿಡಲಾಗಿದ್ದ ಹಣವನ್ನು ಯುವಿಸಿಇಗೆ ನೀಡಲಾಗುತ್ತಿದೆ. ಸಿಂಡಿಕೇಟ್ ಮತ್ತು ಹಣಕಾಸು ಸಮಿತಿ ಅನುಮೋದನೆ ಇಲ್ಲದೆಯೇ ಈ ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಸುಧಾಕರ್ ತಿಳಿಸಿದರು.

ಯುವಿಸಿಇ ಸ್ವಾಯತ್ತ ಸಂಸ್ಥೆಯಾಗಿರುವುದರಿಂದ ಹಣ ವರ್ಗಾವಣೆ ಮಾಡಬಾರದು. ಹಣ ವರ್ಗಾವಣೆ ಮಾಡಿದರೆ ಪಿಂಚಣಿ ಮತ್ತು ಇತರ ಯೋಜನೆಗಳಿಗೆ ಕೊರತೆಯಾಗಲಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಶಿಕ್ಷಕರ ಸಂಘದ (ಬಿಯುಟಿಸಿ) ಸದಸ್ಯರು ಕುಲಪತಿ ಅವರಿಗೆ ಮನವಿ ಸಲ್ಲಿಸಿದೆ.

ಶನಿವಾರ, ಮೇ 28, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 147 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಸೌಂದರ್ಯ ಹೆಚ್ಚಿಸಿಕೊಳ್ಳಲು ಹಲವು ದಾರಿಗಳನ್ನು ಅನುಸರಿಸುತ್ತಾರೆ. ಹಾಗಾದರೆ ಸೌಂದರ್ಯವರ್ಧನೆಗಿರುವ ಸಹಜ ಮಾರ್ಗಗಳೇನು? ಒಂದು ನೋಟ...



ಚರ್ಚೆ
ದೇಗುಲ ಮೂಲ ಸ್ವರೂಪ ಕಳೆದುಕೊಳ್ಳುವುದು ಸಾಧ್ಯವೇ?
'ಆರೆಸ್ಸೆಸ್‌ನವರು ಭಾರತೀಯರೇ, ದ್ರಾವಿಡರೇ?' 7
₹54.50 ಕೋಟಿ ಮೌಲ್ಯದ ಹೆರಾಯಿನ್ ಜಪ್ತಿ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,884	16,352	₹52,860 (ಬೆಂಗಳೂರು)	₹64,400 (ಬೆಂಗಳೂರು)	77.58

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಚಿನ್ನದ ಸಾಲ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ, ತಕ್ಷಣ ಅನುಮೋದನ ಪಡೆಯಿರಿ.
*ಷರತ್ತುಗಳು ಅನ್ವಯಿಸುತ್ತವೆ
1800 425 0018

ಒಳ ಪುಟಗಳು

ಡ್ರೋನ್ ಉತ್ಸವಕ್ಕೆ ಪ್ರಧಾನಿ ಮೋದಿ ಚಾಲನೆ 4
'ದ್ವೇಷ ಬಿತ್ತುವ ಅಸ್ತ್ರಗಳಾಗುತ್ತಿರುವ ಸಾಹಿತ್ಯ' 7

ಕೇಂದ್ರ ಪಠ್ಯದಲ್ಲಿ ಬರಗೂರು ಸಮಿತಿ ಪರಿಷ್ಕರಿಸಿದ್ದ ಪುಸ್ತಕಕ್ಕೆ ಆದ್ಯತೆ

ಸಿಬಿಎಸ್‌ಇಗೆ ಪಠ್ಯ, ರಾಜ್ಯಕ್ಕೆ ಅಪಥ್ಯ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತಿ ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ ಪರಿಷ್ಕರಿಸಿದ್ದ ಪಠ್ಯಕ್ರಮವನ್ನೇ ಸಿಬಿಎಸ್‌ಇ 10 ಮತ್ತು 9ನೇ ತರಗತಿಗಳಿಗೆ ಕನ್ನಡ ವಿಷಯದ ಪಠ್ಯವಾಗಿ ಉಳಿಸಿಕೊಂಡಿದೆ.

ಕೇಂದ್ರ ಸರ್ಕಾರದ ಅಂಗಸಂಸ್ಥೆಯಾಗಿರುವ ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ಈ ಪಠ್ಯ ಅಳವಡಿಸಿಕೊಂಡಿದೆ. ಆದರೆ ಪಠ್ಯ ಪುಸ್ತಕ ಪರಿಷ್ಕರಣೆಗೆ ರಾಜ್ಯ ಸರ್ಕಾರ ನೇಮಿಸಿದ ಸಮಿತಿಯು ಇದೇ ಪಠ್ಯದಲ್ಲಿನ ಹಲವು ಅಧ್ಯಾಯಗಳನ್ನು ಕೈಬಿಡಲು ಶಿಫಾರಸು ಮಾಡಿರುವುದು ಶೈಕ್ಷಣಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

10ನೇ ತರಗತಿ ಕನ್ನಡ ಪಠ್ಯದಿಂದ ಎ.ಎನ್.ಮೂರ್ತಿರಾಯರು ಮತ್ತು ಪಿ.ಲಂಕೇಶ್ ಸೇರಿದಂತೆ ಹಲವು ಲೇಖಕರ ಪಾಠಗಳನ್ನು ಕೈಬಿಡಲು ಶಿಫಾರಸು ಮಾಡಲಾಗಿದೆ. ಆದರೆ, ಸಿಬಿಎಸ್‌ಇ ಶಾಲೆಗಳಿಗೆ ಬರಗೂರು ರಾಮಚಂದ್ರಪ್ಪ ಸಮಿತಿ ಪರಿಷ್ಕರಿಸಿದ್ದ ಪುಸ್ತಕವನ್ನೇ ಕನ್ನಡ ದ್ವಿತೀಯ ಭಾಷೆಯ ಪಠ್ಯವಾಗಿ ಅಳವಡಿಸಲಾಗಿದೆ.

10ನೇ ತರಗತಿಗೆ ಕರ್ನಾಟಕ ಪಠ್ಯ ಪುಸ್ತಕ ಸಂಘ ಪ್ರಕಟಿಸಿರುವ ಸಿರಿ ಕನ್ನಡ ಪುಸ್ತಕವನ್ನೇ ಅಧ್ಯಯನ ಮಾಡಲು ಸೂಚಿಸಲಾಗಿದೆ. ಈ ಪಠ್ಯದಲ್ಲಿನ ಐದು ಪಠ್ಯಗಳನ್ನು ಬೋಧನೆ ಮಾಡಲು ತಲಾ ಐದು ಅವಧಿಗಳನ್ನು ನಿಗದಿಪಡಿಸಲಾಗಿದೆ.

7ನೇ ಪುಟ ನೋಡಿ

ಸಿಬಿಎಸ್‌ಇ ಪಠ್ಯದಲ್ಲಿ ಅಳವಡಿಸಿರುವ ಅಧ್ಯಾಯಗಳು

- ಯುದ್ಧ -ಸಾರಾ ಅಬೂಬಕ್ಕರ್
- ಶಬರಿ -ಪು.ತಿ. ನರಸಿಂಹಾಚಾರ್
- ಭಾಗ್ಯ ಶಿಲ್ಪಿಗಳು -ಸಮಿತಿ ರಚನೆ/ ಡಿ.ಎಸ್. ಜಯಪ್ಪಗೌಡ
- ವ್ಯಾಘ್ರಗೀತೆ -ಎ.ಎನ್. ಮೂರ್ತಿರಾಯರು
- ವೃಕ್ಷಸಾಕ್ಷಿ -ದುರ್ಗಸಿಂಹ

ಪದ್ಯಭಾಗ

- ಸಂಕಲ್ಪ ಗೀತೆ -ಜಿ.ಎಸ್. ಶಿವರುದ್ರಪ್ಪ
- ಹಲಗಲಿ ಬೇಡರು -ಜನಪದ ಲಾವಣಿ (ಸಂಗ್ರಹ)
- ಕೌರವೇಂದ್ರನ ಕೊಂದೆ ನೀನು -ಕುಮಾರವ್ಯಾಸ
- ಹಸುರು -ಕುವೆಂಪು
- ವೀರಲವ -ಲಕ್ಷ್ಮೀಶ

ಪಠ್ಯಪೂರಕ ಅಧ್ಯಯನ

- ಸ್ವಾಮಿ ವಿವೇಕಾನಂದ ಚಿಂತನೆಗಳು -ಸಮಿತಿ ರಚನೆ
- ವಸಂತ ಮುಖ ತೋರಲಿಲ್ಲ -ವಿಜಯಶ್ರೀ ಸಬರದ
- ಭಗತ್ ಸಿಂಗ್ -ಜಿ. ರಾಮಕೃಷ್ಣ
- ಮೃಗ ಮತ್ತು ಸುಂದರಿ -ಪಿ. ಲಂಕೇಶ್

10ನೇ ತರಗತಿ ಪಠ್ಯದಲ್ಲಿ ರೋಹಿತ್ ಚಕ್ರತೀರ್ಥ ಸಮಿತಿ ಕೈಬಿಟ್ಟಿರುವ ಅಧ್ಯಾಯಗಳು

- ಯುದ್ಧ –ಸಾರಾ ಅಬೂಬಕ್ಕರ್
- ವ್ಯಾಘ್ರಗೀತೆ –ಎ.ಎನ್. ಮೂರ್ತಿರಾಯರು
- ಸ್ವಾಮಿ ವಿವೇಕಾನಂದರ ಚಿಂತನೆಗಳು– ಸಮಿತಿ ರಚನೆ
- ಮೃಗ ಮತ್ತು ಸುಂದರಿ –ಪಿ. ಲಂಕೇಶ್
- ಒಗಟುಗಳು –ಜನಪದ

'ಪಠ್ಯ ಪರಿಷ್ಕರಣೆ ಸಮಿತಿ ಸ್ವಾಯತ್ತ ಸಂಸ್ಥೆಯಾಗಲಿ'

ದಾವಣಗೆರೆ: 'ಬಿಜೆಪಿ ಸರ್ಕಾರ ತನ್ನ ಕೇಸರೀಕರಣದ ಅಜೆಂಡಾದ ಭಾಗವಾಗಿ ಶಿಕ್ಷಣ ಕ್ಷೇತ್ರವನ್ನೂ ಕೆಡಿಸಲು ಶುರುಮಾಡಿದೆ. ಸದ್ಯದ ಪಠ್ಯಪುಸ್ತಕ ಪುನರ್ ರಚನೆ ಇಂಥ ಒಂದು ಧೂರ್ತ, ಅನೈತಿಕ ಹೆಜ್ಜೆಯಾಗಿದ್ದು, ಇದನ್ನು ಖಂಡಿಸುತ್ತೇವೆ. ಶಿಕ್ಷಣದ ಹೃದಯವಾಗಿರುವ ಪಠ್ಯಕ್ರಮ ರಚನೆಯನ್ನು ನಾಡಿನ ಮಾನ್ಯತೆ ಪಡೆದ, ಅನುಭವಿ ತಜ್ಞರು ನಿರ್ವಹಿಸಬೇಕು ಮತ್ತು ಭವಿಷ್ಯದ ದೃಷ್ಟಿಯಿಂದ ಈ ಪ್ರಕ್ರಿಯೆಗೆ ಸ್ವಾಯತ್ತ ಸಾಂಸ್ಥಿಕ ಸ್ವರೂಪವನ್ನು ನೀಡಬೇಕು' ಎಂಬ ನಿರ್ಣಯವನ್ನು ದಾವಣಗೆರೆಯಲ್ಲಿ ಶುಕ್ರವಾರ ಆರಂಭಗೊಂಡ 8ನೇ ಮೇ ಸಾಹಿತ್ಯ ಮೇಳದಲ್ಲಿ ತೆಗೆದುಕೊಳ್ಳಲಾಯಿತು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಆರ್ಯನ್ ಖಾನ್ ದೋಷಮುಕ್ತ

ನವದೆಹಲಿ/ಮುಂಬೈ (ಪಿಟಿಐ): 'ಐಷಾರಾಮಿ ಹಡಗಿನಲ್ಲಿ ಡ್ರಗ್ಸ್' ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಿವುಡ್ ಸೂಪರ್ ಸ್ಟಾರ್ ಶಾರುಕ್ ಖಾನ್ ಮಗ ಆರ್ಯನ್ ಖಾನ್ ಅವರನ್ನು ಮಾದಕ ವಸ್ತು ನಿಯಂತ್ರಣ ಘಟಕವು (ಎನ್‌ಸಿಬಿ) ಶುಕ್ರವಾರ ಆರೋಪ ಮುಕ್ತಗೊಳಿಸಿದೆ.

ಮುಂಬೈ ಕೋರ್ಟ್‌ನಲ್ಲಿ ಎನ್‌ಸಿಬಿ ಅಧಿಕಾರಿಗಳು ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ. 'ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಆರ್ಯನ್ ಖಾನ್ ಮತ್ತು ಇತರ ಐವರ ಹೆಸರುಗಳನ್ನು ಚಾರ್ಜ್‌ಶೀಟ್‌ನಲ್ಲಿ ಸೇರಿಸಿಲ್ಲ' ಎಂದು ತಿಳಿಸಿದ್ದಾರೆ.

2021ರ ಅಕ್ಟೋಬರ್ 2ರಂದು ಮುಂಬೈನ ಎನ್‌ಸಿಬಿ ವಲಯದ ಆಗಿನ ಮುಖ್ಯಸ್ಥ ಸಮೀರ್ ವಾಂಖೆಡೆ ನೇತೃತ್ವದ ತಂಡವು ಐಷಾರಾಮಿ ಹಡಗಿನ ಮೇಲೆ ದಾಳಿ ನಡೆಸಿತ್ತು. ಡ್ರಗ್ಸ್ ಸೇವಿಸಿದ ಆರೋಪದ ಮೇಲೆ ಆರ್ಯನ್ ಖಾನ್ ಸೇರಿ ಎಂಟು ಜನರನ್ನು ಈ ತಂಡ ಬಂಧಿಸಿತ್ತು. ವಿಚಾರಣೆ ಬಳಿಕ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ನಂತರ, ಆರ್ಯನ್ ಖಾನ್ ಅವರನ್ನು ಮುಂಬೈನ ಆರ್ಥರ್ ರೋಡ್ ಜೈಲಿನಲ್ಲಿರಿಸಲಾಗಿತ್ತು. ಅಕ್ಟೋಬರ್ 28ರಂದು ಜಾಮೀನು ಮಂಜೂರಾಗಿತ್ತು. ಅಕ್ಟೋಬರ್ 30ರಂದು ಅವರನ್ನು ಜೈಲಿನಿಂದ ಬಿಡುಗಡೆ ಮಾಡಲಾಗಿತ್ತು.

4 ನೇ ಪುಟ ನೋಡಿ

ವಂದಿತಾ ಶರ್ಮ ಹೊಸ ಸಿ.ಎಸ್

ಬೆಂಗಳೂರು: ರಾಜ್ಯ ಸರ್ಕಾರದ ಅಭಿವೃದ್ಧಿ ಆಯುಕ್ತೆ ಹಾಗೂ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿರುವ ವಂದಿತಾ ಶರ್ಮ ಅವರನ್ನು ನೂತನ ಮುಖ್ಯ ಕಾರ್ಯದರ್ಶಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ.

ವಂದಿತಾ ಶರ್ಮ

ಹಾಲಿ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರು ಇದೇ 31 ರಂದು ನಿವೃತ್ತಿ ಹೊಂದಲಿದ್ದಾರೆ. ವಂದಿತಾ ಅವರ ಅವಧಿ ನವೆಂಬರ್ 2023ರವರೆಗೆ ಇರಲಿದೆ.

ವಂದಿತಾ ಶರ್ಮ ಅವರು ಪಂಜಾಬ್‌ನವರು. ಈ ಹಿಂದೆ ತೆರೇಸಾ ಭಟ್ಟಾಚಾರ್ಯ, ಮಾಲತಿದಾಸ್ ಮತ್ತು ರತ್ನಪ್ರಭಾ ಅವರು ಮುಖ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು.

ಕೋವಿಡ್ ಸಂದರ್ಭದಲ್ಲಿ ಲಸಿಕೆ ವಿತರಣೆಗೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಯಾಗಿ ವಂದಿತಾ ಕಾರ್ಯನಿರ್ವಹಿಸಿದ್ದರು. ಕೇಂದ್ರ ಸರ್ಕಾರದಲ್ಲಿ ಬಾಹ್ಯಾಕಾಶ ಇಲಾಖೆಯಲ್ಲೂ ಕಾರ್ಯ ನಿರ್ವಹಿಸಿದ್ದರು.

ವಂದಿತಾ ಶರ್ಮ ರಾಜ್ಯ ಐಎಎಸ್ ಅಧಿಕಾರಿಗಳ ಸಂಘದ ಅಧ್ಯಕ್ಷೆಯಾಗಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಾಸಿಗೆ ಬ್ಲಾಕಿಂಗ್ ಪ್ರಕರಣದಲ್ಲಿ ಶಾಸಕ ಸತೀಶ ರೆಡ್ಡಿಯವರ ಬೆಂಬಲಿಗರು ಐಎಎಸ್ ಅಧಿಕಾರಿ ಯಶವಂತ್ ಅವರ ಮೇಲೆ ಹಲ್ಲೆಯ ಯತ್ನ ನಡೆಸಿದ್ದರು. ಆ ಹೊತ್ತಿನಲ್ಲಿ ವಂದಿತಾ ಅವರು ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದು ತೀವ್ರ ವಿರೋಧ ವ್ಯಕ್ತಪಡಿಸಿದ್ದರು.

ಶೋಕ ನದಿಗೆ ಉರುಳಿ ಬಿದ್ದ ವಾಹನವನ್ನು ಯೋಧರು ಶುಕ್ರವಾರ ಪರಿಶೀಲಿಸಿದರು – ಪಿಟಿಐ ಚಿತ್ರ

ನದಿಗೆ ಉರುಳಿದ ಸೇನಾ ವಾಹನ: 7 ಯೋಧರ ಸಾವು

ಶ್ರೀನಗರ: ಸೇನೆಯ 26 ಯೋಧರು ಪ್ರಯಾಣಿಸುತ್ತಿದ್ದ ವಾಹನವು ನಿಯಂತ್ರಣ ತಪ್ಪಿ ಶುಕ್ರವಾರ ಲಡಾಖ್‌ನ ತುರ್ತುಕ್ ವಲಯದಲ್ಲಿ ಶೋಕ ನದಿಗೆ ಉರುಳಿ ಬಿದ್ದಿದ್ದು, ಏಳು ಮಂದಿ ಯೋಧರು ಮೃತಪಟ್ಟಿದ್ದಾರೆ.

ಪರ್ತಾಪುರ್‌ನಿಂದ ಹನಿಫ್ ಉಪವಲಯದ ಶಿಬಿರಕ್ಕೆ ಯೋಧರು ತೆರಳುತ್ತಿದ್ದರು. ವಾಹನದಲ್ಲಿದ್ದ ಇತರೆ ಯೋಧರು ಗಾಯಗೊಂಡಿದ್ದು, ಪರ್ತಾಪುರ್‌ನ ಸೇನಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೆಲವರ ಸ್ಥಿತಿ ಗಂಭೀರವಾಗಿದೆ ಎಂದು ಸೇನಾ ವಕ್ತಾರರು ತಿಳಿಸಿದ್ದಾರೆ.

ಗಾಯಾಳುಗಳಿಗೆ ಅತ್ಯುತ್ತಮ ಚಿಕಿತ್ಸೆಯನ್ನು ಒದಗಿಸಲು ಕ್ರಮವಹಿಸಲಾಗಿದೆ. ಲೇಹ್‌ನಿಂದ ತಜ್ಞ ವೈದ್ಯರನ್ನು ಕರೆಸಲಾಗಿದೆ ಎಂದು ತಿಳಿಸಿದ್ದಾರೆ. ಶೋಕ ಅನ್ನು 'ಸಾವಿನ ನದಿ' ಎಂದು ಗುರುತಿಸಲಾಗುತ್ತದೆ. ಇದು,ಸಿಂಧೂ ನದಿಯ ಉಪನದಿಯಾಗಿದ್ದು, 550 ಕಿ.ಮೀ ನಷ್ಟು ದೂರ ಉತ್ತರ ಲಡಾಖ್, ಗಿಲ್‌ಗಿಟ್, ಬಾಲ್ಟಿಸ್ತಾನ್ ವಲಯದಲ್ಲಿ ಹರಿಯುತ್ತದೆ.

ಪ್ರೇಮ ಪ್ರಕರಣ ಯುವಕನ ಕೊಲೆ

ಕಲಬುರಗಿ: ಪ್ರೇಮ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ತಾಪುರ ತಾಲ್ಲೂಕಿನ ವಾಡಿ ಪಟ್ಟಣದ ಭೀಮನಗರದ ವಿಜಯ ಕುಮಾರ್ ಕಾಂಬಳೆ (25) ಹತ್ಯೆಯಾಗಿದ್ದು, ಇಬ್ಬರು ಆರೋಪಿಗಳನ್ನು ವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿಜಯಕುಮಾರ್ ಕಾಂಬಳೆ

ಮೊಹಮ್ಮದ್ ಶಹಾಬುದ್ದೀನ್

ನವಾಜ್

ವಾಡಿಯ ಮರಾಠಿ ಗಲ್ಲಿಯ ಮೊಹಮ್ಮದ್ ಶಹಾಬುದ್ದೀನ್ (19) ಮತ್ತು ನವಾಜ್ (19) ಬಂಧಿತರು. ಕೃತ್ಯ ಮೇ 25ರಂದು ನಡೆದಿದೆ.

'ವಿಜಯಕುಮಾರ್ ಮತ್ತು ಶಹಾಬುದ್ದೀನ್‌ನ ತಂಗಿ ನಾಲ್ಕು ವರ್ಷಗಳಿಂದ ಪ್ರೀತಿಸುತ್ತಿದ್ದರು. ಇದನ್ನು ಆಕ್ಷೇಪಿಸಿದ್ದ ಶಹಾಬುದ್ದೀನ್ ಒಂಬತ್ತು ತಿಂಗಳ ಹಿಂದೆ ವಿಜಯಕುಮಾರ್ ಮೇಲೆ ಹಲ್ಲೆ ಮಾಡಿದ್ದ. ಆ ನಂತರವೂ ಪ್ರೇಮಿಗಳ ಮಧ್ಯೆ ಮೊಬೈಲ್‌ನಲ್ಲಿ ಚಾಟಿಂಗ್ ಮುಂದುವರಿದಿತ್ತು. ಇದರಿಂದ ಸಿಟ್ಟಿಗೆದ್ದು ಸ್ನೇಹಿತ ನವಾಜ್ ಜೊತೆ ಸೇರಿ ಶಹಾಬುದ್ದೀನ್ ಈ ಕೃತ್ಯವೆಸಗಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ಹತ್ಯೆಗೂ ಮುನ್ನ ಕರೆ: 'ವಾಡಿಯ ರೈಲ್ವೆ ಚಾಳ ಬಳಿ ಮೇ 25ರ ರಾತ್ರಿ 7.45ರ ಸುಮಾರಿಗೆ ಸ್ನೇಹಿತರ ಜೊತೆಗಿದ್ದ ವಿಜಯ ಕುಮಾರ್‌ನನ್ನು ಹುಡುಕಿಕೊಂಡು ಬಂದ ಇಬ್ಬರು ಆರೋಪಿಗಳು ಡ್ರ್ಯಾಗರ್ ಬಳಸಿ ಹತ್ಯೆ ಮಾಡಿದ್ದಾರೆ. ಇದಕ್ಕೂ ಮುನ್ನ ವಿಜಯಕುಮಾರ್‌ಗೆ ಕರೆ ಮಾಡಿ, ಶಹಾಬುದ್ದೀನ್ ಎಚ್ಚರಿಕೆ ನೀಡಿದ್ದ. ಕೊಲೆ ಹಾಗೂ ಜಾತಿನಿಂದನೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಮಾಹಿತಿ ನೀಡಿದ್ದಾರೆ.

ಡ್ರಗ್ಸ್: ಉದ್ಯಮಿ ಆದಿ ಶ್ರೀನಿವಾಸ್ ನಾಯ್ಡು ಬಂಧನ

ಬೆಂಗಳೂರು: ಡ್ರಗ್ಸ್ ಪ್ರಕರಣ ಸಂಬಂಧ ಉದ್ಯಮಿ ಆದಿ ಶ್ರೀನಿವಾಸ್ ನಾಯ್ಡು ಅವರನ್ನು ಎನ್‌ಸಿಬಿ (ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ) ಅಧಿಕಾರಿಗಳು ದೇವನಹಳ್ಳಿ ಸಮೀಪದ ಸಾದಹಳ್ಳಿ ಗೇಟ್ ಬಳಿ ಇತ್ತೀಚೆಗೆ ಬಂಧಿಸಿದ್ದಾರೆ.



ಬಂಧಿತ ಶ್ರೀನಿವಾಸ್, ಆಂಧ್ರಪ್ರದೇಶ ಟಿಡಿಪಿ ಮುಖಂಡರೂ ಆಗಿದ್ದ ಉದ್ಯಮಿ ದಿವಂಗತ ಡಿ.ಕೆ.ಆದಿಕೇಶವಲು ನಾಯ್ಡು ಅವರ ಮಗ. ಡ್ರಗ್ಸ್ ಖರೀದಿಸುವಾಗಲೇ ಎನ್‌ಸಿಬಿ ಅಧಿಕಾರಿಗಳು ದಾಳಿ ನಡೆಸಿ ಬಂಧಿಸಿದ್ದಾರೆ.

'ನಗರದ ಹಲವು ಆಸ್ಪತ್ರೆಗಳ ಪಾಲುದಾರರು ಹಾಗೂ ಉದ್ಯಮಿ ಆಗಿರುವ ಶ್ರೀನಿವಾಸ್, ಕೆಲವರಿಂದ ಡ್ರಗ್ಸ್ ಖರೀದಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಲು ವಿಶೇಷ ತಂಡ ರಚಿಸಲಾಗಿತ್ತು' ಎಂದು ಎನ್‌ಸಿಬಿ ಮೂಲಗಳು ಹೇಳಿವೆ.

3ನೇ ಪುಟ ನೋಡಿ

ಕನ್ನಡ ಹಾಡು ಹಾಕಿದ್ದಕ್ಕೆ ಎಂಇಎಸ್ ಕಾರ್ಯಕರ್ತರಿಂದ ಹಲ್ಲೆ: ಆರೋಪ

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಧಾಮಣೆ ಗ್ರಾಮದಲ್ಲಿ ಗುರುವಾರ ತಡರಾತ್ರಿ ಮದುವೆ ಮೆರವಣಿಗೆಯಲ್ಲಿ ಕನ್ನಡ ಹಾಡು ಹಾಕಿದ್ದಕ್ಕೆ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಕಾರ್ಯಕರ್ತರು ಕನ್ನಡಿಗರ ಮೇಲೆ ಹಲ್ಲೆ ನಡೆಸಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಈ ಪ್ರಕರಣಕ್ಕೆ ಸಂಬಂಧಿಸಿ 9 ಜನರನ್ನು ಪೊಲೀಸರು ಶುಕ್ರವಾರ ವಶಕ್ಕೆ ಪಡೆದಿದ್ದಾರೆ.

ಘಟನೆಯಲ್ಲಿ ವರ ಸಿದ್ದು ಸೈಬಣ್ಣವರ, ವಧು ರೇಷ್ಮಾ ಸೇರಿ ಐವರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಒಬ್ಬನ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದುಬಂದಿದೆ.

'ನಾವು ಮೆರವಣಿಗೆಯಲ್ಲಿ ವಧು–ವರನನ್ನು ಮನೆಗೆ ಕರೆದುಕೊಂಡು ಹೋಗುತ್ತ ಕನ್ನಡ ಬಾವುಟ ಹಿಡಿದು ಕನ್ನಡ ಗೀತೆಗೆ ಕುಣಿಯುತ್ತಿದ್ದೆವು. ಇದನ್ನು ನೋಡಿ ಸಹಿಸಲಾಗದ ಎಂಇಎಸ್‌ನವರು ಗಲಾಟೆ ಮಾಡಿದ್ದಾರೆ' ಎಂದು ಗಾಯಗೊಂಡವರು ಆರೋಪಿಸಿದ್ದಾರೆ.

> **ಹಲ್ಲೆ ಪ್ರಕರಣ ಸಂಬಂಧ 9 ಮಂದಿ ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದೇವೆ. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು**
> **ಡಾ.ಎಂ.ಬಿ. ಬೋರಲಿಂಗಯ್ಯ**
> ಬೆಳಗಾವಿ ನಗರ ಪೊಲೀಸ್ ಆಯುಕ್ತ

'ಅಣ್ಣನ ಮದುವೆ ಮೆರವಣಿಗೆಯಲ್ಲಿ ಕನ್ನಡ ಧ್ವಜ ಹಿಡಿದು ಕುಣಿಯುತ್ತಿದ್ದೆವು. ಎಂಇಎಸ್‌ನವರು ನಮ್ಮನ್ನು ಪಕ್ಕಕ್ಕೆ ಕರೆದು ಗಲಾಟೆ ತೆಗೆದರು. ಬಡಿಗೆಯಲ್ಲಿ ಹೊಡೆದರು' ಎಂದು ಚಿಕಿತ್ಸೆ ಪಡೆಯುತ್ತಿರುವ ಭರಮಾ ಸೈಬಣ್ಣವರ ಎಂಬುವವರು ಆರೋಪಿಸಿದ್ದಾರೆ

'ಎರಡು ತಿಂಗಳ ಹಿಂದೆ ಕೆಲವರು ನಮ್ಮ ಗಾಡಿಯನ್ನೂ ಸುಟ್ಟಿದ್ದರು. ನಮ್ಮ ಮನೆ ಮುಂದೆ ಚನ್ನಮ್ಮನ ಫಲಕ ಹಾಕಿದ್ದೇವೆ. ಹೀಗಾಗಿ, ಪದೇ ಪದೇ ಗಲಾಟೆ ತೆಗೆಯುತ್ತಿದ್ದಾರೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಅವರು ದೂರಿದರು.

ಗೀತಾಂಜಲಿ ಶ್ರೀಗೆ ಬೂಕರ್ ಪ್ರಶಸ್ತಿ

ಲಂಡನ್ (ಪಿಟಿಐ): ಲೇಖಕಿ ಗೀತಾಂಜಲಿ ಶ್ರೀ ಅವರ 'ಟಾಂಬ್ ಆಫ್ ಸ್ಯಾಂಡ್' ಕಾದಂಬರಿಯು ಪ್ರತಿಷ್ಠಿತ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಆಯ್ಕೆಯಾಗಿದೆ. ಹಿಂದಿ ಕೃತಿಯೊಂದು ಇದೇ ಮೊದಲ ಬಾರಿಗೆ ಈ ಪ್ರಶಸ್ತಿಗೆ ಭಾಜನವಾಗಿದೆ.

ಗೀತಾಂಜಲಿ ಶ್ರೀ

ಗುರುವಾರ ಲಂಡನ್‌ನಲ್ಲಿ ನಡೆದ ಸಮಾರಂಭದಲ್ಲಿ ಗೀತಾಂಜಲಿ ಶ್ರೀ ಅವರಿಗೆ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಪ್ರಶಸ್ತಿಯ ಮೊತ್ತ ₹ 49 ಲಕ್ಷ (50,000 ಪೌಂಡ್). ಈ ಬಹುಮಾನದ ಮೊತ್ತವನ್ನು ಅವರು ಕೃತಿಯ ಅನುವಾದಕರಾದ ಡೈಸಿ ರಾಕ್‌ವೆಲ್ ಅವರೊಂದಿಗೆ ಹಂಚಿಕೊಂಡಿದ್ದಾರೆ.

ಉತ್ತರ ಪ್ರದೇಶದ ಮೈನ್‌ಪುರಿಯಲ್ಲಿ ಜನಿಸಿದ ಗೀತಾಂಜಲಿ ಅವರು ಮೂರು ಕಾದಂಬರಿ ಮತ್ತು ಹಲವು ಕಥೆಗಳನ್ನು ಬರೆದಿದ್ದಾರೆ. ಇದರಲ್ಲಿ ಹಲವು ಕೃತಿಗಳು ಇಂಗ್ಲಿಷ್, ಫ್ರೆಂಚ್, ಜರ್ಮನಿ ಹಾಗೂ ಕೊರಿಯಾ ಭಾಷೆಗಳಿಗೆ ಅನುವಾದಗೊಂಡಿವೆ.

ಜಕ್ಕೂರು ಮೇಲ್ಸೇತುವೆಯಲ್ಲಿ ಅಪಘಾತ: ಬಾಲಕ ಸಾವು

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯ ಜಕ್ಕೂರು ಮೇಲ್ಸೇತುವೆಯಲ್ಲಿ ಮೇ 22ರಂದು ಸಂಭವಿಸಿದ್ದ ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ ಸಂಜಯ್ (11) ಎಂಬಾತ ಚಿಕಿತ್ಸೆಗೆ ಸ್ಪಂದಿಸದೇ ಶುಕ್ರವಾರ ಅಸುನೀಗಿದ್ದಾನೆ.

'ಹಿಂದೂಪುರ ಬಾಲಕ ಸಂಜಯ್, ಜಕ್ಕೂರಿನ ಪಾನಿಪುರಿ ವ್ಯಾಪಾರಿ ಗೋವಿಂದಪ್ಪ (46) ಅವರ ಮನೆಗೆ ಬಂದಿದ್ದ. ಸಂಜಯ್‌ನಿಗೆ ವಿಮಾನ ತೋರಿಸಲೆಂದು ಗೋವಿಂದಪ್ಪ ಅವರು ಟಿವಿಎಸ್ ಮೊಪೆಡ್ ದ್ವಿಚಕ್ರ ವಾಹನದಲ್ಲಿ ಏರೋಡ್ರಮ್ ಬಳಿ ಕರೆದೊಯ್ಯುತ್ತಿದ್ದರು' ಎಂದು ಯಲಹಂಕ ಸಂಚಾರ ಪೊಲೀಸರು ಹೇಳಿದರು.

'ಅತೀ ವೇಗವಾಗಿ ಬಂದಿದ್ದ ಕಾರು, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು. ಸಂಜಯ್ ತೀವ್ರ ಗಾಯಗೊಂಡಿದ್ದ. ಗೋವಿಂದಪ್ಪ ಮೇಲ್ಸೇತುವೆಯಿಂದ ಕೆಳ ರಸ್ತೆಗೆ ಬಿದ್ದು ಮೃತಪಟ್ಟಿದ್ದರು. ಅಪಘಾತ ಸಂಬಂಧ ಕಾರು ಚಾಲಕ ವರುಣ್‌ನನ್ನು ಈಗಾಗಲೇ ಬಂಧಿಸಲಾಗಿದೆ' ಎಂದು ಅವರು ತಿಳಿಸಿದರು.

200ಕ್ಕೂ ಅಧಿಕ ಮಂದಿಗೆ ವಸತಿ ವ್ಯವಸ್ಥೆ • ಮೂರು ಮಹಡಿಯ ಪ್ರತ್ಯೇಕ ಕಟ್ಟಡ ನಿರ್ಮಾಣ

ಆರ್‌ಜಿಐಸಿಡಿ: ಸಹಾಯಕರಿಗೆ ವಿಶ್ರಾಂತಿಧಾಮ

• ವರುಣ ಹೆಗಡೆ

ಬೆಂಗಳೂರು: ಕ್ಷಯರೋಗ ಮತ್ತು ಎದೆ ರೋಗಗಳ ಚಿಕಿತ್ಸೆಗೆ ಹೆಸರುವಾಸಿಯಾಗಿರುವ ರಾಜೀವ್‌ಗಾಂಧಿ ಎದೆರೋಗಗಳ ಸಂಸ್ಥೆಯು (ಆರ್‌ಜಿಐಸಿಡಿ), ದೂರದ ಊರುಗಳಿಂದ ಬರುವ ರೋಗಿಗಳ ಸಹಾಯಕರಿಗೆ ಪ್ರತ್ಯೇಕವಾಗಿ ವಸತಿ ವ್ಯವಸ್ಥೆ ಕಲ್ಪಿಸಲು ಮುಂದಾಗಿದೆ.

ಇಲ್ಲಿ ಚಿಕಿತ್ಸೆ ಪಡೆಯಲು ವಿವಿಧ ಜಿಲ್ಲೆಗಳಲ್ಲದೇ, ಹೊರರಾಜ್ಯಗಳಿಂದಲೂ ರೋಗಿಗಳು ಬರುತ್ತಾರೆ. ಸದ್ಯ ಪ್ರತಿ ರೋಗಿ ಜತೆಗೆ ಸಹಾಯಕರೊಬ್ಬರಿಗೆ ಆಸ್ಪತ್ರೆಯಲ್ಲಿ ಉಳಿಯಲು ಅವಕಾಶವಿದೆ. ದೂರದಿಂದ ಬರುವ ರೋಗಿಗಳ ಸಂಬಂಧಿಗಳಿಗೆ ವಸತಿ ಸಮಸ್ಯೆ ಕಾಡುತ್ತಿತ್ತು. ಹೀಗಾಗಿ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಮಾದರಿಯಲ್ಲಿಯೇ ರೋಗಿಗಳ ಸಹಾಯಕರಿಗೆ ಪ್ರತ್ಯೇಕ ವಿಶ್ರಾಂತಿ ಧಾಮ ನಿರ್ಮಿಸಲಾಗುತ್ತಿದೆ.

ಅಂಕಿ-ಅಂಶಗಳು

470 ಆಸ್ಪತ್ರೆಯ ಹಾಸಿಗೆಗಳ ಸಾಮರ್ಥ್ಯ

30 ಆಸ್ಪತ್ರೆಯಲ್ಲಿ ಲಭ್ಯ ಇರುವ ತಜ್ಞ ವೈದ್ಯರು

200-250 ಆಸ್ಪತ್ರೆಗೆ ದಿನದಲ್ಲಿ ಭೇಟಿ ನೀಡುವ ಹೊರರೋಗಿಗಳ ಸರಾಸರಿ ಸಂಖ್ಯೆ

170-180 ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸರಾಸರಿ ಒಳರೋಗಿಗಳು

'1.3 ಎಕರೆ ಪ್ರದೇಶದಲ್ಲಿ ಬಿಬಿಎಂಪಿ ₹10 ಕೋಟಿ ವೆಚ್ಚದಲ್ಲಿ ಸಂಸ್ಥೆಗೆ ಕಟ್ಟಡ ನಿರ್ಮಿಸಿಕೊಡುತ್ತಿದೆ. 3 ಮಹಡಿಗಳ ವಿಶ್ರಾಂತಿ ಧಾಮದಲ್ಲಿ 250 ಜನ ಉಳಿದುಕೊಳ್ಳಲು ಅವಕಾಶ ಕಲ್ಪಿಸಬಹುದು. 6 ತಿಂಗಳಲ್ಲಿ ನಿರ್ಮಾಣ ಪೂರ್ಣಗೊಳ್ಳಲಿದೆ. ರೋಗಿ ಚೇತರಿಸಿಕೊಳ್ಳುವವರೆಗೂ ಸಹಾಯಕರು ಸಂಸ್ಥೆಯಲ್ಲಿಯೇ ಇರಬಹುದಾಗಿದೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ನಾಗರಾಜ್ ತಿಳಿಸಿದರು.

ಕೋವಿಡ್‌ಯೇತರ ಚಿಕಿತ್ಸೆಗೆ ಆದ್ಯತೆ: 2020ರ ಮಾರ್ಚ್‌ನಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಏರಿಕೆಯಾದಾಗ ಪೂರ್ಣಪ್ರಮಾಣದಲ್ಲಿ ಕೋವಿಡ್ ಆಸ್ಪತ್ರೆಯಾಗಿ ಪರಿವರ್ತಿಸಲಾಗಿತ್ತು. ಇದರಿಂದ ಎದೆರೋಗಗಳಿಗೆ ಚಿಕಿತ್ಸೆಗೆ ಸಮಸ್ಯೆಯಾಗಿತ್ತು. ಈಗ ಕೋವಿಡ್ ನಿಯಂತ್ರಣಕ್ಕೆ ಬಂದಿದ್ದು ಕೋವಿಡೇತರ ಚಿಕಿತ್ಸೆಗೆ ಆದ್ಯತೆ ನೀಡಲಾಗುತ್ತಿದೆ.



ಕೋವಿಡ್ ನಿಯಂತ್ರಣ ಬಳಿಕ ಎದೆ ರೋಗಿಗಳ ಸಂಖ್ಯೆ ಹೆಚ್ಚುವ ಸಾಧ್ಯತೆಯಿದೆ. ವಿಶ್ರಾಂತಿ ಧಾಮ ನಿರ್ಮಾಣದಿಂದ ಸಹಾಯಕರಿಗೆ ವಸತಿ ಸಮಸ್ಯೆ ನಿವಾರಣೆಯಾಗಲಿದೆ.

ಡಾ.ಸಿ. ನಾಗರಾಜ್
ಆರ್‌ಜಿಐಸಿಡಿ ನಿರ್ದೇಶಕ

ಕೋವಿಡ್ 2ನೇ ಅಲೆ ಬಳಿಕ ಶೀತ ಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಹಾಗೂ ತೀವ್ರ ಉಸಿರಾಟ ಸಮಸ್ಯೆ ಇರುವವರಿಗೆ ಸಂಸ್ಥೆಯ ಹಿಂಭಾಗ 200 ಹಾಸಿಗೆಗಳ ತಾತ್ಕಾಲಿಕ ಆಸ್ಪತ್ರೆ (ಮೇಕ್ ಶಿಫ್ಟ್) ನಿರ್ಮಿಸಲಾಗಿತ್ತು. ಇದನ್ನು ಈಗ ಕೋವಿಡೇತರ ಚಿಕಿತ್ಸೆಗೆ ಬಳಸಲಾಗುತ್ತಿದೆ. ಇದನ್ನು ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ₹ 200 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿತ್ತು. ಇಲ್ಲಿಯೂ ಒಬ್ಬ ಸಹಾಯಕರಿಗೆ ಇರಲು ಅವಕಾಶ ನೀಡಲಾಗುತ್ತಿದೆ.

'ವಿಶ್ರಾಂತಿ ಧಾಮದಲ್ಲಿ ಸಹಾಯಕರಿಗೆ ಪ್ರತ್ಯೇಕ ಹಾಸಿಗೆ, ಸ್ನಾನಕ್ಕೆ ಬಿಸಿ ನೀರಿನ ವ್ಯವಸ್ಥೆ ಸೇರಿದಂತೆ ವಿವಿಧ ಸೌಲಭ್ಯ ಇರಲಿದೆ. ನೆಲ ಮಹಡಿಯಲ್ಲಿ ವಾಹನಗಳ ಪಾರ್ಕಿಂಗ್‌ಗೆ ಅವಕಾಶ ನೀಡಲಾಗುತ್ತದೆ' ಎಂದು ಡಾ.ಸಿ. ನಾಗರಾಜ್ ವಿವರಿಸಿದರು.

ಕಸಾಪ: ಮನೆ ಮನೆಗೆ ಭೇಟಿ ಅಭಿಯಾನ

ಬೆಂಗಳೂರು: ಹಾವೇರಿಯಲ್ಲಿ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಮನೆ ಮನೆಗೆ ಭೇಟಿ ಅಭಿಯಾನ ಹಮ್ಮಿಕೊಂಡಿದ್ದಾರೆ.

'ಸಾಹಿತ್ಯ ಸಮ್ಮೇಳನವನ್ನು ಪರಿಷತ್ತು ಮತ್ತು ಸರ್ಕಾರ ಮಾತ್ರ ಆಚರಿಸುವುದಲ್ಲ. ಸಮಸ್ತ ಕನ್ನಡಿಗರೂ ಕನ್ನಡಿಗರ ಹಬ್ಬ ಎಂಬ ಭಾವನೆಯಿಂದ ಒಗ್ಗಟ್ಟಿನಿಂದ ಆಚರಿಸಬೇಕು. ಅರ್ಥಪೂರ್ಣ ಗೋಷ್ಠಿಗಳು, ಔಚಿತ್ಯಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ನುಡಿಜಾತ್ರೆಯನ್ನು ಅತ್ಯಂತ ಯಶಸ್ವಿಯಾಗಿ ನಡೆಸಬೇಕು. ಹೀಗಾಗಿ, ಎಲ್ಲರ ಸಲಹೆ-ಸೂಚನೆಗಳನ್ನು ಸ್ವೀಕರಿಸಲು, ಸಹಕಾರವನ್ನು ಪಡೆಯಲು ಪರಿಷತ್ತಿನ ಅಧ್ಯಕ್ಷರು ರಾಜ್ಯದಾದ್ಯಂತ ಜನ ಸಾಮಾನ್ಯರ, ಗಣ್ಯರ, ವಿವಿಧ ಕ್ಷೇತ್ರಗಳಲ್ಲಿ ಸಾಧನಗೈದ ಮಹನೀಯರುಗಳ ಮನೆಗೆ ಭೇಟಿ ನೀಡಲಿದ್ದಾರೆ' ಎಂದು ಪರಿಷತ್ತಿನ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗಶೆಟ್ಟಿ ಅವರು ತಿಳಿಸಿದ್ದಾರೆ.

'ಕನ್ನಡಾಭಿಮಾನಿಗಳು ತಮ್ಮ ಮನೆಯಲ್ಲಿ ಪರಿಷತ್ತಿನ ಅಧ್ಯಕ್ಷರನ್ನು ಭೇಟಿಯಾಗಲು ಜೂ.30ರೊಳಗೆ ಪರಿಷತ್ತಿನಲ್ಲಿ ವಿಳಾಸ ಸಹಿತ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು' ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ ಸಂಖ್ಯೆ: 080-26612991, 26623584

ಎಂ.ಜಿ. ರಸ್ತೆ ಮಾರ್ಗ: ಮೆಟ್ರೊ ರೈಲು ಇಂದು ರಾತ್ರಿ ತಾತ್ಕಾಲಿಕ ಸ್ಥಗಿತ

ಬೆಂಗಳೂರು: ಮೆಟ್ರೊ ರೈಲು ನೇರಳೆ ಮಾರ್ಗದಲ್ಲಿ ಸಿವಿಲ್ ನಿರ್ವಹಣಾ ಕಾಮಗಾರಿಯನ್ನು ಬಿಎಂಆರ್‌ಸಿಎಲ್ ಕೈಗೆತ್ತಿಕೊಂಡಿದ್ದು, ಶನಿವಾರ ರಾತ್ರಿ 9.30ರ ನಂತರ ಎಂ.ಜಿ. ರಸ್ತೆಯಿಂದ ಬೈಯಪ್ಪನಹಳ್ಳಿ ತನಕ ರೈಲುಗಳ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಳ್ಳಲಿದೆ.

ಎಂ.ಜಿ.ರಸ್ತೆ ಮತ್ತು ಟ್ರಿನಿಟಿ ಮೆಟ್ರೊ ನಿಲ್ದಾಣಗಳ ನಡುವೆ ಕಾಮಗಾರಿ ನಿರ್ವಹಿಸಲಾಗುತ್ತಿದೆ. ಬೈಯಪ್ಪನಹಳ್ಳಿಯಿಂದ ಅಂದು ಕೊನೆಯ ರೈಲು ರಾತ್ರಿ 9.10ಕ್ಕೆ ಹೊರಡಲಿದೆ. ಬೈಯಪ್ಪನಹಳ್ಳಿ ತನಕ ಹೋಗುವ ಕೊನೆಯ ರೈಲು ಕೆಂಗೇರಿ ಮೆಟ್ರೊ ನಿಲ್ದಾಣದಿಂದ 8.40ಕ್ಕೆ, ಕೆಂಪೇಗೌಡ ಮೆಟ್ರೊ ನಿಲ್ದಾಣದಿಂದ 9.10ಕ್ಕೆ ಹೊರಡಲಿದೆ.

ರಾತ್ರಿ 9.30ರ ನಂತರ ಕೆಂಗೇರಿಯಿಂದ ಎಂ.ಜಿ. ರಸ್ತೆ ತನಕ ಮಾತ್ರ ರೈಲುಗಳು ಸಂಚರಿಸಲಿವೆ. ಭಾನುವಾರ ಬೆಳಿಗ್ಗೆ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಲಿದ್ದು, ಬೆಳಿಗ್ಗೆ 7 ಗಂಟೆಯಿಂದ ವೇಳಾಪಟ್ಟಿಯಂತೆ ಎಲ್ಲ ಮಾರ್ಗದಲ್ಲೂ ರೈಲುಗಳ ಸಂಚಾರ ಪುನರ್ ಆರಂಭವಾಗಲಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.
ಇ–ಮೇ: eemidklr@rediffmail.com, eemigwddkolar@gmail.com
ದೂರವಾಣಿ ಸಂಖ್ಯೆ:– 08152–200049
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/ 965/2022–23/ ದಿನಾಂಕ:25–05–2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:03/2022–23/ದಿನಾಂಕ:25–05–2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಒಟ್ಟು 29 ಕಾಮಗಾರಿಗಳಿಗೆ ಕೆ.ಡಬ್ಲ್ಯೂ–1,2&4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ 4ನೇ ದರ್ಜೆ ಮತ್ತು ಮೇಲ್ಪಟ್ಟ ನೋಂದಾಯಿತ ಗುತ್ತಿಗೆದಾರರಿಂದ ಒಂದು & ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 195.00 ಲಕ್ಷ ಹಾಗೂ ಕನಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 3.00 ಲಕ್ಷ. ನಿಗದಿತ ಇ.ಎಂ.ಡಿ ಮೊತ್ತವನ್ನು ಇ–ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪ್ರಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.eproc.karnataka.gov.in ಮೂಲಕ ದಿನಾಂಕ:13/06/2022 ರಿಂದ23/06/2022 ರವರೆಗೆ ಪಡೆಯಬಹುದು (Download), ಕೆ.ಡಬ್ಲ್ಯೂ–4ರ ಟೆಂಡರ್ ಕಾಮಗಾರಿಗಳ ಪ್ರೀ ಬಿಡ್ ಸಭೆಯ ದಿನಾಂಕ:16/06/2022 ರಂದು ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕೋಲಾರ. ಕೆ.ಡಬ್ಲ್ಯೂ–4ರ ಟೆಂಡರ್ ಕಾಮಗಾರಿಗಳಿಗೆ ತಾಂತ್ರಿಕ ಬಿಡ್ ಮತ್ತು ಉಳಿದ ಕಾಮಗಾರಿಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕ:24/06/2022ರ ಸಂಜೆ 04:30 ಗಂಟೆಯ ನಂತರ. ಮೇಲಿನ ವಿವರಗಳನ್ನು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.eproc.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.
ಇ–ಮೇ: eemidklr@rediffmail.com, eemigwddkolar@gmail.com
ದೂರವಾಣಿ ಸಂಖ್ಯೆ:– 08152–200049
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/ 962/2022–23/ ದಿನಾಂಕ:25–05–2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:02/2022–23/ದಿನಾಂಕ:25–05–2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಒಟ್ಟು 07 ಕಾಮಗಾರಿಗಳಿಗೆ ಕೆ.ಡಬ್ಲ್ಯೂ–2,3&4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ 3ನೇ ದರ್ಜೆ ಮತ್ತು ಮೇಲ್ಪಟ್ಟ ನೋಂದಾಯಿತ ಗುತ್ತಿಗೆದಾರರಿಂದ ಒಂದು ಲಕೋಟೆ & ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 220.00 ಲಕ್ಷ ಹಾಗೂ ಕನಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 35.00 ಲಕ್ಷ. ನಿಗದಿತ ಇ.ಎಂ.ಡಿ ಮೊತ್ತವನ್ನು ಇ–ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪ್ರಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.eproc.karnataka.gov.in ಮೂಲಕ ದಿನಾಂಕ:13/06/2022 ರಿಂದ 23/06/2022 ರವರೆಗೆ ಪಡೆಯಬಹುದು (Download). ಕೆ.ಡಬ್ಲ್ಯೂ–4ರ ಟೆಂಡರ್ ಕಾಮಗಾರಿಗಳ ಪ್ರೀ ಬಿಡ್ ಸಭೆಯ ದಿನಾಂಕ:16/06/2022 ರಂದು ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕೋಲಾರ. ಕೆ.ಡಬ್ಲ್ಯೂ–3&4ರ ಟೆಂಡರ್ ಕಾಮಗಾರಿಗಳಿಗೆ ತಾಂತ್ರಿಕ ಬಿಡ್ ಮತ್ತು ಉಳಿದ ಕಾಮಗಾರಿಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕ:24/06/2022ರ ಸಂಜೆ 04:30 ಗಂಟೆಯ ನಂತರ. ಮೇಲಿನ ವಿವರಗಳನ್ನು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.eproc.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.

IN THE COURT OF 1ST ADDL. DISTRICT AND SESSION COURT
BENGALURU RURAL DISTRICT, BENGALURU

REFERENCE NO. 15/2019

First Party : Bangalore North Industrial Workers Union (CITU)
No. 1201, Beside Lawrence English School, 4th cross, Kalyan Nagar, T.Dasarahalli, Bengaluru-560057

v/s

Second Party: M/s Tejkamal Pharmaceutical Pvt Ltd.
Survey No. 6/2, Aladahalii Village, Sompura hobli, Nelamangala Taluk, Bangaloru Rural district-562111

NOTICE

Whereas the Government of Karnataka by its order bearing No. LD-IDM/172/ 2019 LD-DO-5-L:S DATED 21/08/2019 has referred as Industrial dispute U/S 10(1)(C) /(D) of the Industrial Disputes Act 1947 existing between the above named Management/s and Workmen represented by Bangalore North Industrial Workers Union(CITU) to this Court for adjudication on the points of dispute schedule herein.

The Case is registered as REFERENCE NO. 15/2019

Government has sent the copy of the points of dispute referred to both the parties. The case is posted for Appearance of second party i.e **M/s Tejkamal Pharmaceutical Pvt Ltd** and for filing of their statement under rule 10(B)(1)of The Industrial Disputes Act (Karnataka) Rules, 1956 on **30.06.2020 at 11.00 A.M** failing which the case will be determined in their absence.

Date: 26.05.2022

By Order of the Court
Chief Administrative officer.
Principal District and Session Judge
Bengaluru Rural District. Bangalore

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಬಿಡ್ ಸಂಖ್ಯೆ: ಜಿಇಎಂ/2022/ಬಿ/2203396
ದಿನಾಂಕ : 24-05-2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗ : ಒಂದು (01) ವರ್ಷದ ಅವಧಿಗೆ ಬೆಂಗಳೂರು, ಯಶವಂತಪುರ ಮತ್ತು ಎಸ್‌ಎಂವಿಬಿ ಡಿಪೋಗಳ ವಿವಿಧ ರೈಲುಗಳಲ್ಲಿನ ಎಸಿ ಕೋಚ್ ಪ್ರಯಾಣಿಕರಿಗೆ ಸರಬರಾಜು ಮಾಡಲಾಗುವ ಬೆಡ್‌ರೋಲ್ ಲಿನೆನ್‌ಗಳ ವಾಷಿಂಗ್ ಮತ್ತು ಐರನಿಂಗ್ ಜೊತೆಗೆ ರೈಲುಗಳಿಂದ ಸಂಗ್ರಹಿಸುವುದು, ಲಾಂಡ್ರಿಗೆ ಸಾಗಿಸುವುದು ಮತ್ತು ನಿಗದಿತವಾದ ರೈಲುಗಳಿಗೆ ಹಿಂದಿರುಗಿಸುವುದು.	ರೂ. 5,30,41,092.63

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 14-06-2022 ರಂದು 14:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ https://gem.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್
ಪಿಯುಬಿ/112/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23 ಬೆಂಗಳೂರು
S.W.Railways SWRRLY SWRRLY

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂಖ್ಯೆ : ಆರ್‌ಇಎಸ್‌ಬಿಸಿ_ಇಎಲ್_ ಜಿಆರ್.–259_ಓಟಿ-04 ದಿನಾಂಕ : 24-05-2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಬೆಂಗಳೂರು, ಮೈಸೂರು ಮತ್ತು ಹುಬ್ಬಳ್ಳಿ ವಿಭಾಗದಲ್ಲಿ ಜಿಆರ್.259ನ ಆರ್‌ಇ ಕಾಮಗಾರಿಗೆ (ಚಿಕ್ಕಬಾಣಾವರ – ಹುಬ್ಬಳ್ಳಿ) ಸಂಬಂಧಿಸಿದಂತೆ ನಿಟ್ಟೂರ್‌ನಿಂದ ಹುಬ್ಬಳ್ಳಿಯವರೆಗೆ ವಿವಿಧ ಟ್ರ್ಯಾಕ್ಷನ್ ಸಬ್‌ಸ್ಟೇಷನ್‌ಗಳಲ್ಲಿ ಟ್ರ್ಯಾಕ್ಷನ್ ಪವರ್ ಟ್ರಾನ್ಸ್‌ಫಾರ್ಮರ್‌ನ ಅನ್‌ಲೋಡಿಂಗ್ ಮತ್ತು ಡ್ರ್ಯಾಗಿಂಗ್ ಮತ್ತು ಡಯಾಗ್ರಮ್ ಬೋರ್ಡ್, ಸಣ್ಣ ಬೋರ್ಡ್, ದೊಡ್ಡ ಬೋರ್ಡ್‌ಗಳ ಡಿಜಿಟೈಜೇಷನ್, ಸರಬರಾಜು ಮತ್ತು ಅಳವಡಿಕೆ.	ರೂ. 39,00,030.57

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 15-06-2022 ರಂದು 15:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ವಿದ್ಯುತ್ ಇಂಜಿನಿಯರ್
ರೈಲ್ವೆ ವಿದ್ಯುದೀಕರಣ, ಮೈಸೂರು
ಪಿಯುಬಿ/111/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23
S.W.Railways SWRRLY SWRRLY

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಶಿಡ್ಲಘಟ್ಟ
ಹಳೇ ರೇಷ್ಮೆ ಗೂಡಿನ ಮಾರುಕಟ್ಟೆ ಹತ್ತಿರ ಶಿಡ್ಲಘಟ್ಟ ಚಿಕ್ಕಬಳ್ಳಾಪುರ ಜಿಲ್ಲೆ.
ದೂ: 08156–256497 ಇ–ಮೇಲ್: cdposid2@gmail.com
ಸಂ: ಶಿಅಯೋ/ಶಿಘ/ಹೊ.ಗು.ಟೆಂ.ಪ್ರ/2022–23/96 ದಿನಾಂಕ: 23.05.2022

ಇ–ಟೆಂಡರ್ ಪ್ರಕಟಣೆ

ವಿಷಯ: 2022–23ನೇ ಸಾಲಿಗೆ ಶಿಡ್ಲಘಟ್ಟ ತಾಲ್ಲೂಕು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಛೇರಿಗೆ ಕೌಟಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ–2005 ರಡಿ ಕಾರ್ಯ ನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್ ಹಾಗೂ ಮೆಸೆಂಜರ್‌ಗಳ ಬಾಹ್ಯ ಮೂಲದಿಂದ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು ಪ್ರಕಟಿಸುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಮಮಇ 33 ಮಮಅ 2021, ಬೆಂಗಳೂರು ದಿನಾಂಕ: 08.04.2022.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2022–23ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ, ಶಿಡ್ಲಘಟ್ಟ ಶಿಶು ಅಭಿವೃದ್ಧಿ ಯೋಜನಾ, ಕಛೇರಿಯಲ್ಲಿ ಖಾಲಿ ಇರುವ ಕೌಟಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ–2005ರಡಿ ಕಾರ್ಯ ನಿರ್ವಹಿಸುತ್ತಿರುವ **01 ಡಾಟಾ ಎಂಟ್ರಿ ಆಪರೇಟರ್ ಮತ್ತು 01 ಮೆಸೆಂಜರ್ ನೌಕರರ ಒಟ್ಟು 02 ಹುದ್ದೆಗಳಿಗೆ** ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಅಲ್ಪಾವಧಿ ಇ-ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. (1) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **23.05.2022 ರಿಂದ 09.06.2022ರ ಸಂಜೆ 5.00 ಗಂಟೆವರೆಗೆ.** (2) ಇಎಂಡಿ ಮೊತ್ತ: **ರೂ.12,000/-.** (3) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ & ಸಮಯ: **13.06.2022 ರಂದು 11.30 ಗಂಟೆಗೆ.** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **15.06.2022 ರಂದು 11.00 ಗಂಟೆಗೆ.** (5) ಟೆಂಡರ್‌ನ ಅಂದಾಜು ಮೌಲ್ಯ: **ರೂ.4,78,080/-.**

ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪೂರ್ಣ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್‌ನಲ್ಲಿ **(https://www.eproc.karnataka.gov.in)** ಮಾತ್ರ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ: 08158–256497ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಶಿಡ್ಲಘಟ್ಟ
ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/105/ಎಂಸಿಎ/2022–23

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

AstraZeneca
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್
CIN: L24231KA1979PLC003563
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬೆಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ ಔಟರ್ ರಿಂಗ್ ರೋಡ್, ಬೆಂಗಳೂರು – 560045
ದೂ.: +91 80 6774 8000. ವೆಬ್: www.astrazeneca.com/india

31ನೇ ಮಾರ್ಚ್, 2022ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷದ ಆರ್ಥಿಕ ಫಲಿತಾಂಶಗಳ ಹೇಳಿಕೆ

ರೂ. ಲಕ್ಷಗಳಲ್ಲಿ (ಪ್ರತಿ ಷೇರಿನ ಗಳಿಕೆಯ ಡೇಟಾ ಹೊರತುಪಡಿಸಿ)

ಕ್ರ. ಸಂ.	ವಿವರಗಳು	31/03/2022ಕ್ಕೆ ಕೊನೆಗೊಂಡ 3 ತಿಂಗಳಿಗೆ	31/03/2021ಕ್ಕೆ ಕೊನೆಗೊಂಡ ಹಿಂದಿನ ಅವಧಿಯ ವರ್ಷದಲ್ಲಿನ ಅಂಕಿ ಅಂಶಗಳು	31/03/2022ಕ್ಕೆ ಕೊನೆಗೊಂಡ ವರ್ಷಕ್ಕೆ	31/03/2021ಕ್ಕೆ ಕೊನೆಗೊಂಡ ಹಿಂದಿನ ವರ್ಷಕ್ಕೆ
		ಸೂಚನೆ 3 ಅನ್ನು ನೋಡಿ	ಸೂಚನೆ 3 ಅನ್ನು ನೋಡಿ	ಪರಿಶೋಧಿತ	ಪರಿಶೋಧಿತ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	23,564.72	21,280.97	82,035.77	82,640.52
2	ತೆರಿಗೆಗೆ ಮುನ್ನ ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	3,703.05	3,683.86	8,303.62	12,709.38
3	ತೆರಿಗೆ ಕಳೆದು, ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	2,798.33	2,727.89	6,159.28	9,330.35
4	ತೆರಿಗೆ ಕಳೆದು, ಅವಧಿಗೆ ಸಮಗ್ರ ಆದಾಯ	2,710.71	3,004.21	5,985.98	9,673.05
5	ಈಕ್ವಿಟಿ ಷೇರು ಬಂಡವಾಳ	500.00	500.00	500.00	500.00
6	ಮೀಸಲುಗಳು (ಬ್ಯಾಲೆನ್ಸ್ ಷೀಟ್‌ನಲ್ಲಿ ತೋರಿಸಿರುವ ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು)	–	–	50,639.29	45,117.28
7	ಪ್ರತಿ ಷೇರಿಗೆ ಮೂಲ ಮತ್ತು ಡೈಲ್ಯೂಟೆಡ್ ಗಳಿಕೆ (ತಲಾ 2 ರೂ.ನಂತೆ)	11.19	10.91	24.64	37.32

ಟಿಪ್ಪಣಿ:

1. ಇಲ್ಲಿ ಮೇಲೆ ನೀಡಿರುವುದು ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಬಂಧನೆಗಳು, 2015 ನಿಬಂಧನೆ 33ರ ಅನ್ವಯ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಸವಿವರವಾದ ವರದಿಯ ಉದ್ಧೃತ ಭಾಗ. ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಪೂರ್ಣ ವರದಿ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟುಗಳಲ್ಲಿ (www.nseindia.com, www.bseindia.com) ಮತ್ತು ಕಂಪನಿಯ ವೆಬ್‌ಸೈಟಿನಲ್ಲಿ (www.astrazeneca.com/india) ಲಭ್ಯವಿದೆ.
2. ಈ ಹೇಳಿಕೆಯನ್ನು ಕಂಪನಿಗಳ ಅಧಿನಿಯಮ, 2013ರ ಸೆಕ್ಷನ್ 133ರಲ್ಲಿ ಹೇಳಲಾಗಿರುವ ಕಂಪನಿಗಳ (ಭಾರತೀಯ ಅಕೌಂಟಿಂಗ್ ಮಾನಗಳು) ನಿಯಮಗಳು, 2015 (Ind AS) ಹಾಗೂ ಅನ್ವಯಿಸುವ ಮಟ್ಟಿಗೆ ಇತರ ಮಾನ್ಯತೆ ಪಡೆದ ಅಕೌಂಟಿಂಗ್ ಅಭ್ಯಾಸಗಳು ಮತ್ತು ಪಾಲಿಸಿಗಳ ಅನುಸಾರ ಸಿದ್ಧಪಡಿಸಲಾಗಿದೆ.
3. 2022 ಮಾರ್ಚ್ 31ಕ್ಕೆ ಮತ್ತು 2021 ಮಾರ್ಚ್ 31ಕ್ಕೆ [illegible]

ಸ್ಥಳ: ಬೆಂಗಳೂರು
ದಿನಾಂಕ: 26 ಮೇ, 2022

[illegible]

SOBHA
PASSION AT WORK

SOBHA LIMITED
CIN : L45201KA1995PLC018475
Regd. Office: 'SOBHA', Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103.
Ph: +91-80-49320000, Fax: +91-80-49320444
email: investors@sobha.com I website: www.sobha.com

ಷೇರುದಾರರಿಗೆ ಸೂಚನೆ:

(ಕಂಪನಿಯ ಈಕ್ವಿಟಿ ಷೇರುದಾರರ ಗಮನಕ್ಕಾಗಿ)
ಕಂಪನಿಯ ಈಕ್ವಿಟಿ ಷೇರುಗಳನ್ನು ಇನ್ವೆಸ್ಟರ್ ಎಜುಕೇಷನ್ ಆಂಡ್ ಪ್ರೊಟೆಕ್ಷನ್ ಫಂಡ್ (ಐಇಪಿಎಫ್)ಗೆ ವರ್ಗಾಯಿಸುವ ಬಗ್ಗೆ

ಈ ಸೂಚನೆಯನ್ನು ಸೆಕ್ಷನ್ 124 (6) ರ ಕಂಪನಿ ಕಾಯಿದೆ, 2013 ಯನ್ನು ಇನ್ವೆಸ್ಟರ್ ಎಜುಕೇಷನ್ ಆಂಡ್ ಪ್ರೊಟೆಕ್ಷನ್ ಫಂಡ್ ಅಥಾರಿಟಿ (ಅಕೌಂಟಿಂಗ್, ಆಡಿಟ್, ಟ್ರಾನ್ಸಫರ್ ಮತ್ತು ರಿಫಂಡ್) ನಿಯಮಗಳು 2016 (ನಿಯಮಗಳು) ಅನುಸಾರವಾಗಿ ಓದಿಕೊಂಡಂತೆ ಹಾಗೂ ಈ ದಿನದವರೆಗೂ ಆದ ತಿದ್ದುಪಡಿಯು ಸೇರಿದ ಅನ್ವಯ ನೀಡಲಾಗಿದೆ.

ಈ ನಿಯಮಗಳ ಅನ್ವಯ ಆರ್ಥಿಕ ವರ್ಷ 2014–15ರಲ್ಲಿ ಘೋಷಿಸಲ್ಪಟ್ಟ ಡಿವಿಡೆಂಡ್ ಯಾವುದು ನಿರಂತರವಾಗಿ ಏಳು ವರ್ಷಗಳು ಕ್ಲೈಮು ಆಗದೇ ಉಳಿದಿರುವುದೋ ಅಂತಹ ಡಿವಿಡೆಂಡ್ ಮೊತ್ತವನ್ನು ಏಳು ವರ್ಷದ ಕೊನೆಗೆ ಅಂದರೆ ಆಗಸ್ಟ್ 19, 2022 ರ ನಂತರ ಐಇಪಿಎಫ್‌ಗೆ ವರ್ಗಾಯಿಸಲಾಗುವುದು. ಯಾವ ಷೇರುದಾರರು 2014–15 ರಿಂದ ನಿರಂತರವಾಗಿ ಏಳು ವರ್ಷದವರೆಗೆ ಡಿವಿಡೆಂಡ್ ಮೊತ್ತವನ್ನು ಕ್ಲೈಮು ಮಾಡಿರುವುದಿಲ್ಲವೋ ಅವರ ಷೇರುಗಳನ್ನು ಸಹ ಡಿವಿಡೆಂಡ್‌ನ ವರ್ಗಾವಣೆಯ ನಂತರ ಐಇಪಿಎಫ್ ಗೆ ವರ್ಗಾಯಿಸಲಾಗುವುದು.

ಈ ಬಗ್ಗೆ ಕಂಪನಿಯು ಯಾವ ಷೇರುದಾರರ ಷೇರುಗಳು ಮೇಲೆ ಹೇಳಿದ ನಿಯಮಗಳಂತೆ ಐಇಪಿಎಫ್‌ನ ಡಿಮ್ಯಾಟ್ ಅಕೌಂಟ್‌ಗೆ ವರ್ಗಾವಣೆಗೊಳ್ಳಲಿದೆಯೋ ಅಂತಹ ಸಂಬಂಧಪಟ್ಟ ಎಲ್ಲಾ ಷೇರುದಾರರಿಗೆ ಡಿವಿಡೆಂಡ್‌ಗಳನ್ನು ಕ್ಲೈಮು ಮಾಡುವಂತೆ ಸೂಚಿಸಿ ಮಾಹಿತಿಯನ್ನು ಪ್ರತ್ಯೇಕವಾಗಿ ಅವರ ಲಭ್ಯವಿರುವ ವಿಳಾಸಕ್ಕೆ ರವಾನಿಸಲಾಗಿದೆ. ಮತ್ತು ಅಂತಹ ಷೇರುದಾರರ ಮಾಹಿತಿಯನ್ನು ಕಂಪನಿಯ ವೆಬ್‌ಸೈಟ್ **www.sobha.com** ನ 'ಇನ್ವೆಸ್ಟರ್ ಸೆಕ್ಷನ್ 'ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಸಂಬಂಧಪಟ್ಟ ಷೇರುದಾರರು ಕಂಪನಿಯ ವೆಬ್‌ಸೈಟ್‌ನ್ನು ಸಂದರ್ಶಿಸಿ ವರ್ಗಾವಣೆಗೊಳ್ಳಲಿರುವ ಡಿವಿಡೆಂಡ್ ಮೊತ್ತ ಹಾಗೂ ವರ್ಗಾವಣೆಗೊಳ್ಳಲಿರುವ ಷೇರುಗಳ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ.

ಕಂಪನಿಯು ಷೇರುದಾರರಿಂದ ಆಗಸ್ಟ್ 19, 2022ರ ಒಳಗಾಗಿ ಯಾವುದೇ ಸಂವಹನವನ್ನು ಪಡೆಯದೇಇದ್ದಲ್ಲಿ ಈ ಮೇಲೆ ತಿಳಿಸಿದ ಕಾನೂನಿನ ಪಾಲನೆಯನ್ವಯ ಸದರಿ ಷೇರುಗಳನ್ನು ಸೆಪ್ಟೆಂಬರ್ 18, 2022 ರ ಒಳಗಾಗಿ ಅಂದರೆ ನಿಗದಿತ ದಿನಾಂಕದೊಳಗಾಗಿ ಐಇಪಿಎಫ್ ಅಥಾರಿಟಿಗೆ ವರ್ಗಾಯಿಸಲಾಗುವುದು. ಷೇರುದಾರರು ಗಮನಿಸಬೇಕಾದ ಅಂಶವೇನೆಂದರೆ, ಡಿವಿಡೆಂಡ್ ಮತ್ತು ಷೇರುಗಳನ್ನು ಐಇಪಿಎಫ್ ಅಥಾರಿಟಿಯ ಅಕೌಂಟ್‌ಗೆ ವರ್ಗಾಯಿಸಿದ ನಂತರ ಅಂತಹ ಡಿವಿಡೆಂಡ್ ಮತ್ತು ಷೇರುಗಳಿಗೆ ಸಂಬಂಧಿಸಿದಂತೆ ಕಂಪನಿಯ ವಿರುದ್ಧ ಯಾವುದೇ ಕ್ಲೈಮು ಇರುವುದಿಲ್ಲ.

ಅಂತಹ ವರ್ಗಾವಣೆಯ ನಂತರ ಷೇರುದಾರರು ಡಿವಿಡೆಂಡ್ ಮತ್ತು ಷೇರುಗಳನ್ನು ಕ್ಲೈಮು ಮಾಡಬೇಕಾದಲ್ಲಿ ಮೇಲೆ ತಿಳಿಸಿರುವ ನಿಯಮಗಳಲ್ಲಿ ಸೂಚಿಸಿರುವ ವಿಧಾನಗಳ ಅನ್ವಯ ಐಇಪಿಎಫ್ ಅಥಾರಿಟಿಗೆ ನಿಗದಿತ ನಮೂನೆಯಲ್ಲಿ ಅರ್ಜಿ ಹಾಕಬಹುದಾಗಿದೆ.

ಯಾವ ಷೇರುದಾರರ ಷೇರುಗಳು ಭೌತಿಕ ರೂಪದಲ್ಲಿವೆಯೋ ಹಾಗೂ ಐಇಪಿಎಫ್ ಗೆ ವರ್ಗಾವಣೆಗೊಳ್ಳಿವೆಯೋ ಅಂತಹ ಷೇರುದಾರರ ಷೇರುಗಳ ಮೂಲ ಸರ್ಟಿಫಿಕೇಟ್ ಬದಲಾಗಿ ಯಥಾನಕಲು ಸರ್ಟಿಫಿಕೇಟ್ ಪ್ರತಿಗಳನ್ನು ನೀಡಿ ಅವುಗಳನ್ನು ಡಿಮ್ಯಾಟ್ ಮಾದರಿಗೆ ಬದಲಾಯಿಸಿ ವರ್ಗಾವಣೆಗೊಳಿಸಲಾಗುವುದು. ತದನಂತರ ಮೂಲ ಸರ್ಟಿಫಿಕೇಟ್ ಅಸಿಂಧುವಾಗುತ್ತದೆ, ಹಾಗೂ ಚಾಲ್ತಿಯಲ್ಲಿರುವುದಿಲ್ಲ. ಈ ಎಲ್ಲಾ ವಿಧಾನಗಳನ್ನು ಕಾರ್ಪೋರೇಟ್ ಆಕ್ಷನ್ ಮೂಲಕ ನಡೆಸಲಾಗುವುದು.

ಈ ಮೂಲಕ ಷೇರುದಾರರಿಗೆ ಸೂಚಿಸುವುದೇನೆಂದರೆ ಕಂಪನಿಯ ವೆಬ್‌ಸೈಟ್‌ನಲ್ಲಿ ಅಪ್ ಲೋಡ್ ಮಾಡಿದ ಮಾಹಿತಿಯು ಯಥಾನಕಲು ಪ್ರತಿಯ ನೀಡಿಕೆಗಾಗಿ ಜಾರಿಗೊಳಿಸಿರುವ ಸೂಚನಾಪ್ರತಿಯೆಂದು ಪರಿಗಣಿಸತಕ್ಕದ್ದು.

ಮೇಲಿನ ವಿಷಯದ ಬಗ್ಗೆ ಯಾವುದೇ ಪ್ರಶ್ನೆಗಳಿದ್ದಲ್ಲಿ ಸಂಬಂಧಪಟ್ಟ ಷೇರುದಾರರು ಕಂಪನಿಯ ಸೆಕ್ರೆಟ್ರಿಯಲ್ ಡಿಪಾರ್ಟ್‌ಮೆಂಟ್, 'ಶೋಭ' ಸರ್ಜಾಪುರ–ಮಾರತಹಳ್ಳಿ ರಿಂಗ್‌ರಸ್ತೆ, ದೇವರಬೀಸನಹಳ್ಳಿ, ಬೆಳ್ಳಂದೂರು ಅಂಚೆ, ಬೆಂಗಳೂರು–560103. ಟೆಲಿಫೋನ್: 080–49320000. ಇ ಮೇಲ್ ಐಡಿ: **investors@sobha.com** ಅಥವಾ ಕಂಪನಿಯ ರಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟ್, ಲಿಂಕ್‌ಇನ್‌ಟೈಮ್ ಇಂಡಿಯಾ ಪ್ರೈ, ಲಿ, ಸಿ–101, 247 ಪಾರ್ಕ್, ಎಲ್‌ಬಿಎಸ್ ಮಾರ್ಗ, ವಿಖ್ರೋಲಿ (ಪಶ್ಚಿಮ) ಮುಂಬೈ–400083 ಟೆಲಿಫೋನ್: 022–25946970 ಇ ಮೇಲ್ ಐಡಿ: **iepf.shares@linktime.co.in** ನ್ನು ಸಂಪರ್ಕಿಸಬಹುದಾಗಿದೆ.

ದಿನಾಂಕ: 27-05-2022
ಸ್ಥಳ: ಬೆಂಗಳೂರು

ಶೋಭ ಲಿಮಿಟೆಡ್ ಪರವಾಗಿ,
ವಿಘ್ನೇಶ್ವರ ಜಿ. ಭಟ್ಟ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲೆನ್ಸ್ ಆಫೀಸರ್

3M INDIA LIMITED

CIN:L31300KA1987PLC013543, Regd Office: 48-51, Electronics City, Hosur Road, Bengaluru - 560100, Website: www.3m.com/in

Extract of the Standalone and Consolidated Financial Results for the quarter and twelve months ended 31 March 2022

(Rs. in Lakhs, except per share data, unless otherwise stated)

Particulars	Standalone				Consolidated			
	3 months ended 31 March 2022 (Unaudited)	12 months ended 31 March 2022 (Audited)	3 months ended 31 March 2021 (Unaudited)	12 months ended 31 March 2021 (Audited)	3 months ended 31 March 2022 (Unaudited)	12 months ended 31 March 2022 (Audited)	3 months ended 31 March 2021 (Unaudited)	12 months ended 31 March 2021 (Audited)
Total income from operations (including other income)	85,792.60	311,301.92	77,678.85	244,723.16	93,480.62	337,295.68	83,437.51	262,956.87
Net Profit for the period (before tax, Exceptional and / or Extraordinary items)	14,338.51	35,969.60	8,901.39	20,244.08	15,141.19	36,751.81	9,488.35	21,992.16
Net Profit for the period before tax (after Exceptional and / or Extraordinary items)	14,338.51	35,969.60	8,901.39	20,244.08	15,141.19	36,751.81	9,488.35	21,992.16
Net Profit for the period after tax	10,559.18	26,617.51	6,568.68	14,930.09	11,091.51	27,197.11	7,046.96	16,237.65
Total comprehensive income for the period [Comprising Profit / (Loss) for the period (after tax) and other comprehensive income (after tax)]	10,860.60	26,727.38	6,593.93	14,674.69	11,437.77	27,324.37	7,064.85	15,945.64
Equity share capital	1,126.51	1,126.51	1,126.51	1,126.51	1,126.51	1,126.51	1,126.51	1,126.51
Reserves (excluding revaluation reserves as per Ind AS)	247,751.61	247,751.61	221,024.23	221,024.23	217,230.77	217,230.77	189,906.40	189,906.40
Earnings per share (in Rs.) (of Rs. 10/- each)								
a) Basic (in Rs.)	93.73	236.28	58.31	132.53	98.46	241.43	62.56	144.14
b) Diluted (in Rs.)	93.73	236.28	58.31	132.53	98.46	241.43	62.56	144.14

Notes:

1. The above standalone and consolidated financial results of 3M India Limited and its subsidiary, 3M Electro & Communication India Private Limited (hereafter refer to as the 'Group') have been reviewed by the Audit Committee and approved by the Board of Directors on 27 May 2022.
2. The above is an extract of the detailed format for the unaudited financial results for the quarter and audited twelve months ended 31 March 2022 filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format for the unaudited financial results for the quarter and audited twelve months ended 31 March 2022 are available on the Bombay Stock Exchange website (www.bseindia.com), the National Stock Exchange website (www.nseindia.com) and on the Company's website (https://www.3mindia.in/3M/en_IN/company-in/about-3m/financial-facts-local/).
3. The financial results of the Company have been prepared in accordance with Indian Accounting Standards (Ind AS) as notified by the Ministry of Corporate Affairs pursuant to Section 133 of the Companies Act, 2013 read with Rule 3 of the Companies (Indian Accounting Standard) Rules 2015, as amended and in terms of Regulation 33 of the SEBI (Listing Obligations and Disclosure Requirements) Regulations, 2015.

Place: Bengaluru
Date: 27 May 2022

By Order of the Board
For 3M India Limited

Ramesh Ramadurai
Managing Director

₹180 ಕೋಟಿ ವೆಚ್ಚದ ಯೋಜನೆಯ ಪ್ರಸ್ತಾವನೆ ಸಿದ್ಧ

ಹೊರ ವಲಯದ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಹೊರ ವಲಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿದ್ದು, ₹180 ಕೋಟಿ ಮೊತ್ತದಲ್ಲಿ ಸ್ವಂತ ಕಟ್ಟಡ ನಿರ್ಮಿಸಲು ಯೋಜನೆ ಸಿದ್ಧಪಡಿಸಲಾಗಿದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ(ಆರೋಗ್ಯ) ಡಾ.ಕೆ.ವಿ. ತ್ರಿಲೋಕಚಂದ್ರ ತಿಳಿಸಿದರು.

ತ್ರಿಲೋಕಚಂದ್ರ

'ಕೋವಿಡ್ ಸಂದರ್ಭದಲ್ಲಿ 57 ಕಡೆ ಖಾಸಗಿ ಕಟ್ಟಡದಲ್ಲಿ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗಿತ್ತು. ಅವುಗಳಿಗೆ ಈಗ ಸ್ವಂತ ಕಟ್ಟಡ ನಿರ್ಮಿಸಲು ಯೋಜನೆ ರೂಪಿಸಿ ಪ್ರಸ್ತಾವನೆ ಸಲ್ಲಿಸಲಾಗಿದೆ' ಎಂದು ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ನಗರದೊಳಗಿನ 141 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಭಾರತೀಯ ಸಾರ್ವಜನಿಕ ಆರೋಗ್ಯ ಗುಣಮಟ್ಟ (ಐಪಿಎಚ್‌ಎಸ್) ಮಾರ್ಗಸೂಚಿ ಪ್ರಕಾರ ಮೇಲ್ದರ್ಜೆಗೆ ಏರಿಸಲಾಗುತ್ತಿದೆ. ಸಿಬ್ಬಂದಿ ನೇಮಕಾತಿ ಸೇರಿ ಎಲ್ಲ ರೀತಿಯ ಮೂಲಸೌಕರ್ಯ ಹೆಚ್ಚಿಸಲಾಗುವುದು ಎಂದು ಹೇಳಿದರು.

ಕೋವಿಡ್ ಪ್ರಮಾಣ ಹತೋಟಿಯಲ್ಲಿದೆ. ದಿನಕ್ಕೆ ಸರಾಸರಿ 15 ಸಾವಿರ ಮಂದಿಯನ್ನು ಪರೀಕ್ಷೆ ಮಾಡಲಾಗುತ್ತಿದ್ದು, 120 ರಿಂದ 140 ಪ್ರಕರಣಗಳಷ್ಟೇ ದಾಖಲಾಗುತ್ತಿವೆ. ಕೋವಿಡ್ ಬೂಸ್ಟರ್ ಡೋಸ್ ಲಸಿಕೆಯನ್ನು 6 ಲಕ್ಷ ಜನರಿಗೆ ನೀಡಲಾಗಿದೆ. ಶಾಲೆಗಳು ಆರಂಭ ಆಗಿರುವುದರಿಂದ ಮುಂದಿನ ತಿಂಗಳಲ್ಲಿ ಎಲ್ಲ ಮಕ್ಕಳಿಗೂ ಲಸಿಕೆ ನೀಡಲಾಗುವುದು ಎಂದು ಹೇಳಿದರು.

'ಶೇಷಾದ್ರಿ ರಸ್ತೆ: 20 ದಿನದಲ್ಲಿ ಕಾಮಗಾರಿ ಪೂರ್ಣ'

'ಶೇಷಾದ್ರಿ ರಸ್ತೆ ವೈಟ್‌ಟಾಪಿಂಗ್ ಕಾಮಗಾರಿ ಇನ್ನು 10 ದಿನಗಳಲ್ಲಿ ಪೂರ್ಣಗೊಳ್ಳಲಿದ್ದು, 20 ದಿನಗಳಲ್ಲಿ ಸಂಚಾರಕ್ಕೆ ಮುಕ್ತವಾಗಲಿದೆ' ಎಂದು ತ್ರಿಲೋಕಚಂದ್ರ ಅವರು ತಿಳಿಸಿದರು.

₹16 ಕೋಟಿ ಮೊತ್ತದಲ್ಲಿ 1.2 ಕಿಲೋ ಮೀಟರ್ ಉದ್ದದ ರಸ್ತೆಗೆ ವೈಟ್‌ಟಾಪಿಂಗ್ ಮಾಡಲಾಗುತ್ತಿದೆ. ಶೇ 70ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಸಂಚಾರ ದಟ್ಟಣೆ ಹೆಚ್ಚಿರುವ ರಸ್ತೆ ಆಗಿರುವುದರಿಂದ ತ್ವರಿತಗತಿಯಲ್ಲಿ ಕಾಮಗಾರಿ ನಿರ್ವಹಿಸಲಾಗುತ್ತಿದೆ ಎಂದು ಅವರು ಹೇಳಿದರು.

'ಎಲ್ಲ ವಲಯಗಳಲ್ಲೂ ರಸ್ತೆ ಗುಂಡಿ ಮುಚ್ಚುವ ಕೆಲಸವನ್ನು ಯುದ್ಧೋಪಾದಿಯಲ್ಲಿ ಮಾಡಲಾಗುತ್ತಿದ್ದು, 11,454 ಗುಂಡಿ ಮುಚ್ಚಲಾಗಿದೆ. ಬಾಕಿ 5 ಸಾವಿರದಷ್ಟು ಗುಂಡಿ ಮುಚ್ಚುವ ಕಾಮಗಾರಿ ಆರಂಭವಾಗಿದೆ. ಗುಣಮಟ್ಟ ಕಾಯ್ದುಕೊಳ್ಳಲು ಆದ್ಯತೆ ನೀಡಲಾಗುತ್ತಿದೆ' ಎಂದು ಅವರು ಹೇಳಿದರು.

'503 ಶಿಥಿಲ ಕಟ್ಟಡ'

ನಗರದಲ್ಲಿ ಶಿಥಿಲಾವಸ್ಥೆಯಲ್ಲಿರುವ 503 ಕಟ್ಟಡಗಳನ್ನು ಗುರುತಿಸಲಾಗಿದ್ದು, ನೋಟಿಸ್ ನೀಡುವ ಪ್ರಕ್ರಿಯೆ ಆರಂಭವಾಗಿದೆ ಎಂದು ತ್ರಿಲೋಕಚಂದ್ರ ತಿಳಿಸಿದರು.

ಇವುಗಳ ತೆರವಿಗೆ ಬಜೆಟ್‌ನಲ್ಲಿ ಹಣ ಮೀಸಲಿಟ್ಟಿಲ್ಲ. ಆದರೆ, ತುರ್ತಾಗಿ ತೆರವಾಗಬೇಕಿದ್ದರೆ, ಹಣದ ತೊಂದರೆ ಎದುರಾಗುವುದಿಲ್ಲ ಎಂದರು.

'ಅಕ್ರಮ ಕಟ್ಟಡಗಳ ತೆರವು ವಿಷಯದಲ್ಲಿ ಹೈಕೋರ್ಟ್ ಮೇಲುಸ್ತುವಾರಿ ವಹಿಸುತ್ತಿದೆ. ನಕ್ಷೆ ಉಲ್ಲಂಘನೆ ಮಾಡಿ ಕಟ್ಟಿರುವ ಕಟ್ಟಡ, ನಕ್ಷೆಗೆ ಮಂಜೂರಾತಿಯನ್ನೇ ಪಡೆಯದ ಕಟ್ಟಡ, ಸರ್ಕಾರಿ ಜಾಗದಲ್ಲಿ ನಿರ್ಮಿಸಿರುವ ಕಟ್ಟಡ ಹೀಗೆ ಮೂರು ರೀತಿ ಕಟ್ಟಡಗಳನ್ನು ಪಟ್ಟಿ ಮಾಡಲಾಗಿದೆ. ಈವರೆಗೆ 13 ಕಟ್ಟಡ ತೆರವುಗೊಳಿಸಲಾಗಿದೆ' ಎಂದು ವಿವರಿಸಿದರು.

ಸಚಿವಾಲಯ ಬಂದ್ ಬಹುತೇಕ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸರ್ಕಾರದ ಸಚಿವಾಲಯ ನೌಕರರ ಸಂಘ ಕರೆ ನೀಡಿದ್ದ 'ಸಚಿವಾಲಯ ಬಂದ್'ಗೆ ಬಹುತೇಕ ನೌಕರರು ಸ್ಪಂದಿಸಿ, ಶುಕ್ರವಾರ ಕರ್ತವ್ಯಕ್ಕೆ ಗೈರಾಗಿದ್ದರು.

ವಿಧಾನಸೌಧ, ವಿಕಾಸಸೌಧ ಮತ್ತು ಎಂ.ಎಸ್.ಬಿಲ್ಡಿಂಗ್‌ನಲ್ಲಿ ನೌಕರರು ಮತ್ತು ಅಧಿಕಾರಿಗಳು ಇಲ್ಲದೇ ಕಚೇರಿಗಳು ಬಣಗುಡುತ್ತಿದ್ದವು. ಸುಮಾರು 3,000 ಸಿಬ್ಬಂದಿ ಕರ್ತವ್ಯಕ್ಕೆ ಗೈರಾಗಿದ್ದರು ಎಂದು ಮೂಲಗಳು ತಿಳಿಸಿವೆ.

ಆಡಳಿತ ಸುಧಾರಣೆ ಮತ್ತು ಆರ್ಥಿಕ ಮಿತವ್ಯಯದ ಹೆಸರಿನಲ್ಲಿ ಹಲವು ಹುದ್ದೆಗಳನ್ನು ಕಡಿತಗೊಳಿಸುತ್ತಿರುವುದನ್ನು ಮತ್ತು ಇತರ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬಂದ್‌ಗೆ ಕರೆ ನೀಡಲಾಗಿತ್ತು.


ಬಂದ್ ಹಿನ್ನೆಲೆಯಲ್ಲಿ ಸಚಿವಾಲಯದ ಕಚೇರಿಯೊಂದು ಶುಕ್ರವಾರ ಬಿಕೋ ಎನ್ನುತ್ತಿತ್ತು

'ಸಚಿವಾಲಯ ಬಂದ್'ಗೆ ಕರೆ ನೀಡಿರುವುದು ಕಾನೂನು ಬಾಹಿರ. ಕಚೇರಿಗೆ ಹಾಜರಾಗಲು ಬರುವ ಅಧಿಕಾರಿ–ಸಿಬ್ಬಂದಿಗೆ ಅಡ್ಡಿಪಡಿಸಿದರೆ ಕ್ರಿಮಿನಲ್ ಮೊಕದ್ದಮೆ ಹೂಡಿ, ಶಿಸ್ತು ಕ್ರಮ ತೆಗೆದುಕೊಳ್ಳುತ್ತೇವೆ. ಸಚಿವಾಲಯದ ಎಲ್ಲಾ ಅಧಿಕಾರಿ, ಸಿಬ್ಬಂದಿ ಕಚೇರಿಗೆ ಕಡ್ಡಾಯವಾಗಿ ಹಾಜರಾಗಬೇಕು. ಒಂದು ವೇಳೆ ಪೂರ್ವಾನುಮತಿ ಪಡೆಯದೇ ಕಚೇರಿಗೆ ಗೈರು ಹಾಜರಾದರೆ ಅದನ್ನು 'ಲೆಕ್ಕಕ್ಕಿಲ್ಲದ ಅವಧಿ' ಎಂದು ಪರಿಗಣಿಸಲಾಗುವುದು ಎಂದು ಮುಖ್ಯಕಾರ್ಯದರ್ಶಿ ರವಿಕುಮಾರ್ ಹೇಳಿದ್ದರು.

'ಮುಖ್ಯಕಾರ್ಯದರ್ಶಿಯವರ ಸುತ್ತೋಲೆಗೂ ಜಗ್ಗದೇ ಬಂದ್ ಶೇ 100ರಷ್ಟು ಯಶಸ್ವಿಯಾಗಿದೆ. ನೌಕರರೂ ಅಲ್ಲದೇ, ಗುತ್ತಿಗೆ ಸಿಬ್ಬಂದಿಯೂ ಕರ್ತವ್ಯಕ್ಕೆ ಗೈರಾಗುವ ಮೂಲಕ ಬೆಂಬಲ ನೀಡಿದ್ದಾರೆ' ಎಂದು ಸಚಿವಾಲಯ ನೌಕರರ ಸಂಘ ತಿಳಿಸಿದೆ.

'ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮೂರು ಹಂತಗಳಲ್ಲಿ ಹೋರಾಟ ಮಾಡಿದ್ದೇವೆ. ಆದರೆ ಮುಖ್ಯಕಾರ್ಯದರ್ಶಿಯವರು ನಮ್ಮನ್ನು ಕರೆದು ಮಾತನಾಡಿಸುವ ಸೌಜನ್ಯ ತೋರಿಲ್ಲ. ಸರ್ಕಾರದ ಗಮನ ಸೆಳೆಯಲು ಬಂದ್ ಮಾಡಿದ್ದೇವೆ. ಈಗಲೂ ನಮ್ಮ ಬೇಡಿಕೆ ಈಡೇರಿಸದೇ ಇದ್ದರೆ ಅನಿರ್ದಿಷ್ಟಾವಧಿ ಬಂದ್ ನಡೆಸಬೇಕಾಗುತ್ತದೆ' ಎಂದು ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ಪಿ.ಗುರುಸ್ವಾಮಿ ಹೇಳಿದ್ದಾರೆ.

ಫಲಾನುಭವಿಗಳಿಗೆ ಬೈರತಿ ಸುರೇಶ್ ಹಕ್ಕುಪತ್ರ ವಿತರಿಸಿದರು. ಅಬ್ದುಲ್ ವಾಜಿದ್ ಚಿತ್ರದಲ್ಲಿದ್ದಾರೆ

ಕೊಳೆಗೇರಿ ನಿವಾಸಿಗಳಿಗೆ ಹಕ್ಕುಪತ್ರ

ಬೆಂಗಳೂರು: ಹೆಬ್ಬಾಳ ಕುಂತಿಗ್ರಾಮ ಎ ಬ್ಲಾಕ್ ಮತ್ತು ಬಿ ಬ್ಲಾಕ್‌ನ ಘೋಷಿತ ಕೊಳೆಗೇರಿ ನಿವಾಸಿಗಳಿಗೆ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಹಕ್ಕುಪತ್ರಗಳನ್ನು ಶಾಸಕ ಬೈರತಿ ಸುರೇಶ್ ಶುಕ್ರವಾರ ವಿತರಿಸಿದರು.

ಬಳಿಕ ಮಾತನಾಡಿದ ಅವರು, 'ಕ್ಷೇತ್ರದಾದ್ಯಂತ 2 ಸಾವಿರ ಮಂದಿಗೆ ಹಕ್ಕುಪತ್ರಗಳನ್ನು ವಿತರಿಸಲಾಗುತ್ತಿದೆ. ಹಕ್ಕುಪತ್ರ ವಿತರಿಸಲು ವೈಯಕ್ತಿಕವಾಗಿ ₹60 ಲಕ್ಷ ನೀಡಿದ್ದೇನೆ' ಎಂದು ಹೇಳಿದರು.

ಹೆಬ್ಬಾಳ ವಾರ್ಡ್‌ನ ಗುಂಡಪ್ಪ ರೆಡ್ಡಿ ಲೇಔಟ್‌ನಲ್ಲಿ ಕೊಳವೆಬಾವಿ ಕೊರೆಯುವ ಅಭಿವೃದ್ಧಿ ಕಾಮಗಾರಿಗೂ ಇದೇ ವೇಳೆ ಚಾಲನೆ ನೀಡಿದರು.

ಬಿಬಿಎಂಪಿ ಮಾಜಿ ಸದಸ್ಯರಾದ ಅಬ್ದುಲ್ ವಾಜೀದ್, ಆನಂದ್ ಕುಮಾರ್, ಹೆಬ್ಬಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಲಾಜಿ, ಪಕ್ಷದ ಮುಖಂಡರು, ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಅಧಿಕಾರಿಗಳು ಇದ್ದರು.

ಟ್ಯಾಂಕರ್‌ಗಳ ಚಾಲಕರ ವಿರುದ್ಧ ಪ್ರಕರಣ

ಬೆಂಗಳೂರು: ಸರ್ಜಾಪುರ ರಸ್ತೆಯಲ್ಲಿ ಟ್ಯಾಂಕರ್ ಮೈ ಮೇಲೆ ಹರಿದು ಬಾಲಕನೊಬ್ಬ ಮೃತಪಟ್ಟಿದ್ದ ಘಟನೆಯಿಂದ ಎಚ್ಚೆತ್ತ ಸಂಚಾರ ಪೊಲೀಸರು, ನಗರದಲ್ಲಿ ಶುಕ್ರವಾರ ವಿಶೇಷ ಕಾರ್ಯಾಚರಣೆ ನಡೆಸಿದರು.

ನಗರದ ವಿವಿಧ ರಸ್ತೆಗಳಲ್ಲಿ ಟ್ಯಾಂಕರ್‌ಗಳನ್ನು ತಡೆದು ತಪಾಸಣೆ ನಡೆಸಿದ ಪೊಲೀಸರು, ನಿಯಮ ಉಲ್ಲಂಘಿಸಿದ್ದವರಿಗೆ ದಂಡ ವಿಧಿಸಿದರು. 'ನೀರಿನ ಟ್ಯಾಂಕರ್ ಚಾಲಕರು, ಅಡ್ಡಾದಿಡ್ಡಿಯಾಗಿ ಚಾಲನೆ ಮಾಡುವ ಬಗ್ಗೆ ದೂರುಗಳು ಬಂದಿದ್ದವು. ಹೀಗಾಗಿ, ವಿಶೇಷ ಕಾರ್ಯಾಚರಣೆ ನಡೆಸಲಾಯಿತು' ಎಂದು ಪೂರ್ವ ವಿಭಾಗದ (ಸಂಚಾರ) ಡಿಸಿಪಿ ಕೆ.ಎಂ. ಶಾಂತರಾಜು ಹೇಳಿದರು.

'ಕುಡಿದು ವಾಹನ ಚಾಲನೆ, ನಿರ್ಬಂಧಿತ ರಸ್ತೆಯಲ್ಲಿ ಸಂಚಾರ, ಸಿಗ್ನಲ್ ಜಂಪ್, ಸಮವಸ್ತ್ರ ಧರಿಸದೆ ಇರುವುದು ಸೇರಿದಂತೆ ವಿವಿಧ ಉಲ್ಲಂಘನೆಗಾಗಿ 258 ಟ್ಯಾಂಕರ್‌ಗಳ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ತಿಳಿಸಿದರು.

ಡ್ರಗ್ಸ್: ಉದ್ಯಮಿ ಆದಿ ಶ್ರೀನಿವಾಸ್ ನಾಯ್ಡು ಬಂಧನ

ಒಂದನೇ ಪುಟದಿಂದ...

'ಹೈದರಾಬಾದ್‌ಗೆ ಹೋಗಿದ್ದ ಶ್ರೀನಿವಾಸ್, ಹಿಂದಿರುಗುವಾಗ ಸಾದಹಳ್ಳಿ ಗೇಟ್ ಬಳಿ ಕೆಲ ನಿಮಿಷ ಕಾರು ನಿಲ್ಲಿಸಿದ್ದರು. ಅದೇ ಸಮಯದಲ್ಲಿ ದ್ವಿಚಕ್ರ ವಾಹನದಲ್ಲಿ ಬಂದಿದ್ದ ವ್ಯಕ್ತಿಯೊಬ್ಬ, ಶ್ರೀನಿವಾಸ್ ಕೈಗೆ ಕೊಕೇನ್ ಡ್ರಗ್ಸ್ ಇದ್ದ ಪೊಟ್ಟಣ ನೀಡಿದ್ದ.'

'ಸಮೀಪದಲ್ಲೇ ಇದ್ದ ವಿಶೇಷ ತಂಡದ ಸಿಬ್ಬಂದಿ, ಅವರ ಬಳಿ ಇದ್ದ ಡ್ರಗ್ಸ್ ಜಪ್ತಿ ಮಾಡಿ, ಬಂಧಿಸಲಾಯಿತು ಎಂದೂ ಮೂಲಗಳು ತಿಳಿಸಿವೆ. ನ್ಯಾಯಾಂಗ ಬಂಧನದಲ್ಲಿರುವ ಅವರು, ಸದ್ಯ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿದ್ದಾರೆ.

'ಶ್ರೀನಿವಾಸ್ ಅವರು ಡ್ರಗ್ಸ್ ವ್ಯಸನಿ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಪೆಡ್ಲರ್ ಜೊತೆ ಸಂಪರ್ಕವಿಟ್ಟುಕೊಂಡಿದ್ದ ಅವರು, ಡ್ರಗ್ಸ್ ತರಿಸಿಕೊಂಡು ಸೇವಿಸುತ್ತಿದ್ದರು. ಇತರರಿಗೆ ಸೇವಿಸುವಂತೆ ಪ್ರಚೋದಿಸುತ್ತಿದ್ದರು' ಎಂದೂ ಹೇಳಿವೆ.

ಮನೆ ಮೇಲೂ ದಾಳಿ: 'ಸದಾಶಿವನಗರದಲ್ಲಿರುವ ಶ್ರೀನಿವಾಸ್ ಅವರ ಮನೆ ಮೇಲೂ ದಾಳಿ ಮಾಡಲಾಗಿತ್ತು. ಆದರೆ, ಯಾವುದೇ ಮಾದಕ ವಸ್ತು ಪತ್ತೆಯಾಗಿಲ್ಲ' ಎಂದು ಮೂಲಗಳು ಹೇಳಿವೆ.

ಗೌರಿ ಲಂಕೇಶ್ ಹತ್ಯೆ ಪ್ರಕರಣ ಜುಲೈ 4ರಿಂದ ನಿತ್ಯ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಕೊಲೆ ಆರೋಪಿಗಳ ವಿಚಾರಣೆಯನ್ನು ಬೆಂಗಳೂರು ನಗರ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ ಇದೇ ಜುಲೈ 4ರಿಂದ 8ರವರೆಗೆ ನಿತ್ಯವೂ ನಡೆಸಲಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮೊದಲ ಸಾಕ್ಷಿಯಾಗಿರುವ ಕವಿತಾ ಲಂಕೇಶ್ ಅವರ ಸಾಕ್ಷ್ಯವನ್ನು ಶುಕ್ರವಾರ ದಾಖಲಿಸಿಕೊಂಡ ಬಳಿಕ ನ್ಯಾಯಾಧೀಶ ಚಂದ್ರಶೇಖರ ಮೃತ್ಯುಂಜಯ ಜೋಶಿ ಈ ಕುರಿತಂತೆ ಆದೇಶಿಸಿದರು.

ವಿಚಾರಣೆ ವೇಳೆ 18 ಆರೋಪಿಗಳ ಪೈಕಿ 11 ಮಂದಿಯನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರುಪಡಿಸಲಾಗಿತ್ತು. ಉಳಿದ ಏಳು ಮಂದಿ ಗೈರು ಹಾಜರಾಗಿದ್ದರು.

ಗೈರಾಗಿದ್ದ ಏಳೂ ಜನರು ಮಹಾರಾಷ್ಟ್ರದ ವಿಚಾರವಾದಿ ನರೇಂದ್ರ ದಾಬೋಲ್ಕರ್ ಮತ್ತು ಎಡಪಂಥೀಯ ಚಿಂತಕ ಗೋವಿಂದ ಪಾನ್ಸರೆ ಕೊಲೆ ಪ್ರಕರಣದಲ್ಲೂ ಆರೋಪಿಗಳಾಗಿದ್ದಾರೆ. ಇವರೆಲ್ಲರನ್ನೂ ಮುಂಬೈನ ಆರ್ಥರ್ ಜೈಲಿನಲ್ಲಿ ಇರಿಸಿರುವ ಕಾರಣ ವಿಚಾರಣೆಗೆ ಹಾಜರಾಗಿರಲಿಲ್ಲ. ಮುಂದಿನ ವಿಚಾರಣೆಯನ್ನು ಜುಲೈ 4ಕ್ಕೆ ನಿಗದಿಪಡಿಸಲಾಗಿದೆ.

ಹತ್ಯೆ ನಡೆದ ನಾಲ್ಕು ವರ್ಷಗಳ ನಂತರ ವಿಚಾರಣೆಗೆ ವೇಗ ದೊರೆತಂತಾಗಿದೆ.

ಸಿರಿ ಬೆಳಗು ಪ್ರಶಸ್ತಿಗೆ ಶಂಕರನಾರಾಯಣ, ಚಿತ್ತಪ್ಪ ಆಯ್ಕೆ

ಬೆಂಗಳೂರು: ನಾಡೋಜ ಸಿರಿಯಜ್ಜಿ ಸಾಂಸ್ಕೃತಿಕ ಪ್ರತಿಷ್ಠಾನವು ನೀಡುವ 'ಸಿರಿಬೆಳಗು' ಪ್ರಶಸ್ತಿಗೆ ಈ ಬಾರಿ ಪ್ರತಿಭಾವಂತ ಗಾಯಕ ದಳವಾಯಿ ಚಿತ್ತಪ್ಪ ಮತ್ತು ಜಾನಪದ ವಿದ್ವಾಂಸರಾಗಿದ್ದ ದಿವಂಗತ ಡಾ.ತೀ.ನಂ. ಶಂಕರನಾರಾಯಣ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹10 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ಮೇ 29ರಂದು ನಯನ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಜಾನಪದ ವಿಶ್ವಕೋಶ ಎಂದೇ ಖ್ಯಾತನಾಮರಾಗಿದ್ದ ಸಿರಿಯಜ್ಜಿ ಸ್ಮರಣೆಯಲ್ಲಿ 2020ರಲ್ಲಿ ಪ್ರತಿಷ್ಠಾನವನ್ನು ಸ್ಥಾಪಿಸಲಾಗಿದೆ. ಸಿರಿಯಜ್ಜಿ ಸ್ಮರಣೆಯಲ್ಲಿ ಕಾಡುಗೊಲ್ಲ ಬುಡಕಟ್ಟಿನ ಬಗ್ಗೆ ಅಧ್ಯಯನ ಮಾಡಿರುವ ವಿದ್ವಾಂಸರಿಗೆ ಹಾಗೂ ಬುಡಕಟ್ಟಿನ ಜನಪದ ಕಲಾವಿದರಿಗೆ ಗೌರವ ಪ್ರಶಸ್ತಿ ನೀಡಲಾಗುತ್ತಿದೆ. 2021ರಲ್ಲಿ ಜಾನಪದ ವಿದ್ವಾಂಸ ಡಾ. ಕೃಷ್ಣಮೂರ್ತಿ ಹನೂರು ಮತ್ತು ಚಳ್ಳಕೆರೆ ತಾಲ್ಲೂಕಿನ ಯಲಗಟ್ಟೆ ಗೊಲ್ಲರಹಟ್ಟಿಯ ಜನಪದ ಕಲಾವಿದೆ ಸಿರಿಯಮ್ಮ ಅವರಿಗೆ ಪ್ರದಾನ ಮಾಡಲಾಗಿತ್ತು ಎಂದು ವಿವರಿಸಿದರು.

KSIIDC ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿದೆ)

ಖನಿಜ ಭವನ, 4ನೇ ಮಹಡಿ, ಪೂರ್ವ ವಿಭಾಗ, ನಂ.49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. ದೂ : 22258131–33 ಈಮೇಲ್: info@ksiidc.com

ವೆಬ್‌ಸೈಟ್ : http://www.ksiidc.karnataka.gov.in

ಒಪ್ಪಂದದ ಮೇರೆಗೆ ಅಭಿಯಂತರರು ಮತ್ತು ಐಟಿ ಕನ್ಸಲ್‌ಟೆಂಟ್ ಬೇಕಾಗಿದ್ದಾರೆ

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಒಪ್ಪಂದದ ಆಧಾರದ ಮೇಲೆ 05 ಜನ ಅಭಿಯಂತರರು ಮತ್ತು ಒಬ್ಬರು ಐಟಿ ಕನ್ಸಲ್‌ಟೆಂಟ್ ಬೇಕಾಗಿದ್ದಾರೆ. ವಿವರಗಳು ಕೆಳಗಿನಂತಿರುತ್ತದೆ.

(ಅ) ಅಭಿಯಂತರರು: 05 ಅಭಿಯಂತರರಲ್ಲಿ 03 ಅಭಿಯಂತರರು ಅಂಗೀಕೃತ ವಿಶ್ವವಿದ್ಯಾಲಯ/ವಿದ್ಯಾ ಸಂಸ್ಥೆಯಿಂದ ಸಿವಿಲ್ ಇಂಜಿನಿಯರಿಂಗ್ ಪದವಿಯ ಜೊತೆಗೆ ಎಂಇ/ಎಂ.ಟೆಕ್ (ಸಿವಿಲ್) ಪದವಿ ಹೊಂದಿರಬೇಕು; ವಿಮಾನ ನಿಲ್ದಾಣಗಳ ನಿರ್ಮಾಣ ಕಾರ್ಯದಲ್ಲಿ ಕನಿಷ್ಠ 5 ವರ್ಷ ಅನುಭವವಿರಬೇಕು; 02 ಜನ ಅಂಗೀಕೃತ ವಿಶ್ವವಿದ್ಯಾಲಯ/ವಿದ್ಯಾ ಸಂಸ್ಥೆಯಿಂದ ಸಿವಿಲ್ ಇಂಜಿನಿಯರಿಂಗ್ ಪದವಿಯ ಜೊತೆಗೆ ಎಂಇ/ಎಂ.ಟೆಕ್ (ಸ್ಟ್ರಕ್ಚರಲ್ ಇಂಜಿನಿಯರಿಂಗ್) ಪದವಿ ಹೊಂದಿರಬೇಕು ; ಕನಿಷ್ಠ 5 ವರ್ಷ ಬೃಹತ್ ಮೂಲಸೌಲಭ್ಯ ಯೋಜನೆಗಳಲ್ಲಿ ಕೆಲಸ ಮಾಡಿರುವ ಅನುಭವವಿರಬೇಕು. ಗರಿಷ್ಠ ವಯಸ್ಸು : **40 ವರ್ಷ** (ಏಪ್ರಿಲ್ 01, 2022 ರಂತೆ) ; **ಮಾಸಿಕ ರೂ.70,000/-** ಕ್ರೋಢಿಕೃತ ವೇತನ ನೀಡಲಾಗುತ್ತದೆ.

(ಆ) ಮಾಹಿತಿ ತಂತ್ರಜ್ಞಾನ ಸಲಹೆಗಾರರು (ಐಟಿ ಕನ್ಸಲ್‌ಟೆಂಟ್): ಅಂಗೀಕೃತ ವಿಶ್ವವಿದ್ಯಾಲಯ/ವಿದ್ಯಾ ಸಂಸ್ಥೆಯಿಂದ ಕಂಪ್ಯೂಟರ್ ಸೈನ್ಸ್/ಮಾಹಿತಿ ತಂತ್ರಜ್ಞಾನದಲ್ಲಿ ಇಂಜಿನಿಯರಿಂಗ್ ಪದವಿ/ಎಂಸಿಎ ಪದವಿ ಹೊಂದಿರಬೇಕು; ವಿವಿಧ ಕಂಪ್ಯೂಟರ್ ಭಾಷೆಗಳು ಮತ್ತು ಪ್ರಕ್ರಿಯೆಯಲ್ಲಿ ಹಾಗೂ ವೆಬ್‌ಸೈಟ್ ವಿನ್ಯಾಸ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿ ಕನಿಷ್ಠ 5 ವರ್ಷಗಳ ಅನುಭವವನ್ನು ಹೊಂದಿರಬೇಕು ; ಗರಿಷ್ಠ ವಯಸ್ಸು : **35 ವರ್ಷ (ಏಪ್ರಿಲ್ 01, 2022 ರಂತೆ)**; **ಮಾಸಿಕ ರೂ.50,000/-** ಕ್ರೋಢಿಕೃತ ವೇತನ ನೀಡಲಾಗುತ್ತದೆ

ಅಭ್ಯರ್ಥಿಗಳು ಜಾಹೀರಾತು ಪ್ರಕಟಣೆಗೊಂಡ ದಿನಾಂಕದಿಂದ **07 ದಿನಗಳೊಳಗಾಗಿ** ತಮ್ಮ ಸ್ವವಿವರಗಳನ್ನು ಮೇಲಿನ ವಿಳಾಸಕ್ಕೆ ಸ್ಪೀಡ್ ಪೋಸ್ಟ್ ಮೂಲಕ ಕಳುಹಿಸತಕ್ಕದ್ದು. ನಿಯಮಗಳಿಗಾಗಿ ಕೆ.ಎಸ್.ಐ.ಐ.ಡಿ.ಸಿ. ಯ ವೆಬ್‌ಸೈಟ್ ಅನ್ನು ವೀಕ್ಷಿಸುವುದು ಮತ್ತು ಯಾವುದೇ ಸ್ಪಷ್ಟೀಕರಣಕ್ಕಾಗಿ ದಯವಿಟ್ಟು ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಿ ಮತ್ತು ಆ) ದೂರವಾಣಿ ಸಂಖ್ಯೆ:22259426 ಮೂಲಕ ಸಂಪರ್ಕಿಸುವುದು.

ಸಹಿ/-ಕಾರ್ಯನಿರ್ವಾಹಕ ನಿರ್ದೇಶಕರು



PRM/KA/RERA/1251/472/PR/221221/004599	PRM/KA/RERA/1251/308/PR/290122/004660	PRM/KA/RERA/1251/309/PR/181122/002151	PRM/KA/RERA/1251/308/PR/201201/003733	PRM/KA/RERA/1251/309/PR/180120/001878	PRM/KA/RERA/1251/446/PR/210312/004002
RMV EXTN. 2ND STAGE	SARJAPURA	THANISANDRA	ELECTRONIC CITY	THANISANDRA MAIN ROAD	K R PURAM
NEAR HEBBAL	SARJAPURA - ATTIBELE ROAD	NEAR KNS INSTITUTE OF TECHNOLOGY	NEAR BOSCH HOSA ROAD JUNCTION	10 MINS. FROM MANYATA TECH PARK	NEAR GARDEN CITY UNIVERSITY
₹ 51.10 - 64.15 Lacs*	₹ 27.10 - 40.15 Lacs*	₹ 35.16 - 41.16 Lacs*	₹ 31.00 - 62.00 Lacs*	₹ 1.11 - 1.37 Crores*	₹ 39.36 - 65.13 Lacs*
2 & 3-BHK	2 & 3-BHK	2-BHK	2 & 3-BHK	3-BHK	2 & 3-BHK
₹ 5,000 / Sq. Ft.	₹ 2,800 / Sq. Ft.	READY TO OCCUPY	₹ 3,100 / Sq. Ft.	READY TO OCCUPY	₹ 3,800 / Sq. Ft.
8880 099 344	9164 122 000	8880 461 461	9164 045 000	8088 779 779	8880 438 000

*Prices mentioned are base price and may vary with dimensions, floors, and availability. Brand names mentioned in this advertisement are for demarcation & not for promotion. Travel time may vary with real-time traffic conditions and the route followed to reach the destination, please check your maps for precise and accurate travel time from your location.

www.dsmaxproperties.com

For more details/information about the projects, visit: www.rera.karnataka.gov.in

T & C Apply*

ಸಿ.ಎಂ ಕಾರ್ಯದರ್ಶಿ ವಿರುದ್ಧ ಕ್ರೀಡಾ ಸಚಿವ ಚಂದನ ಕಿಡಿ

ಜೈಪುರ (ಪಿಟಿಐ): ರಾಜಸ್ಥಾನದ ಕ್ರೀಡಾ ಸಚಿವ ಅಶೋಕ್ ಚಂದನ ಅವರು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರ ಪ್ರಧಾನ ಕಾರ್ಯದರ್ಶಿಯವರ ಕಾರ್ಯವೈಖರಿಗೆ ಅಸಮಾಧಾನ ವ್ಯಕ್ತಪಡಿಸಿ, ತಮ್ಮನ್ನು ಸಚಿವ ಸ್ಥಾನದಿಂದ ಕೈಬಿಡುವಂತೆ ಮನವಿ ಮಾಡಿದ್ದಾರೆ.

'ಮುಖ್ಯಮಂತ್ರಿಗಳ ಮುಖ್ಯ ಕಾರ್ಯದರ್ಶಿ ಕುಲದೀಪ್ ರಂಕಾ ಅವರೇ 'ಎಲ್ಲ ಇಲಾಖೆಗಳ ಸಚಿವರು' ಆಗಿದ್ದಾರೆ. ನನ್ನ ಇಲಾಖೆಯ ಅಧಿಕಾರವನ್ನೂ ರಂಕಾ ಅವರಿಗೇ ನೀಡಲಿ. ನಾನು 'ಅಗೌರವ'ದ ಸಚಿವ ಸ್ಥಾನದಲ್ಲಿರಲು ಬಯಸುವುದಿಲ್ಲ. ಗೌರವಾನ್ವಿತ ಮುಖ್ಯಮಂತ್ರಿಗಳಿಗೆ ನನ್ನನ್ನು 'ಅಗೌರವ'ದ ಸಚಿವ ಸ್ಥಾನದಿಂದ ಬಿಡುಗಡೆ ಮಾಡಲು ಮನವಿ ಮಾಡುವೆ' ಎಂದು ಸಚಿವ ಅಶೋಕ್ ಚಂದನ ಅವರು ಗುರುವಾರ ಟ್ವಿಟರ್‌ನಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

'ಟ್ವೀಟ್ ಪರಿಗಣಿಸಬೇಡಿ': ಸಚಿವರ ಟ್ವೀಟ್‌ಗೆ ಶುಕ್ರವಾರ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಅಶೋಕ್ ಗೆಹಲೋತ್, 'ಕಾರ್ಯ ಒತ್ತಡದಿಂದ ಸಚಿವರು ಮಾಡಿರುವ ಟ್ವೀಟ್‌ನ್ನು ಯಾರೂ ಗಂಭೀರವಾಗಿ ಪರಿಗಣಿಸಬಾರದು' ಎಂದು ಹೇಳಿದ್ದಾರೆ.

'ರಾಜಸ್ಥಾನದಲ್ಲಿ ಮೊದಲ ಬಾರಿಗೆ 'ಗ್ರಾಮೀಣ ಒಲಿಂಪಿಕ್ಸ್' ಆಯೋಜಿಸಿದ್ದು, ಇದರಲ್ಲಿ 30 ಲಕ್ಷ ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಕ್ರೀಡಾ ಸಚಿವರ ಮೇಲೆ ದೊಡ್ಡ ಜವಾಬ್ದಾರಿ ಇದ್ದು, ಒತ್ತಡದಲ್ಲಿ ಅವರು ಈ ರೀತಿ ಹೇಳಿರಬಹುದು. ಅವರೊಂದಿಗೆ ಚರ್ಚಿಸುವೆ' ಎಂದು ಗೆಹಲೋತ್ ತಿಳಿಸಿದ್ದಾರೆ.

ಮುಂಬೈ: ಐಷಾರಾಮಿ ಹಡಗಿನಲ್ಲಿ ಮಾದಕವಸ್ತು ಪಾರ್ಟಿ ಪ್ರಕರಣ

ತನಿಖೆಯಲ್ಲಿ ಗಂಭೀರ ಲೋಪ: ಎನ್‌ಸಿಬಿ

ನವದೆಹಲಿ (ಪಿಟಿಐ): ಮುಂಬೈ ಐಷಾರಾಮಿ ಹಡಗಿನಲ್ಲಿ ಮಾದಕವಸ್ತು ಪಾರ್ಟಿ ಪ್ರಕರಣದ ತನಿಖೆಯಲ್ಲಿ ಹಲವು ಗಂಭೀರ ಲೋಪಗಳಾಗಿವೆ ಎಂದು ಎನ್‌ಸಿಬಿ ಹೇಳಿದೆ. ಈ ಕಾರಣದಿಂದಲೇ ಪ್ರಕರಣದ ಪ್ರಮುಖ ಆರೋಪಿಯಾಗಿದ್ದ, ಬಾಲಿವುಡ್ ನಟ ಶಾರುಕ್ ಖಾನ್ ಅವರ ಮಗ ಆರ್ಯನ್ ಖಾನ್ ಅವರ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಸಾಧ್ಯವಾಗಿಲ್ಲ ಎಂದು ಎನ್‌ಸಿಬಿಯ ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಸಿಬಿಯ ಮೊದಲ ಎಸ್‌ಐಟಿಯು ನಡೆಸಿದ್ದ ತನಿಖೆಯಲ್ಲಿ ಹಲವು ಗಂಭೀರ ಲೋಪಗಳಾಗಿವೆ. ಆರ್ಯನ್ ಖಾನ್ ಮಾದಕವಸ್ತು ಸೇವಿಸಿದ್ದಾರೆ, ಅವರ ಬಳಿ ಮಾದಕವಸ್ತು ಇತ್ತು ಮತ್ತು ಅವರಿಗೆ ಮಾದಕವಸ್ತುವಿಗೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ಸಂಪರ್ಕ ಇತ್ತು ಎಂಬುದಕ್ಕೆ ಯಾವುದೇ ಸಾಕ್ಷ್ಯಗಳಿಲ್ಲ. ಹಡಗಿನಲ್ಲಿ ಕಾರ್ಯಾಚರಣೆ ನಡೆಸಿದ್ದ ತಂಡದ ನಿರ್ಲಕ್ಷ್ಯದಿಂದ ಸಾಕ್ಷ್ಯಗಳನ್ನು ಸಂಗ್ರಹಿಸಲು ಸಾಧ್ಯವಾಗಿಲ್ಲ. ಹೀಗಾಗಿ ಆರ್ಯನ್ ಅವರನ್ನು ಆರೋಪಪಟ್ಟಿಯಲ್ಲಿ ಸೇರಿಸಿಲ್ಲ ಎಂದು ಎನ್‌ಸಿಬಿ ಮಹಾನಿರ್ದೇಶಕ (ಡಿ.ಜಿ) ಎಸ್.ಎನ್. ಪ್ರಧಾನ್ ಅವರು ಹೇಳಿದ್ದಾರೆ.

'ಐಷಾರಾಮಿ ಹಡಗಿನಲ್ಲಿ ಶೋಧಕಾರ್ಯ ನಡೆಸಿದ್ದ ಎನ್‌ಸಿಬಿಯ ಎಸ್‌ಐಟಿ ತಂಡವು, ಕಾರ್ಯಾಚರಣೆ ವೇಳೆ ನಿಯಮಗಳನ್ನು ಪಾಲಿಸಿಲ್ಲ. ಆರ್ಯನ್ ಖಾನ್ ಬಂಧನದ ನಂತರ ಅವರನ್ನು ಕಡ್ಡಾಯ ವೈದ್ಯಕೀಯ ತಪಾಸಣೆಗೆ ಒಳಪಡಿಸಿಲ್ಲ. ಶೋಧಕಾರ್ಯದ ವೇಳೆ ವಿಡಿಯೊ ಚಿತ್ರೀಕರಣ ನಡೆಸಿಲ್ಲ. ಜತೆಗೆ ಆರ್ಯನ್ ಖಾನ್ ಅವರ ವಾಟ್ಸ್‌ಆ್ಯಪ್ ಚಾಟ್‌ಅನ್ನು ದೃಢೀಕೃತ ಭೌತಿಕ ಸಾಕ್ಷ್ಯವಾಗಿ ಸಲ್ಲಿಸುವಲ್ಲಿ ತನಿಖಾ ತಂಡ ವಿಫಲವಾಗಿದೆ' ಎಂದು ಎನ್‌ಸಿಬಿ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಆರ್ಯನ್ ಖಾನ್‌ಗಾಗಿ ಆತನ ಸ್ನೇಹಿತ ಅರ್ಬಾಜ್ ಖಾನ್ ಮಾದಕ ದ್ರವ್ಯ ಸಾಗಿಸುತ್ತಿದ್ದರು ಎನ್ನುವುದನ್ನೇ ಸಾಬೀತುಪಡಿಸಲು ಸಾಧ್ಯವಾಗಿಲ್ಲ. ಆರ್ಯನ್‌ಗಾಗಿ ಮಾದಕವಸ್ತು ಕೊಂಡೊಯ್ದಿರುವುದನ್ನು ಅರ್ಬಾಜ್ ಖಾನ್ ನಿರಾಕರಿಸಿದ್ದಾರೆ. ವಾಸ್ತವವಾಗಿ, ಎನ್‌ಸಿಬಿ ತುಂಬ ಸಕ್ರಿಯವಾಗಿರುವುದರಿಂದ ಹಡಗಿಗೆ ಯಾವುದೇ ಮಾದಕವಸ್ತು ತರದಂತೆ ಆರ್ಯನ್ ಸೂಚಿಸಿದ್ದಾಗಿ ಅರ್ಬಾಜ್ ತನಿಖಾ ತಂಡಕ್ಕೆ ಹೇಳಿಕೆ ನೀಡಿದ್ದಾರೆ' ಎಂದು ಎನ್‌ಸಿಬಿ ಉಪ ಮಹಾನಿರ್ದೇಶಕ (ಕಾರ್ಯಾಚರಣೆ) ಮತ್ತು ಎಸ್‌ಐಟಿ ಮುಖ್ಯಸ್ಥ ಸಂಜಯ್ ಕುಮಾರ್ ಸಿಂಗ್ ಹೇಳಿದ್ದಾರೆ.

'ಎಲ್ಲ ಆರೋಪಿಗಳಿಗೆ ಪರಸ್ಪರ ಸಂಪರ್ಕವಿಲ್ಲ ಎನ್ನುವುದು ತನಿಖೆಯಲ್ಲಿ ಪತ್ತೆಯಾಗಿದೆ. ತನಿಖಾ ತಂಡ ವಶಪಡಿಸಿಕೊಂಡಿದ್ದ ಆರ್ಯನ್ ಅವರ ಮೊಬೈಲ್ ಫೋನ್ ಅನ್ನು ತೆರೆಯುವಾಗಲೂ ಕಾನೂನು ಪ್ರಕ್ರಿಯೆಗಳನ್ನು ಪಾಲಿಸಿಲ್ಲ' ಎಂದು ಅವರು ಮಾಹಿತಿ ನೀಡಿದ್ದಾರೆ.

'ವಾಂಖೆಡೆ ವಿರುದ್ಧ ಕ್ರಮ ಕೈಗೊಳ್ಳಿ'

ನವದೆಹಲಿ(ಪಿಟಿಐ): 'ಐಷಾರಾಮಿ ಹಡಗಿನಲ್ಲಿ ಮಾದಕವಸ್ತು' ಪ್ರಕರಣದಲ್ಲಿ ಶಾರುಕ್ ಖಾನ್ ಪುತ್ರ ಆರ್ಯನ್ ಖಾನ್ ಅವರನ್ನು ಬಂಧಿಸಿದ್ದ ಮಾದಕ ದ್ರವ್ಯ ನಿಯಂತ್ರಣ ದಳದ (ಎನ್‌ಸಿಬಿ) ಮಾಜಿ ಅಧಿಕಾರಿ ಸಮೀರ್ ವಾಂಖೆಡೆ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಹಣಕಾಸು ಸಚಿವಾಲಯಕ್ಕೆ ಕೇಂದ್ರ ಸರ್ಕಾರ ಸೂಚಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಆರ್ಯನ್ ಖಾನ್ ಪ್ರಕರಣದಲ್ಲಿ ನಿರ್ಲಕ್ಷ್ಯದ ಆರೋಪ ಎದುರಿಸುತ್ತಿರುವ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿರುವ ಸರ್ಕಾರ, ನಕಲಿ ಜಾತಿ ಪ್ರಮಾಣ ಸಲ್ಲಿಕೆ ಆರೋಪ ಸಂಬಂಧ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದೂ ಹೇಳಿದೆ. ವಾಂಖೆಡೆ ಅವರು ಭಾರತೀಯ ಕಂದಾಯ ಸೇವೆಗಳ ಅಧಿಕಾರಿಯಾಗಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಲು ಹಣಕಾಸು ಸಚಿವಾಲಯವು ನೋಡಲ್ ಪ್ರಾಧಿಕಾರವಾಗಿದೆ.

ಆರ್ಯನ್ ಖಾನ್ ದೋಷಮುಕ್ತ

ಒಂದನೇ ಪುಟದಿಂದ

ವಿಶೇಷ ತನಿಖಾ ತಂಡವು (ಎಸ್‌ಐಟಿ) ವಸ್ತುನಿಷ್ಠ ರೀತಿಯಲ್ಲಿ ತನಿಖೆ ನಡೆಸಿದೆ ಎಂದು ಎನ್‌ಸಿಬಿ ಪ್ರಕಟಣೆಯಲ್ಲಿ ತಿಳಿಸಿದೆ.

ಡ್ರಗ್ಸ್ ಹೊಂದಿದ್ದ ಆರೋಪದ ಮೇಲೆ ವಿಕ್ರಾಂತ್, ಇಶ್ಮೀತ್, ಅರ್ಬಾಜ್, ಆರ್ಯನ್, ಗೋಮಿತ್, ನೂಪುರ್, ಮೋಹಕ್ ಜೈಸ್ವಾಲ್ ಹಾಗೂ ಮುನ್ಮುನ್ ಎಂಬುವವರನ್ನು ಎನ್‌ಸಿಬಿಯ ಮುಂಬೈ ವಲಯ ಕಚೇರಿ ಅಧಿಕಾರಿಗಳು ಬಂಧಿಸಿದ್ದರು. ಬಂಧಿತರ ಪೈಕಿ, ಆರ್ಯನ್ ಖಾನ್ ಮತ್ತು ಮೋಹಕ್ ಜೈಸ್ವಾಲ್ ಹೊರತುಪಡಿಸಿ ಉಳಿದವರ ವಿರುದ್ಧ ಆರೋಪ ಪಟ್ಟಿ ಸಲ್ಲಿಕೆಯಾಗಿದೆ.

'14 ಜನರ ವಿರುದ್ಧ ಭೌತಿಕ ಹಾಗೂ ಸಾಂದರ್ಭಿಕ ಸಾಕ್ಷ್ಯಾಧಾರಗಳು ಪತ್ತೆಯಾಗಿವೆ. 6 ಜನರ ವಿರುದ್ಧ ಪ್ರಬಲ ಸಾಕ್ಷ್ಯಾಧಾರಗಳು ಸಿಕ್ಕಿಲ್ಲ' ಎಂದು ಎನ್‌ಸಿಬಿ ಮುಖ್ಯಸ್ಥ ಎಸ್.ಎನ್.ಪ್ರಧಾನ್ ಅವರು ನವದೆಹಲಿಯಲ್ಲಿ ಹೇಳಿದ್ದಾರೆ.

'ತನಿಖೆ ಹಂತದಲ್ಲಿ ಲಭ್ಯವಾದ ಎಲ್ಲ ಸಂಗತಿಗಳನ್ನು ಪರಿಗಣಿಸಿದ್ದೆವು. ಆದರೆ, ಆರ್ಯನ್ ಖಾನ್ ವಿರುದ್ಧ ಪ್ರಬಲ ಸಾಕ್ಷ್ಯಗಳು ಪತ್ತೆಯಾಗಿಲ್ಲ' ಎಂದು ಹೇಳಿದ್ದಾರೆ.

'ಪ್ರಕರಣಕ್ಕೆ ಸಂಬಂಧಿಸಿ, ಶಾರುಕ್ ಖಾನ್ ಅವರನ್ನೂ ವಿಚಾರಣೆಗೆ ಒಳಪಡಿಸಲಾಗಿತ್ತೆ' ಎಂಬ ಪ್ರಶ್ನೆಗೆ, 'ಸಂಬಂಧಪಟ್ಟ ಕೆಲ ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ಆದರೆ, ಅವರ ಹೆಸರುಗಳ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ' ಎಂದು ಉತ್ತರಿಸಿದರು.

ಆರ್ಯನ್ ಖಾನ್ ಪರ ವಕೀಲ ಮುಕುಲ್ ರೋಹ್ಟಗಿ, 'ಸತ್ಯ ಗೆದ್ದಿದೆ. ನಾನು, ನನ್ನ ಕಕ್ಷಿದಾರರು ಹಾಗೂ ಶಾರುಕ್ ಖಾನ್ ನಿರಾಳರಾಗಿದ್ದೇವೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ಆರ್ಯನ್ ಖಾನ್ ವಿರುದ್ಧ ಆರೋಪ ಹೊರಿಸಲು ಅಥವಾ ಅವರನ್ನು ಬಂಧಿಸುವುದಕ್ಕೆ ಪೂರಕವಾಗಿ ಯಾವುದೇ ಸಾಕ್ಷ್ಯಾಧಾರಗಳು ಇರಲಿಲ್ಲ. ಎನ್‌ಸಿಬಿ ತನ್ನ ತಪ್ಪನ್ನು ಒಪ್ಪಿಕೊಂಡಿದೆ. ಆರ್ಯನ್ ಖಾನ್ ವಿರುದ್ಧದ ಪ್ರಕರಣ ಮುಂದುವರಿಸುವುದರಲ್ಲಿ ಕಾರಣ ಇಲ್ಲ ಎಂಬುದು ಸಹ ಅದಕ್ಕೆ ಮನವರಿಕೆಯಾಗಿದೆ' ಎಂದೂ ಪ್ರತಿಕ್ರಿಯಿಸಿದ್ದಾರೆ.

ಎನ್‌ಡಿಪಿಎಸ್ ವಿಶೇಷ ನ್ಯಾಯಾಲಯವು ಆರೋಪ ಪಟ್ಟಿ ಸಲ್ಲಿಕೆಗಾಗಿ ಎನ್‌ಸಿಬಿಗೆ ಮಾರ್ಚ್‌ನಲ್ಲಿ 60 ದಿನಗಳ ಕಾಲಾವಕಾಶ ವಿಸ್ತರಿಸಿತ್ತು.

ಸುದ್ದಿ 2 ನಿಮಿಷ

ನೀಟ್: 18 ಲಕ್ಷ ಅಭ್ಯರ್ಥಿಗಳಿಂದ ಅರ್ಜಿ

ನವದೆಹಲಿ (ಪಿಟಿಐ): 2022ನೇ ಸಾಲಿನಲ್ಲಿ ಸ್ನಾತಕೋತ್ತರ ವೈದ್ಯಕೀಯ/ ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಗೆ (ನೀಟ್) 18.72 ಲಕ್ಷ ಅಭ್ಯರ್ಥಿಗಳು ನೋಂದಾಯಿಸಿದ್ದಾರೆ.

ನೋಂದಾಯಿತ ಅಭ್ಯರ್ಥಿಗಳ ಪೈಕಿ ಸುಮಾರು 10.64 ಲಕ್ಷ ಮಹಿಳೆಯರು ಮತ್ತು 8.07 ಲಕ್ಷ ಮಂದಿ ಪುರುಷರು, 771 ವಿದೇಶಿಯರು ಎಂದು ಅಧಿಕೃತ ಅಂಕಿಅಂಶಗಳು ತಿಳಿಸಿವೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಹೆಚ್ಚುವರಿ 2.5 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ನೋಂದಾಯಿಸಿದ್ದಾರೆ.

ಪರೀಕ್ಷೆಯು ದೇಶದಾದ್ಯಂತ 13 ಭಾಷೆಗಳಲ್ಲಿ ಜುಲೈ 17ರಂದು ನಿಗದಿಯಾಗಿದೆ. ಕಳೆದ ವರ್ಷ ನೋಂದಾಯಿತರಾಗಿದ್ದ ಶೇ 95ರಷ್ಟು ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಡ್ರೋನ್ ಉತ್ಸವಕ್ಕೆ ಪ್ರಧಾನಿ ಮೋದಿ ಚಾಲನೆ

ನವದೆಹಲಿ(ಪಿಟಿಐ): '2014ಕ್ಕೂ ಮೊದಲು ಆಡಳಿತದಲ್ಲಿ ತಂತ್ರಜ್ಞಾನ ಅಳವಡಿಸಿಕೊಳ್ಳುವುದಕ್ಕೆ ಉದಾಸೀನದ ವಾತಾವರಣವಿತ್ತು. ಅದರಿಂದಾಗಿ ಬಡವರು ಮತ್ತು ಮಧ್ಯಮ ವರ್ಗದವರು ಹೆಚ್ಚು ತೊಂದರೆ ಅನುಭವಿಸಿದ್ದರು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ನವದೆಹಲಿಯಲ್ಲಿ ದೇಶದ ಅತಿದೊಡ್ಡ ಡ್ರೋನ್ ಉತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡ್ರೋನ್ ತಂತ್ರಜ್ಞಾನದ ಬಗ್ಗೆ ಭಾರತದಲ್ಲಿ ಅದ್ಭುತ ಉತ್ಸಾಹ ಕಂಡುಬರುತ್ತಿದೆ. ಇದು ಉದ್ಯೋಗ ಸೃಷ್ಟಿಯ ಉದಯೋನ್ಮುಖ ಸಾಧ್ಯತೆಗಳನ್ನು ಸೂಚಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಹಿಂದಿನ ಸರ್ಕಾರಗಳ ಅವಧಿಯಲ್ಲಿ ತಂತ್ರಜ್ಞಾನವನ್ನು ಒಂದು ಸಮಸ್ಯೆಯನ್ನಾಗಿ ಕಾಣಲಾಗಿತ್ತಲ್ಲದೆ, ಅದನ್ನು ಬಡವರ ವಿರೋಧಿ ಎಂದು ಬಿಂಬಿಸುವ ಯತ್ನ ನಡೆದಿತ್ತು. ಇದರಿಂದಾಗಿ ಬಡವರು, ಮಧ್ಯಮ ವರ್ಗದವರು ಸಮಸ್ಯೆಗೆ ಒಳಗಾದರು. ಸರ್ಕಾರದ ಯೋಜನೆಗಳನ್ನು ಜನರಿಗೆ ತಲು ಪಿಸುವಲ್ಲಿ ತಂತ್ರಜ್ಞಾನವು ಬಹಳಷ್ಟು ನೆರವಾಗಿದೆ ಎಂದು ಮೋದಿ ಹೇಳಿದರು. 'ಭಾರತ್ ಡ್ರೋನ್ ಮಹೋತ್ಸವ್' ಕಾರ್ಯಕ್ರಮವು ಶುಕ್ರವಾರ ಮತ್ತು ಶನಿವಾರ ದೆಹಲಿಯಲ್ಲಿ ನಡೆಯುತ್ತಿದೆ.

'ಹಿಜಾಬ್ ಬೇಕು ಎನ್ನುವವರಿಗೆ ಬೇರೆ ಕಾಲೇಜಿನಲ್ಲಿ ಪ್ರವೇಶ'

ಪ್ರಜಾವಾಣಿ ವಾರ್ತೆ

ಮಂಗಳೂರು: ತರಗತಿಯಲ್ಲಿ ಹಿಜಾಬ್ ಧರಿಸುವುದಾಗಿ ಹೇಳುವ ವಿದ್ಯಾರ್ಥಿನಿಯರಿಗೆ ಬೇರೆ ಕಾಲೇಜಿನಲ್ಲಿ ಪ್ರವೇಶ ಕಲ್ಪಿಸಲು ವ್ಯವಸ್ಥೆ ಮಾಡಲಾಗುವುದು ಎಂದು ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ.ಪಿ.ಎಸ್. ಯಡಪಡಿತ್ತಾಯ ಹೇಳಿದರು.

ನಗರದ ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಶುಕ್ರವಾರ ನಡೆದ ತುರ್ತು ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, 'ಈ ವಿದ್ಯಾರ್ಥಿನಿಯರಿಗೆ ಆಪ್ತ ಸಮಾಲೋಚನೆ ಏರ್ಪಡಿಸುವ ಮೂಲಕ ಅವರ ನಿರ್ಧಾರವನ್ನು ಬದಲಿಸಲು ಪ್ರಯತ್ನಿಸಲಾಗುವುದು' ಎಂದರು.

ತರಗತಿಯ ಕೊಠಡಿಯಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಹಿಜಾಬ್ ಧರಿಸುವಂತೆ ಒತ್ತಾಯಿಸುತ್ತಿರುವ ಉಪನ್ಯಾಸಕರ ವಿರುದ್ಧ ತನಿಖೆ ನಡೆಸಿ, ಕ್ರಮ ಕೈಗೊಳ್ಳಲಾಗುವುದು ಎಂದರು.

ಹೈಕೋರ್ಟ್ ಹಾಗೂ ಸರ್ಕಾರದ ಆದೇಶದ ಪ್ರಕಾರ, ಕ್ಯಾಂಪಸ್‌ನಲ್ಲಿ ಹಿಜಾಬ್ ಧರಿಸುವುದನ್ನು ನಿರ್ಬಂಧಿಸಲಾಗಿದೆ ಎಂದರು.

ಶಾಸಕ ಡಿ.ವೇದವ್ಯಾಸ ಕಾಮತ್ ಮಾತನಾಡಿ, ಹಿಜಾಬ್‌ಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ತೀರ್ಪಿನಿಂದ ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿಗೆ ವಿನಾಯಿತಿ ನೀಡಿಲ್ಲ. ಉಪನ್ಯಾಸಕರು, ವಿದ್ಯಾರ್ಥಿಗಳ ಜೊತೆಗೆ ಚರ್ಚಿಸಿದ್ದು, ಪ್ರಾಂಶುಪಾಲರು ಹಿಜಾಬ್ ನಿರ್ಬಂಧಿಸುವ ವಿಷಯದಲ್ಲಿ ವಿಳಂಬ ತೋರಿದ್ದಾರೆ ಎಂದರು.

ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

ರಾಜ್ಯಸಭೆಗೆ ನಿರ್ಮಲಾ, ನಕ್ವಿ, ಜೈರಾಂ, ಚಿದಂಬರಂ ಪುನರಾಯ್ಕೆ ಸಾಧ್ಯತೆ

ಬಿಜೆಪಿಗೆ 20, ಕಾಂಗ್ರೆಸ್‌ಗೆ 11 ಸ್ಥಾನ ನಿರೀಕ್ಷೆ

• ಶೆಮಿನ್ ಜಾಯ್

ನವದೆಹಲಿ: ರಾಜ್ಯಸಭೆಯ 55 ಸ್ಥಾನಗಳಿಗೆ ಜೂನ್ 10ರಂದು ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿಯ 20 ಮತ್ತು ಕಾಂಗ್ರೆಸ್‌ನ 11 ಅಭ್ಯರ್ಥಿಗಳು ಗೆಲ್ಲುವ ಸಾಧ್ಯತೆ ಇದೆ.

15 ರಾಜ್ಯಗಳ ವಿಧಾನಸಭೆಗಳಲ್ಲಿ ರಾಜಕೀಯ ಪಕ್ಷಗಳ ಬಲಗಳನ್ನು ಆಧರಿಸಿ ಈ ಲೆಕ್ಕ ಹಾಕಲಾಗಿದೆ. ಒಟ್ಟು 11 ಸ್ಥಾನಗಳಿಗೆ ಚುನಾವಣೆ ನಡೆಯಲಿರುವ ಉತ್ತರ ಪ್ರದೇಶ ಒಂದೇ ರಾಜ್ಯದಲ್ಲೇ ಎಂಟು ಸ್ಥಾನಗಳನ್ನು ಬಿಜೆಪಿ ಗೆಲ್ಲುವ ನಿರೀಕ್ಷೆ ಇದೆ. ಸದ್ಯ ಉತ್ತರ ಪ್ರದೇಶದಿಂದ ಆಯ್ಕೆಯಾಗಿರುವ ಬಿಜೆಪಿಯ ನಾಲ್ವರು ಸದಸ್ಯರು ನಿವೃತ್ತಿ ಹೊಂದಲಿದ್ದಾರೆ. ಆಂಧ್ರ ಪ್ರದೇಶ, ಛತ್ತೀಸಗಡ, ರಾಜಸ್ಥಾನ ಮತ್ತು ಜಾರ್ಖಂಡ್‌ನಲ್ಲಿ ಬಿಜೆಪಿಯು ಕೆಲ ಸ್ಥಾನಗಳನ್ನು ಕಳೆದುಕೊಳ್ಳಲಿದೆ. ಆದರೆ ಈ ನಷ್ಟವನ್ನು ಉತ್ತರ ಪ್ರದೇಶದ ಗೆಲುವು ಸರಿದೂಗಿಸಲಿದೆ.

ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆ ಆಗಿದ್ದ ನಿರ್ಮಲಾ ಸೀತಾರಾಮನ್ ಮತ್ತು ಜಾರ್ಖಂಡ್‌ನಿಂದ ಆಯ್ಕೆ ಆಗಿದ್ದ ಮುಕ್ತಾರ್ ಅಬ್ಬಾಸ್ ನಖ್ವಿ ಅವರ ರಾಜ್ಯಸಭಾ ಅವಧಿ ಮುಕ್ತಾಯವಾಗಲಿದೆ. ಅವರಿಬ್ಬರೂ ಬಿಜೆಪಿಯಿಂದ ಮರು ಆಯ್ಕೆ ಆಗಲಿದ್ದಾರೆ.

ಕಾಂಗ್ರೆಸ್‌ನ ಒಟ್ಟು ಎಂಟು ರಾಜ್ಯಸಭಾ ಸದಸ್ಯರ ಅವಧಿ ಕೊನೆಯಾಗಲಿದೆ. ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ 11 ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆ ಇದೆ. ರಾಜಸ್ಥಾನದ ನಾಲ್ಕು ಸ್ಥಾನಗಳಲ್ಲಿ ಮೂರನ್ನು ಕಾಂಗ್ರೆಸ್ ಗೆಲ್ಲಲಿದೆ ಎನ್ನಲಾಗಿದೆ.

ಕಾಂಗ್ರೆಸ್‌ನ ಬಂಡಾಯ ಗುಂಪು 'ಜಿ–23'ರ ನಾಯಕರಲ್ಲಿ ಪ್ರಮುಖರಾದ ಗುಲಾಂ ನಬಿ ಆಜಾದ್ ಮತ್ತು ಆನಂದ್ ಶರ್ಮ ಅವರೂ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಆಜಾದ್ ಮತ್ತು ಶರ್ಮ ಅವರು ಕಣಕ್ಕಿಳಿಯುವ ಕುರಿತು ಕಾಂಗ್ರೆಸ್ ಯಾವ ನಿರ್ಧಾರ ತೆಗೆದುಕೊಳ್ಳುತ್ತದೆ ಎಂಬುದು ಕುತೂಹಲ ಮೂಡಿಸಿದೆ. ಆಜಾದ್ ಅವರು ಮಹಾರಾಷ್ಟ್ರ ಅಥವಾ ರಾಜಸ್ಥಾನದಿಂದ ಮತ್ತು ಶರ್ಮ ಅವರನ್ನು ಹರಿಯಾಣದಿಂದ ಕಣಕ್ಕೆ ಇಳಿಸುವಂತೆ ಹಿರಿಯ ಮುಖಂಡ ಭೂಪಿಂದರ್ ಹೂಡಾ ಅವರು ಒತ್ತಡ ಹೇರುತ್ತಿದ್ದಾರೆ.

ಮಹಾರಾಷ್ಟ್ರದಿಂದ ಆಯ್ಕೆ ಆಗಿದ್ದ ಹಿರಿಯ ಮುಖಂಡ ಪಿ.ಚಿದಂಬರಂ ಅವರು ಈ ಬಾರಿ ತಮಿಳುನಾಡಿನಿಂದ ಸ್ಪರ್ಧಿಸಿ ಆಯ್ಕೆ ಅಗುವ ಸಾಧ್ಯತೆ ಇದೆ. ಮತ್ತೊಬ್ಬ ಹಿರಿಯ ನಾಯಕ ಜೈರಾಮ್ ರಮೇಶ್ ಅವರು ಕರ್ನಾಟಕದಿಂದ ಪುನರ್‌ಆಯ್ಕೆ ಆಗುವ ನಿರೀಕ್ಷೆ ಇದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಆಪ್ತ ವಲಯದಲ್ಲಿರುವ ಅಜಯ್ ಮಾಕನ್, ರಣದೀಪ್ ಸುರ್ಜೇವಾಲಾ ಅವರು ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಮುಕುಲ್ ವಾಸ್ನಿಕ್ ಮತ್ತು ರಾಜೀವ್ ಶುಕ್ಲಾ ಕೂಡಾ ಟಿಕೆಟ್ ಆಕಾಂಕ್ಷೆ ಹೊಂದಿದ್ದಾರೆ.

ಉತ್ತರ ಪ್ರದೇಶ ಕಾಂಗ್ರೆಸ್‌ನ ಏಕೈಕ ರಾಜ್ಯಸಭಾ ಸಂಸದ ಕಪಿಲ್ ಸಿಬಲ್ ಅವರು ಕಾಂಗ್ರೆಸ್ ತೊರೆದು ಸಮಾಜವಾದಿ ಪಕ್ಷದ ಬೆಂಬಲದೊಂದಿಗೆ ಪಕ್ಷೇತರ ಅಭ್ಯರ್ಥಿ ಆಗಿ ರಾಜ್ಯಸಭೆ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ.

'ಡ್ರಗ್ಸ್‌ಗೆ ಗುಜರಾತ್ ಹೆಬ್ಬಾಗಿಲು': ಮೋದಿ ಮೌನ ಪ್ರಶ್ನಿಸಿದ ಕಾಂಗ್ರೆಸ್

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯ ಗುಜರಾತ್ ಅವರ ಕಣ್ಗಾವಲಿನಲ್ಲಿರುವ ದೇಶಕ್ಕೆ 'ಡ್ರಗ್ಸ್ ಪೂರೈಕೆಯ ಹೆಬ್ಬಾಗಿಲು' ಆಗಿದೆ ಎಂದು ಕಾಂಗ್ರೆಸ್ ಶುಕ್ರವಾರ ಆರೋಪಿಸಿದೆ.

ರಾಜ್ಯದ ಮುಂದ್ರಾ ಮತ್ತು ಪುಪವಾವ್ ಸೇರಿ ಹಲವು ಬಂದರುಗಳ ಮೂಲಕ ದೇಶಕ್ಕೆ ಮಾದಕ ದ್ರವ್ಯ (ಡ್ರಗ್ಸ್) ಪೂರೈಕೆಯಾಗುತ್ತಿದೆ. ಗುರುವಾರವಷ್ಟೇ ಇರಾನ್‌ನಿಂದ ಮುಂದ್ರಾ ಬಂದರಿಗೆ ಬಂದ ₹500 ಕೋಟಿ ಮೌಲ್ಯದ 52 ಕೆ.ಜಿ ಕೊಕೇನ್ ಅನ್ನು ಎನ್‌ಸಿಬಿ ವಶಪಡಿಸಿಕೊಂಡಿದೆ. ಇದರ ಬಗ್ಗೆ ಮೋದಿ ಮತ್ತು ಅಮಿತ್ ಶಾ ಒಂದೇ ಒಂದು ಮಾತು ಆಡದೆ, ಮೌನವಹಿಸಿರುವುದೇಕೆ ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರ್ ಪ್ರಶ್ನಿಸಿದ್ದಾರೆ.

ಅಜ್ಮೇರ್ ದರ್ಗಾ: ಸಮೀಕ್ಷೆಗೆ ಆಗ್ರಹ

ಅಜ್ಮೇರ್: ರಾಜಸ್ಥಾನದ ಅಜ್ಮೇರ್‌ನಲ್ಲಿರುವ, ಸೂಫಿ ಸಂತ ಖ್ವಾಜಾ ಮೊಯಿನುದ್ದೀನ್ ಚಿಸ್ತಿ ದರ್ಗಾ ಹಿಂದೆ ಹಿಂದೂ ದೇಗುಲವಾಗಿತ್ತು ಎಂದು 'ಮಹಾರಾಣ ಪ್ರತಾಪ್ ಸೇನಾ' ಪ್ರತಿಪಾದಿಸಿದ್ದು, ಭಾರತೀಯ ಪುರಾತತ್ವ ಇಲಾಖೆಯಿಂದ (ಎಎಸ್‌ಐ) ಸಮೀಕ್ಷೆ ನಡೆಯಲಿ ಎಂದು ಆಗ್ರಹಿಸಿದೆ.

ದರ್ಗಾದ ಕಿಟಕಿಗಳಲ್ಲಿ ಹಿಂದೂ ಧರ್ಮಕ್ಕೆ ಸಂಬಂಧಿಸಿದ ಚಿಹ್ನೆಗಳಿವೆ ಎಂದು 'ಮಹಾರಾಣ ಪ್ರತಾಪ್ ಸೇನಾ'ದ ರಾಜವರ್ಧನ್ ಸಿಂಗ್ ಪರ್ಮಾರ್ ಹೇಳಿದ್ದಾರೆ.

ಆದರೆ, ಈ ಪ್ರತಿಪಾದನೆಯನ್ನು ದರ್ಗಾ ಆಡಳಿತ ಅಲ್ಲಗಳೆದಿದ್ದು, ಯಾವುದೇ ಕುರುಹು ಇಲ್ಲ ಎಂದು ಹೇಳಿದೆ. ವರದಿಗಾರರನ್ನು ಉದ್ದೇಶಿಸಿ ಮಾತನಾಡಿದ ಪರ್ಮಾರ್, 'ದರ್ಗಾವು ಪ್ರಾಚೀನ ಹಿಂದು ದೇಗುಲವಾಗಿತ್ತು. ದರ್ಗಾದ ಗೋಡೆಗಳಲ್ಲಿ ಮತ್ತು ಕಿಟಕಿಗಳಲ್ಲಿ ಸ್ವಸ್ತಿಕ್ ಚಿಹ್ನೆ ಇದೆ. ಭಾರತೀಯ ಪುರಾತತ್ವ ಇಲಾಖೆ ದರ್ಗಾದಲ್ಲಿ ಸಮೀಕ್ಷೆ ನಡೆಸಬೇಕೆಂದು ಆಗ್ರಹಿಸುತ್ತೇವೆ' ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಡಿಸೆಂಬರ್‌ಗೆ ದೇಶದ ಪ್ರಥಮ ಸೆಮಿ ಹೈಸ್ಪೀಡ್ ರೈಲು

ಚೆನ್ನೈ (ಪಿಟಿಐ): ದೇಶದ ಪ್ರಪ್ರಥಮ ಸೆಮಿ ಹೈಸ್ಪೀಡ್ ಸರಕು ಸಾಗಣೆ ರೈಲು ಈ ವರ್ಷದ ಡಿಸೆಂಬರ್ ವೇಳೆಗೆ ಸೇವೆ ಆರಂಭಿಸುವ ನಿರೀಕ್ಷೆಯಿದೆ ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

'ವಂದೇ ಭಾರತ್' ರೈಲುಗಳ ಮಾದರಿಯಲ್ಲಿ 16 ಬೋಗಿಗಳಿರುವ 'ಗತಿ ಶಕ್ತಿ' ರೈಲು ಕಾರ್ಯಾರಂಭ ಮಾಡಲಿದೆ. ಇದರ ವೇಗ ಗಂಟೆಗೆ 160 ಕಿ.ಮೀ. ಚೆನ್ನೈನಲ್ಲಿ ಇರುವ ಸಮಗ್ರ ಬೋಗಿ ನಿರ್ಮಾಣ (ಐಸಿಎಫ್) ಇದರ ನಿರ್ಮಾಣ ನಡೆಯಲಿದೆ.

ಪ್ರಧಾನಿಯವರ 'ಗತಿ ಶಕ್ತಿ' ರೈಲು ಸೇವೆ ಚಿಂತನೆ ಸಾಕಾರಗೊಳಿಸಲು ರೈಲ್ವೆ ಮಂಡಳಿಯಲ್ಲಿ ಪ್ರತ್ಯೇಕ ನಿರ್ದೇಶನಾಲಯವನ್ನು ರಚಿಸಲಾಗಿದೆ. ತ್ವರಿತಗತಿಯಲ್ಲಿ ಜಾರಿಗೊಳಿಸಲು ಬೆಂಗಳೂರು, ದೆಹಲಿ, ಬಿಲಾಸ್‌ಪುರ್‌ದಲ್ಲಿಯೂ ಶಾಖೆ ತೆರೆಯಲಾಗಿದೆ.

'ಮಾರುಕಟ್ಟೆಯಲ್ಲಿನ ಪ್ರತಿಕ್ರಿಯೆ ಆಧರಿಸಿ ಇಂತಹ ಎಷ್ಟು ರೈಲುಗಳ ಸೇವೆ ಆರಂಭಿಸಬೇಕು ಎಂದು ನಿರ್ಧರಿಸಲಾಗುವುದು. ಒಟ್ಟು 25 ರೈಲು ಆರಂಭಿಸುವ ಗುರಿ ಇದೆ' ಎಂದು ಐಸಿಎಫ್‌ನ ಪ್ರಧಾನ ವ್ಯವಸ್ಥಾಪಕ ಎ.ಕೆ.ಅಗರವಾಲ್ ಅವರು ತಿಳಿಸಿದ್ದಾರೆ.

ನಾಲ್ವರು ಎಲ್‌ಇಟಿ ಉಗ್ರರ ಹತ್ಯೆ

ಶ್ರೀನಗರ: ಗುರುವಾರ ರಾತ್ರಿ ನಡೆದ ಎರಡು ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ ಲಷ್ಕರ್ ಎ ತಯಬಾದ (ಎಲ್‌ಇಟಿ) ನಾಲ್ವರು ಉಗ್ರರನ್ನು ಹತ್ಯೆ ಮಾಡಲಾಗಿದೆ ಎಂದು ಕಾಶ್ಮೀರ ಪೊಲೀಸರು ತಿಳಿಸಿದ್ದಾರೆ.

ಶ್ರೀನಗರದ ಸೌರ್ ಪ್ರದೇಶದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇಬ್ಬರು ಉಗ್ರರನ್ನು ಹತ್ಯೆ ಮಾಡಲಾಗಿದೆ. ಒಂದು ಎಕೆ–47 ಬಂದೂಕು ಹಾಗೂ ಪಿಸ್ತೂಲ್ ವಶಪಡಿಸಿಕೊಳ್ಳಲಾಗಿದೆ. ಅವಂತಿಪೊರಾದಲ್ಲಿ ನಡೆದ ಮತ್ತೊಂದು ಎನ್‌ಕೌಂಟರ್‌ನಲ್ಲಿ ಇಬ್ಬರು ಉಗ್ರರನ್ನು ಹತ್ಯೆ ಮಾಡಲಾಗಿದೆ. ಈ ಉಗ್ರರು ಕಲಾವಿದೆ ಅಮ್ರೀನ್ ಭಟ್ ಹತ್ಯೆ ಪ್ರಕರಣದಲ್ಲಿ ನಂಟು ಹೊಂದಿದ್ದರು ಎಂದು ಕಾಶ್ಮೀರ ಐಜಿಪಿ ವಿಜಯ್ ಕುಮಾರ್ ತಿಳಿಸಿದ್ದಾರೆ.

ಚೌತಾಲಗೆ 4 ವರ್ಷ ಜೈಲು

ನವದೆಹಲಿ: ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಹರಿಯಾಣದ ಮಾಜಿ ಮುಖ್ಯಮಂತ್ರಿ ಓಂ ಪ್ರಕಾಶ್ ಚೌತಾಲ ಅವರಿಗೆ ಶುಕ್ರವಾರ ದೆಹಲಿಯ ಸಿಬಿಐ ವಿಶೇಷ ನ್ಯಾಯಾಲಯವು ನಾಲ್ಕು ವರ್ಷಗಳ ಜೈಲು ಶಿಕ್ಷೆ ಹಾಗೂ ₹ 50 ಲಕ್ಷ ದಂಡ ವಿಧಿಸಿದೆ.

1993 ಮತ್ತು 2006ರ ನಡುವೆ ಅಕ್ರಮ ಆಸ್ತಿ ಗಳಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಧೀಶ ವಿಕಾಸ್ ಧುಲ್ ಅವರು ಓಂ ಪ್ರಕಾಶ್ ಅವರಿಗೆ ಶಿಕ್ಷೆ ವಿಧಿಸಿದ್ದು, ಅವರ ನಾಲ್ಕು ಆಸ್ತಿಗಳನ್ನು ಮುಟ್ಟುಗೋಲು ಹಾಕುವಂತೆಯೂ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಫಾರೂಕ್‌ಗೆ ಇ.ಡಿ ಸಮನ್ಸ್

ನಗರ: ಜಮ್ಮು ಮತ್ತು ಕಾಶ್ಮೀರ ಕ್ರಿಕೆಟ್ ಅಸೋಸಿಯೇಶನ್‌ನಲ್ಲಿ (ಜೆಕೆಸಿಎ) ನಡೆದಿದೆ ಎನ್ನಲಾದ ಅಕ್ರಮ ಹಣ ವರ್ಗಾವಣೆ ಪ್ರಕರಣ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಶ್ರೀನಗರ ಸಂಸದ ಫಾರೂಕ್ ಅಬ್ದುಲ್ಲಾ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ಸಮನ್ಸ್ ಜಾರಿ ಮಾಡಿದೆ.

ಮೇ 31ರಂದು ಚಂಡೀಗಡದ ಕಚೇರಿಗೆ ಬಂದು ವಿಚಾರಣೆಯಲ್ಲಿ ಪಾಲ್ಗೊಳ್ಳಲು ಇ.ಡಿ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

ಕರ್ಣಾಟಕ ಬ್ಯಾಂಕ್ ಲಿ.

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 CIN: L85110KA1924PLC001128 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com

ತಂತ್ರಜ್ಞಾನದೊಂದಿಗೆ ಸಾಧನೆಯ ಶಿಖರದತ್ತ



ದಿನಾಂಕ 31ನೇ ಮಾರ್ಚ್ 2022 ಕ್ಕೆ ಅಂತ್ಯಗೊಂಡ ಸ್ವತಂತ್ರ ಪರಿಶೋಧಿತ ತ್ರೈಮಾಸಿಕ / ವಾರ್ಷಿಕ ಹಣಕಾಸು ಫಲಿತಾಂಶಗಳು

(₹ ಕೋಟಿಗಳಲ್ಲಿ)

ವಿವರಗಳು	31.03.2022 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಪರಿಶೋಧಿತ)	31.12.2021 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	31.03.2021 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಪರಿಶೋಧಿತ)	31.03.2022 ಕ್ಕೆ ಅಂತ್ಯಗೊಂಡ ವಾರ್ಷಿಕ (ಪರಿಶೋಧಿತ)	31.03.2021 ಕ್ಕೆ ಅಂತ್ಯಗೊಂಡ ವಾರ್ಷಿಕ (ಪರಿಶೋಧಿತ)
ಒಟ್ಟು ನಿರ್ವಹಣಾ ಆದಾಯ (ನಿವ್ವಳ)	1835.68	1761.55	1735.72	7175.54	7636.62
ನಿವ್ವಳ ಲಾಭ / (ನಷ್ಟ) ಪ್ರಸಕ್ತ ಸಾಲಿನಲ್ಲಿ (ತೆರಿಗೆಗೂ ಮುನ್ನ, ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ಮೊದಲು)	284.21	217.82	41.87	694.56	611.93
ನಿವ್ವಳ ಲಾಭ /(ನಷ್ಟ) ತೆರಿಗೆಗೂ ಮುನ್ನ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	284.21	217.82	41.87	694.56	611.93
ನಿವ್ವಳ ಲಾಭ /(ನಷ್ಟ) ಪ್ರಸಕ್ತ ಸಾಲಿನಲ್ಲಿ ತೆರಿಗೆಯ ನಂತರ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	130.35	146.57	31.37	508.62	482.57
ಈಕ್ವಿಟಿ ಷೇರು ಬಂಡವಾಳ	311.17	311.02	310.88	311.17	310.88
ಮೀಸಲುಗಳು (ಮರು ಮೌಲ್ಯಾಂಕನ ಮೀಸಲುಗಳನ್ನು ಹೊರತುಪಡಿಸಿ)	6319.55	-	5866.14	6319.55	5866.14
ಸೆಕ್ಯುರಿಟೀಸ್ ಪ್ರೀಮಿಯಂ ಖಾತೆ	1255.97	1255.47	1255.01	1255.97	1255.01
ನಿವ್ವಳ ಸಂಪತ್ತು	6635.78	6503.54	6177.02	6635.78	6177.02
ಪಾವತಿಯಾದ ಸಾಲ ಬಂಡವಾಳ / ಬಾಕಿ ಇರುವ ಸಾಲ	1270	970.00	970.00	1270	970.00
ಕ್ಯಾಪಿಟಲ್ ರಿಡೆಂಪ್ಷನ್ ರಿಸರ್ವ್ / ಡಿಬೆಂಚರ್ ರಿಡೆಂಪ್ಷನ್ ರಿಸರ್ವ್	Nil	Nil	Nil	Nil	Nil
ಬಾಕಿ ಇರುವ ಮರುಗಳಿಕೆಯ ಆದ್ಯತೆಯ ಷೇರುಗಳು	Nil	Nil	Nil	Nil	Nil
ಸಾಲ ಬಂಡವಾಳ ಅನುಪಾತ (ಡೆಬ್ಟ್ ಈಕ್ವಿಟಿ ರೇಷಿಯೋ)					
ಷೇರಿನ ತಲಾ ಆದಾಯ (ಪ್ರತಿ ರೂ. 10/- ರಂತೆ)	0.15	0.11	0.19	0.15	0.19
ಮೂಲಭೂತ (ಬೇಸಿಕ್)	4.19*	4.71*	1.01*	16.36	15.52
ಡೈಲ್ಯೂಟೆಡ್	4.17*	4.70*	1.01*	16.29	15.48

*ವಾರ್ಷಿಕವಲ್ಲ.

ಮೇಲಿನ ವಿವರಗಳು SEBI (ಸೆಬಿ) (ಲಿಸ್ಟಿಂಗ್ ಮತ್ತು ಇತರ ಪ್ರಕಟಣೆ ಅಗತ್ಯತೆಗಳು) ನಿಯಮಾವಳಿ 2015 ರ ನಿಯಮ 33 ಮತ್ತು 52 ರ ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾದ ಅವಧಿಗೆ ಅಂತ್ಯಗೊಂಡ ಫಲಿತಾಂಶಗಳ ವಿವರವಾದ ಸ್ವರೂಪದ ಸಾರವಾಗಿದೆ. ಅವಧಿಗೆ ಅಂತ್ಯಗೊಂಡ ಫಲಿತಾಂಶಗಳ ಎಲ್ಲಾ ವಿವರಗಳು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ BSE: http://www.bseindia.com,NSE: http://www.nseindia.com, ಮತ್ತು ಬ್ಯಾಂಕಿನ ವೆಬ್‌ಸೈಟ್ https://www.karnatakabank.com/index.jsp. ನಲ್ಲಿ ಲಭ್ಯವಿದೆ.

ದಿನಾಂಕ 31ನೇ ಮಾರ್ಚ್ 2022 ಕ್ಕೆ ಅಂತ್ಯಗೊಂಡ ಕ್ರೋಢೀಕರಿಸಿದ ಪರಿಶೋಧಿತ ತ್ರೈಮಾಸಿಕ / ವಾರ್ಷಿಕ ಹಣಕಾಸು ಫಲಿತಾಂಶಗಳು

(₹ ಕೋಟಿಗಳಲ್ಲಿ)

ವಿವರಗಳು	31.03.2022 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಪರಿಶೋಧಿತ)	31.12.2021 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	31.03.2021 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಪರಿಶೋಧಿತ)	31.03.2022 ಕ್ಕೆ ಅಂತ್ಯಗೊಂಡ ವಾರ್ಷಿಕ (ಪರಿಶೋಧಿತ)	31.03.2021 ಕ್ಕೆ ಅಂತ್ಯಗೊಂಡ ವಾರ್ಷಿಕ (ಪರಿಶೋಧಿತ)
ಒಟ್ಟು ನಿರ್ವಹಣಾ ಆದಾಯ (ನಿವ್ವಳ)	1835.76	1761.53	1790.70	7175.54	7636.61
ನಿವ್ವಳ ಲಾಭ / (ನಷ್ಟ) ಪ್ರಸಕ್ತ ಸಾಲಿನಲ್ಲಿ (ತೆರಿಗೆಗೂ ಮುನ್ನ, ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ಮೊದಲು)	284.06	217.67	41.86	693.93	611.82
ನಿವ್ವಳ ಲಾಭ /(ನಷ್ಟ) ತೆರಿಗೆಗೂ ಮುನ್ನ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	284.06	217.67	41.86	693.93	611.82
ನಿವ್ವಳ ಲಾಭ /(ನಷ್ಟ) ಪ್ರಸಕ್ತ ಸಾಲಿನಲ್ಲಿ ತೆರಿಗೆಯ ನಂತರ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	130.20	146.42	31.36	507.99	482.46
ಪಾವತಿಸಲಾದ ಈಕ್ವಿಟಿ ಷೇರು ಬಂಡವಾಳ	311.17	311.02	310.88	311.17	310.88
ಮೀಸಲುಗಳು (ಮರು ಮೌಲ್ಯಾಂಕನ ಮೀಸಲುಗಳನ್ನು ಹೊರತುಪಡಿಸಿ)	6323.87	-	5866.03	6323.87	5866.03
ಸೆಕ್ಯುರಿಟೀಸ್ ಪ್ರೀಮಿಯಂ ಖಾತೆ	1255.97	1255.47	1255.01	1255.97	1255.01
ನಿವ್ವಳ ಸಂಪತ್ತು	6635.04	6502.95	6176.91	6635.04	6176.91
ಪಾವತಿಯಾದ ಸಾಲ ಬಂಡವಾಳ / ಬಾಕಿ ಇರುವ ಸಾಲ	1270.00	970.00	970.00	1270.00	970.00
ಕ್ಯಾಪಿಟಲ್ ರಿಡೆಂಪ್ಷನ್ ರಿಸರ್ವ್ / ಡಿಬೆಂಚರ್ ರಿಡೆಂಪ್ಷನ್ ರಿಸರ್ವ್	Nil	Nil	Nil	Nil	Nil
ಬಾಕಿ ಇರುವ ಮರುಗಳಿಕೆಯ ಆದ್ಯತೆಯ ಷೇರುಗಳು	Nil	Nil	Nil	Nil	Nil
ಸಾಲ ಬಂಡವಾಳ ಅನುಪಾತ (ಡೆಬ್ಟ್ ಈಕ್ವಿಟಿ ರೇಷಿಯೋ)	0.15	0.11	0.19	0.15	0.19
ಷೇರಿನ ತಲಾ ಆದಾಯ (ಪ್ರತಿ ರೂ. 10/- ರಂತೆ)					
ಮೂಲಭೂತ (ಬೇಸಿಕ್)	4.19*	4.71*	1.01*	16.36	15.52
ಡೈಲ್ಯೂಟೆಡ್	4.17*	4.69*	1.01*	16.29	15.48

*ವಾರ್ಷಿಕವಲ್ಲ.

ಮೇಲಿನ ವಿವರಗಳು SEBI (ಸೆಬಿ) (ಲಿಸ್ಟಿಂಗ್ ಮತ್ತು ಇತರ ಪ್ರಕಟಣೆ ಅಗತ್ಯತೆಗಳು) ನಿಯಮಾವಳಿ 2015 ರ ನಿಯಮ 33 ರ ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾದ ಅವಧಿಗೆ ಅಂತ್ಯಗೊಂಡ ಫಲಿತಾಂಶಗಳ ವಿವರವಾದ ಸ್ವರೂಪದ ಸಾರವಾಗಿದೆ. ಅವಧಿಗೆ ಅಂತ್ಯಗೊಂಡ ಫಲಿತಾಂಶಗಳ ಎಲ್ಲಾ ವಿವರಗಳು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ BSE: http://www.bseindia.com,NSE: http://www.nseindia.com, ಮತ್ತು ಬ್ಯಾಂಕಿನ ವೆಬ್‌ಸೈಟ್ https://www.karnatakabank.com/index.jsp. ನಲ್ಲಿ ಲಭ್ಯವಿದೆ.

ಸ್ಥಳ : ಮಂಗಳೂರು
ದಿನಾಂಕ : 27.05.2022

ಆಡಳಿತ ಮಂಡಳಿಯ ನಿರ್ದೇಶಕರುಗಳ ಪರವಾಗಿ
ಸಹಿ/-
ಮಹಾಬಲೇಶ್ವರ ಎಂ.ಎಸ್.
ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಒ

ದೊಡ್ಡಗುಬ್ಬಿ ಕೆರೆ: ಬಾಲಕರ ಮೃತದೇಹಗಳು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊತ್ತನೂರು ಬಳಿಯ ದೊಡ್ಡಗುಬ್ಬಿ ಕೆರೆಯಲ್ಲಿ ಈಜಲು ಹೋಗಿ ನಾಪತ್ತೆಯಾಗಿದ್ದ ಮೂವರು ಬಾಲಕರ ಮೃತ ದೇಹಗಳು ಶುಕ್ರವಾರ ಪತ್ತೆಯಾಗಿದ್ದು, ಮರಣೋತ್ತರ ಪರೀಕ್ಷೆಗೆ ಅಂಬೇಡ್ಕರ್ ಆಸ್ಪತ್ರೆಗೆ ಸಾಗಿಸಲಾಗಿದೆ.

ಸಾರಾಯಿಪಾಳ್ಯ ಫಾತಿಮಾ ಬಡಾವಣೆಯ ಇಮ್ರಾನ್ ಪಾಷಾ (17), ಮುಬಾರಕ್ (17) ಹಾಗೂ ಸಾಹಿಲ್ (15) ಮೃತರು. ಮೂವರು ಸ್ನೇಹಿತರ ಜೊತೆ ಈಜಾಡಲು ಗುರುವಾರ ಕೆರೆಗೆ ಹೋಗಿದ್ದರು. ಈಜಾಡಲು ಸಾಧ್ಯವಾಗದೇ ಕೆರೆಯಲ್ಲಿ ಮುಳುಗಿ ನಾಪತ್ತೆಯಾಗಿದ್ದರು.

'ಮೃತರ ಜೊತೆಗಿದ್ದ ಸ್ನೇಹಿತರು ಹಾಗೂ ಪ್ರತ್ಯಕ್ಷದರ್ಶಿಗಳು ನೀಡಿದ್ದ ಹೇಳಿಕೆ ಆಧಾರದ ಮೇಲೆ ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ಆರಂಭಿಸಿದ್ದರು. ಶುಕ್ರವಾರ ಮಧ್ಯಾಹ್ನದ ಹೊತ್ತಿಗೆ ಮುಬಾರಕ್ ಹಾಗೂ ಸಾಹಿಲ್ ಮೃತ ದೇಹಗಳು ಸಿಕ್ಕಿದ್ದವು. ಸಂಜೆ ವೇಳೆಗೆ ಇಮ್ರಾನ್ ಪಾಷಾ ಮೃತದೇಹ ಪತ್ತೆಯಾಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕೆಲ ದಿನಗಳ ಹಿಂದೆಯಷ್ಟೇ ಸ್ನೇಹಿತನೊಬ್ಬ ಕೆರೆಯಲ್ಲಿ ಈಜಾಡಿ, ಅದರ ವಿಡಿಯೊ ಮಾಡಿಕೊಂಡಿದ್ದ. ಅದನ್ನೇ ಇನ್‌ಸ್ಟಾಗ್ರಾಮ್ ಆ್ಯಪ್‌ನ ರೀಲ್ಸ್‌ನಲ್ಲಿ ಅಪ್‌ಲೋಡ್ ಮಾಡಿದ್ದ. ಅದನ್ನು ನೋಡಿದ್ದ ಬಾಲಕರು, ಸ್ನೇಹಿತರ ಜೊತೆ ಸೇರಿ ಕೆರೆಗೆ ಹೋಗಿದ್ದರು. ಬಾಲಕರ ಸಾವಿನ ಬಗ್ಗೆ ಯುಡಿಆರ್ (ಅಸಹಜ ಸಾವು) ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಮೂವರು ಬಾಲಕರಿಗೆ ಈಜಾಡಲು ಬರುತ್ತಿರಲಿಲ್ಲ. ಸ್ನೇಹಿತರೇ ಒತ್ತಾಯದಿಂದ ಅವರನ್ನು ಕೆರೆಗೆ ಕರೆದೊಯ್ದಿದ್ದರು. ಸ್ನೇಹಿತರು, ಪ್ರತ್ಯಕ್ಷದರ್ಶಿಗಳ ಲಿಖಿತ ಹೇಳಿಕೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದೂ ತಿಳಿಸಿದರು.

ಕುಟುಂಬಸ್ಥರ ಆಕ್ರಂದನ: ಬಾಲಕರ ಪತ್ತೆ ಕಾರ್ಯಾಚರಣೆ ನಡೆಯುವ ವೇಳೆಯಲ್ಲಿ ಕೆರೆ ದಡದಲ್ಲಿ ಕುಟುಂಬಸ್ಥರು, ಸಂಬಂಧಿಕರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಮೃತಪಟ್ಟ ಬಾಲಕರನ್ನು ನೆನೆದು ಕಣ್ಣೀರಿಡುತ್ತಿದ್ದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆರೋಗ್ಯಾಧಿಕಾರಿಗಳು (ಪಶ್ಚಿಮ)ರವರ ಕಚೇರಿ, ಭಾಷ್ಯಂ ಪಾರ್ಕ್, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020.

ಸಂಖ್ಯೆ: ವಆ(ಪ)/ಪಿಆರ್/102/2022–23 ದಿನಾಂಕ: 27.05.2022

ಟೆಂಡರ್ ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅರ್ಹ ಬಿಡ್ಡರುದಾರರಿಂದ ಈ ಕೆಳಕಂಡಂತೆ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಸೊಳ್ಳೆ ನಿಯಂತ್ರಣಕ್ಕಾಗಿ ಮಾನವ ಸಂಪನ್ಮೂಲ ಮತ್ತು ಸಲಕರಣೆಗಳನ್ನು ಒದಗಿಸುವುದು

ಕ್ರ. ಸಂ.	ಕಾಮಗಾರಿಗಳ ಹೆಸರು
1.	ವಾರ್ಡ್ ಸಂಖ್ಯೆ–135 (ಪಾದರಾಯನಪುರ) ಪಶ್ಚಿಮ ವಲಯ, ಚಾಮರಾಜಪೇಟೆ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
2.	ವಾರ್ಡ್ ಸಂಖ್ಯೆ–136 (ಜಗಜೀವನರಾಮನಗರ) (ಪ.ಜಾತಿಗೆ ಮೀಸಲು) ಪಶ್ಚಿಮ ವಲಯ, ಚಾಮರಾಜಪೇಟೆ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
3.	ವಾರ್ಡ್ ಸಂಖ್ಯೆ–137 (ರಾಯಪುರ) ಪಶ್ಚಿಮ ವಲಯ, ಚಾಮರಾಜಪೇಟೆ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
4.	ವಾರ್ಡ್ ಸಂಖ್ಯೆ–138 (ಛಲವಾದಿಪಾಳ್ಯ) (ಪ.ಪಂಗಡಕ್ಕೆ ಮೀಸಲು) ಪಶ್ಚಿಮ ವಲಯ, ಚಾಮರಾಜಪೇಟೆ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
5.	ವಾರ್ಡ್ ಸಂಖ್ಯೆ–139 (ಕೃ.ರಾ. ಮಾರುಕಟ್ಟೆ) ಪಶ್ಚಿಮ ವಲಯ, ಚಾಮರಾಜಪೇಟೆ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
6.	ವಾರ್ಡ್ ಸಂಖ್ಯೆ–140 (ಚಾಮರಾಜಪೇಟೆ) ಪಶ್ಚಿಮ ವಲಯ, ಚಾಮರಾಜಪೇಟೆ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
7.	ವಾರ್ಡ್ ಸಂಖ್ಯೆ–141 (ಆಜಾದ್‌ನಗರ) ಪಶ್ಚಿಮ ವಲಯ, ಚಾಮರಾಜ–ಪೇಟೆ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
8.	ವಾರ್ಡ್ ಸಂಖ್ಯೆ–77 (ದತ್ತಾತ್ರೇಯ ದೇವಸ್ಥಾನ) ಪಶ್ಚಿಮ ವಲಯ, ಚಾಮರಾಜಪೇಟೆ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
9.	ವಾರ್ಡ್ ಸಂಖ್ಯೆ–94 (ಗಾಂಧಿನಗರ) (ಪ.ಜಾತಿಗೆ ಮೀಸಲು) ಪಶ್ಚಿಮ ವಲಯ, ಗಾಂಧಿನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
10.	ವಾರ್ಡ್ ಸಂಖ್ಯೆ–95 (ಸುಭಾಷ್‌ನಗರ) ಪಶ್ಚಿಮ ವಲಯ, ಗಾಂಧಿನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
11.	ವಾರ್ಡ್ ಸಂಖ್ಯೆ–96 (ಓಕಲಿಪುರಂ) ಪಶ್ಚಿಮ ವಲಯ, ಗಾಂಧಿನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
12.	ವಾರ್ಡ್ ಸಂಖ್ಯೆ–109 (ಚಿಕ್ಕಪೇಟೆ) ಪಶ್ಚಿಮ ವಲಯ, ಗಾಂಧಿನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
13.	ವಾರ್ಡ್ ಸಂಖ್ಯೆ–120 (ಕಾಟನ್‌ಪೇಟೆ) (ಪ.ಪಂಗಡಕ್ಕೆ ಮೀಸಲು) ಪಶ್ಚಿಮ ವಲಯ, ಗಾಂಧಿನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ)
14.	ವಾರ್ಡ್ ಸಂಖ್ಯೆ–121 (ಬಿನ್ನಿಪೇಟೆ) ಪಶ್ಚಿಮ ವಲಯ, ಗಾಂಧಿನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
15.	ವಾರ್ಡ್ ಸಂಖ್ಯೆ–103 (ಕಾವೇರಿಪುರ) ಪಶ್ಚಿಮ ವಲಯ, ಗೋವಿಂದ–ರಾಜನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
16.	ವಾರ್ಡ್ ಸಂಖ್ಯೆ–104 (ಗೋವಿಂದರಾಜನಗರ) ಪಶ್ಚಿಮ ವಲಯ, ಗೋವಿಂದರಾಜನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
17.	ವಾರ್ಡ್ ಸಂಖ್ಯೆ–105 (ಅಗ್ರಹಾರ ದಾಸರಹಳ್ಳಿ) ಪಶ್ಚಿಮ ವಲಯ, ಗೋವಿಂದರಾಜನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
18.	ವಾರ್ಡ್ ಸಂಖ್ಯೆ–106 (ಡಾ. ರಾಜಕುಮರ್ ವಾರ್ಡ್) ಪಶ್ಚಿಮ ವಲಯ, ಗೋವಿಂದರಾಜನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
19.	ವಾರ್ಡ್ ಸಂಖ್ಯೆ–125 (ಮಾರೇನಹಳ್ಳಿ) ಪಶ್ಚಿಮ ವಲಯ, ಗೋವಿಂದ–ರಾಜನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
20.	ವಾರ್ಡ್ ಸಂಖ್ಯೆ–126 (ಮಾರುತಿ ಮಂದಿರ ವಾರ್ಡ್) (ಪ.ಜಾತಿಗೆ ಮೀಸಲು) ಪಶ್ಚಿಮ ವಲಯ, ಗೋವಿಂದರಾಜನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
21.	ವಾರ್ಡ್ ಸಂಖ್ಯೆ–127 (ಮೂಡಲಪಾಳ್ಯ) ಪಶ್ಚಿಮ ವಲಯ, ಗೋವಿಂದರಾಜನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
22.	ವಾರ್ಡ್ ಸಂಖ್ಯೆ–128 (ನಾಗರಬಾವಿ ವಾರ್ಡ್) ಪಶ್ಚಿಮ ವಲಯ, ಗೋವಿಂದರಾಜನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
23.	ವಾರ್ಡ್ ಸಂಖ್ಯೆ–131 (ನಾಯಂಡನಹಳ್ಳಿ) (ಪ.ಜಾತಿಗೆ ಮೀಸಲು) ಪಶ್ಚಿಮ ವಲಯ, ಗೋವಿಂದರಾಜನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
24.	ವಾರ್ಡ್ ಸಂಖ್ಯೆ–43 (ನಂದಿನಿ ಬಡಾವಣೆ ವಾರ್ಡ್) ಪಶ್ಚಿಮ ವಲಯ, ಮಹಾಲಕ್ಷ್ಮಿಪುರಂ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
25.	ವಾರ್ಡ್ ಸಂಖ್ಯೆ–44 (ಮಾರಪ್ಪನಪಾಳ್ಯ ವಾರ್ಡ್) ಪಶ್ಚಿಮ ವಲಯ, ಮಹಾಲಕ್ಷ್ಮಿಪುರಂ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
26.	ವಾರ್ಡ್ ಸಂಖ್ಯೆ–67 (ನಾಗಪುರ ವಾರ್ಡ್) ಪಶ್ಚಿಮ ವಲಯ, ಮಹಾಲಕ್ಷ್ಮಿಪುರಂ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
27.	ವಾರ್ಡ್ ಸಂಖ್ಯೆ–68 (ಮಹಾಲಕ್ಷ್ಮಿಪುರ ವಾರ್ಡ್) ಪಶ್ಚಿಮ ವಲಯ, ಮಹಾಲಕ್ಷ್ಮಿಪುರಂ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
28.	ವಾರ್ಡ್ ಸಂಖ್ಯೆ–74 (ಶಕ್ತಿಗಣಪತಿನಗರ ವಾರ್ಡ್) (ಪ.ಜಾತಿಗೆ ಮೀಸಲು) ಪಶ್ಚಿಮ ವಲಯ, ಮಹಾಲಕ್ಷ್ಮಿಪುರಂ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
29.	ವಾರ್ಡ್ ಸಂಖ್ಯೆ–75 (ಶಂಕರಮಠ ವಾರ್ಡ್) ಪಶ್ಚಿಮ ವಲಯ, ಮಹಾಲಕ್ಷ್ಮಿಪುರಂ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
30.	ವಾರ್ಡ್ ಸಂಖ್ಯೆ–102 (ವೃಷಭಾವತಿನಗರ) ಪಶ್ಚಿಮ ವಲಯ, ಮಹಾಲಕ್ಷ್ಮಿಪುರಂ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
31.	ವಾರ್ಡ್ ಸಂಖ್ಯೆ–35 (ಅರಮನೆನಗರ ವಾರ್ಡ್) ಪಶ್ಚಿಮ ವಲಯ, ಮಲ್ಲೇಶ್ವರಂ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
32.	ವಾರ್ಡ್ ಸಂಖ್ಯೆ–36 (ಮತ್ತಿಕೆರೆ ವಾರ್ಡ್) ಪಶ್ಚಿಮ ವಲಯ, ಮಲ್ಲೇಶ್ವರಂ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
33.	ವಾರ್ಡ್ ಸಂಖ್ಯೆ–45 (ಮಲ್ಲೇಶ್ವರಂ ವಾರ್ಡ್) (ಪ.ಜಾತಿಗೆ ಮೀಸಲು) ಪಶ್ಚಿಮ ವಲಯ, ಮಲ್ಲೇಶ್ವರಂ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
34.	ವಾರ್ಡ್ ಸಂಖ್ಯೆ–64 (ರಾಜಮಹಲ್ ಗುಟ್ಟಹಳ್ಳಿ ವಾರ್ಡ್) (ಪ.ಜಾತಿಗೆ ಮೀಸಲು) ಪಶ್ಚಿಮ ವಲಯ, ಮಲ್ಲೇಶ್ವರಂ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
35.	ವಾರ್ಡ್ ಸಂಖ್ಯೆ–65 (ಕಾಡುಮಲ್ಲೇಶ್ವರಂ ವಾರ್ಡ್) (ಪ.ಜಾತಿಗೆ ಮೀಸಲು) ಪಶ್ಚಿಮ ವಲಯ, ಮಲ್ಲೇಶ್ವರಂ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
36.	ವಾರ್ಡ್ ಸಂಖ್ಯೆ–66 (ಸುಬ್ರಹ್ಮಣ್ಯನಗರ ವಾರ್ಡ್) (ಪ.ಪಂಗಡಕ್ಕೆ ಮೀಸಲು) ಪಶ್ಚಿಮ ವಲಯ, ಮಲ್ಲೇಶ್ವರಂ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
37.	ವಾರ್ಡ್ ಸಂಖ್ಯೆ–76 (ಗಾಯತ್ರಿನಗರ ವಾರ್ಡ್) ಪಶ್ಚಿಮ ವಲಯ, ಮಲ್ಲೇಶ್ವರಂ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
38.	ವಾರ್ಡ್ ಸಂಖ್ಯೆ–97 (ದಯಾನಂದನಗರ ವಾರ್ಡ್) ಪಶ್ಚಿಮ ವಲಯ, ರಾಜಾಜಿನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
39.	ವಾರ್ಡ್ ಸಂಖ್ಯೆ–98 (ಪ್ರಕಾಶ್‌ನಗರ ವಾರ್ಡ್) ಪಶ್ಚಿಮ ವಲಯ, ರಾಜಾಜಿನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
40.	ವಾರ್ಡ್ ಸಂಖ್ಯೆ–99 (ರಾಜಾಜಿನಗರ ವಾರ್ಡ್) ಪಶ್ಚಿಮ ವಲಯ, ರಾಜಾಜಿನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
41.	ವಾರ್ಡ್ ಸಂಖ್ಯೆ–100 (ಬಸವೇಶ್ವರನಗರ ವಾರ್ಡ್) (ಪ.ಜಾತಿಗೆ ಮೀಸಲು) ಪಶ್ಚಿಮ ವಲಯ, ರಾಜಾಜಿನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
42.	ವಾರ್ಡ್ ಸಂಖ್ಯೆ–101 (ಕಾಮಾಕ್ಷಿಪಾಳ್ಯ ವಾರ್ಡ್) ಪಶ್ಚಿಮ ವಲಯ, ರಾಜಾಜಿನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
43.	ವಾರ್ಡ್ ಸಂಖ್ಯೆ–107 (ಶಿವನಗರ ವಾರ್ಡ್) ಪಶ್ಚಿಮ ವಲಯ, ರಾಜಾಜಿನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.
44.	ವಾರ್ಡ್ ಸಂಖ್ಯೆ–108 (ಶ್ರೀರಾಮಮಂದಿರ ವಾರ್ಡ್) ಪಶ್ಚಿಮ ವಲಯ, ರಾಜಾಜಿನಗರ ವಿಭಾಗ ಹೊರಗುತ್ತಿಗೆ ಆಧಾರದಲ್ಲಿ.

ಸೊಳ್ಳೆ ನಿಯಂತ್ರಣಕ್ಕಾಗಿ ಇಬ್ಬರು ಚಾಲಕರೊಡನೆ 2–ಆಟೋ ಹಾಗೂ ಇಬ್ಬರು ಸಿಂಪಡಣೆ ಸಿಬ್ಬಂದಿಗಳನ್ನು ಒದಗಿಸುವುದು

ಕ್ರ. ಸಂ.	ಕಾಮಗಾರಿಗಳ ಹೆಸರು
45.	ಪವರ್ ಸ್ಪ್ರೇಯಿಂಗ್, ಫಾಗಿಂಗ್, ಸೋರ್ಸ್ ರಿಡಕ್ಷನ್, ಐಇಸಿ–ಚಾಮರಾಜಪೇಟೆ ಕ್ಷೇತ್ರ (ಪ.ಪಂಗಡಕ್ಕೆ ಮೀಸಲು)
46.	ಪವರ್ ಸ್ಪ್ರೇಯಿಂಗ್, ಫಾಗಿಂಗ್, ಸೋರ್ಸ್ ರಿಡಕ್ಷನ್, ಐಇಸಿ–ಗಾಂಧಿನಗರ ಕ್ಷೇತ್ರ.
47.	ಪವರ್ ಸ್ಪ್ರೇಯಿಂಗ್, ಫಾಗಿಂಗ್, ಸೋರ್ಸ್ ರಿಡಕ್ಷನ್, ಐಇಸಿ–ಗೋವಿಂದರಾಜನಗರ ಕ್ಷೇತ್ರ (ಪ.ಜಾತಿಗೆ ಮೀಸಲು)
48.	ಪವರ್ ಸ್ಪ್ರೇಯಿಂಗ್, ಫಾಗಿಂಗ್, ಸೋರ್ಸ್ ರಿಡಕ್ಷನ್, ಐಇಸಿ–ಮಹಾಲಕ್ಷ್ಮಿಪುರಂ ಕ್ಷೇತ್ರ (ಪ.ಜಾತಿಗೆ ಮೀಸಲು)
49.	ಪವರ್ ಸ್ಪ್ರೇಯಿಂಗ್, ಫಾಗಿಂಗ್, ಸೋರ್ಸ್ ರಿಡಕ್ಷನ್, ಐಇಸಿ–ಮಲ್ಲೇಶ್ವರಂ ಕ್ಷೇತ್ರ.
50.	ಪವರ್ ಸ್ಪ್ರೇಯಿಂಗ್, ಫಾಗಿಂಗ್, ಸೋರ್ಸ್ ರಿಡಕ್ಷನ್, ಐಇಸಿ–ರಾಜಾಜಿನಗರ ಕ್ಷೇತ್ರ.

2.	ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್–ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಸುವ ದಿನಾಂಕ	30.05.2022 ರಿಂದ
3.	ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	04.06.2022ರ ಮಧ್ಯಾಹ್ನ 3:00 ಗಂಟೆಯವರೆಗೆ
4.	ಬಿಡ್‌ಪೂರ್ವಭಾವಿ ಸಭೆಯ ದಿನಾಂಕ:	ಮೀಟಿಂಗ್ ಸಭಾಂಗಣ, ಜಂಟಿ ಆಯುಕ್ತರವರ ಕಚೇರಿ (ಪಶ್ಚಿಮ) ಭಾಷ್ಯಂ ಪಾರ್ಕ್, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–20 ಇಲ್ಲಿ ದಿನಾಂಕ: 06.06.2022ರ ಬೆಳಿಗ್ಗೆ 11:30 ಗಂಟೆಗೆ ನಡೆಸಲಾಗುವುದು.
5.	ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	13.06.2022ರ ಸಂಜೆ 4:00 ಗಂಟೆಯವರೆಗೆ
6.	ಇ–ಪೋರ್ಟಲ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	15.06.2022ರ ಬೆಳಿಗ್ಗೆ 11:00 ಗಂಟೆಗೆ

1) ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.-karnataka.gov.inನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಹೆಚ್ಚಿನ ಮಾಹಿತಿಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ಪಡೆದುಕೊಳ್ಳಬಹುದು.

ಸಹಿ/– ಆರೋಗ್ಯಾಧಿಕಾರಿ ಕಚೇರಿ (ಪಶ್ಚಿಮ)

ಎನ್‌ಸಿಬಿ ಕಾರ್ಯಾಚರಣೆ • ಯುವತಿಯರನ್ನು ಬಳಸಿಕೊಂಡು ಡ್ರಗ್ಸ್ ದಂಧೆ

₹54.50 ಕೋಟಿ ಮೌಲ್ಯದ ಹೆರಾಯಿನ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ವ್ಯವಸ್ಥಿತವಾಗಿ ಡ್ರಗ್ಸ್ ದಂಧೆ ನಡೆಸುತ್ತಿದ್ದ ಜಾಲ ಭೇದಿಸಿರುವ ಎನ್‌ಸಿಬಿ (ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ) ಅಧಿಕಾರಿಗಳು, ₹54.50 ಕೋಟಿ ಮೌಲ್ಯದ 34 ಕೆ.ಜಿ 89 ಗ್ರಾಂ ಹೆರಾಯಿನ್ ಜಪ್ತಿ ಮಾಡಿದ್ದಾರೆ.

'ದೆಹಲಿ ಕೇಂದ್ರವನ್ನಾಗಿಸಿಕೊಂಡು ವಿವಿಧ ರಾಜ್ಯಗಳಲ್ಲಿ ಡ್ರಗ್ಸ್ ಸಾಗಣೆ ಹಾಗೂ ಮಾರಾಟ ಮಾಡುತ್ತಿದ್ದ ಕಿಂಗ್‌ಪಿನ್ ಸೇರಿದಂತೆ 9 ಮಂದಿಯನ್ನು ಬಂಧಿಸಲಾಗಿದೆ. ಇದರಲ್ಲಿ ಐವರು ಯುವತಿಯರಿದ್ದಾರೆ' ಎಂದು ಎನ್‌ಸಿಬಿ ವಲಯ ಕಚೇರಿ ನಿರ್ದೇಶಕ ಅಮಿತ್ ಘಾವಟೆ ತಿಳಿಸಿದರು.

ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆ: 'ಡ್ರಗ್ಸ್ ದಂಧೆ ಬಗ್ಗೆ ಮಾಹಿತಿ ಬಂದಿದ್ದರಿಂದ ಕಾರ್ಯಾಚರಣೆ ನಡೆಸಲು ವಿಶೇಷ ತಂಡಗಳನ್ನು ರಚಿಸಲಾಗಿತ್ತು. ವಿಮಾನದಲ್ಲಿ ಡ್ರಗ್ಸ್ ಸಾಗಿಸುತ್ತಿದ್ದ ಸುಳಿವು ಸಿಕ್ಕಿದ್ದರಿಂದ, ನಗರದ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ನಿಗಾ ವಹಿಸಲಾಗಿತ್ತು' ಎಂದು ಘಾವಟೆ ಹೇಳಿದರು.

'ಜಿಂಬಾಬ್ವೆಯಿಂದ ವಿಮಾನದಲ್ಲಿ ಮೇ 24ರಂದು ಬೆಂಗಳೂರಿಗೆ ಬಂದಿದ್ದ ಯುವತಿ, ನಿಲ್ದಾಣದಲ್ಲಿ ಇಳಿದಿದ್ದಳು.

ಆರೋಪಿಗಳಿಂದ ಜಪ್ತಿ ಮಾಡಲಾದ ಹೆರಾಯಿನ್

ಆಕೆ ಮೇಲೆ ಅನುಮಾನ ಬರುತ್ತಿದ್ದಂತೆ, ತಪಾಸಣೆ ನಡೆಸಲಾಯಿತು. ಆಗ ಆಕೆಯ ಸೂಟ್‌ಕೇಸ್‌ನ ಕೆಳಭಾಗದಲ್ಲಿ ಬಚ್ಚಿಟ್ಟಿದ್ದ 7 ಕೆ.ಜಿ ಹೆರಾಯಿನ್ ಪತ್ತೆಯಾಯಿತು. ಆಕೆ ಹಾಗೂ ಜೊತೆಗಿದ್ದ ಮತ್ತೊಬ್ಬ ಯುವತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಡ್ರಗ್ಸ್ ಜಾಲದ ಪ್ರಮುಖ ರೂವಾರಿಗಳ ಹೆಸರುಗಳು ಬಯಲಾದವು. ಬೆಂಗಳೂರಿನ ವಸತಿ ಗೃಹವೊಂದರಲ್ಲಿ ತಂಗಿರುವ ಯುವತಿ ಬಳಿಯೂ ಡ್ರಗ್ಸ್ ಇರುವುದಾಗಿ ಯುವತಿಯರು ಬಾಯ್ಬಿಟ್ಟಿದ್ದರು. ವಸತಿಗೃಹದ ಮೇಲೂ ದಾಳಿ ಮಾಡಿ, 6 ಕೆ.ಜಿ 890 ಗ್ರಾಂ ಹೆರಾಯಿನ್ ಜಪ್ತಿ ಮಾಡಲಾಯಿತು' ಎಂದೂ ಹೇಳಿದರು.

ರೈಲಿನಲ್ಲೂ ಸಾಗಣೆ: 'ಜಾಲದ ಮೂವರು ಯುವತಿಯರು, ಬೆಂಗಳೂರಿನಿಂದ ರಾಜಧಾನಿ ಎಕ್ಸ್‌ಪ್ರೆಸ್ ರೈಲಿನಲ್ಲಿ ದೆಹಲಿಗೆ ಹೆರಾಯಿನ್ ಸಾಗಿಸುತ್ತಿದ್ದರು. ಈ ಬಗ್ಗೆ ಮಧ್ಯಪ್ರದೇಶದ ಇಂಧೋರ್‌ನ ಎನ್‌ಸಿಬಿ ಅಧಿಕಾರಿಗಳಿಗೆ ಮಾಹಿತಿ ನೀಡಿ, ಮೂವರನ್ನು ಬಂಧಿಸಲಾಯಿತು. ಅವರ ಬಳಿ 21 ಕೆ.ಜಿ ಹೆರಾಯಿನ್ ಪತ್ತೆಯಾಯಿತು' ಎಂದೂ ಘಾವಟೆ ತಿಳಿಸಿದರು.

ಕಿಂಗ್‌ಪಿನ್ ಬಂಧನ: 'ನೈಜೀರಿಯಾ ಪ್ರಜೆಯೊಬ್ಬ ಡ್ರಗ್ಸ್ ದಂಧೆಯ ಕಿಂಗ್‌ಪಿನ್ ಆಗಿದ್ದ. ಆತ ದೆಹಲಿಯಲ್ಲಿ ಇದ್ದಾನೆ ಎಂಬ ಮಾಹಿತಿ ಯುವತಿಯರ ವಿಚಾರಣೆಯಿಂದ ಗೊತ್ತಾಗಿತ್ತು. ಮೂರು ವಿಶೇಷ ತಂಡಗಳು ತನಿಖೆ ನಡೆಸಿ, ಕಿಂಗ್‌ಪಿನ್ ಬಂಧಿಸುವಲ್ಲಿ ಯಶಸ್ವಿಯಾಗಿವೆ' ಎಂದು ಘಾವಟೆ ಹೇಳಿದರು.

'ಪ್ರಮುಖ ಆರೋಪಿಯಾದ ನೈಜೀರಿಯಾ ಪ್ರಜೆ, ಯುವತಿಯರನ್ನು ಮುಂದಿಟ್ಟುಕೊಂಡು ಈ ದಂಧೆ ನಡೆಸುತ್ತಿದ್ದ. ಪೊಲೀಸರು ಯುವತಿಯರನ್ನು ಹೆಚ್ಚು ತಪಾಸಣೆ ಮಾಡುವುದಿಲ್ಲವೆಂದು ತಿಳಿದಿದ್ದ. ದಾಳಿ ವೇಳೆಯಲ್ಲೂ ಎನ್‌ಸಿಬಿ ಸಿಬ್ಬಂದಿ ಜೊತೆ ಆರೋಪಿಗಳು ಕಿರಿಕ್ ಮಾಡಿದ್ದರು. ಮಹಿಳಾ ಸಿಬ್ಬಂದಿ ಮೂಲಕವೇ ಯುವತಿಯರನ್ನು ತಪಾಸಣೆ ನಡೆಸಲಾಗಿತ್ತು' ಎಂದು ಪೊಲೀಸರು ಮಾಹಿತಿ ನೀಡಿದರು.

ಡ್ರಗ್ಸ್ ಮಾರುತ್ತಿದ್ದ ಆರೋಪಿ ಬಂಧನ

ಬೆಂಗಳೂರು: ಸಿಟಿ ಮಾರ್ಕೆಟ್ ಠಾಣೆ ವ್ಯಾಪ್ತಿಯ ಮಟನ್ ಮಾರುಕಟ್ಟೆ ರಸ್ತೆಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪಿ ಸುನಿಕುಮಾರ್ ಬಿಷ್ಣೋಯಿ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಉತ್ತರ ಭಾರತದ ಆರೋಪಿ ಸುನಿಕುಮಾರ್, ಹೊರರಾಜ್ಯದಿಂದ ಡ್ರಗ್ಸ್ ತಂದು ಮಾರುತ್ತಿದ್ದ. ಈತನಿಂದ 90 ಗ್ರಾಂ ಎಂಡಿಎಂಎ, 33 ಗ್ರಾಂ ಬ್ರೌನ್ ಶುಗರ್, 300 ಗ್ರಾಂ ಅಫೀಮು, ₹ 7,380 ನಗದು, ಮೊಬೈಲ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ಪರಿಚಯಸ್ಥರ ಬಳಿ ಡ್ರಗ್ಸ್ ಖರೀದಿಸುತ್ತಿದ್ದ ಆರೋಪಿ, ನಗರದ ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಮಾರುತ್ತಿದ್ದ. ತಂಡದಲ್ಲಿ ಮತ್ತಷ್ಟು ಮಂದಿ ಇರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಪಿಎಸ್‌ಐ ಅಕ್ರಮ ನೇಮಕಾತಿ ಮತ್ತೊಮ್ಮೆ ಎಡಿಜಿಪಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಆಗಿದ್ದ ಅಮ್ರಿತ್ ಪೌಲ್ ಅವರನ್ನು ಎರಡು ದಿನ ವಿಚಾರಣೆ ಮಾಡಿರುವ ಸಿಐಡಿ ಅಧಿಕಾರಿಗಳು, ಮೂರನೇ ಬಾರಿ ಮತ್ತೊಮ್ಮೆ ವಿಚಾರಣೆ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

'ಬುಧವಾರ, ಗುರುವಾರ ವಿಚಾರಣೆಗೆ ಹಾಜರಾಗಿದ್ದ ಪೌಲ್ ಕೆಲ ಪ್ರಶ್ನೆಗಳಿಗೆ ಲಿಖಿತ ಉತ್ತರ ನೀಡಿದ್ದಾರೆ. ಅದರ ಪರಿಶೀಲನೆ ನಡೆಸಲಾಗುತ್ತಿದ್ದು, ಮತ್ತಷ್ಟು ಪ್ರಶ್ನೆಗಳನ್ನು ಸಿದ್ಧಪಡಿಸಿ ಪೌಲ್ ಅವರನ್ನು ವಿಚಾರಣೆಗೆ ಕರೆಯಬೇಕಿದೆ. ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್ ಹಾಗೂ ಇತರೆ ನೌಕರರ ಹೇಳಿಕೆಯ ಜೊತೆ ಪೌಲ್ ಹೇಳಿಕೆ ಹೋಲಿಕೆ ಮಾಡಲಾಗುತ್ತಿದೆ. ತಮ್ಮದೇನೂ ತಪ್ಪಿಲ್ಲವೆಂದು ಎಡಿಜಿಪಿ ಹೇಳುತ್ತಿದ್ದಾರೆ. ಕೆಲ ಪುರಾವೆಗಳು ಅವರ ಮೇಲೆ ಅನುಮಾನ ಬರುವಂತಿದೆ. ಇನ್ನೊಮ್ಮೆ ವಿಚಾರಣೆ ನಡೆಸಿದ ಬಳಿಕವೇ ಪೌಲ್ ಪಾತ್ರದ ಬಗ್ಗೆ ತಿಳಿಯಲಿದೆ' ಎಂದು ಮೂಲಗಳು ತಿಳಿಸಿವೆ.

ಲಿಟ್ಟಲ್ ಶೆಫ್ ಸ್ಪರ್ಧೆ

ಓಕಳಿಪುರಂ ಬಳಿಯ ಲುಲು ಮಾಲ್‌ನಲ್ಲಿ ಹಮ್ಮಿಕೊಂಡಿರುವ 'ಲಿಟ್ಟಲ್ ಶೆಫ್' ಸ್ಪರ್ಧೆಯಲ್ಲಿ ಕಿರುತೆರೆ ಕಲಾವಿದ ಸಿಹಿಕಹಿ ಚಂದ್ರು ಅವರು ಮಕ್ಕಳೊಂದಿಗೆ ಅಡುಗೆ ತಯಾರಿಸಿ ಸಂಭ್ರಮಿಸಿದರು.

ಪ್ರಜಾವಾಣಿ ಚಿತ್ರ

ಆಭರಣ ಕಳವು: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಂದಿ ಆಯುತ್ತ ಬೀಗ ಹಾಕಿರುತ್ತಿದ್ದ ಮನೆಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಬಾಗಲಗುಂಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ಪಶ್ಚಿಮ ಬಂಗಾಳದ ಸಮೀರ್ ಎರಾನ್ ಹಾಗೂ ಮೊಹಮ್ಮದ್ ದಿನ್ನು ಬಂಧಿತರು. ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ಅವರಿಂದ ₹20 ಲಕ್ಷ ಮೌಲ್ಯದ 390 ಗ್ರಾಂ ಚಿನ್ನಾಭರಣ ಹಾಗೂ ಆಟೊ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಾಗಲಗುಂಟೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ನಿತ್ಯವೂ ಚಿಂದಿ ಆಯ್ದು, ಗುಜರಿ ಅಂಗಡಿಗೆ ಮಾರಿ ಬಂದ ಹಣದಲ್ಲಿ ಜೀವನ ನಡೆಸುತ್ತಿದ್ದರು. ಹಣ ಸಾಲದಿದ್ದರಿಂದ ಕಳ್ಳತನಕ್ಕೆ ಮುಂದಾಗಿದ್ದರು' ಎಂದರು.

'ದೂರುದಾರರು ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ಮೇ 3ರಂದು ದೆಹಲಿಗೆ ಹೋಗಿದ್ದರು. ಬಾಲ್ಕನಿಯ ಬಾಗಿಲಿನ ಗ್ರಿಲ್ ಮುರಿದು ಒಳನುಗ್ಗಿದ್ದ ಆರೋಪಿಗಳು, ಚಿನ್ನಾಭರಣ ಕದ್ದು ಪರಾರಿಯಾಗಿದ್ದರು. ಮೇ 9ರಂದು ದೂರುದಾರ ಮನೆಗೆ ಬಂದಿದ್ದಾಗ, ಕಳ್ಳತನ ಆಗಿರುವುದು ಗಮನಕ್ಕೆ ಬಂದಿತ್ತು. ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ಘಟನೆಯ ಬಗ್ಗೆ ಮಾಹಿತಿ ನೀಡಿದರು.

ಜೈಲಿನಿಂದ ಹೊರಬಂದು ಕಳ್ಳತನ

ಬೆಂಗಳೂರು: ಅಪರಾಧ ಪ್ರಕರಣದಲ್ಲಿ ಜೈಲು ಸೇರಿ ಜಾಮೀನು ಮೇಲೆ ಹೊರಬಂದು ಪುನಃ ಕಳ್ಳತನ ಮಾಡುತ್ತಿದ್ದ ಆರೋಪಿ ರವಿಕುಮಾರ್ ಎಂಬಾತನನ್ನು ಬಾಗಲಗುಂಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ಹಾಸನದ ರವಿಕುಮಾರ್, ಪದೇ ಪದೇ ಅಪರಾಧ ಕೃತ್ಯ ಎಸಗುತ್ತಿದ್ದ. ಆತನಿಂದ ₹ 6.30 ಲಕ್ಷ ಮೌಲ್ಯದ 149 ಗ್ರಾಂ ಚಿನ್ನಾಭರಣ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ.'ವೃತ್ತಿಯಲ್ಲಿ ಪೇಂಟರ್ ಆಗಿದ್ದ ರವಿಕುಮಾರ್, ಕೆಲಸದ ವೇಳೆಯಲ್ಲಿ ಮನೆಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದ. ಮುನೇಶ್ವರ ನಗರದ 2ನೇ ಅಡ್ಡರಸ್ತೆಯಲ್ಲಿರುವ ಮನೆಯೊಂದರಲ್ಲಿ ಏಪ್ರಿಲ್ 30ರಂದು ಕಳ್ಳತನ ಎಸಗಿದ್ದ. ಮನೆ ಮಾಲೀಕರು ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ರಾಜಗೋಪಾಲನಗರ, ಮಾದನಾಯಕನಹಳ್ಳಿ, ಹೊಳಲ್ಕೆರೆ, ಹೊಸದುರ್ಗ ಹಾಗೂ ಭದ್ರಾವತಿ ಠಾಣೆಯಲ್ಲೂ ಆರೋಪಿ ವಿರುದ್ಧ ಪ್ರಕರಣ ದಾಖಲಾಗಿದ್ದವು' ಎಂದೂ ಹೇಳಿದರು.

8 ಲಕ್ಷ ಮೌಲ್ಯದ ಚರಸ್ ಜಪ್ತಿ: ಆರೋಪಿ ಬಂಧನ

ಬೆಂಗಳೂರು: ಹಿಮಾಚಲ ಪ್ರದೇಶದಿಂದ ಡ್ರಗ್ಸ್ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಆರೋಪಿಯೊಬ್ಬನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಆತನಿಂದ ₹ 8 ಲಕ್ಷ ಮೌಲ್ಯದ 280 ಗ್ರಾಂ ಚರಸ್ ಜಪ್ತಿ ಮಾಡಿದ್ದಾರೆ.

'ಪುಟ್ಟೇನಹಳ್ಳಿ ಠಾಣೆ ವ್ಯಾಪ್ತಿಯ ಕಾಲೇಜೊಂದರ ಬಳಿ ಆರೋಪಿ ಡ್ರಗ್ಸ್ ಮಾರುತ್ತಿದ್ದ. ಮಾಹಿತಿ ಸಿಗುತ್ತಿದ್ದಂತೆ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಆರೋಪಿಯಿಂದ ಮೊಬೈಲ್ ಹಾಗೂ ತೂಕದ ಯಂತ್ರವನ್ನೂ ಜಪ್ತಿ ಮಾಡಲಾಗಿದೆ. ಮತ್ತಷ್ಟು ಮಂದಿ ಡ್ರಗ್ಸ್ ಮಾರಾಟದಲ್ಲಿ ತೊಡಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದೂ ತಿಳಿಸಿದರು.

ಎಫ್‌ಐಆರ್ ರದ್ದು: ಹೈಕೋರ್ಟ್ ನಿರಾಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯೊಬ್ಬರ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ವ್ಯಕ್ತಿಯೊಬ್ಬರ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧ ಯಲಹಂಕ ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಆರೋಪಿ ಶ್ರೀನಿವಾಸ ರಾಜು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಪುಂಡು ಪೋಕರಿ ಎಂದು ಕರೆದರೆ ಅದು ಆತ್ಮಹತ್ಯೆಗೆ ಪ್ರಚೋದನೆ ಯಾಗುವುದಿಲ್ಲ' ಎಂಬ ಅರ್ಜಿದಾರರ ವಾದ ತಿರಸ್ಕರಿಸಿರುವ ನ್ಯಾಯಪೀಠ, 'ಶಬ್ದಗಳ ಗ್ರಹಿಕೆ ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಯ ನಡುವೆ ವಿಭಿನ್ನವಾಗಿರುತ್ತದೆ. ಕೆಲವರು ಬೈಗುಳಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಆದರೆ, ಸೂಕ್ಷ್ಮ ಮನಸ್ಸಿನವರು ಅದನ್ನೇ ತೀರಾ ಗಂಭೀರವಾಗಿ ತೆಗೆದುಕೊಳ್ಳುತ್ತಾರೆ. ಆದ್ದರಿಂದ, ಈ ಹಂತದಲ್ಲಿ ಪ್ರಕರಣ ರದ್ದುಪಡಿಸಲು ಸಾಧ್ಯವಿಲ್ಲ' ಎಂದು ಹೇಳಿದೆ.

ಪ್ರಕರಣವೇನು?: 'ಜಮೀನು ವಿವಾದವೊಂದಕ್ಕೆ ಸಂಬಂಧಿಸಿದಂತೆ ಮಹಿಳೆಯೊಬ್ಬರ ಪತಿಯನ್ನು ಆರೋಪಿ ಶ್ರೀನಿವಾಸ ರಾಜು ಮಾಧ್ಯಮಗಳ ಮುಂದೆ ಪುಂಡು ಪೋಕರಿ ಎಂದು ನಿಂದಿಸಿದ್ದರು. ಇದರಿಂದ ಮನನೊಂದ ಮಹಿಳೆ 2012ರ ಆಗಸ್ಟ್ 16ರಂದು ನೇಣಿಗೆ ಶರಣಾಗಿ ಆತ್ಮಹತ್ಯೆ ಮಾಡಿಕೊಂಡಿದ್ದರು' ಎಂದು ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ಫೋನ್: +91 80 4544 8000; ಫ್ಯಾಕ್ಸ್: +91 80 3985 6862
ಇಮೇಲ್: contactus.India@diageo.com ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

ಮಾರ್ಚ್ 31, 2022ಕ್ಕೆ ಅಂತ್ಯವಾದ ತ್ರೈಮಾಸಿಕ ಮತ್ತು ವರ್ಷದ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಪರಿಶೋಧಿಸಿದ ಆರ್ಥಿಕ ಫಲಿತಾಂಶಗಳ ವಿವರಣೆ

(ಐಎನ್‌ಆರ್ ದಶಲಕ್ಷಗಳಲ್ಲಿ ಪ್ರತಿ ಷೇರಿನ ಡೇಟಾದ ಆದಾಯವನ್ನು ಹೊರತುಪಡಿಸಿ)

ಕ್ರ. ಸಂಖ್ಯೆ	ವಿವರಗಳು	ಪ್ರತ್ಯೇಕಿತ				ಕ್ರೋಢೀಕೃತ			
		ಮಾರ್ಚ್ 31, 2022 ಕೊನೆಗೊಂಡ ತ್ರೈಮಾಸಿಕ (ಪರಿಶೋಧಿಸಿದ)	ಮಾರ್ಚ್ 31, 2021 ಕೊನೆಗೊಂಡ ತ್ರೈಮಾಸಿಕ (ಪರಿಶೋಧಿಸಿದ)	ಮಾರ್ಚ್ 31, 2022 ವರ್ಷಕ್ಕೆ ಕೊನೆಗೊಂಡ (ಪರಿಶೋಧಿಸಿದ)	ಮಾರ್ಚ್ 31, 2021 ವರ್ಷಕ್ಕೆ ಕೊನೆಗೊಂಡ (ಪರಿಶೋಧಿಸಿದ)	ಮಾರ್ಚ್ 31, 2022 ಕೊನೆಗೊಂಡ ತ್ರೈಮಾಸಿಕ (ಪರಿಶೋಧಿಸಿದ)	ಮಾರ್ಚ್ 31, 2021 ಕೊನೆಗೊಂಡ ತ್ರೈಮಾಸಿಕ (ಪರಿಶೋಧಿಸಿದ)	ಮಾರ್ಚ್ 31, 2022 ವರ್ಷಕ್ಕೆ ಕೊನೆಗೊಂಡ (ಪರಿಶೋಧಿಸಿದ)	ಮಾರ್ಚ್ 31, 2021 ವರ್ಷಕ್ಕೆ ಕೊನೆಗೊಂಡ (ಪರಿಶೋಧಿಸಿದ)
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	76,667	76,721	307,311	271,764	77,673	76,781	310,618	274,185
2.	ಅವಧಿಯ (ತೆರಿಗೆಯ ಮೊದಲು ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	3,727	3,234	12,331	6,204	3,617	2,905	12,518	6,043
3.	ಅವಧಿಯ ತೆರಿಗೆಯ ಮೊದಲು (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	1,995	2,470	10,240	4,690	2,413	2,810	10,886	5,400
4.	ಅವಧಿಯ ತೆರಿಗೆಯ ನಂತರ (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	1,362	1673	7,698	3,103	1,786	2,033	8,106	3,621
5.	ಅವಧಿಯ ಒಟ್ಟಾರೆ ವ್ಯಾಪಕ ಆದಾಯ ಅವಧಿಯ [ಲಾಭ/(ನಷ್ಟ) (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	1,403	1,730	7,821	3,160	1,840	2,082	8,230	3,684
6.	ಈಕ್ವಿಟಿ ಷೇರು ಬಂಡವಾಳ	1,453	1,453	1,453	1,453	1,453	1,453	1,453	1,453
7.	ಮೀಸಲುಗಳು (ಮೌಲ್ಯಮಾಪಿತ ಮೀಸಲುಗಳನ್ನು ಹೊರತುಪಡಿಸಿ) ವರ್ಷದ ಪರಿಶೋಧಿತ ಆಯವ್ಯಯ ಪಟ್ಟಿಯಲ್ಲಿ ತೋರಿಸಲಾಗಿದೆ			47,564	39,815			48,084	39,745
8.	ಪ್ರತಿ ಷೇರಿನ ಗಳಿಕೆ (ಪ್ರತಿ ಷೇರಿಗೆ ರೂ. 2/–) [ಸೂಚನೆ (ಸಿ) ಅನ್ನು ನೋಡಿ]								
	1. ಮೂಲ :	1.87	2.30	10.59	4.27	2.56	2.94	11.68	5.41
	2. ದುರ್ಬಲೀಕೃತ :	1.87	2.30	10.59	4.27	2.56	2.94	11.68	5.41

ಸೂಚನೆಗಳು:

ಎ) ಮೇಲಿನದು 2015ರ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಫೈಲ್ ಮಾಡಿರುವ ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಂಶವಾಗಿದೆ. ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಲಭ್ಯವಿರುತ್ತದೆ.

ಬಿ) ಅಸಾಧಾರಣ ಮತ್ತು/ಅಥವಾ ಅಸಾಮಾನ್ಯ ಐಟಂಗಳನ್ನು, ಕಂಪನಿಗಳ (ಭಾರತೀಯ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್) ನಿಯಮಗಳು, 2015 ಕಂಪನಿ ಕಾಯಿದೆ 2013 ಮತ್ತು ನೀತಿಗಳ ವಿಭಾಗ 133 ಅಡಿಯಲ್ಲಿ ಶಿಫಾರಸು ಅನುಗುಣವಾಗಿ ಲಾಭ ಹೇಳಿಕೆ ಮತ್ತು ನಷ್ಟದಲ್ಲಿ ಸರಿಹೊಂದಿಸಲ್ಪಡುತ್ತದೆ.

ಸಿ) ಫಲಿತಾಂಶಗಳ ಕ್ರೋಢೀಕೃತ ಸ್ಟೇಟ್‌ಮೆಂಟ್ ಅಡಿಯಲ್ಲಿ ಪ್ರಸ್ತುತಪಡಿಸಲಾದ ಎಲ್ಲಾ ಅವಧಿಗಳಲ್ಲಿ ಸರಾಸರಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳನ್ನು ಲೆಕ್ಕಾಚಾರ ಮಾಡುವಾಗ, ಕಂಪನಿಯ ಯುಎಸ್‌ಎಲ್ ಬೆನಿಫಿಟ್ ಟ್ರಸ್ಟ್‌ನಲ್ಲಿ ಹೊಂದಿರುವ (ಕಂಪನಿಯ ಏಕೈಕ ಫಲಾನುಭವಿಯಾಗಿರುವ) ಸ್ವಂತ ಷೇರುಗಳನ್ನು ಕಡಿಮೆ ಮಾಡಿದೆ.

ನಿರ್ದೇಶಕರ ಮಂಡಳಿಯ ನಿಮಿತ್ತ ಮತ್ತು ಅವರ ಪರವಾಗಿ
ಸಹಿ/–
ಹಿನಾ ನಾಗರಾಜನ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಸ್ಥಳ : ಅಹಮದಾಬಾದ್
ದಿನಾಂಕ : ಮೇ 27, 2022

ದಾವಣಗೆರೆಯಲ್ಲಿ ನಡೆದ ಮೇ ಸಾಹಿತ್ಯ ಮೇಳದಲ್ಲಿ ಪಿ. ಸಾಯಿನಾಥ್ ಕಳವಳ

‘ದ್ವೇಷ ಬಿತ್ತುವ ಅಸ್ತ್ರಗಳಾಗುತ್ತಿರುವ ಸಾಹಿತ್ಯ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಭಾಷೆ ಹಾಗೂ ಸಾಹಿತ್ಯವನ್ನು ದ್ವೇಷ ಬಿತ್ತುವ ಅಸ್ತ್ರಗಳನ್ನಾಗಿ ಪರಿವರ್ತಿಸಲಾಗುತ್ತಿದೆ’ ಎಂದು ಪತ್ರಕರ್ತ ಪಿ. ಸಾಯಿನಾಥ್ ಕಳವಳ ವ್ಯಕ್ತಪಡಿಸಿದರು.

ಗದಗದ ಲಡಾಯಿ ಪ್ರಕಾಶನ, ಕವಲಕ್ಕಿಯ ಕವಿ ಪ್ರಕಾಶನ, ಧಾರವಾಡದ ಚಿತ್ತಾರ ಕಲಾ ಬಳಗ, ದಾವಣಗೆರೆಯ ಮೇ ಸಾಹಿತ್ಯ ಮೇಳದ ಬಳಗದ ಆಶ್ರಯದಲ್ಲಿ ಶುಕ್ರವಾರ ಆರಂಭಗೊಂಡ ಮೇ ಸಾಹಿತ್ಯ ಮೇಳದಲ್ಲಿ ಅವರು ಮಾತನಾಡಿದರು.

‘ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವ ಹೋರಾಟದಲ್ಲಿ ಕರ್ನಾಟಕದ ಪ್ರಗತಿಪರ ಬರಹಗಾರರು, ಕವಿಗಳು ಮುಂಚೂಣಿಯಲ್ಲಿದ್ದಾರೆ. ಈ ಹೊತ್ತಿಗೂ ಪುರಾಣವನ್ನೇ ಚರಿತ್ರೆ ಎಂದು ಬಿಂಬಿಸುವ ಕೆಲಸ ಮಾಡುತ್ತಿರುವವರ ವಿರುದ್ಧ, ಚರಿತ್ರೆಯ ಪಠ್ಯಪುಸ್ತಕಗಳನ್ನು ಪುನರ್‌ರಚಿಸುವ ಬೂಟಾಟಿಕೆಯ ವಿರುದ್ಧ ಹೋರಾಡುತ್ತಿದ್ದಾರೆ. ಗೌರಿ ಲಂಕೇಶ್, ಪ್ರೊ. ಎಂ.ಎಂ. ಕಲಬುರ್ಗಿ ಅವರಂತೆ ಕನ್ನಡದ ಬರಹಗಾರರು, ಪತ್ರಕರ್ತರು, ಶಿಕ್ಷಣ ತಜ್ಞರು ತಮ್ಮ ಬದ್ಧತೆಗಾಗಿ ಪ್ರಾಣವನ್ನೇ ಬಲಿ ಕೊಡುವ ಸಂದರ್ಭಗಳು ಎದುರಾಗಿವೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಭಾರತದಲ್ಲಿ ವಾಕ್ ಸ್ವಾತಂತ್ರ್ಯ ಇದೆ. ಆದರೆ, ಮಾತಾಡಿದ ನಂತರ ಸ್ವಾತಂತ್ರ್ಯ ಇರುವುದಿಲ್ಲ. ಜಾಗತಿಕ ಪತ್ರಿಕಾ ಸಂಸ್ಥೆಗಳ ಅಧ್ಯಯನದ ಪ್ರಕಾರ ಪತ್ರಿಕಾ ಸ್ವಾತಂತ್ರ್ಯದಲ್ಲಿ ಭಾರತವು ಈ ಮೊದಲು 105ನೇ ಸ್ಥಾನದಲ್ಲಿತ್ತು. ಈಗ ಅದು 150ನೇ ಸ್ಥಾನಕ್ಕೆ ತಲುಪಿದೆ’ ಎಂದು ಬೇಸರಿಸಿದರು.

ದಾವಣಗೆರೆಯಲ್ಲಿ ಶುಕ್ರವಾರ ಆರಂಭಗೊಂಡ 8ನೇ ಮೇ ಸಾಹಿತ್ಯ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಚಿಂತಕರಾದ ಡಿ.ಬಿ. ರಜಿಯಾ, ವಕೀಲ ಎಲ್.ಎಚ್. ಅರುಣಕುಮಾರ್, ವಾರ್ತಾ ಭಾರತಿ ಪತ್ರಿಕೆಯ ಪ್ರಧಾನ ಸಂಪಾದಕ ಅಬ್ದುಸ್ಸಲಾಂ ಪುತ್ತಿಗೆ, ಮದ್ರಾಸ್ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಚಂದ್ರು, ಕವಿತಾ ಕೃಷ್ಣನ್, ಪತ್ರಕರ್ತ ಪಿ.ಸಾಯಿನಾಥ್, ಶಿಕ್ಷಣ ತಜ್ಞ ಡಾ.ಎಂ.ಜಿ. ಈಶ್ವರಪ್ಪ, ಬಿ.ಶ್ರೀನಿವಾಸ್, ಐವನ್ ಡಿಸಿಲ್ವಾ ಇದ್ದಾರೆ.

‘ಸಂಘ ಪರಿವಾರದಿಂದ ಶಿಕ್ಷಣದ ಕೇಸರೀಕರಣ’

ದಿಕ್ಸೂಚಿ ಭಾಷಣ ಮಾಡಿದ ಮದ್ರಾಸ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಚಂದ್ರು, ‘ಇಡೀ ದೇಶವನ್ನು ಕೇಸರೀಕರಣ ಮಾಡುವುದು ಸಂಘ ಪರಿವಾರದ ಅಜೆಂಡಾ ಆಗಿದೆ. ಒಂದೇ ಸಿದ್ಧಾಂತವನ್ನು ಹೇರಲಾಗುತ್ತಿದೆ. ಇದರ ಭಾಗವಾಗಿಯೇ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತಂದರು. ಶಿಕ್ಷಣವನ್ನು ನಿಯಂತ್ರಿಸಲು ಬಯಸಿರುವ ಅವರು ಭಗತ್ ಸಿಂಗ್, ಪೆರಿಯಾರ್ ಅವರನ್ನೆಲ್ಲ ಕಲಿಕೆಯಿಂದ ದೂರ ಇಡುತ್ತಿದ್ದಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘14 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ದೊರೆಯಬೇಕು ಎಂಬುದು ಸಂವಿಧಾನದ ಆಶಯವಾಗಿದೆ. ಆದರೆ, ಕರ್ನಾಟಕದಲ್ಲಿ ಎಂಥ ಸನ್ನಿವೇಶವನ್ನು ನಿರ್ಮಿಸಲಾಯಿತು? ಹಿಜಾಬ್ ಸಮಸ್ಯೆಯೇ ಆಗಿರಲಿಲ್ಲ. ನಾವು ಶಾಲೆಗೆ ಹೋಗುವಾಗ ಎಷ್ಟೋ ಮಕ್ಕಳಿಗೆ ಬಟ್ಟೆಯೇ ಇರುತ್ತಿರಲಿಲ್ಲ. ಆಗ ಸಮವಸ್ತ್ರ ವಿಷಯವೇ ಆಗಿರಲಿಲ್ಲ. ಶಿಕ್ಷಣ ಮುಖ್ಯವಾಗಿತ್ತು’ ಎಂದು ಹೇಳಿದರು.

‘ರಾಜ್ಯದಲ್ಲಿ ಈ ಬಾರಿ ಸುಮಾರು 20 ಸಾವಿರ ಮಕ್ಕಳಿಗೆ 10ನೇ ತರಗತಿ ಪರೀಕ್ಷೆಯನ್ನು ಬರೆಯಲು ಸಾಧ್ಯವಾಗಿಲ್ಲ. ಇಂಥ ಸಮಸ್ಯೆ ಎದುರಾದರೂ ಹೈಕೋರ್ಟ್ ಏಕೆ ಸುಮ್ಮನಿದೆ ಎಂಬುದು ಅರ್ಥವಾಗುತ್ತಿಲ್ಲ. ನ್ಯಾಯಾಂಗವು ಕೊನೆಯ ಆಸೆಯಾಗಿತ್ತು. ಈಗ ಅದೂ ಕಳೆದುಹೋಗಿದೆ ಅನಿಸುತ್ತಿದೆ. ನಾಗಪುರದಿಂದ ಆಮದು ಮಾಡಿಕೊಂಡವರೇ ಎಲ್ಲಾ ಕಡೆ ಕುಳಿತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಕರ್ನಾಟಕವು ಒಂದು ಪ್ರಯೋಗಶಾಲೆಯಾಗಿದೆ. ಹಿಜಾಬ್ ಇಲ್ಲ. ಅಜಾನ್, ಹಲಾಲ್ ಮಾಡುವಂತಿಲ್ಲ. ನಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಸಂವಿಧಾನ ನೀಡಿರುವ ಹಕ್ಕನ್ನು ಇಂದು ಇವರ್‍ಯಾರೋ ನಿರ್ಧರಿಸುತ್ತಿದ್ದಾರೆ’ ಎಂದು ಸರ್ವಾಧಿಕಾರಿ ಧೋರಣೆಯನ್ನು ಖಂಡಿಸಿದರು.

‘ಡಾ.ಎಂ.ಎಂ. ಕಲಬುರ್ಗಿ, ಗೌರಿ ಲಂಕೇಶ್ ಅವರಂತಹ ಚಿಂತಕರ ಕೊಲೆ ನಡೆದಿದೆ. ಆದರೆ, ಕೊಲೆಗಾರರಿಗೆ ಇನ್ನೂ ಶಿಕ್ಷೆಯಾಗಿಲ್ಲ. ದೇಶದ್ರೋಹ ಕಾಯ್ದೆಯನ್ನೂ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ’ ಎಂದು ನಿವೃತ್ತ ನ್ಯಾಯಮೂರ್ತಿ ಚಂದ್ರು ಬೇಸರ ವ್ಯಕ್ತಪಡಿಸಿದರು.

ಧಾರವಾಡದ ನುಗ್ಗಿಕೇರಿಯ ಆಂಜನೇಯ ದೇವಸ್ಥಾನದ ಆವರಣದಲ್ಲಿ ಕಲ್ಲಂಗಡಿ ಹಣ್ಣು ಮಾರಾಟ ಮಾಡುತ್ತಿದ್ದ ವ್ಯಾಪಾರಿ ನಬೀಸಾಬ್ ಕಿಲ್ಲೇದಾರ್ ಸೇರಿ ಹಲವು ಶ್ರಮಿಕರಿಂದ ಗಣ್ಯರಿಗೆ ಧ್ವಜಗಳನ್ನು ಹಸ್ತಾಂತರಿಸಿ ಮೇಳಕ್ಕೆ ಚಾಲನೆ ನೀಡುವ ಮೂಲಕ ದುಡಿಯುವ ವರ್ಗದವರ ಜೊತೆಗಿದ್ದೇವೆ ಎಂಬ ಸಂದೇಶವನ್ನು ರವಾನಿಸಲಾಯಿತು.

ರಾಜ್ಯದಲ್ಲಿ ಶಿಕ್ಷಣದ ಕೇಸರೀಕರಣ, ಅಭಿವ್ಯಕ್ತಿ ಸ್ವಾತಂತ್ರ್ಯ ಮೊಟಕುಗೊಳಿಸುತ್ತಿರುವ ಸರ್ಕಾರದ ಸರ್ವಾಧಿಕಾರಿ ಧೋರಣೆಯ ವಿರುದ್ಧ ಮೇಳದಲ್ಲಿ ಚಿಂತಕರು ಧ್ವನಿ ಎತ್ತಿದರು. ವಾರ್ತಾ ಭಾರತಿ ಪತ್ರಿಕೆಯ ಪ್ರಧಾನ ಸಂಪಾದಕ ಅಬ್ದುಸ್ಸಲಾಂ ಪುತ್ತಿಗೆ, ದೆಹಲಿಯ ಚಿಂತಕಿ ಕವಿತಾ ಕೃಷ್ಣನ್ ಅವರೂ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

‘ಹಿಂದುತ್ವದ ಅಜೆಂಡಾ ಸೋಲಿಸಬೇಕು’

‘ಹಿಂದುತ್ವದ ಸಂಘಟನೆಗಳು ಗೌರಿಬಿದನೂರಿನ ವಿದುರಾಶ್ವತ್ಥ ಹುತಾತ್ಮರ ಸ್ಮಾರಕಕ್ಕೆ ಬೆದರಿಕೆ ಒಡ್ಡಿರುವುದನ್ನು ಖಂಡಿಸುತ್ತೇವೆ. ದೇಶದ ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾದ ಎಲ್ಲರ ತ್ಯಾಗ–ಬಲಿದಾನಗಳನ್ನು ಇಂದಿನ ತಲೆಮಾರಿಗೆ ತಿಳಿಸುವ ಮೂಲ ಹಿಂದುತ್ವದ ಧೂರ್ತ ಅಜೆಂಡಾವನ್ನು ಸೋಲಿಸಬೇಕು’ ಎಂಬ ನಿರ್ಣಯವನ್ನು ಮೇ ಸಾಹಿತ್ಯ ಮೇಳದಲ್ಲಿ ಕೈಗೊಳ್ಳಲಾಯಿತು.

‘ರಾಜ್ಯದ ಬಿಜೆಪಿ ಸರ್ಕಾರವು ಕೃಷಿ ಮಾರುಕಟ್ಟೆ ತಿದ್ದುಪಡಿ ಮತ್ತು ಭೂಸುಧಾರಣಾ ಕಾಯ್ದೆಯನ್ನು ಹಿಂಪಡೆಯಬೇಕು. ಗ್ರಾಮ ಭಾರತದ ರೈತರು, ದಲಿತರು, ಕೂಲಿಕಾರರು ಮತ್ತು ಮಹಿಳೆಯರ ಬದುಕನ್ನು ಸುಸ್ಥಿರಗೊಳಿಸುವ ಸಮಗ್ರ ನೀತಿಯನ್ನು ಜಾರಿಗೊಳಿಸಬೇಕು’ ಎಂದು ಬರಹಗಾರ ಕೆ.ಪಿ. ಸುರೇಶ್ ನಿರ್ಣಯಗಳನ್ನು ಮಂಡಿಸಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಬಹುಭಾಷಾ ಚಿತ್ರನಟಿ ಪ್ರಿಯಾಂಕಾ ಉಪೇಂದ್ರ ಆ್ಯಕ್ಷನ್ ಕ್ವೀನ್
ಸೆಲೆಬ್ರಿಟಿ LIVE ಬೆಳಿಗ್ಗೆ 11ರಿಂದ 12
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಪ್ರಜಾವಾಣಿ ಕನ್ನಡ ಧ್ವನಿ
30.05.2022ರ ಸೋಮವಾರ
ವಿವಾದದ ಸುಳಿಯೊಳಗೆ ಪಠ್ಯಪುಸ್ತಕ ಪರಿಷ್ಕರಣೆ
ಭಾಗವಹಿಸುವವರು:
ಬಂಜಗೆರೆ ಜಯಪ್ರಕಾಶ್, ಕವಿ, ಲೇಖಕ
ಪ್ರತಿಭಾ ನಂದಕುಮಾರ್, ಕವಯಿತ್ರಿ, ಪತ್ರಕರ್ತೆ
ರೋಹಿಣಾಕ್ಷ ಶಿರ್ಲಾಲು, ಪ್ರಾಧ್ಯಾಪಕ, ಕೇಂದ್ರೀಯ ವಿ.ವಿ. ಕಲಬುರಗಿ
ಸಂವಾದ ಬೆಳಿಗ್ಗೆ 11ರಿಂದ 12

ಗುಲಬರ್ಗಾ ವಿ.ವಿ: ‘ಪ್ರಶ್ನೆ ಪತ್ರಿಕೆಯ ಬಿ–ಸೆಟ್ ಬಳಸಿ ಪರೀಕ್ಷೆ’

ಕಲಬುರಗಿ: ‘ಗುಲಬರ್ಗಾ ವಿಶ್ವವಿದ್ಯಾಲಯದ ಬಿ.ಕಾಂ 5ನೇ ಸೆಮಿಸ್ಟರ್‌ನ ಪ್ರಶ್ನೆಪತ್ರಿಕೆ ಸೋರಿಕೆಯಾದ ಬಗ್ಗೆ ಈಗಾಗಲೇ ಸೈಬರ್ ವಿಭಾಗಕ್ಕೆ ದೂರು ನೀಡಿದ್ದೇವೆ. ಪ್ರಶ್ನೆ ಪತ್ರಿಕೆಯ ‘ಬಿ–ಸೆಟ್’ ಬಳಸಿ ಶೀಘ್ರದಲ್ಲೇ ಪರೀಕ್ಷೆ ನಡೆಸಲಾಗುವುದು’ ಎಂದು ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವೆ ಡಾ.ಮೇಧಾವಿನಿ ಎಸ್. ಕಟ್ಟಿ ತಿಳಿಸಿದ್ದಾರೆ.

ನಿಗದಿಯಂತೆ ಗುರುವಾರ (ಮೇ 26) ಮಧ್ಯಾಹ್ನ 2ಕ್ಕೆ ಮ್ಯಾನೇಜ್‌ಮೆಂಟ್ ಅಕೌಂಟಿಂಗ್ (ಡಿಎಸ್‌ಸಿ–13) ಪರೀಕ್ಷೆ ನಡೆಯಬೇಕಿತ್ತು. ಆದರೆ, ಮಧ್ಯಾಹ್ನ 12ರ ವೇಳೆಗೆ ಪ್ರಶ್ನೆಪತ್ರಿಕೆಯ ಫೋಟೊಕಾಪಿಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದವು. ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿ ಇದನ್ನು ಗಮನಿಸಿದ ಕೆಲ ವಿದ್ಯಾರ್ಥಿಗಳು ವಿವಿಧ ಕಾಲೇಜುಗಳ ಪ್ರಾಂಶುಪಾಲರು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಸಿಂಡಿಕೇಟ್ ಸದಸ್ಯರ ಮೊಬೈಲ್‌ಗಳಿಗೂ ರವಾನಿಸಿ, ಮಾಹಿತಿ ನೀಡಿದರು.

‘ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಶ್ನೆ ಪತ್ರಿಕೆಯ ಪ್ರತಿ ಹರಿದಾಡುವುದನ್ನು ಕೆಲವರು ಗಮನಕ್ಕೆ ತಂದರು. ಪರೀಕ್ಷೆಯನ್ನು ರದ್ದುಪಡಿಸಿ, ಸೈಬರ್ ವಿಭಾಗದಲ್ಲಿ ದೂರು ದಾಖಲಿಸಿದ್ದೇವೆ’ ಎಂದು ಮೇಧಾವಿನಿ ತಿಳಿಸಿದರು.

‘ಮ್ಯಾನೇಜ್‌ಮೆಂಟ್ ಅಕೌಂಟಿಂಗ್ ಪರೀಕ್ಷೆ ಹೊರತುಪಡಿಸಿ, ಎಲ್ಲ ಪರೀಕ್ಷೆಗಳೂ ನಿಗದಿಯಂತೆ ನಡೆಯಲಿವೆ. ಪರೀಕ್ಷೆಗಳು ಮುಗಿದ ಬಳಿಕ, ಮ್ಯಾನೇಜ್‌ಮೆಂಟ್ ಅಕೌಂಟಿಂಗ್ ಪರೀಕ್ಷೆ ತೆಗೆದುಕೊಳ್ಳುತ್ತೇವೆ. ಮೊದಲ ಸೆಟ್‌ನ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದ್ದರಿಂದ ‘ಬಿ–ಸೆಟ್’ ಬಳಸಲು ಅವಕಾಶವಿದೆ’ ಎಂದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನೆ • ಜವಾಹರಲಾಲ್ ನೆಹರೂ ಪುಣ್ಯಸ್ಮರಣೆ

‘ಆರೆಸ್ಸೆಸ್‌ನವರು ಭಾರತೀಯರೇ, ದ್ರಾವಿಡರೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರೆಸ್ಸೆಸ್‌ನವರೇನು ಭಾರತೀಯರೇ? ಅದೇನು ನಮ್ಮ ದೇಶದ್ದಾ? ಅವರೇನು ದ್ರಾವಿಡರೇ? ದ್ರಾವಿಡರಷ್ಟೇ ಈ ದೇಶದವರು. ಈ ಪ್ರಶ್ನೆಗಳನ್ನೂ ನಾವು ಕೇಳಬೇಕಾಗುತ್ತದೆ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ನಡೆದ ಪಂಡಿತ್ ಜವಾಹರಲಾಲ್ ನೆಹರೂ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ರೋಹಿತ್ ಚಕ್ರತೀರ್ಥ ಎನ್ನುವ ಒಬ್ಬನಿಗೆ ಮಕ್ಕಳ ಪಠ್ಯ ಪುಸ್ತಕ ರೂಪಿಸುವ ಜವಾಬ್ದಾರಿ ನೀಡಲಾಗಿದೆ. ಇದಕ್ಕಿಂತ ಮೂರ್ಖತನವನ್ನು ನಾನು ನೋಡಿಲ್ಲ. ಈತ ಹೆಡಗೇವಾರ್‌ಗಿಂತ ಒಂದು ಹೆಜ್ಜೆ ಮುಂದಿದ್ದಾನೆ. ಅಪ್ರತಿಮ ದೇಶಭಕ್ತ ಭಗತ್‌ಸಿಂಗ್ ಪಠ್ಯವನ್ನು ತೆಗೆದು ಹೆಡಗೇವಾರ್ ಭಾಷಣ ಹಾಕಿದ್ದಾನೆ. ಭಗತ್‌ಸಿಂಗ್‌ಗಿಂತ ದೇಶಭಕ್ತ ಬೇಕಾ?’ ಎಂದರು.

‘ಇಂತದನ್ನು ಪ್ರಶ್ನಿಸುತ್ತಾ ಹೋದರೆ ಏನಾಗುತ್ತದೆ ಗೊತ್ತಾ? ಅದಕ್ಕಾಗಿಯೇ ಚರಿತ್ರೆ ಕೆದಕಲು ಹೋಗಬಾರದು. ಡಾ.ಅಂಬೇಡ್ಕರ್ ಅವರು, ‘ಚರಿತ್ರೆ ಗೊತ್ತಿಲ್ಲದವರು ಭವಿಷ್ಯ ರೂಪಿಸಲಾರರು’ ಎಂದು ಹೇಳಿದ್ದರು. ಆರೆಸ್ಸೆಸ್‌ನವರಿಗೆ ನಿಜವಾದ ಚರಿತ್ರೆ ಬಗ್ಗೆ ಬಹಳ ಭಯ ಇದೆ. ಅದಕ್ಕಾಗಿಯೇ ಇತಿಹಾಸ ತಿರುಚುವ ಕೆಲಸಕ್ಕೆ ಮುಂದಾಗಿದ್ದಾರೆ’ ಎಂದು ಹರಿಹಾಯ್ದರು.

ನೆಹರೂ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ನೆಹರೂ ಭಾವಚಿತ್ರಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪುಷ್ಪನಮನ ಸಲ್ಲಿಸಿದರು. ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಯು.ಟಿ. ಖಾದರ್, ಜೈರಾಂ ರಮೇಶ್ ಮತ್ತಿತರರು ಇದ್ದರು

ನಾಡಗೀತೆಗೆ ಅವಹೇಳನ– ಡಿಕೆಶಿ ಕಿಡಿ

‘ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟ ಎಂದು ಕರೆದ ಕುವೆಂಪು ರಚಿಸಿರುವ ನಾಡಗೀತೆಯನ್ನು ಕಾರ್ಯಕ್ರಮಗಳಿಗೆ ಮುನ್ನ ಹಾಡುತ್ತೇವೆ. ಕೆಲವರು ಅದನ್ನೇ ತಿರುಚಿ ಅವಹೇಳನ ಮಾಡಿದ್ದಾರೆ. ಇದನ್ನು ನೋಡಿಕೊಂಡು ಸುಮ್ಮನೆ ಕೂರಲು ಸಾಧ್ಯವೇ?’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು. ನೆಹರೂ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರು, ‘ಜೂನ್ ಎರಡು ಹಾಗೂ ಮೂರರಂದು ಕಾಂಗ್ರೆಸ್ ಪ್ರಮುಖ ನಾಯಕರೆಲ್ಲ ಸೇರಿ ಚರ್ಚೆ ಮಾಡಿ, ಈ ರಾಜ್ಯವನ್ನು ಯಾವ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಬೇಕು ಎಂದು ತೀರ್ಮಾನಿಸುತ್ತೇವೆ. ನಮ್ಮ ಸರ್ಕಾರ ಬಂದಾಗ ಈ ನಿರ್ಧಾರಗಳನ್ನೂ ವಾಪಸ್ ಪಡೆಯುತ್ತೇವೆ’ ಎಂದರು.

ನೆಹರೂ ಅವರು ವಿಜ್ಞಾನ ಮತ್ತು ತಂತ್ರಜ್ಞಾನ, ಪ್ರಜಾತಂತ್ರದ ಆಧಾರದಲ್ಲಿ ದೇಶವನ್ನು ಕಟ್ಟಿ ನಿಲ್ಲಿಸಿದ್ದರು. ಈಗಿನ ಪ್ರಧಾನಿ ನರೇಂದ್ರ ಮೋದಿ ಅವರಿಗೆ ವೈಜ್ಞಾನಿಕ ಮನೋಧರ್ಮ ಎಂದರೆ ಏನು ಎನ್ನುವುದೇ ಗೊತ್ತಿಲ್ಲ. ಈ ಕ್ಷೇತ್ರಗಳಲ್ಲಿನ ವೈಫಲ್ಯ ಮುಚ್ಚಿಕೊಳ್ಳಲು ಧರ್ಮ ಮತ್ತು ಜಾತಿ ಸಂಘರ್ಷಗಳ ಬಗ್ಗೆಯೇ ಮಾತನಾಡುತ್ತಾ ದೇಶದ ದಾರಿ ತಪ್ಪಿಸುತ್ತಾರೆ ಎಂದು ಟೀಕಿಸಿದರು.

> **ನೆಹರೂ– ಗಾಂಧಿ ಪರಿವಾರದ ಓಲೈಸದಿದ್ದರೆ ಸಿದ್ದರಾಮಯ್ಯ ಅವರಿಗೆ ನೆಲೆಯೇ ಇಲ್ಲ. ದೇಶದಲ್ಲಿ ವಂಶಪಾರಂಪರ್ಯ ರಾಜಕಾರಣಕ್ಕೆ ಬೀಜ ಬಿತ್ತಿದವರೇ ನೆಹರೂ**
> **ಸಿ.ಟಿ.ರವಿ,** ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

> **ನಾವು ಯಾವತ್ತೂ ನೆಹರೂ ಅವರನ್ನು ಮೋದಿ ಅವರಿಗೆ ತುಲನೆ ಮಾಡಿಲ್ಲ. ಆದರೆ ರಾಹುಲ್ ಅವರನ್ನು ಮೆಚ್ಚಿಸಲು ಸಿದ್ದರಾಮಯ್ಯ ಹಾಗೆ ಮಾತನಾಡುತ್ತಿದ್ದಾರೆ**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

> **ಸೋನಿಯಾ ಗಾಂಧಿ ಸೆರಗು ಹಿಡಿದುಕೊಂಡು ಓಡಾಡುತ್ತಿರುವ ಸಿದ್ದರಾಮಯ್ಯ ಅವರಿಗೆ ಆರ್‌ಎಸ್‌ಎಸ್, ಮೋದಿ ಅವರನ್ನು ಟೀಕಿಸುವ ನೈತಿಕತೆ ಇಲ್ಲ**
> **ಕೆ.ಎಸ್. ಈಶ್ವರಪ್ಪ,** ಶಾಸಕ

ಕೋಮುವಾದಿ ಬಿಜೆಪಿಯೇ ಅಪಾಯಕಾರಿ: ಎಚ್‌ಡಿಕೆ

ಬೆಂಗಳೂರು: ‘ದೇಶಕ್ಕೆ ಅಪಾಯ ಇರುವುದು ಕುಟುಂಬವಾದಿ ಪಕ್ಷಗಳಿಂದಲ್ಲ, ಬಿಜೆಪಿಯಂಥ ಕೋಮುವಾದಿ ಪಕ್ಷದಿಂದ. ಭಾವನಾತ್ಮಕವಾಗಿ ಜನರನ್ನು ಜಗಳಕ್ಕೆ ಹಚ್ಚಿ ಅಧಿಕಾರ ಹಿಡಿಯುವ ಪರಿಪಾಟ ಪ್ರಜಾಪ್ರಭುತ್ವದ ನಿಜವಾದ ದೊಡ್ಡ ಶತ್ರು. ಸಂವಿಧಾನಕ್ಕೆ ಗಂಡಾಂತರಕಾರಿ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

‘ಕುಟುಂಬ ಆಧರಿತ ಪಕ್ಷಗಳು ದೇಶ ಮತ್ತು ಯುವಜನರ ಪಾಲಿಗೆ ದೊಡ್ಡ ಶತ್ರು’ ಎಂಬ ಪ್ರಧಾನಿ ನರೇಂದ್ರ ಮೋದಿ ಹೇಳಿಕೆಗೆ ಪ್ರತಿಕ್ರಿಯಿಸಿ ಅವರು ಸರಣಿ ಟ್ವೀಟ್ ಮಾಡಿದ್ದಾರೆ.

ನಿತ್ಯವೂ ಕುಟುಂಬ ರಾಜಕಾರಣ-ಭ್ರಷ್ಟಾಚಾರದ ಬಗ್ಗೆ ಹೇಳುವ ಅವರ ಪಕ್ಷವೇ ‘ವಂಶವೃಕ್ಷದ ಗೊಂಡಾರಣ್ಯ ಮತ್ತು ಭ್ರಷ್ಟಾಚಾರ’ ಕೂಪದಲ್ಲಿ ಮುಳುಗಿದೆ. ಈ ಬಗ್ಗೆ ಅವರೇಕೆ ದಿವ್ಯಮೌನ ವಹಿಸುತ್ತಾರೆ? ಕರ್ನಾಟಕದಿಂದ ವಿಂಧ್ಯ ಪರ್ವತದ ಆಚೆಗೂ ಬಿಜೆಪಿಗರ ಕುಟುಂಬಗಳ ಕುಲಕಸುಬು ರಾಜಕೀಯ, ಭ್ರಷ್ಟಾಚಾರವು ಅವರ ನಿತ್ಯದ ಆಚಾರ ಆಗಿದೆ ಎಂದು ಕುಟುಕಿದ್ದಾರೆ.

ದೇಶದಲ್ಲಿ ಕಾಂಗ್ರೆಸ್ ನೆಲಕಚ್ಚಿದ ಮೇಲೆ ಬಿಜೆಪಿಗೆ ಪ್ರತಿರಾಜ್ಯದಲ್ಲಿ ರಾಜಕೀಯ ವೈರಿಗಳೆಂದರೆ ಪ್ರಾದೇಶಿಕ ಪಕ್ಷಗಳೇ. ಕುಟುಂಬ ಪಕ್ಷಗಳ ಟೀಕೆ ನೆಪವಷ್ಟೇ. ಬಲಿಷ್ಠ ಪಕ್ಷಗಳನ್ನು ಮುಗಿಸಲು ಬಿಜೆಪಿ ಏನೆಲ್ಲ ಅಡ್ಡದಾರಿ ಹಿಡಿಯಿತು ಎನ್ನುವುದು ಗುಟ್ಟೇನಲ್ಲ. ಕುಟುಂಬ ರಾಜಕಾರಣದ ನೆಪವೊಡ್ಡಿ ಪ್ರಾದೇಶಿಕ ಪಕ್ಷಗಳನ್ನು ಮುಗಿಸುವ ಮೋದಿಯವರ ತಂತ್ರ ಫಲಿಸದು ಎಂದೂ ಹೇಳಿದ್ದಾರೆ.

ಮುಖ್ಯಮಂತ್ರಿ ಸ್ಥಾನವನ್ನು ಕರ್ನಾಟಕದಲ್ಲಿ ಮಾರಾಟಕ್ಕೆ ಇಟ್ಟಿದ್ದು ಯಾರು? ಕುಟುಂಬ ರಾಜಕಾರಣದ ಪಕ್ಷವೋ? ಬಿಜೆಪಿಯೋ? ‘₹ 2,500 ಕೋಟಿ ಕೊಡಿ, ಸಿಎಂ ಮಾಡುತ್ತೇವೆ’ ಎಂದು ಹೇಳಿದ ಪಾರ್ಟಿ ಬಿಜೆಪಿ. ಇದನ್ನು ಸ್ವತಃ ಬಿಜೆಪಿ ಶಾಸಕರೇ ಹೇಳಿದ್ದಾರೆ! ಆ ಶಾಸಕರ ಮೇಲೆ ಶಿಸ್ತುಕ್ರಮ ಜರುಗಿಸುವುದಿರಲಿ; ನೋಟೀಸನ್ನೂ ಕೊಡಲಿಲ್ಲ. ಈ ಘನಘೋರ ಆರೋಪದ ಬಗ್ಗೆಯೂ ಅವರದ್ದು ಮುಂದುವರಿದ ಮೌನ! ಅಲ್ಲಿಗೆ ಶಾಸಕರ ಹೇಳಿಕೆ ಸತ್ಯ ಎಂದಾಯಿತಲ್ಲ’ ಎಂದು ಕುಮಾರಸ್ವಾಮಿ ವ್ಯಂಗ್ಯವಾಡಿದ್ದಾರೆ.

‘ಆಪರೇಷನ್ ಕಮಲದ ರಾಷ್ಟ್ರೀಕರಣ’: ‘ಆಪರೇಷನ್ ಕಮಲವನ್ನೇ ರಾಷ್ಟ್ರೀಕರಣ’ ಮಾಡಿದ ಕಿರಾತಕ ರಾಜಕಾರಣಕ್ಕೆ ಮೌನಸಮ್ಮತಿ ತೋರಿದವರು ಮೋದಿ ಅವರಲ್ಲವೇ? ಜನಾದೇಶದಂತೆ ರಚನೆಯಾಗಿದ್ದ ಮಧ್ಯಪ್ರದೇಶದ ಸರ್ಕಾರವನ್ನು ಕೆಡವಿದ್ದು ಇವರ ಪಕ್ಷವೇ ಅಲ್ಲವೆ’ ಎಂದು ಪ್ರಶ್ನಿಸಿದ್ದಾರೆ.

‘ಕರ್ನಾಟಕದಲ್ಲಿ ಎರಡು ಸಲ ಬಿಜೆಪಿ ಸರ್ಕಾರ ಬಂದಿದ್ದು ಹೇಗೆ? ಈ ನೀತಿಹೀನ ಸರ್ಕಾರಕ್ಕೆ ಅಧಿಕೃತ ಮುದ್ರೆ ಒತ್ತಿದ್ದು ಸುಳ್ಳಾ?’ ‘ಈ ಬಗ್ಗೆ ಮೋದಿ ಅವರ ಮನ್ ಕೀ ಬಾತ್ ಮೌನವಾಗಿದೆ! ಏಕೆ?’ ಎಂದಿದ್ದಾರೆ.

ಪರಿಷತ್ತಿಗೆ 7 ಅಭ್ಯರ್ಥಿಗಳ ಅವಿರೋಧ ಆಯ್ಕೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆಯಬೇಕಿದ್ದ ಚುನಾವಣೆಗೆ ನಾಮಪತ್ರ ಸಲ್ಲಿಸಿರುವ ಏಳು ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯೂ ಆದ ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಶುಕ್ರವಾರ ಪ್ರಕಟಿಸಿದರು.

ಬಿಜೆಪಿಯ ಲಕ್ಷ್ಮಣ ಸವದಿ, ಕೇಶವ ಪ್ರಸಾದ್, ಛಲವಾದಿ ನಾರಾಯಣ ಸ್ವಾಮಿ, ಹೇಮಲತಾ ನಾಯಕ್, ಕಾಂಗ್ರೆಸ್‌ನ ಕೆ.ಅಬ್ದುಲ್ ಜಬ್ಬಾರ್, ಎಂ.ನಾಗರಾಜು ಯಾದವ್, ಜೆಡಿಎಸ್‌ನ ಟಿ.ಎ.ಶರವಣ ಅವರು ಆಯ್ಕೆಯಾದವರು. ಈ ಸ್ಥಾನಗಳಿಗೆ ಜೂನ್ 3ರಂದು ಚುನಾವಣೆ ನಡೆಯಬೇಕಿತ್ತು. ಫಲಿತಾಂಶ ಪ್ರಕಟಿಸಿದ ವಿಶಾಲಾಕ್ಷಿ ಅವರು, ಪ್ರಮಾಣಪತ್ರವನ್ನು ಅಭ್ಯರ್ಥಿಗಳಿಗೆ ವಿತರಿಸಿದರು.

ಸಿಬಿಎಸ್‌ಇಗೆ ಪಥ್ಯ, ರಾಜ್ಯಕ್ಕೆ ಅಪಥ್ಯ!

ಒಂದನೇ ಪುಟದಿಂದ

ಸಾರಾ ಅಬೂಬಕ್ಕರ್ ಅವರ ‘ಯುದ್ಧ’ ಮತ್ತು ಎ.ಎನ್. ಮೂರ್ತಿರಾಯರ ‘ವ್ಯಾಘ್ರಗೀತೆ’, ಪಿ.ಲಂಕೇಶ್ ಅವರ ‘ಮೃಗ ಮತ್ತು ಸುಂದರಿ’, ಜಿ.ರಾಮಕೃಷ್ಣ ಅವರ ‘ಭಗತ್ ಸಿಂಗ್’ ಹಾಗೂ ಸ್ವಾಮಿ ವಿವೇಕಾನಂದರ ಚಿಂತನೆಗಳು ಕುರಿತಾದ ಪಾಠಗಳನ್ನು ಸಿಬಿಎಸ್‌ಇ ಪಠ್ಯದಲ್ಲಿ ಅಳವಡಿಸಲಾಗಿದೆ. ಈ ಎಲ್ಲ ಪಠ್ಯಗಳನ್ನು ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಸಮಿತಿ ಕೈಬಿಟ್ಟಿದೆ.

9ನೇ ತರಗತಿ ಪಠ್ಯದಲ್ಲೂ ಇದೇ ರೀತಿಯಾಗಿದೆ. ರಾಜ್ಯ ಸರ್ಕಾರ ಕೈಬಿಟ್ಟಿರುವ ವಿಷಯಗಳನ್ನೇ ಕೇಂದ್ರದ ಪಠ್ಯಗಳಲ್ಲಿ ಅಳವಡಿಸಲಾಗಿದೆ. ಬರಗೂರು ರಾಮಚಂದ್ರಪ್ಪ ಸಮಿತಿಯ ಪರಿಷ್ಕರಿಸಿದ್ದ ಪಠ್ಯವನ್ನೇ ಅಧ್ಯಯನಕ್ಕೆ ಸ್ವೀಕರಿಸಲಾಗಿದೆ.

> **ನಿಜವಾದ ಚರಿತ್ರೆಯನ್ನು ದೇಶದ ದುಡಿಯುವ ವರ್ಗಗಳು ಮತ್ತು ದ್ರಾವಿಡರು ಅರಿತರೆ ಏನಾಗಲಿದೆ ಎಂದು ಆರೆಸ್ಸೆಸ್‌ನವರಿಗೆ ಗೊತ್ತಿದೆ. ಹಾಗಾಗಿಯೇ ಇತಿಹಾಸವನ್ನು ತಿರುಚುತ್ತಾರೆ.**
> **ಸಿದ್ದರಾಮಯ್ಯ,** ವಿರೋಧ ಪಕ್ಷದ ನಾಯಕ

ಮುಖ್ಯವಾಗಿ ಗಾಂಧಿವಾದಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ‘ಕನ್ನಡ ಮೌಲ್ವಿ’ ಅಧ್ಯಾಯವನ್ನೇ ರೋಹಿತ್ ಚಕ್ರತೀರ್ಥ ಸಮಿತಿ ಕೈಬಿಟ್ಟಿದೆ. ಆದರೆ, ಇದೇ ಅಧ್ಯಾಯವನ್ನು ಸಿಬಿಎಸ್‌ಇ ಪಠ್ಯದಲ್ಲಿ ಅಳವಡಿಸಲಾಗಿದೆ.

ರೋಹಿತ್ ಚಕ್ರತೀರ್ಥ ಸಮಿತಿ ಕೈಬಿಟ್ಟಿರುವ ಅರವಿಂದ ಮಾಲಗತ್ತಿ ಅವರ ‘ಮರಳಿ ಮನೆಗೆ’ ಅಧ್ಯಾಯ ಹಾಗೂ ಪಠ್ಯ ಪೂರಕ ಅಧ್ಯಯನ ವಿಭಾಗದಲ್ಲಿದ್ದ ಕೆ.ನೀಲಾ ಅವರ ‘ರಂಜಾನ್ ಸುರಕುಂಬಾ’ ಪಠ್ಯ ಕೂಡಾ ಸಿಬಿಎಸ್‌ಇ ಪಠ್ಯಕ್ರಮದಲ್ಲಿದೆ.

> **ರೋಹಿತ್ ಚಕ್ರತೀರ್ಥ ನಮ್ಮ ಕನ್ನಡದ ಬಾವುಟವನ್ನು ಒಳ ಉಡುಪಿಗೆ ಹೋಲಿಕೆ ಮಾಡಿ ಅವಹೇಳನ ಮಾಡಿದ. ಆತನಿಗೆ ಪಠ್ಯಪುಸ್ತಕ ಪರಿಷ್ಕರಿಸುವ ಹೊಣೆಯನ್ನು ಸರ್ಕಾರ ನೀಡಿತು.**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ವಿಧಾನವೇ ಗೊತ್ತಿಲ್ಲ: ‘ಈಗಿರುವ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಗೆ ಯಾವುದೇ ಉದ್ದೇಶವೂ ಇಲ್ಲ, ವಿಧಾನವೂ ಇಲ್ಲ, ಚೌಕಟ್ಟು ಸಹ ಇಲ್ಲ. ಸಮಿತಿಯು ಸಮರ್ಪಕವಾದ ವಿಧಾನ ಅನುಸರಿಸಿಲ್ಲ’ ಎಂದು ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಅಭಿಪ್ರಾಯಪಟ್ಟಿದ್ದಾರೆ.

9ನೇ ತರಗತಿ ಪಠ್ಯದಲ್ಲಿ ರೋಹಿತ್ ಚಕ್ರತೀರ್ಥ ಸಮಿತಿ ಕೈಬಿಟ್ಟಿರುವ ಅಧ್ಯಾಯಗಳು

- ಕನ್ನಡ ಮೌಲ್ವಿ -ಗೊರೂರು ಸ್ವಾಮಿ ಅಯ್ಯಂಗಾರ್
- ಧರ್ಮಸಮದೃಷ್ಟಿ -ವಿಜಯನಗರ ಶಾಸನ
- ಊರುಭಂಗ -ಎಲ್. ಬಸವರಾಜು
- ಮರಳಿ ಮನೆಗೆ - ಅರವಿಂದ ಮಾಲಗತ್ತಿ (ಪದ್ಯ)
- ರಂಜಾನ್ ಸುರಕುಂಬಾ -ಕೆ. ನೀಲಾ (ಪಠ್ಯಪೂರಕ ಅಧ್ಯಯನ)

ಸಿಬಿಎಸ್‌ಇ ಪಠ್ಯದಲ್ಲಿ ಅಳವಡಿಸಿರುವ ಅಧ್ಯಾಯಗಳು

ಗದ್ಯಭಾಗ
- ಕನ್ನಡ ಮೌಲ್ವಿ -ಗೊರೂರು ರಾಮಸ್ವಾಮಿ ಅಯ್ಯಂಗಾರ್
- ಬೆಡಗಿನ ತಾಣ ಜಯಪುರ -ಶಿವರಾಮ ಕಾರಂತ
- ಆದರ್ಶ ಶಿಕ್ಷಕ ಸರ್ವಪಲ್ಲಿ ರಾಧಾಕೃಷ್ಣನ್ -ಸಮಿತಿ ರಚನೆ
- ಜನಪದ ಕಲೆಗಳ ವೈಭವ -ಸಮಿತಿ ರಚನೆ
- ಹರಲೀಲೆ -ಹರಿಹರ

ಪದ್ಯಭಾಗ
- ಹೊಸ ಹಾಡು -ಕಯ್ಯಾರ ಕಿಞ್ಞಣ್ಣ ರೈ
- ಪಾರಿವಾಳಗಳು -ಸು.ರಂ. ಎಕ್ಕುಂಡಿ
- ಮರಳಿ ಮನೆಗೆ -ಅರವಿಂದ ಮಾಲಗತ್ತಿ
- ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲಹು -ರಾಘವಾಂಕ
- ಕನ್ನಡ ನಾಡು ನುಡಿ -ವಿಜಯ, ನಯಸೇನ, ನೇಮಿಚಂದ್ರ, ಮಹಾಲಿಂಗರಂಗ, ಆಂಡಯ್ಯ

ಪಠ್ಯಪೂರಕ ಅಧ್ಯಯನ
- ಗುಣಸಾಗರಿ ಪಂಢರೀಬಾಯಿ -ಜಯಮಾಲಾ
- ರಂಜಾನ್ ಸುರಕುಂಬಾ -ಕೆ. ನೀಲಾ
- ನನ್ನಾಸೆ -ಇಂದುಮತಿ ಲಮಾಣಿ
- ಉರಿದ ಬದುಕು -ಶಾಂತರಸ

ಮುರುಘಾ ಮಠಕ್ಕೆ ನೂತನ ಉತ್ತರಾಧಿಕಾರಿ ನೇಮಕ

ಶರಣರ ಬಳಿಕ ಬಸವಾದಿತ್ಯ ದೇವರು ಸಾರಥ್ಯ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಐತಿಹಾಸಿಕ ಮುರುಘಾ ಮಠಕ್ಕೆ ನೂತನ ಉತ್ತರಾಧಿಕಾರಿಯಾಗಿ ಬಸವಾದಿತ್ಯ ದೇವರು ಅವರನ್ನು ನೇಮಕ ಮಾಡಲಾಯಿತು. ಪೀಠಾಧಿಪತಿ ಡಾ.ಶಿವಮೂರ್ತಿ ಮುರುಘಾ ಶರಣರ ಬಳಿಕ ಬಸವಾದಿತ್ಯ ಸ್ವಾಮೀಜಿ 21ನೇ ಪೀಠಾಧಿಪತಿಯಾಗಲಿದ್ದಾರೆ.

ಮಠದ ಈ ತೀರ್ಮಾನವನ್ನು ಎಲ್ಲ ಸಮಾಜದ ಮುಖಂಡರ ಸಮ್ಮುಖದಲ್ಲಿ ಶುಕ್ರವಾರ ಘೋಷಣೆ ಮಾಡಲಾಯಿತು. ನೂತನ ಉತ್ತರಾಧಿಕಾರಿಗೆ ಮುರುಘಾ ಶರಣರು ರುದ್ರಾಕ್ಷಿ ಮಾಲೆ ತೊಡಿಸಿ, ಪುಷ್ಪ ವೃಷ್ಟಿ ಸುರಿಸಿ ಆಶೀರ್ವದಿಸಿದರು. ಜಂಗಮ ಸಮುದಾಯದ 17 ವರ್ಷದ ಯುವಕ ನೇಮಕಗೊಂಡ ತೀರ್ಮಾನ ಏಕಾಏಕಿ ಹೊರಬಿದ್ದ ಪರಿಗೆ ಅಚ್ಚರಿಯೂ ವ್ಯಕ್ತವಾಯಿತು.

ಚಿತ್ರದುರ್ಗದ ಪಾಳೆಗಾರರ ರಾಜಾಶ್ರಯದಲ್ಲಿ ಬೆಳೆದ ಮುರುಘಾ ಮಠ ಐತಿಹಾಸಿಕ ಪರಂಪರೆ ಹೊಂದಿದೆ. ಮುರಿಗಿ ಶಾಂತವೀರ ಸ್ವಾಮೀಜಿ ಅವರಿಂದ ಈವರೆಗೆ 20 ಯತಿವರ್ಯರು ಮಠವನ್ನು ಮುನ್ನಡೆಸಿದ್ದಾರೆ. ಶಿವಮೂರ್ತಿ ಮುರುಘಾ ಶರಣರು 1991ರಲ್ಲಿ ಉತ್ತರಾಧಿಕಾರಿಯಾಗಿ ನೇಮಕಗೊಂಡು 1994ರಲ್ಲಿ ಶೂನ್ಯಪೀಠ ಅಲಂಕರಿಸಿದ್ದರು.

‘ಇತ್ತೀಚಿನ ದಿನಗಳಲ್ಲಿ ಮಾನವನ ಬದುಕು ಅಸ್ಥಿರವಾಗಿದೆ. ಅನಿರೀಕ್ಷಿತವಾಗಿ ಸಂಭವಿಸುವ ಅಪಘಾತ, ಹೃದಯಾಘಾತದಲ್ಲಿ ಪ್ರಾಣ ಕಳೆದುಕೊಂಡರೆ ಮನೆಯಲ್ಲಿ ಉಳಿದವರು ಜವಾಬ್ದಾರಿ ನಿಭಾಯಿಸುತ್ತಾರೆ. ಆದರೆ, ಮಠ–ಪೀಠಗಳಲ್ಲಿ ಶೂನ್ಯ ನಿರ್ಮಾಣವಾಗಬಾರದು. ಈ ಕಾರಣಕ್ಕೆ ಉತ್ತರಾಧಿಕಾರಿ ನೇಮಕ ಮಾಡಲಾಗಿದೆ’ ಎಂದು ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

> **21ನೇ ಶತಮಾನದ 21ನೇ ಪೀಠಾಧಿಪತಿಯಾಗಿ ನೇಮಕ ಆಗಿರುವುದಕ್ಕೆ ತೃಪ್ತಿ ಇದೆ. ಚಿಕ್ಕ ವಯಸ್ಸಿನಲ್ಲಿ ದೊಡ್ಡ ಜವಾಬ್ದಾರಿ ನೀಡಲಾಗಿದೆ. ಶ್ರದ್ಧೆ, ನಿಷ್ಠೆಯಿಂದ ಮಠದ ಏಳಿಗೆಗೆ ಶ್ರಮಿಸುವೆ.**
> **ಬಸವಾದಿತ್ಯ ದೇವರು**
> ಉತ್ತರಾಧಿಕಾರಿ, ಮುರುಘಾ ಮಠ

‘ಭಕ್ತರ ಹಾಗೂ ಸಮುದಾಯದ ಮುಖಂಡರ ಸಮ್ಮುಖದಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಸಮಕಾಲೀನ ಸಂದರ್ಭದ ಆಕಸ್ಮಿಕ ಹಾಗೂ ಅಷ್ಟೇ ಅರ್ಥಪೂರ್ಣವಾದ ನಿರ್ಧಾರವಾಗಿದೆ. ಬಸವಾದಿತ್ಯ ಅವರನ್ನು ಮರಿಯಾಗಿ ಸ್ವೀಕರಿಸಲಾಗಿದೆ. ಅವರು ಕನ್ನಡ, ಇಂಗ್ಲಿಷ್ ಹಾಗೂ ಹಿಂದಿ ಭಾಷೆ ಬಲ್ಲವರಾಗಿದ್ದಾರೆ. ಉನ್ನತ ಶಿಕ್ಷಣ ನೀಡಿ ಪಟ್ಟ ಕಟ್ಟಲಾಗುವುದು. ಈ ಬಗ್ಗೆ ಮುಂದೆ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

ಚಿತ್ರದುರ್ಗದ ಮುರುಘಾ ಮಠದ ನೂತನ ಉತ್ತರಾಧಿಕಾರಿ ಬಸವಾದಿತ್ಯ ದೇವರು ಅವರಿಗೆ ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರು ಶುಕ್ರವಾರ ವಿಭೂತಿ ಧಾರಣೆ ಮಾಡಿದರು. ಗಾಣಿಗ ಗುರುಪೀಠದ ಬಸವಕುಮಾರ ಸ್ವಾಮೀಜಿ, ಹೆಬ್ಬಾಳು ವಿರಕ್ತಮಠದ ಮಹಂತ ರುದ್ರೇಶ್ವರ ಸ್ವಾಮೀಜಿ, ತಿಳುವಳ್ಳಿಯ ಬಸವನಿರಂಜನ ಸ್ವಾಮೀಜಿ, ಗುರುಮಠಕಲ್‌ನ ಶಾಂತವೀರ ಗುರುಮುರುಘರಾಜೇಂದ್ರ ಸ್ವಾಮೀಜಿ ಇದ್ದಾರೆ.

ದ್ವಿತೀಯ ಪಿಯು ವ್ಯಾಸಂಗ

ಚಿತ್ರದುರ್ಗ ತಾಲ್ಲೂಕಿನ ಹುಲ್ಲೂರು ಗ್ರಾಮದ ಚಂದ್ರಕಲಾ ಮತ್ತು ಶಿವಮೂರ್ತಯ್ಯ ದಂಪತಿಯ ಪುತ್ರ ಬಸವಾದಿತ್ಯ, ದ್ವಿತೀಯ ಪಿಯು ವಿಜ್ಞಾನ ವಿಭಾಗದ ವಿದ್ಯಾರ್ಥಿ. ಒಂದೂವರೆ ವರ್ಷದಿಂದ ಮಠದಲ್ಲೇ ನೆಲೆಸಿದ್ದು, ಗುರುಕುಲ ಶಿಕ್ಷಣವನ್ನೂ ಪಡೆಯುತ್ತಿದ್ದಾರೆ.

ಬಸವಾದಿತ್ಯ ದೇವರು ಅವರ ಪೂರ್ವಾಶ್ರಮದ ತಂದೆ ಶಿವಮೂರ್ತಯ್ಯ, ಕೆನರಾ ಬ್ಯಾಂಕಿನ ಪಿಗ್ಮಿ ಸಂಗ್ರಹಕಾರರಾಗಿದ್ದಾರೆ. ಮಠದ ಉತ್ತರಾಧಿಕಾರಿಯಾಗಿ ಪುತ್ರ ನೇಮಕವಾಗಿರುವುದು ಪೋಷಕರಲ್ಲಿ ಸಂತಸವುಂಟು ಮಾಡಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷಾ ಅಕ್ರಮ: ಬಂಧಿತ ಶಿಕ್ಷಕರು ಅತಂತ್ರ

ಅಂತಿಮ ಹಂತಕ್ಕೆ ಪೊಲೀಸ್ ತನಿಖೆ

• ಆರ್. ಜಿತೇಂದ್ರ

ರಾಮನಗರ: ಮಾಗಡಿಯ ರಂಗನಾಥ ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ಕೇಂದ್ರದಲ್ಲಿ ನಡೆದ ಪರೀಕ್ಷಾ ಅಕ್ರಮದ ತನಿಖೆಯು ಅಂತಿಮ ಹಂತ ತಲುಪಿದ್ದು, ಪೊಲೀಸರು ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಲು ಸಿದ್ಧತೆ ನಡೆಸಿದ್ದಾರೆ.

ಕಳೆದ 4 ದಿನದಿಂದ ನಿರಂತರವಾಗಿ ವಿಚಾರಣೆ ನಡೆದಿದ್ದು, ಶುಕ್ರವಾರ ಆರೋಪಿಗಳಾದ ಕೆಂಪೇಗೌಡ ಪ್ರೌಢಶಾಲೆಯ ಪ್ರಾಚಾರ್ಯ ಶ್ರೀನಿವಾಸ, ಕ್ಲರ್ಕ್ ರಂಗನಾಥ, ರಂಗನಾಥ ಶಾಲೆಯ ಹಿಂದಿ ಶಿಕ್ಷಕ ಕೃಷ್ಣಮೂರ್ತಿ ಅವರನ್ನು ಕರೆದೊಯ್ದು ಮಾಗಡಿ ಠಾಣೆ ಪೊಲೀಸರು ಸ್ಥಳ ಮಹಜರು ನಡೆಸಿದರು. ರಂಗನಾಥ ಪ್ರೌಢಶಾಲೆಗೆ ತೆರಳಿ, ಅಲ್ಲಿ ಪರೀಕ್ಷಾ ಅಕ್ರಮಕ್ಕೆ ಬಳಸಿದ್ದ ಪ್ರಶ್ನೆಪತ್ರಿಕೆಗಳ ಜೆರಾಕ್ಸ್ ಪ್ರತಿ ಪಡೆದರು. ಈಗಾಗಲೇ, ಏಳು ಮಂದಿ ನ್ಯಾಯಾಂಗ ಬಂಧನದಲ್ಲಿದ್ದು, ಉಳಿದ ಮೂವರನ್ನೂ ಶುಕ್ರವಾರ ಸಂಜೆ ನ್ಯಾಯಾಂಗದ ವಶಕ್ಕೆ ನೀಡಲಾಯಿತು.

ಪ್ರಮುಖ ಆರೋಪಿಗಳು, ಕೆಲವು ವಿದ್ಯಾರ್ಥಿಗಳು ಮತ್ತು ಪರೀಕ್ಷಾ ಸಿಬ್ಬಂದಿಯನ್ನು ಎದುರು ಬದುರಾಗಿ ಕೂರಿಸಿ ವಿಚಾರಣೆ ನಡೆಸಲಾಗಿದೆ. ಆದರೆ, ಹಣದ ವಿಚಾರ ಎಲ್ಲಿಯೂ ಪ್ರಸ್ತಾವ ಆಗಿಲ್ಲ. ಮಾಗಡಿಯ ಉಳಿದ ಮೂರು ಪರೀಕ್ಷಾ ಕೇಂದ್ರಗಳೂ ಸೇರಿದಂತೆ ಜಿಲ್ಲೆಯ ಇತರ ಕಡೆಗಳಲ್ಲಿ ಪರೀಕ್ಷಾ ಅಕ್ರಮ ನಡೆದಿರುವ ಬಗ್ಗೆ ಸಾಕ್ಷ್ಯ ಲಭ್ಯವಾಗಿಲ್ಲ. ಹೀಗಾಗಿ, ತನಿಖೆ ಪೂರ್ಣಗೊಳಿಸಿ ಆರೋಪ ಪಟ್ಟಿ ಸಲ್ಲಿಸಲು ಪೊಲೀಸ್ ಇಲಾಖೆ ತೀರ್ಮಾನಿಸಿದೆ ಎಂದು ತಿಳಿದು ಬಂದಿದೆ.

ಶಿಕ್ಷಕರು ಅತಂತ್ರ: ಪ್ರಕರಣದಲ್ಲಿ ಐವರು ವಿಷಯ ತಜ್ಞರೂ ಸೇರಿದಂತೆ ಒಟ್ಟು ಏಳು ಶಿಕ್ಷಕರು ಬಂಧಿತರಾಗಿದ್ದಾರೆ. ಪರೀಕ್ಷೆ ಆರಂಭಕ್ಕೂ ಮುನ್ನವೇ ಪ್ರಶ್ನೆಪತ್ರಿಕೆ ಪಡೆದು, ಅದಕ್ಕೆ ಉತ್ತರ ಬರೆದುಕೊಡುವ ಕೆಲಸವನ್ನು ಈ ಶಿಕ್ಷಕರು ಮಾಡುತ್ತಿದ್ದರು ಎನ್ನಲಾಗಿದೆ. ಕೇವಲ ಒಂದು ಗಂಟೆ ಅವಧಿಯಲ್ಲೇ ಇದೆಲ್ಲ ನಡೆದಿದೆ. ಆದರೆ ಇದಕ್ಕೆ ಪ್ರತಿಫಲವಾಗಿ ಯಾವುದೇ ಸ್ವರೂಪದಲ್ಲಿ ‘ಋಣ ಸಂದಾಯ’ ಆಗಿರುವ ಕುರಿತು ಪೊಲೀಸರಿಗೆ ಸಾಕ್ಷ್ಯಗಳು ಸಿಕ್ಕಿಲ್ಲ. ಒಂದೊಮ್ಮೆ ಆರೋಪ ಸಾಬೀತಾದಲ್ಲಿ ಈ ಶಿಕ್ಷಕರೆಲ್ಲ ಉದ್ಯೋಗ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ.

ಶಿಕ್ಷಣ ಇಲಾಖೆ ಅಂಗಳಕ್ಕೆ ಚೆಂಡು

ಪರೀಕ್ಷಾ ಅಕ್ರಮದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಅಧಿಕಾರಿಗಳ ಪಾತ್ರದ ಕುರಿತು ಪೊಲೀಸರು ಗುಟ್ಟು ಬಿಟ್ಟುಕೊಟ್ಟಿಲ್ಲ. ಮಾಗಡಿ ಕ್ಷೇತ್ರ ಶಿಕ್ಷಣಾಧಿಕಾರಿ ಯತಿಕುಮಾರ್ ಸೇರಿದಂತೆ ಹಲವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಆದರೆ, ಯಾರ ಮೇಲೂ ಪ್ರಕರಣ ದಾಖಲಿಸಿಲ್ಲ. ಪ್ರಕರಣದಲ್ಲಿ ಅಧಿಕಾರಿಗಳ ಪಾತ್ರ ಕುರಿತು ಶಿಕ್ಷಣ ಸಚಿವರು, ಇಲಾಖೆ ಆಯುಕ್ತರಿಗೆ ಮಾಹಿತಿ ರವಾನೆ ಆಗಿದೆ.

ಜಾಮೀನು ಅರ್ಜಿ ತಿರಸ್ಕೃತ

ಎಸ್ಸೆಸ್ಸೆಲ್ಸಿ ಪರೀಕ್ಷೆ ಅಕ್ರಮ ಪ್ರಕರಣದ ಹತ್ತು ಆರೋಪಿಗಳು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಮಾಗಡಿಯ ಜೆಎಂಎಫ್ ನ್ಯಾಯಾಲಯವು ತಿರಸ್ಕರಿಸಿದೆ. ಆರೋಪಿಗಳ ಪರ ವಕೀಲರು ಶುಕ್ರವಾರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಜಾಮೀನು ನೀಡುವಂತೆ ಮನವಿ ಮಾಡಿದರು. ವಿಚಾರಣೆ ನಡೆಸಿದ ಕಿರಿಯ ಶ್ರೇಣಿ ನ್ಯಾಯಾಧೀಶೆ ಎಸ್.ಸಿ. ನಳಿನಾ ಜಾಮೀನು ಅರ್ಜಿಯನ್ನು ವಜಾ ಮಾಡಿ ಆದೇಶಿಸಿದರು. ಈ ಎಲ್ಲಾ ಆರೋಪಿಗಳಿಗೆ 14 ದಿನ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

> **ಎಸ್ಸೆಸ್ಸೆಲ್ಸಿ ಪರೀಕ್ಷೆ ಅಕ್ರಮ ಪ್ರಕರಣದ ತನಿಖೆ ಅಂತಿಮ ಹಂತ ತಲುಪಿದೆ. ನಂತರದಲ್ಲಿ ಚಾರ್ಜ್‌ಶೀಟ್ ಸಿದ್ಧಪಡಿಸಿ ನ್ಯಾಯಾಲಯಕ್ಕೆ ಸಲ್ಲಿಸಲಿದ್ದೇವೆ**
> **ಕೆ. ಸಂತೋಷ್ ಬಾಬು,**
> ಎಸ್‌.ಪಿ, ರಾಮನಗರ

ಪೊಲೀಸರ ಆಸಕ್ತಿಯಿಂದ ಪ್ರಕರಣ ಬಯಲು

ಮೇ 19ರಂದು ಮಾಗಡಿ ಪೊಲೀಸ್ ಠಾಣೆಗೆ ದೂರೊಂದು ಸಲ್ಲಿಕೆ ಆಗಿತ್ತು. ಆರೋಪಿಗಳನ್ನು ಬ್ಲ್ಯಾಕ್‌ಮೇಲ್ ಮಾಡಿ, ಹೆಚ್ಚು ಹಣ ಸಿಗದೇ ಹೋದಾಗ ಶಿಕ್ಷಕ ಲೋಕೇಶ್, ದೇವರಾಜು ಎಂಬ ಹೆಸರಿನಲ್ಲಿ ಠಾಣೆಗೆ ಪತ್ರ ಬರೆದಿದ್ದರು.

ಅದರಲ್ಲಿ ಅಕ್ರಮದ ಬಗ್ಗೆ ಮಾಹಿತಿ ಇತ್ತು. ಅದಾಗಲೇ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಕೂಡ ಪ್ರಕಟ ಆಗಿತ್ತು. ಹೀಗಿದ್ದರೂ ನಿರ್ಲಕ್ಷ್ಯ ಮಾಡದ ಪೊಲೀಸರು, ದೂರಿನಲ್ಲಿದ್ದ ವ್ಯಕ್ತಿಯನ್ನು ವಿಚಾರಣೆಗೆ ಒಳಪಡಿಸಿದಾಗ ಸತ್ಯ ಬಯಲಿಗೆ ಬಂದಿತು. ಕೂಡಲೇ ಎಚ್ಚೆತ್ತು ಉಳಿದ ಆರೋಪಿಗಳನ್ನೂ ಅಷ್ಟೇ ತ್ವರಿತವಾಗಿ ವಶಕ್ಕೆ ಪಡೆದಿದ್ದರು. ಯಾರನ್ನೂ ನಾಪತ್ತೆ ಆಗಲು ಬಿಟ್ಟಿಲ್ಲ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಆತ್ಮವಿಶ್ವಾಸವು ಜಯದ ಮೊದಲ ಗುಟ್ಟು
-ರಾಲ್ಫ್ ವಾಲ್ಡೊ ಎಮರ್ಸನ್

ಪಂಜಾಬ್: ಕಳಂಕಿತ ಸಚಿವನ ವಜಾ ಭ್ರಷ್ಟಾಚಾರದ ವಿರುದ್ಧ ಪ್ರಮುಖ ಹೆಜ್ಜೆ

ಲಂಚದ ಆರೋಪದ ಹಿನ್ನೆಲೆಯಲ್ಲಿ ಆರೋಗ್ಯ ಸಚಿವ ವಿಜಯ್ ಸಿಂಗ್ಲಾ ಅವರನ್ನು ಸಂಪುಟದಿಂದ ವಜಾ ಮಾಡಿರುವ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರ ಕ್ರಮ ಭ್ರಷ್ಟಾಚಾರವನ್ನು ಹತ್ತಿಕ್ಕುವ ದಿಸೆಯಲ್ಲಿ ಮಹತ್ವದ ಹೆಜ್ಜೆ. ಆರೋಗ್ಯ ಇಲಾಖೆಯ ಟೆಂಡರ್‌ಗಳು ಮತ್ತು ಖರೀದಿ ಪ್ರಕ್ರಿಯೆಗಳಲ್ಲಿ ಶೇ 1ರಷ್ಟು ಕಮಿಷನ್‌ಗೆ ಸಚಿವರು ಬೇಡಿಕೆಯಿಟ್ಟಿದ್ದರು ಎನ್ನುವ ಆರೋಪ ಕೇಳಿಬಂದ ತಕ್ಷಣವೇ ಮಾನ್ ಅವರು ತಮ್ಮ ಸಹೋದ್ಯೋಗಿಯನ್ನು ಸಂಪುಟದಿಂದ ಕೈಬಿಟ್ಟಿದ್ದಾರೆ ಹಾಗೂ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ನಿರ್ದೇಶಿಸಿದ್ದಾರೆ. ಎರಡು ತಿಂಗಳ ಹಿಂದೆ ಅಧಿಕಾರ ವಹಿಸಿಕೊಂಡಿರುವ ಸರ್ಕಾರದ ಈ ನಿರ್ಧಾರ ಶ್ಲಾಘನೀಯವಾದುದಷ್ಟೇ ಅಲ್ಲ, ದಿಟ್ಟತನದಿಂದಲೂ ಕೂಡಿದೆ. ಭ್ರಷ್ಟಾಚಾರದ ಬಗ್ಗೆ ರಾಜಕಾರಣಿಗಳು ದಪ್ಪ ಚರ್ಮ ಬೆಳೆಸಿಕೊಂಡಿರುವ ಹಾಗೂ ಜನಪ್ರತಿನಿಧಿಗಳ ಪ್ರಾಮಾಣಿಕತೆ ಬಗ್ಗೆ ಜನಸಾಮಾನ್ಯರಲ್ಲಿ ಅಪನಂಬಿಕೆ ಬೆಳೆಯುತ್ತಿರುವ ಸನ್ನಿವೇಶದಲ್ಲಿ, ಆಮ್ ಆದ್ಮಿ ಪಕ್ಷದ ನೇತೃತ್ವದ ಸರ್ಕಾರದ ನಡೆ ರಾಜಕಾರಣದಲ್ಲಿನ ನೈತಿಕತೆಯ ಬಗ್ಗೆ ಸಮಾಜದಲ್ಲಿ ಮರಳಿ ವಿಶ್ವಾಸ ಮೂಡಿಸುವ ಪ್ರಯತ್ನವಾಗಿದೆ. ಜನರಿಂದ ಚುನಾಯಿತವಾದ ಸರ್ಕಾರವು ಮತದಾರರಿಗೆ ಸದಾ ಉತ್ತರದಾಯಿ ಎಂಬುದನ್ನು ಸಾಬೀತುಪಡಿಸುವ ನಡೆಯೂ ಹೌದು. 'ಎಎಪಿ ಸರ್ಕಾರವು ಭ್ರಷ್ಟಾಚಾರವನ್ನು ಸಹಿಸುವುದಿಲ್ಲ' ಎಂದು ಭಗವಂತ ಮಾನ್ ಹೇಳಿದ್ದಾರೆ. 'ಎಎಪಿ ಸರ್ಕಾರ' ಮಾತ್ರವಲ್ಲ, ಯಾವುದೇ ಜವಾಬ್ದಾರಿಯುತ ಸರ್ಕಾರ ಭ್ರಷ್ಟಾಚಾರವನ್ನು ಸಹಿಸಿಕೊಳ್ಳಬಾರದು. ದುರದೃಷ್ಟವಶಾತ್, ಸಮಕಾಲೀನ ರಾಜಕಾರಣದಲ್ಲಿ ಭ್ರಷ್ಟಾಚಾರದ ವಿರುದ್ಧದ ಮಾತುಗಳೆಲ್ಲವೂ ಭಾಷಣಗಳಿಗಷ್ಟೇ ಸೀಮಿತವಾಗಿವೆ.

ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆದಾರರಿಂದ ಶೇ 40ರಷ್ಟು ಕಮಿಷನ್ ಪಡೆಯಲಾಗುತ್ತಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಬಹಿರಂಗವಾಗಿ ಆರೋಪಿಸಿದ್ದರು. ಬಹುತೇಕ ಸಚಿವರು ಹಾಗೂ ಶಾಸಕರು ಭ್ರಷ್ಟರಾಗಿದ್ದು, ಆ ಬಗ್ಗೆ ತಮ್ಮಲ್ಲಿ ಸಾಕ್ಷ್ಯಗಳಿರುವುದಾಗಿಯೂ ಅವರು ಹೇಳಿದ್ದರು. ಸರ್ಕಾರ ವ್ಯವಸ್ಥೆಯಲ್ಲೇ ಮಿತಿಮೀರಿದ ಲಂಚಗುಳಿತನದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಗುತ್ತಿಗೆದಾರರ ಸಂಘವು ಪತ್ರಮುಖೇನ ದೂರನ್ನೂ ಸಲ್ಲಿಸಿತ್ತು. ಆ ಆರೋಪಗಳನ್ನು ರಾಜ್ಯ ಸರ್ಕಾರವಾಗಲೀ ಕೇಂದ್ರ ಸರ್ಕಾರವಾಗಲೀ ಗಂಭೀರವಾಗಿ ಪರಿಗಣಿಸಿದಂತೆ ಇಲ್ಲ. ಸಿದ್ದರಾಮಯ್ಯ ನೇತೃತ್ವದ ಸರ್ಕಾರವನ್ನು '10 ಪರ್ಸೆಂಟ್ ಸರ್ಕಾರ' ಎಂದು ಪ್ರಧಾನಿಯವರು ಚುನಾವಣೆ ಸಂದರ್ಭದಲ್ಲಿ ಟೀಕಿಸಿದ್ದರು. ಈಗ, ತಮ್ಮದೇ ಪಕ್ಷದ ಸರ್ಕಾರದ ವಿರುದ್ಧ 40 ಪರ್ಸೆಂಟ್ ಲಂಚದ ಆರೋಪ ಕೇಳಿಬಂದಿರುವಾಗ ಅವರು ಮೌನ ವಹಿಸಿರುವುದು ಸರಿಯೇ?

> ಕಳಂಕಿತ ಸಚಿವನ ವಿರುದ್ಧ ಎಎಪಿ ನೇತೃತ್ವದ ಸರ್ಕಾರ ಕೈಗೊಂಡಿರುವ ಕ್ರಮ ಹೊಸ ಭರವಸೆ ಹುಟ್ಟಿಸುವಂತಿದೆ

ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ಹಾಸುಹೊಕ್ಕಾಗಿರುವುದರ ಅಸಹ್ಯಕರ ಉದಾಹರಣೆಗಳು ಆಗಾಗ ವರದಿಯಾಗುತ್ತಲೇ ಇವೆ. ಅಧಿಕಾರಿಗಳ ಮನೆಗಳ ಮೇಲೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ನಡೆಸುವ ದಾಳಿಗಳಲ್ಲಿ ಅಪಾರ ಪ್ರಮಾಣದ ಅಕ್ರಮ ಸಂಪತ್ತು ಪತ್ತೆಯಾಗಿ, ಅದರ ವಿವರಗಳು ಮಾಧ್ಯಮಗಳಲ್ಲಿ ವರ್ಣರಂಜಿತವಾಗಿ ಪ್ರಕಟಗೊಳ್ಳುತ್ತವೆ. ಆದರೆ, ಆ ದಾಳಿಗಳು ಬಿಡಿಬಿಡಿ ಪ್ರಕರಣಗಳಿಗಷ್ಟೇ ಸೀಮಿತವಾಗಿರುವುದರ ಹೊರತು ಭ್ರಷ್ಟ ಅಧಿಕಾರಿಗಳಿಗೆ ಶಿಕ್ಷೆ ಕೊಡಿಸುವ ತಾರ್ಕಿಕ ಹಂತಕ್ಕೆ ಹೋದ ಉದಾಹರಣೆಗಳು ವಿರಳ. ಲಂಚ, ಭ್ರಷ್ಟಾಚಾರ ಎನ್ನುವುದು ಸಮಾಜದಲ್ಲಿನ ಬಹುತೇಕರ ಕಣ್ಣಿಗೆ ಈಗ ಅಪರಾಧವಾಗಿ ಉಳಿದಿಲ್ಲ. 'ತಸ್ಕರತೆ ರಾಜಕೀಯ' ಇಂದಿನ ರಾಜಕಾರಣಿಗಳಿಗೆ ಪಾತಕವಾಗಿ ಕಾಣಿಸುತ್ತಿಲ್ಲ. 'ಭ್ರಷ್ಟಾಚಾರಮುಕ್ತ ಭಾರತ' ಎನ್ನುವ ಆಕರ್ಷಕ ಹೇಳಿಕೆ ಮಾತಿನ ರೂಪದಲ್ಲಷ್ಟೇ ಉಳಿದುಕೊಂಡಿದೆ. ಕರ್ನಾಟಕದಲ್ಲಿನ ಭ್ರಷ್ಟಾಚಾರ ಪ್ರಕರಣ– ಆರೋಪಗಳು ಸಾಲುಸಾಲಾಗಿ ಬೆಳಕಿಗೆ ಬರುತ್ತಿವೆ. ಗುತ್ತಿಗೆದಾರರ ಶೇ 40ರ ಕಮಿಷನ್ ಆರೋಪದ ನಂತರ, ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮತ್ತು ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿರುವುದು ವರದಿಯಾಗಿದೆ. ಸಾರ್ವಜನಿಕ ಜೀವನದಲ್ಲಿ ಮೌಲ್ಯಗಳನ್ನು ರಕ್ಷಿಸಬೇಕಾದ ಪೊಲೀಸ್ ಮತ್ತು ಶಿಕ್ಷಣ ಕ್ಷೇತ್ರಗಳೇ ಕೊಳಕು ಮೆತ್ತಿಕೊಂಡರೆ ಉಳಿದವುಗಳ ಗತಿಯೇನು? ಬಯಲಿಗೆ ಬಂದ ಈ ಪ್ರಕರಣಗಳು ರಾಜಕಾರಣಿಗಳ, ಮುಖ್ಯವಾಗಿ ಸರ್ಕಾರದ ನೇತೃತ್ವ ವಹಿಸಿಕೊಂಡಿರುವವರ ಕಾರ್ಯವೈಖರಿಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟಿಸುವ ಆತಂಕಕಾರಿ ಬೆಳವಣಿಗೆಗಳು. ಇಂಥ ನಿರಾಶಾದಾಯಕ ಪರಿಸ್ಥಿತಿಯಲ್ಲಿ ಪಂಜಾಬ್ ಸರ್ಕಾರವು ಕಳಂಕಿತ ಸಚಿವನ ವಿರುದ್ಧ ಕೈಗೊಂಡಿರುವ ಕ್ರಮ ಹೊಸ ಭರವಸೆ ಹುಟ್ಟಿಸುವಂತಿದೆ. ಕಿಂಚಿತ್ ಭ್ರಷ್ಟಾಚಾರವನ್ನೂ ಸಹಿಸುವುದಿಲ್ಲ ಎನ್ನುವ ಸಂದೇಶವನ್ನು ಸಾರ್ವಜನಿಕರಿಗೆ ರವಾನಿಸುವ ಪ್ರಯತ್ನ ಅದಾಗಿದೆ. ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಪಂಜಾಬ್ ಸರ್ಕಾರದ ನಡವಳಿಕೆ ಉಳಿದ ಸರ್ಕಾರಗಳಿಗೂ ಮಾದರಿಯಾಗಬೇಕು. ಸಾರ್ವಜನಿಕ ವಲಯದಲ್ಲಿ ಕಳೆದುಕೊಂಡಿರುವ ನಂಬಿಕೆ ಮತ್ತು ನೈತಿಕತೆಯನ್ನು ಮರಳಿ ಪಡೆಯುವ ಹೊಣೆಗಾರಿಕೆ ರಾಜಕಾರಣಿಗಳದೇ ಆಗಿದೆ. ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ರಾಜಕಾರಣಿಗಳು ವಿಫಲರಾಗಿ ಸಂವೇದನಾಶೂನ್ಯರಾದಾಗ, ಅವರನ್ನು ಎಚ್ಚರಿಸುವ ಕೆಲಸವನ್ನು ಜನರೇ ಮಾಡಬೇಕು.

ದಿನದ ಟ್ವೀಟ್

ಲಂಚ ನಿರ್ಮೂಲಗೊಳಿಸಿ

ಗುಜರಾತ್ ಸರ್ಕಾರದಲ್ಲಿ ಬೃಹತ್ ಪ್ರಮಾಣದಲ್ಲಿ ಭ್ರಷ್ಟಾಚಾರ ಇದೆ. ದೆಹಲಿ ಮತ್ತು ಪಂಜಾಬ್‌ನಲ್ಲಿ ಮಾಡಿರುವಂತೆ ಭ್ರಷ್ಟಾಚಾರವನ್ನು ಕೊನೆಗೊಳಿಸಿದರೆ ಸಾರ್ವಜನಿಕರಿಗೆ ಉಚಿತವಾಗಿ ವಿದ್ಯುತ್ ಪೂರೈಸಲು ಬಹಳಷ್ಟು ಹಣ ಸಿಗುತ್ತದೆ.

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ, ಎಎಪಿ ರಾಷ್ಟ್ರೀಯ ಸಂಚಾಲಕ

ಕಿಡಿನುಡಿ



ಕುಟುಂಬ ಆಧರಿತ ಪಕ್ಷ ದೇಶದ ಶತ್ರು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಎನ್‌ಡಿಎ ಕೂಟದಲ್ಲಿ ಕುಟುಂಬ ಆಧರಿತ ಪಕ್ಷಗಳಿಲ್ಲವೇ? ಅವರ ನಡೆ ಹೇಗಿದೆ ಎಂದರೆ, ಒಂದೆಡೆ ಸಂಸತ್ತು–ಸಂವಿಧಾನಕ್ಕೆ ಶಿರಸಾಷ್ಟಾಂಗ ನಮಸ್ಕಾರ! ಇನ್ನೊಂದೆಡೆ, ಆಪರೇಷನ್ ಕಮಲದ ಮೂಲಕ ಸಂವಿಧಾನದ ಶಿರಚ್ಛೇದ! ಇದೆಂಥಾ ರಾಜಕಾರಣ? ಇದು, ರಾಷ್ಟ್ರೀಯವಾದಿ ಪಕ್ಷದ ಸೋಗಲಾಡಿತನ.

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ , 28-5-1997

• **ಮಹಿಳಾ ಮೀಸಲಾತಿ: ಶರದ್ ವಿರೋಧಕ್ಕೆ ಪಾಸ್ವಾನ್ ಟೀಕೆ**

ವಲ್ಸಾದ್, ಮೇ 27 (ಪಿಟಿಐ)– ಲೋಕಸಭೆ ಹಾಗೂ ರಾಜ್ಯಗಳ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಮಸೂದೆ ಕುರಿತಂತೆ ಜನತಾದಳದ ಕಾರ್ಯಾಧ್ಯಕ್ಷ ಶರದ್ ಯಾದವ್ ಅವರ ನಿಲುವನ್ನು ಕೇಂದ್ರ ರೈಲ್ವೆ ಸಚಿವ ರಾಂ ವಿಲಾಸ್ ಪಾಸ್ವಾನ್ ಅವರು ಕಟುವಾಗಿ ಟೀಕಿಸಿದ್ದಾರೆ.

ನಿನ್ನೆ ವಾಪಿಯಲ್ಲಿ ರೈಲ್ವೆ ಮೇಲ್ಸೇತುವೆ ಉದ್ಘಾಟಿಸಿದ ಸಚಿವರು ಸುದ್ದಿಗಾರರ ಜೊತೆ ಮಾತನಾಡುತ್ತ, 'ಇತರ ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ಮಹಿಳೆಯರಿಗೂ ಮೀಸಲಾತಿ ನೀಡಬೇಕು ಎಂಬ ಯಾದವ್ ಅವರ ಬೇಡಿಕೆ ಈ ಮಸೂದೆ ಕುರಿತ ಬದ್ಧತೆ ಕಡಿಮೆಯಾಗುವುದನ್ನು ಸೂಚಿಸುವುದು' ಎಂದು ಹೇಳಿದರು.

ಆದರೆ ಮಸೂದೆಯಲ್ಲಿ ತಿದ್ದುಪಡಿ ಆಗಬೇಕು ಎಂದು ಬೇಡಿಕೆ ಮಂಡಿಸಿದವರು ಮಸೂದೆ ಚರ್ಚೆಗೆ ಬಂದಾಗ ಸರ್ವಾನುಮತದಿಂದ ಅಂಗೀಕರಿಸುವಂತೆ ಮನವಿ ಮಾಡಿದರು.

• **ಶ್ರೀಲಂಕಾಕ್ಕೆ ಸ್ವಾತಂತ್ರ್ಯೋತ್ಸವ ಕ್ರಿಕೆಟ್ ಕಪ್**

ಕಲ್ಕತ್ತ, ಮೇ 27– ಪಾಕಿಸ್ತಾನ ತಂಡವನ್ನು ಎರಡನೇ ಫೈನಲ್‌ನಲ್ಲಿ ನಿರೀಕ್ಷೆಗಿಂತ ಸುಲಭವಾಗಿ 85 ರನ್‌ಗಳಿಂದ ಸೋಲಿಸಿದ ವಿಶ್ವ ಚಾಂಪಿಯನ್ ಶ್ರೀಲಂಕಾ ತಂಡದವರು ಇಂದು ಪೆಪ್ಸಿ ಸ್ವಾತಂತ್ರ್ಯೋತ್ಸವ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಶ್ರೀಲಂಕಾ ಮೊಹಾಲಿಯಲ್ಲಿ ಮೊದಲನೇ ಪಂದ್ಯ ಕೂಡ ಗೆದ್ದ ಕಾರಣ ಉತ್ತಮ ಮೂರು ಪಂದ್ಯಗಳ ಸರಣಿಯ ಕೊನೆಯ ಪಂದ್ಯವನ್ನು ಆಡುವ ಪ್ರಮೇಯವಿಲ್ಲ.

ಸ್ಕೋರು ವಿವರ: ಶ್ರೀಲಂಕಾ: 49.4 ಓವರ್‌ಗಳಲ್ಲಿ 309; ಪಾಕಿಸ್ತಾನ: 43.1 ಓವರ್‌ಗಳಲ್ಲಿ 224.

50 ವರ್ಷಗಳ ಹಿಂದೆ

ಭಾನುವಾರ, 28-5-1972

• **ಪರಭಾರೆ ಮಾಡಿದ ಜಮೀನು ಮತ್ತೆ ತೋಟಿ, ತಳವಾರರಿಗೆ**

ಬೆಂಗಳೂರು, ಮೇ 27– ಸರ್ಕಾರದಿಂದ ಪಡೆದ ಜಮೀನನ್ನು ಪರಭಾರೆ ಮಾಡಿರುವ ತೋಟಿ, ತಳವಾರರಿಗೆ ಮತ್ತೆ ಅವರ ಜಮೀನು ಅವರಿಗೆ ದೊರೆಯುವಂತೆ ಪ್ರಯತ್ನ ಮಾಡಬೇಕೆಂದು ಇಂದು ನಡೆದ ರಾಜ್ಯದ ಮಂತ್ರಿಮಂಡಲದ ಸಭೆ ತೀರ್ಮಾನಿಸಿತು.

ಈ ಉದ್ದೇಶ ಸಾಧನೆಗಾಗಿ ಗ್ರಾಮಾಧಿಕಾರಿಗಳಿಗೆ ಸಂಬಂಧಿಸಿದ ಶಾಸನವನ್ನು ತಿದ್ದುಪಡಿ ಮಾಡಬೇಕೆಂದು ತಾತ್ವಿಕವಾಗಿ ನಿರ್ಧರಿಸಿತು.

• **ಶೀಘ್ರವೇ ಅಮೆರಿಕ ರಷ್ಯಾ ಎರಡನೇ ಸುತ್ತು ಮಾತುಕತೆ**

ಹೆಲ್ಸಿಂಕಿ, ಮೇ 27– ಅಮೆರಿಕ ಮತ್ತು ರಷ್ಯಾಗಳು ಶಸ್ತ್ರಾಸ್ತ್ರ ಮಿತಿ ಕುರಿತ ಮಾತುಕತೆಯ ಎರಡನೇ ಹಂತದ ಸಂಧಾನವನ್ನು ಕೆಲವೇ ತಿಂಗಳಲ್ಲಿ ಆರಂಭಿಸಲಿವೆ. ಮುಂದಿನ ಸುತ್ತು ಮಾತುಕತೆ ವಿಯೆನ್ನಾದಲ್ಲಿ ನಡೆಯುವ ನಿರೀಕ್ಷೆ ಇದೆ.

ಮಾರಕ ಶಸ್ತ್ರಾಸ್ತ್ರ ಮಿತಿ ಕುರಿತ ತಾತ್ಕಾಲಿಕ ಒಪ್ಪಂದವನ್ನು ಸಾಕಷ್ಟು ಪುಷ್ಟಿಯುತವನ್ನಾಗಿ ಮಾಡುವುದೇ ಎರಡನೇ ಹಂತದ ಮುಖ್ಯ ಉದ್ದೇಶ ಎಂದೂ ತಿಳಿದು ಬಂದಿದೆ.

'ಸರ್ವಧರ್ಮ ಸಮಭಾವ' ತತ್ವದ ಪಾಲನೆಯಲ್ಲಿ ಪಕ್ಷಪಾತ ಬೇಡ

ಮತಾಂಧತೆ ಮತ್ತು ಸೆಕ್ಯುಲರಿಸ್ಟರ ಮೌನ

ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ಇಂದು ಕರ್ನಾಟಕ ಸೇರಿದಂತೆ ದೇಶದ ಅನೇಕ ಭಾಗಗಳಲ್ಲಿ ಮುಸ್ಲಿಮರ ವಿರುದ್ಧ ದ್ವೇಷದ ವಿಷವನ್ನು ಪಸರಿಸಲಾಗುತ್ತಿದೆ. ಇದನ್ನು ಪ್ರಧಾನಿ ನರೇಂದ್ರ ಮೋದಿ ಅವರು ನಿಯಂತ್ರಿಸದೇ ಇರುವುದು ವಿಷಾದಕರ ಹಾಗೂ ನಿಂದನೀಯ. ಆದರೆ ಮುಖ್ಯ ಪ್ರಶ್ನೆಯೆಂದರೆ, ಹಿಂದೂ ಸಮಾಜದ ಒಂದು ದೊಡ್ಡ ವರ್ಗವು ಮುಸ್ಲಿಂ ವಿರೋಧಿ ಪ್ರಚಾರದಿಂದ ಪ್ರಭಾವಿತಗೊಂಡಿದ್ದೇಕೆ? ಇದು ಒಮ್ಮೆಲೇ ನಡೆದ ಬದಲಾವಣೆಯಲ್ಲ. ಇದಕ್ಕೆ ಹಲವು ಕಾರಣಗಳಿವೆ. ಇವುಗಳಲ್ಲಿ ಮುಸ್ಲಿಂ ಧರ್ಮಾಂಧತೆಯ ಬಗ್ಗೆ ಸೆಕ್ಯುಲರಿಸ್ಟರ ಮೌನವೂ ಒಂದು ಕಾರಣವಿದ್ದೀತೆ? ಇತ್ತೀಚಿನ ಒಂದು ಘಟನೆ ಇಂತಹ ಪ್ರಶ್ನೆಗೆ ಇಂಬು ನೀಡುತ್ತದೆ.

ಸಿಖ್ ಪಂಥದ ಒಂಬತ್ತನೇ ಗುರುಗಳಾದ ತೇಗ್ ಬಹದ್ದೂರ್ ಅವರ 400ನೇ ಜನ್ಮೋತ್ಸವವನ್ನು ನವದೆಹಲಿಯ ಐತಿಹಾಸಿಕ ಕೆಂಪುಕೋಟೆಯಲ್ಲಿ ಏ. 21ರಂದು ಪ್ರಧಾನಿ ಮೋದಿ ಅವರ ಸಾನ್ನಿಧ್ಯದಲ್ಲಿ ಆಚರಿಸಲಾಯಿತು. 1675ರಲ್ಲಿ ಮೊಘಲ್ ಸಾಮ್ರಾಟ ಔರಂಗಜೇಬ್‌ನ ಆಜ್ಞೆಯ ಮೇರೆಗೆ ತೇಗ್ ಬಹದ್ದೂರ್ ಅವರ ಶಿರಚ್ಛೇದ ಮಾಡಲಾಯಿತು. 'ಇಸ್ಲಾಂ ಧರ್ಮವನ್ನು ಸ್ವೀಕರಿಸು ಇಲ್ಲವೇ ಮೃತ್ಯುವನ್ನು ಎದುರಿಸು' ಎಂದು ಹೇಳಿದಾಗ, ಅವರು ತಮ್ಮ ಪಂಥಕ್ಕಾಗಿ ಹುತಾತ್ಮರಾಗುವುದನ್ನು ಆಯ್ದುಕೊಂಡರು. ಈ ಆಧುನಿಕ ಯುಗದಲ್ಲಿ ಇರಾಕ್ ಮತ್ತಿತರ ರಾಷ್ಟ್ರಗಳಲ್ಲಿ ಇಸ್ಲಾಮಿಕ್ ಸ್ಟೇಟ್ (ಐ.ಎಸ್) ಭಯೋತ್ಪಾದಕ ಸಂಘಟನೆಯು ಈ ರೀತಿ ತಮ್ಮ ವಿರೋಧಿಗಳ ಶಿರಚ್ಛೇದ ನಡೆಸಿದ ಸುದ್ದಿಗಳನ್ನು ನಾವು ಓದಿದ್ದೇವೆ. ಆದರೆ ಮೊಘಲ್ ಇತಿಹಾಸದಲ್ಲಿ ಕೂಡ ಇಂತಹ ದೃಷ್ಟಾಂತಗಳಿವೆ.

1659ರಲ್ಲಿ ಔರಂಗಜೇಬ್ ತನ್ನ ಸಹೋದರ ದಾರಾ ಶಿಕೋನನ್ನು ಅವನ ಭಯಭೀತನಾದ ಮಗನ ಕಣ್ಣೆದುರಿಗೇ ಶಿರಚ್ಛೇದಗೊಳಿಸಿದ. ಇದಕ್ಕೆ ದಾರಾ ತನ್ನ ಸಿಂಹಾಸನಕ್ಕೆ ಪ್ರತಿಸ್ಪರ್ಧಿ ಎಂದು ಔರಂಗಜೇಬ್ ತಿಳಿದಿದ್ದುದೊಂದೇ ಕಾರಣವಾಗಿರಲಿಲ್ಲ. ಧಾರ್ಮಿಕ ಅಸಹಿಷ್ಣುತೆಯೂ ಒಂದು ಪ್ರಮುಖ ಕಾರಣವಾಗಿತ್ತು. ದಾರಾ ಹಿಂದೂ- ಮುಸ್ಲಿಂ ಸೌಹಾರ್ದಕ್ಕಾಗಿ ಪ್ರಯತ್ನಿಸುತ್ತಿದ್ದ ಒಬ್ಬ ಚಿಂತಕನಾಗಿದ್ದ. 'ಮಜಮಾ- ಉಲ್-ಬಹರೈನ್' (ಎರಡು ಸಮುದ್ರಗಳ ಸಂಗಮ) ಎಂಬ ಶೀರ್ಷಿಕೆಯ ತನ್ನ ಪುಸ್ತಕದಲ್ಲಿ ಅವನು ಸೂಫಿಸಂ ಮತ್ತು ಉಪನಿಷತ್‌ಗಳಲ್ಲಿಯ ಸಾಮ್ಯತೆಯನ್ನು ಎತ್ತಿ ತೋರಿಸಿದ್ದ. ಮೂಲಭೂತವಾದಿ ಇಸ್ಲಾಂನಲ್ಲಿ ನಂಬಿಕೆ ಹೊಂದಿದ್ದ ಔರಂಗಜೇಬ್ ಇದರಿಂದ ಕ್ರೋಧಗೊಂಡು ದಾರಾ ಶಿಕೋನಿಗೆ ಮರಣದಂಡನೆ ವಿಧಿಸಿದ. ಔರಂಗಜೇಬ್‌ನ ಅಜ್ಜನಾದ ಸಾಮ್ರಾಟ ಜಹಾಂಗೀರ್ ಸಹ, ಮತೀಯ ಭಾವೈಕ್ಯದ ಪ್ರೋತ್ಸಾಹಕರಾಗಿದ್ದ ಸಿಖ್ ಪಂಥದ ಐದನೇ ಗುರು ಅರ್ಜನದೇವ ಅವರನ್ನು 1606ರಲ್ಲಿ ಚಿತ್ರಹಿಂಸೆ ನೀಡಿ ಕೊಂದುಹಾಕಿದ್ದ.

ಮೋದಿ ಅವರು ತಮ್ಮ ಭಾಷಣದಲ್ಲಿ 'ಔರಂಗಜೇಬ್‌ನಂಥ ಕ್ರೂರ ರಾಜರು ಅನೇಕರ ತಲೆ ಕಡಿದುಹಾಕಿದರೂ ನಮ್ಮ ಜನರ ಧಾರ್ಮಿಕ ವಿಶ್ವಾಸವನ್ನು ಕಡಿದುಹಾಕಲು ಅವರಿಗೆ ಸಾಧ್ಯವಾಗಲಿಲ್ಲ' ಎಂದು ಹೇಳಿದರು. ಈ ಕಾರ್ಯಕ್ರಮದ ನಂತರ, ಬಹುಸಂಖ್ಯೆಯ ಸೆಕ್ಯುಲರ್‌ವಾದಿಗಳು '400 ವರ್ಷಗಳ ಹಿಂದಿನ ಘಟನೆಗಳನ್ನು ಮೋದಿ ಈಗೇಕೆ ಕೆದಕಿ ನೆನಪಿಸುತ್ತಿದ್ದಾರೆ?' ಎಂದು ಟ್ವಿಟರ್ ಮೂಲಕ ಟೀಕಿಸಿದರು. ಗುರು ತೇಗ್ ಬಹದ್ದೂರ್ ಅವರ ಜಯಂತಿ ಉತ್ಸವವನ್ನು ಕೆಂಪುಕೋಟೆಯಲ್ಲಿ ಏರ್ಪಡಿಸಿದುದರ ಹಿಂದೆ ರಾಜಕೀಯ ಉದ್ದೇಶ ಇತ್ತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಸೆಕ್ಯುಲರ್‌ವಾದಿಗಳ ಪ್ರತಿಕ್ರಿಯೆ ನೋಡಿದರೆ, ಇತಿಹಾಸದಲ್ಲಿ ನಡೆದ ಮುಸ್ಲಿಂ ಧರ್ಮಾಂಧತೆಯ ಅನ್ಯಾಯ- ಕ್ರೌರ್ಯಗಳನ್ನು ಅವರು ಬಹುತೇಕ ಅಲ್ಲಗಳೆಯುತ್ತಾರೆ ಅಥವಾ ಈ ಸಂಬಂಧವಾಗಿ ಮೌನ ವಹಿಸುವ ನಿಲುವು ತಳೆಯುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಇದಕ್ಕೆ ಹಲವು ಉದಾಹರಣೆಗಳಿವೆ.

ಮಧ್ಯಯುಗದಲ್ಲಿ ಮುಸ್ಲಿಂ ಧರ್ಮಾಂಧ ರಾಜರು ಹಿಂದೂ ಮಂದಿರ-ವಿಗ್ರಹಗಳನ್ನು ಧ್ವಂಸಗೊಳಿಸಿದ ಘಟನೆಗಳ ಅರಿವು ಸಾಮಾನ್ಯವಾಗಿ ಎಲ್ಲ ಜಾತಿಗಳ ಹಿಂದೂಗಳಲ್ಲಿದೆ. ಆದರೆ ಬಹುತೇಕ ಸೆಕ್ಯುಲರ್‌ವಾದಿಗಳು ಇಂಥ ಪ್ರಸಂಗಗಳನ್ನು ಮುಚ್ಚುಮರೆ ಮಾಡುತ್ತಾರೆ ಇಲ್ಲವೇ ಇವುಗಳ ಹಿಂದೆ ಧಾರ್ಮಿಕ ಉದ್ದೇಶ ಇರಲಿಲ್ಲ ಎಂದು ಹೇಳುತ್ತಾರೆ. ಇದು ಮೋಸದ ಮಾತು. 2001ರಲ್ಲಿ, ಅಂದರೆ ಸೆಟಲೈಟ್ ಟೆಲಿವಿಷನ್ ಯುಗದಲ್ಲಿ, ಅಫ್ಗಾನಿಸ್ತಾನದ ತಾಲಿಬಾನಿಯರು ಜಗತ್ತಿನಲ್ಲೇ ಅತಿ ದೊಡ್ಡದಾದ ಬಾಮಿಯಾನ್ ಬುದ್ಧನ ಮೂರ್ತಿಯನ್ನು ಅದೊಂದು 'ಕಾಫೀರರ ದೇವರು' ಎಂದು ಹೇಳಿ ಧ್ವಂಸಗೊಳಿಸಿದ್ದು ಎಲ್ಲರಿಗೂ ತಿಳಿದಿದೆ. ವಸ್ತುಸ್ಥಿತಿ ಹೀಗಿರುವಾಗ, ಹಲವು ಶತಮಾನಗಳ ಹಿಂದೆ ಮತಾಂಧ ಮುಸ್ಲಿಂ ರಾಜರು ಭಾರತದಲ್ಲಿ ಹೀಗೆ ಮಾಡಲಿಲ್ಲ ಎಂದರೆ ನಂಬಲು ಸಾಧ್ಯವೇ? ಪಾಕಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿ ಇಂದಿಗೂ ಮುಸ್ಲಿಮೇತರರ ಬಲವಂತದ ಮತಾಂತರ ನಡೆಯುತ್ತಿದೆ. ಹೀಗಿರುವಾಗ, ಮಧ್ಯಯುಗದಲ್ಲಿ ಇಂತಹ ಕಾರ್ಯ ನಡೆಯಲಿಲ್ಲ ಎಂಬ ನಿಲುವು ತರ್ಕಹೀನ.

ಇಸ್ಲಾಂ ಹೆಸರಿನಲ್ಲಿ ಹಿಂದೆ ನಡೆದ ಇಂಥ ಹಿಂಸಾತ್ಮಕ ಘಟನೆಗಳಿಗಾಗಿ ಇಂದಿನ ಮುಸ್ಲಿಂ ಬಾಂಧವರನ್ನು ದೂಷಿಸುವುದು, ದ್ವೇಷಿಸುವುದು ನಿಸ್ಸಂಶಯವಾಗಿಯೂ ತಪ್ಪು. ಅದು ಅಪರಾಧ. ಆದರೆ ಇಂಥ ಘಟನೆಗಳನ್ನು ನಿರಾಕರಿಸುವುದೂ ತಪ್ಪಲ್ಲವೇ? ಇತಿಹಾಸದಲ್ಲಿ ನಡೆದ ದೌರ್ಜನ್ಯಗಳು ಜನರ ಸಾಮೂಹಿಕ ಸ್ಮರಣೆಯಲ್ಲಿ ಮನೆಮಾಡಿಕೊಂಡು ಇದ್ದೇ ಇರುತ್ತವೆ. ಅವುಗಳನ್ನು ಹತ್ತಿಕ್ಕಲು ಪ್ರಯತ್ನಿಸಿದರೆ ಪರಿಣಾಮ ಕೆಟ್ಟದ್ದಾಗುತ್ತದೆ. ಪ್ರಾಮಾಣಿಕ ಆತ್ಮವಿಮರ್ಶೆ, ಮುಕ್ತ ಸಂವಾದ ಹಾಗೂ ಸಹಬಾಳ್ವೆಯಿಂದ ಮಾತ್ರ ಸಾಮಾಜಿಕ ಸಾಮರಸ್ಯ ಸಾಧ್ಯ.

ಹಿಂದೂ ಸಮಾಜದಲ್ಲಿನ ಅಸ್ಪೃಶ್ಯತೆ, ಜಾತೀಯತೆಯಂತಹ ಅನ್ಯಾಯಗಳ ವಿರುದ್ಧ ಸೆಕ್ಯುಲರ್‌ವಾದಿಗಳ ಹೋರಾಟ ಉಚಿತವೂ ಹೌದು, ಅವಶ್ಯಕವೂ ಹೌದು. ಆದರೆ ಮುಸ್ಲಿಮರಲ್ಲಿ ಅವಶ್ಯಕವೆನಿಸುವ ಸಾಮಾಜಿಕ ಸುಧಾರಣೆಗಳ ಬಗ್ಗೆ ಅವರು ಹೆಚ್ಚು ಮಾತನಾಡುವುದಿಲ್ಲ. ಈ ಬಗ್ಗೆ ಮುಸ್ಲಿಂ ಚಿಂತಕರು, ನಾಯಕರು ಕೂಡ ಹೆಚ್ಚಾಗಿ ಕಾರ್ಯಪ್ರವೃತ್ತರಾಗುವುದಿಲ್ಲ. ತ್ರಿವಳಿ ತಲಾಕ್ ವಿರುದ್ಧ ಕಾನೂನು ಬೇಕು ಎಂದು ಕೆಲವು ಮುಸ್ಲಿಂ ಮಹಿಳಾ ಸಂಘಟನೆಗಳು ಹೋರಾಡುತ್ತಿದ್ದವು. ಈ ಬೇಡಿಕೆಗೆ ಹಾಗೂ 2019ರಲ್ಲಿ ಮೋದಿ ನೇತೃತ್ವದ ಸರ್ಕಾರವು ಈ ಸಂಬಂಧ ತಂದ ಕಾನೂನಿಗೆ ಸೆಕ್ಯುಲರ್ ಎಂದು ಬಿಂಬಿಸಿಕೊಳ್ಳುತ್ತಿರುವ ಪಕ್ಷಗಳು ಮತ್ತು ಮುಸ್ಲಿಂ ಮುಖಂಡರು ಹೆಚ್ಚು ಬೆಂಬಲ ನೀಡಲಿಲ್ಲ. 1985ರ ಶಾಬಾನು ಪ್ರಕರಣದಲ್ಲಿ ರಾಜೀವ್ ಗಾಂಧಿ ನೇತೃತ್ವದ ಸರ್ಕಾರವು ಮುಸ್ಲಿಂ ಸಂಘಟನೆಗಳ ಪ್ರತಿಭಟನೆಯ ಎದುರು ಶರಣಾದದ್ದನ್ನು (ಲೋಕಸಭೆಯಲ್ಲಿ 415 ಸದಸ್ಯರ ಬೆಂಬಲವಿದ್ದರೂ) ಮರೆಯಲಾಗದು. ಇದರಿಂದಾಗಿ ಕಾಂಗ್ರೆಸ್ ವಿರುದ್ಧ ಬಿಜೆಪಿಯು 'ಮುಸ್ಲಿಂ ತುಷ್ಟೀಕರಣ'ದ ಆಪಾದನೆ ಮಾಡಿ, ಹಿಂದೂ ಸಮಾಜದ ಮಾನಸಿಕತೆಯನ್ನು ತನ್ನ ಪರವಾಗಿ ಬದಲಾಯಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು. ಇಂದು ಬಿಜೆಪಿಯೇ ಹಿಂದೂ ತುಷ್ಟೀಕರಣದ ನೀತಿಯನ್ನು ಯಾವುದೇ ಹಿಂಜರಿಕೆಯಿಲ್ಲದೆ ಅನುಸರಿಸುತ್ತಿದ್ದರೂ ಅದನ್ನು ಹಿಂದೂ ಸಮಾಜ ಪ್ರಖರವಾಗಿ ವಿರೋಧಿಸುತ್ತಿಲ್ಲ ಎಂಬುದು ಶೋಚನೀಯ.

ಇದಕ್ಕೊಂದು ಕಾರಣವೂ ಇದೆ. ಭಾರತದ ಸೆಕ್ಯುಲರ್ ಸಂವಿಧಾನ ಎಲ್ಲ ಧರ್ಮಗಳಿಗೆ ಸಮಾನ ಹಕ್ಕು- ಅಧಿಕಾರಗಳನ್ನು ನೀಡಿದೆ. ಆದರೆ ಮುಸ್ಲಿಂ ಬಹುಸಂಖ್ಯಾತರಾಗಿರುವ ಅನೇಕ ದೇಶಗಳಲ್ಲಿ ಅಲ್ಪಸಂಖ್ಯಾತರಿಗೆ ಇಂಥ ಸಮಾನ ಸಾಂವಿಧಾನಿಕ ರಕ್ಷಣೆಯಿಲ್ಲ. ಇಷ್ಟೇ ಅಲ್ಲ, 'ಸೆಕ್ಯುಲರಿಸಂ ಎಂಬುದು ಇಸ್ಲಾಂ ವಿರೋಧಿ' ಎಂಬ ನಂಬಿಕೆಯೂ ಅಲ್ಲಿ ಗಟ್ಟಿಯಾಗಿ ಬೇರೂರಿದೆ. ತತ್ಪರಿಣಾಮವಾಗಿ 'ಸೆಕ್ಯುಲರಿಸಂ ಎಂಬುದು ಹಿಂದೂ ವಿರೋಧಿ' ಎಂಬ ಅಪಪ್ರಚಾರವನ್ನೂ ಹಿಂದುತ್ವ ಸಂಘಟನೆಗಳು ಈಗ ಮಾಡುತ್ತಿವೆ.

ಸರ್ವಧರ್ಮ ಸಮಭಾವವು ನಮ್ಮ ಸಂಸ್ಕೃತಿಯ ಉಸಿರು ಮತ್ತು ನಮ್ಮ ಸಂವಿಧಾನದ ಪ್ರಾಣತತ್ವ. ಅದನ್ನು ತ್ಯಜಿಸಿದರೆ ಭಾರತದ ರಾಷ್ಟ್ರೀಯ ಏಕತೆ ಹಾಗೂ ಸಾಮಾಜಿಕ ಶಾಂತಿಗೆ ಗಂಡಾಂತರ ಉಂಟಾಗುತ್ತದೆ. ಇಂದು ನಮ್ಮ ದೇಶದ ಮುಸ್ಲಿಂ ಸಮುದಾಯ ಹಿಂದೆಂದೂ ಅನುಭವಿಸದ ಭೇದಭಾವ, ದ್ವೇಷ ಮತ್ತು ಅಸುರಕ್ಷತೆಗೆ ಗುರಿಯಾಗಿದೆ. ದೇಶದ ಆಡಳಿತಾರೂಢ ಪಕ್ಷದಲ್ಲಿ ಸಂವಿಧಾನದ ಕುರಿತು ಬದ್ಧತೆಯ ಅಭಾವ ಇರುವುದು ಮತ್ತು ಬಹುಸಂಖ್ಯಾತ ಹಿಂದೂಗಳಲ್ಲಿ ಸೆಕ್ಯುಲರಿಸಂ ಬಗ್ಗೆ ಅವಿಶ್ವಾಸ ಮೂಡತೊಡಗಿರುವುದು ಇದಕ್ಕೆ ಪ್ರಮುಖ ಕಾರಣಗಳು. ಈ ಅವಿಶ್ವಾಸವನ್ನು ಮೋದಿ ನೇತೃತ್ವದ ಸರ್ಕಾರ ತನ್ನ ರಾಜಕೀಯ ಲಾಭಕ್ಕಾಗಿ ಬೆಳೆಸುತ್ತಿದೆ. ಇದನ್ನು ಸರಿಪಡಿಸಬೇಕಾದರೆ ಸೆಕ್ಯುಲರ್‌ವಾದಿಗಳು ಸತ್ಯನಿಷ್ಠರಾಗಬೇಕು ಹಾಗೂ ತಮ್ಮ ಪಕ್ಷಪಾತತನದ ನಿಲುವನ್ನು ಬಿಟ್ಟುಕೊಟ್ಟು, ಹಿಂದೂ ಮತ್ತು ಮುಸ್ಲಿಂ ಧರ್ಮಾಂಧತೆಗಳ ವಿರುದ್ಧ ಸಮನಾಗಿ ದನಿ ಎತ್ತಬೇಕು.

ಚುರುಮುರಿ

ಪಡಿಪಾಟಲು

• ಸಿ.ಎನ್. ರಾಜು

'ಡ್ಯಾಡೀ, ನಮ್ಮ ಎಸ್ಸೆಸ್ಸೆಲ್ಸಿ ಎಕ್ಸಾಂ ರದ್ದು ಮಾಡಿ, ರೀ-ಎಕ್ಸಾಂ ಮಾಡ್ತಾರಾ?' ಮಗಳು ಆತಂಕದಿಂದ ಕೇಳಿದಳು.

'ಇಲ್ಲವಲ್ಲಾ, ಪರೀಕ್ಷೆ ಮುಗಿದು ರಿಸಲ್ಟ್ ಅನೌನ್ಸ್ ಆಗಿ ನಿನಗೆ ಎಬೋ ನೈಂಟಿ ಪರ್ಸೆಂಟ್ ಬಂದಿದೆ, ಮರು ಪರೀಕ್ಷೆ ಇಲ್ಲ, ಆತಂಕಪಡಬೇಡ...' ಅಂದ ಶಂಕ್ರಿ.

'ಹಾಗಲ್ಲಾ, ಪ್ರತಿ ಪರೀಕ್ಷೆಯಲ್ಲೂ ಬಾಲಕಿಯರೇ ಮೇಲುಗೈ ಸಾಧಿಸುತ್ತಾರೆ, ಪರೀಕ್ಷೆಯಲ್ಲಿ ಅಕ್ರಮ ನಡೆದಿರಬಹುದು, ಮರು ಪರೀಕ್ಷೆ ನಡೆಸಲು ಒತ್ತಾಯಿಸಬೇಕು ಎಂದು ಹುಡುಗರು ಮಾತನಾಡಿಕೊಳ್ತಿದ್ರು...'

'ಬಾಲಕರಿಗೆ ಮಂಪರು ಪರೀಕ್ಷೆ ನಡೆಸಬಹುದೇ ಹೊರತು ಎಸ್ಸೆಸ್ಸೆಲ್ಸಿ ಮರು ಪರೀಕ್ಷೆ ಮಾಡೋದಿಲ್ಲ' ಮಗಳಿಗೆ ಸಮಾಧಾನ ಹೇಳಿ ಕಳಿಸಿದ.

'ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲೂ ಅಕ್ರಮ ನಡೆದಿದೆಯಂತೆ, ಕಾಪಿ ಆರೋಪಿಗಳನ್ನು ಪೊಲೀಸರು ಅರೆಸ್ಟ್ ಮಾಡಿದ್ದಾರೆ ಕಣ್ರೀ' ಎಂದಳು ಸುಮಿ.

'ಹೌದು. ಅಕ್ರಮಗಳನ್ನು ತಡೆಯಲಾಗದಿದ್ದರೆ ಪರೀಕ್ಷೆ ನಡೆಸುವುದರಲ್ಲಿ ಅರ್ಥವಿಲ್ಲ'.

'ಪರೀಕ್ಷಾ ಪದ್ಧತಿಯನ್ನೇ ರದ್ದು ಮಾಡಿಬಿಡಬೇಕು ಕಣ್ರೀ...'

'ವಿದ್ಯಾರ್ಥಿಗಳ ಜ್ಞಾನಮಾಪನ ಮಾಡಲು ಪರೀಕ್ಷೆ ಬೇಕಲ್ವೇ?'

'ಮಂಪರು ಪರೀಕ್ಷೆ ನಡೆಸಿಯೋ, ತಾಂಬೂಲ ಪ್ರಶ್ನೆಯಿಂದಲೋ ವಿದ್ಯಾರ್ಥಿಗಳ ಜ್ಞಾನ ಪರೀಕ್ಷಿಸಿ ಮಾರ್ಕ್ಸ್ ನೀಡುವ ಪದ್ಧತಿ ಜಾರಿಗೆ ತರಬೇಕು'.

'ಪಠ್ಯಪುಸ್ತಕ ಸಿದ್ಧಪಡಿಸುವವರಿಗೂ ಮಂಪರು ಪರೀಕ್ಷೆ ಅಗತ್ಯವಿದೆ ಅನ್ಸುತ್ತೆ. ಪಾಠದ ಆಯ್ಕೆಯೇ ಪಡಿಪಾಟಲಾಗಿ ನಗೆಪಾಟಲಾಗಿದೆ'.

'ಅದು ಪಂಥ ವಿವಾದ. ಮಕ್ಕಳು ಎಡ ಪಂಥದ ಪಾಠ ಓದಬೇಕೊ, ಬಲ ಪಂಥದ್ದು ಓದಬೇಕೊ ಅಂತ'.

'ಪಂಥ ಫಜೀತಿ ಮುಗಿಯುವಂತಿಲ್ಲ. ಪಂಕ್ತಿಭೇದಕ್ಕಿಂತ ಪಂಥೀ ಭೇದ ಅಪಾಯಕಾರಿ'.

'ಪಠ್ಯದಲ್ಲಿ ಎಡ ಪಂಥಕ್ಕೆ 50, ಬಲ ಪಂಥಕ್ಕೆ 50 ಅಂಕದ ಪಾಠ ಸಿದ್ಧಪಡಿಸಲು ಸರ್ಕಾರ ಅವಕಾಶ ನೀಡಿದ್ರೆ ವಿವಾದ ಬಗೆಹರಿಯಬಹುದು. ಮಕ್ಕಳು ತಮಗೆ ಬೇಕಾದ ಪಂಥ ಓದಿಕೊಳ್ತಾರೆ...' ಬೇಸರದಿಂದ ಹೇಳಿದಳು ಸುಮಿ.

ಸಂಗತ

ಅಧಿಕಾರಿಶಾಹಿ ಹೊದಿಸುವ 'ಗಣ್ಯ' ಮುಸುಕು

ನೀತಿ– ನಿಯಮಗಳನ್ನು ರೂಪಿಸುವ ಜನಪ್ರತಿನಿಧಿಗಳಿಗೆ ಜನರ ಅಸಲಿ ಸಮಸ್ಯೆಗಳ ದರ್ಶನವಾಗಬಾರದೇ?

• ಎಚ್.ಕೆ. ಶರತ್

ಈ ತಿಂಗಳ 19ರಂದು ಮಧ್ಯಾಹ್ನ ಕೆಲಸದ ಸ್ಥಳದಿಂದ ಮನೆಗೆ ಊಟದ ವಿರಾಮದ ವೇಳೆ ತೆರಳುವಾಗ ರಸ್ತೆಯಲ್ಲಿ ಮೂರ್ನಾಲ್ಕು ಪೊಲೀಸ್ ವಾಹನಗಳು ಹಾಗೂ ಅಲ್ಲಲ್ಲಿ ಪೊಲೀಸರು ನಿಂತಿದ್ದರು. ರಸ್ತೆಯ ಒಂದು ಭಾಗವನ್ನು ಬಂದ್ ಮಾಡಿ, ಮತ್ತೊಂದು ಕಡೆ ಹೋಗುವಂತೆ ಜನರಿಗೆ ಸೂಚಿಸುತ್ತಿದ್ದರು. ಹಾಸನ ಹೊರವಲಯದಲ್ಲಿರುವ ಚಿಕ್ಕಮಗಳೂರಿಗೆ ಸಂಪರ್ಕ ಕಲ್ಪಿಸುವ ಈ ವರ್ತುಲ ರಸ್ತೆಯ ಎರಡೂ ಕಡೆ ಅಲ್ಲಲ್ಲಿ ಕಸದ ರಾಶಿ ಬಿದ್ದಿದ್ದರೂ ಅದುವರೆಗೂ ತಲೆಕೆಡಿಸಿಕೊಳ್ಳದ ಸ್ಥಳೀಯ ಆಡಳಿತ, ಅಂದು ತೀರಾ ತರಾತುರಿಯಲ್ಲಿ ವಾಹನ ಓಡಾಟಕ್ಕೆ ನಿರ್ಬಂಧ ವಿಧಿಸಿ, ರಸ್ತೆಯಲ್ಲಿ ಸಾಗುವವರ ಕಣ್ಣಿಗೆ ರಾಚುವಂತೆ ಬಿದ್ದಿದ್ದ ಕಸದ ರಾಶಿ ತೆರವುಗೊಳಿಸಲು ಇನ್ನಿಲ್ಲದ ಮುತುವರ್ಜಿ ತೋರುತ್ತಿತ್ತು. ಇನ್ನೇನು ಈ ರಸ್ತೆಯಲ್ಲಿ ಯಾರೋ ಮಂತ್ರಿಯೋ ಮುಖ್ಯಮಂತ್ರಿಯೋ ಹೋಗಬಹುದೆಂಬ ಗುಮಾನಿ ಅಲ್ಲಿನ ಚಿತ್ರಣ ಗಮನಿಸಿದಾಗಲೇ ಮೂಡಿತ್ತು.

ಅದೇ ದಿನ ರಾತ್ರಿ ಎಂಟು ಗಂಟೆ ವೇಳೆಯಲ್ಲಿ ಮನೆಗೆ ಅಗತ್ಯವಿದ್ದ ವಸ್ತುಗಳನ್ನು ತರಲೆಂದು ಮತ್ತೆ ಇದೇ ರಸ್ತೆಗೆ ಹೋದಾಗ, ಸುರಿಯುವ ಮಳೆಯಲ್ಲೂ ಕಾರ್ಯೋನ್ಮುಖರಾಗಿದ್ದ ಪೊಲೀಸರು ಕಾಣಸಿಕ್ಕರು. ರಸ್ತೆ ಬದಿಯಲ್ಲಿ ವಾಹನ ನಿಲ್ಲಿಸಲು ಮುಂದಾಗುವವರಿಗೆ 'ಇಲ್ಲಿ ನಿಲ್ಲಿಸಬೇಡಿ, ಬೇಕಿದ್ದರೆ ಒಳರಸ್ತೆಯಲ್ಲಿ ನಿಲ್ಲಿಸಿಕೊಳ್ಳಿ' ಎಂದು ಆಗ್ರಹಿಸುತ್ತಿದ್ದರು. ಸುರಿಯುವ ಮಳೆಯಿಂದ ರಕ್ಷಣೆ ಪಡೆಯಲೆಂದು ತರಾತುರಿಯಲ್ಲಿ ರಸ್ತೆ ಬದಿ ವಾಹನ ನಿಲ್ಲಿಸಿ ಸಮೀಪದ ಕಟ್ಟಡಗಳೆಡೆಗೆ ಬರುತ್ತಿದ್ದವರಿಗೆ ಕೂಡ ಪೊಲೀಸರು ಇದೇ ಸೂಚನೆ ನೀಡುತ್ತಿದ್ದರು. 'ಇಷ್ಟೊತ್ತಲ್ಲಿ ಯಾವತ್ತೂ ಈ ಕಡೆ ಬಾರದ ನೀವು ಈಗೇಕೆ ಬಂದು ಮಳೆಯಲ್ಲಿ ನಮ್ಗೆ ಕಾಟ ಕೊಡ್ತಿದ್ದೀರ' ಅಂತ ಪೊಲೀಸ್ ಕಾನ್‌ಸ್ಟೆಬಲ್‌ವೊಬ್ಬರನ್ನು ಯುವಕನೊಬ್ಬ ಪ್ರಶ್ನಿಸಿಯೇ ಬಿಟ್ಟ. 'ಸಿಎಂ ಬೊಮ್ಮಾಯಿ ಸಾಹೇಬ್ರು ಚಿಕ್ಕಮಗಳೂರಿಂದ ಬೆಂಗ್ಳೂರ್ಗೆ ವಾಪಸ್ ಹೋಗ್ತಾವ್ರೆ. ಇನ್ನೇನು ಅವ್ರ ಕಾರು ಇಲ್ಲೇ ಪಾಸ್ ಆಗುತ್ತೆ' ಎಂದು ಅವರು ವಿಷಯ ತಿಳಿಸಿದರು. 'ಅಲ್ಲ, ನಾವು ಆರಿಸೋ ರಾಜಕಾರಣಿಗಳು ರಸ್ತೇಲಿ ಹೋಗೋಕೆ ನಾವೇ ಈ ಪಾಟಿ ಹಿಂಸೆ ಅನುಭವಿಸ್ಬೇಕಾ? ಅವ್ರೂ ನಮ್ಮ ಹಾಗೆ ಅಲ್ವಾ?' ಅಂತ ಆ ಯುವಕ ತನ್ನ ಅಸಮಾಧಾನ ಹೊರಹಾಕಿದ. ಮತ್ತೊಬ್ಬರು 'ಇವ್ರು ತಾನೆ ಏನ್ ಮಾಡ್ತಾರೆ, ಅವ್ರ ಡ್ಯೂಟಿ ಅವ್ರು ಮಾಡ್ತಿದ್ದಾರೆ. ಹೋಗ್ಲಿ ಬಿಡಿ ಪಾಪ' ಅಂತ ಅಲ್ಲಿದ್ದ ಕಾನ್‌ಸ್ಟೆಬಲ್ ಕುರಿತು ಕಾಳಜಿ ತೋರಿದರು.

ಪ್ರಧಾನಮಂತ್ರಿ, ಮುಖ್ಯಮಂತ್ರಿ, ಕೇಂದ್ರ ಮತ್ತು ರಾಜ್ಯದ ಸಚಿವರು ಸಂಚರಿಸುವ ಎಲ್ಲೇ ಆದರೂ ಇಂತಹದ್ದೇ ಸನ್ನಿವೇಶ ನಿರ್ಮಾಣವಾಗುವುದು ಸರ್ವೇಸಾಮಾನ್ಯ. ಗಣ್ಯ ವ್ಯಕ್ತಿಗಳು ಸಾಗುವರೆಂಬ ಕಾರಣಕ್ಕೆ ತರಾತುರಿಯಲ್ಲಿ ರಸ್ತೆಗಳ ಗುಂಡಿ ಮುಚ್ಚಿಸುವುದು, ರಸ್ತೆ ಬದಿಯ ಕಸದ ರಾಶಿ ತೆರವುಗೊಳಿಸುವುದು, ಜನರ ಸಂಚಾರಕ್ಕೆ ತಡೆಯೊಡ್ಡುವುದು ಇವೆಲ್ಲವನ್ನೂ ನಮ್ಮ ಆಡಳಿತ ವ್ಯವಸ್ಥೆ ಚಾಚೂತಪ್ಪದೆ ಪಾಲಿಸಿಕೊಂಡು ಬಂದಿದೆ. ಇದನ್ನು ಬಹುತೇಕ ಅಧಿಕಾರಸ್ಥರು ಕೂಡ ಸಹಜವೆಂದೇ ಭಾವಿಸಿದ್ದಾರೆ. ಇಲ್ಲಿ ಮೂಡುವ ಸರಳ ಪ್ರಶ್ನೆ ಎಂದರೆ, ಜನಪ್ರತಿನಿಧಿಯಾದವರಿಗೆ, ಕೋಟ್ಯಂತರ ಜನರ ಬದುಕಿನ ಮೇಲೆ ಪ್ರಭಾವ ಬೀರುವಂತಹ ನೀತಿಗಳನ್ನು ರೂಪಿಸುವವರಿಗೆ ಜನರ ಅಸಲಿ ಸಮಸ್ಯೆಗಳ ದರ್ಶನವಾಗಬಾರದೇ? ಜನ ಬಿದ್ದು ಸತ್ತರೂ ಹಾಗೇ ಉಳಿದುಬಿಡುವ ರಸ್ತೆಗುಂಡಿಗಳು ಅತಿಗಣ್ಯ ವ್ಯಕ್ತಿಗಳಿಗೆ ಎದುರಾಗಲೇಬಾರದೇ? ಜನ ಮೂಗು ಮುಚ್ಚಿಕೊಂಡು ಸಾಗುವ ಹಾಗೆ ಮಾಡುವ ಕಸದ ರಾಶಿಯು ಮಂತ್ರಿ, ಮುಖ್ಯಮಂತ್ರಿ ಕಣ್ಣಿಗೆ ಬೀಳಬಾರದೇ? ಒಟ್ಟಾರೆ ಸಾಮಾನ್ಯ ಜನರು ಮತ್ತು ಅವರ ಸಮಸ್ಯೆಗಳು ಕಣ್ಣಿಗೆ ರಾಚದಂತೆ ನೋಡಿಕೊಳ್ಳುವುದರಲ್ಲೇ ತಮ್ಮ ಹಿತ ಅಡಗಿದೆ ಎಂದು ಆಳುವವರು ಭಾವಿಸುವರೇ? ಸಾಮಾನ್ಯ ಜನರೊಂದಿಗೆ ಒಡನಾಡದೆ ದಂತಗೋಪುರಗಳಲ್ಲಿ ಕುಳಿತವರ ನೀತಿಗಳು ಸಾಮಾನ್ಯ ಜನರ ಬದುಕು ಹಸನುಗೊಳಿಸುವ ವಿಶ್ವಾಸ ಹೊಂದಬಹುದೇ?



ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆಯಲ್ಲಿ ಜನಪ್ರಿಯವಾಗಿದ್ದ ಗ್ರಾಮ ವಾಸ್ತವ್ಯ ಕಾರ್ಯಕ್ರಮಕ್ಕೆ ಅಧಿಕಾರಿಗಳು ನಡೆಸುತ್ತಿದ್ದ ಸಿದ್ಧತೆಯೂ ಹೆಚ್ಚು ಸುದ್ದಿಯಾಗುತ್ತಿತ್ತು. ರಸ್ತೆಗಳನ್ನೇ ಕಾಣದ ಮನೆಗಳಿಗೆ ತರಾತುರಿಯಲ್ಲಿ ರಸ್ತೆ, ಶೌಚಾಲಯವಿಲ್ಲದ ಮನೆಗೆ ಸುಸಜ್ಜಿತ ಶೌಚಾಲಯ ನಿರ್ಮಿಸುವುದು... ಹೀಗೆ ಮುಖ್ಯಮಂತ್ರಿ ವಾಸ್ತವ್ಯ ಹೂಡುತ್ತಾರೆಂಬ ಕಾರಣಕ್ಕೆ ಸೌಲಭ್ಯಗಳೆಲ್ಲವೂ ದಿಢೀರನೆ ಒದಗಿ ಬರುತ್ತಿದ್ದವು. ಆಳುವವರು ಮತ್ತು ಅವರ ಯೋಗಕ್ಷೇಮ ನೋಡಿಕೊಳ್ಳುವಲ್ಲಿ ಹೆಚ್ಚು ಮುತುವರ್ಜಿ ತೋರುವ ಅಧಿಕಾರಿಶಾಹಿಯ ಧೋರಣೆಯಲ್ಲಿ ಹೆಚ್ಚಿನ ಬದಲಾವಣೆ ಏನೂ ಆಗಿಲ್ಲ.

ಸಮಸ್ಯೆಗಳಿಗೆ ಆಳುವವರು ಕಂಡುಕೊಳ್ಳುವ ಸುಲಭ ಪರಿಹಾರ, ಸಮಸ್ಯೆಗಳೇ ಇಲ್ಲವೆನ್ನುವುದಲ್ಲವೇ? ಅವರ ಈ ಪರಿಹಾರಸೂತ್ರವನ್ನು ಅನುಷ್ಠಾನಗೊಳಿಸಲು ಅಧಿಕಾರಿಶಾಹಿ ತೋರುವ ಮುತುವರ್ಜಿಯ ಒಂದಿಷ್ಟು ಭಾಗವಾದರೂ ಜನರು ಎದುರಿಸುವ ಸಮಸ್ಯೆಗಳ ಪರಿಹಾರಕ್ಕೆ ತೋರುವುದೇ? ಅಮೆರಿಕದ ಅಧ್ಯಕ್ಷರಾಗಿದ್ದ ವೇಳೆ ಡೊನಾಲ್ಡ್ ಟ್ರಂಪ್ ಅವರು ಗುಜರಾತಿನ ಅಹಮದಾಬಾದ್ ನಗರಕ್ಕೆ ಆಗಮಿಸುವ ವೇಳೆಯಲ್ಲಿ ಕೊಳೆಗೇರಿಗಳು ಅವರ ಕಣ್ಣಿಗೆ ಬೀಳಬಾರದೆಂದು ರಸ್ತೆ ಬದಿಯಲ್ಲಿ ಕಟ್ಟಿದ ಎತ್ತರದ ಗೋಡೆ ನಮ್ಮನ್ನಾಳುವವರ ಮನಃಸ್ಥಿತಿಗೆ ಹಿಡಿದ ಕನ್ನಡಿಯಾಗಿತ್ತಲ್ಲವೇ?

ವಾಚಕರ ವಾಣಿ

ಗುಣಮಟ್ಟದ ಕಲಿಕೆ ಖಾತರಿಪಡಿಸುವುದು ತುರ್ತು ಅಗತ್ಯ

ಪಠ್ಯಪುಸ್ತಕ ಕುರಿತ ವಿವಾದ ತಾರಕಕ್ಕೇರಿ ಅದು ವಿವಿಧ ಆಯಾಮಗಳನ್ನು ಪಡೆಯುತ್ತಿರುವಾಗ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಂತದ 'ರಾಷ್ಟ್ರೀಯ ಸಾಧನೆ ಸಮೀಕ್ಷೆ'ಯ ಅಂಶಗಳು ಪ್ರಕಟಗೊಂಡು ಕಳವಳ ಮೂಡಿಸಿವೆ (ಪ್ರ.ವಾ., ಮೇ 27). ಈ ಸಮೀಕ್ಷಾ ವರದಿಯು ನಮ್ಮ ಒಟ್ಟಾರೆ ಶಿಕ್ಷಣ ವ್ಯವಸ್ಥೆಗೆ ಕನ್ನಡಿ ಹಿಡಿದು ನಮ್ಮನ್ನು ಮತ್ತೊಂದು ದಿಸೆಯಲ್ಲಿ ಯೋಚಿಸಲು ಹಚ್ಚುತ್ತದೆ. 2021ನೇ ಸಾಲಿನ 3, 5, 8 ಮತ್ತು 10ನೇ ತರಗತಿಯ ಮಕ್ಕಳ ಭಾಷೆ ಮತ್ತು ಇತರ ವಿಷಯಗಳ ಕಲಿಕೆಯು ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಇಳಿಕೆ ಕಂಡುಬಂದಿರುವುದಾಗಿ ವರದಿ ಹೇಳುತ್ತದೆ. ನಮ್ಮ ರಾಜ್ಯದಲ್ಲಿ ಈ ಹಿಂದೆ ನಡೆದ ಇದೇ ಬಗೆಯ ಬೇರೆ ಬೇರೆ ಸಮೀಕ್ಷೆಗಳು ಕೂಡ ಇದೇ ರೀತಿಯ ಫಲಿತಾಂಶವನ್ನು ಸೂಚಿಸಿವೆ.

ಹತ್ತನೆಯ ತರಗತಿಯ ಆಧುನಿಕ ಭಾರತೀಯ ಭಾಷೆ ಮತ್ತು ಇತರ ವಿಷಯಗಳ ಕಲಿಕೆ ಮತ್ತು ಗ್ರಹಿಕೆಯ ಮಟ್ಟ ಶೇ 99ರಷ್ಟು ವಿದ್ಯಾರ್ಥಿಗಳಲ್ಲಿ ಸಾಧಾರಣ ಮತ್ತು ಅದಕ್ಕಿಂತ ಕಡಿಮೆ ಎಂದು ಹೇಳಲಾಗಿದೆ. ಅದೇ ರೀತಿ ಇಂಗ್ಲಿಷ್ ಕಲಿಕೆ ಕೂಡ. ಇದಕ್ಕೆ ಹಲವು ಕಾರಣಗಳನ್ನು ಗುರುತಿಸಲಾಗಿದೆ. ಪಠ್ಯಗಳಲ್ಲಿ ಕೆಲವು ಪಾಠಗಳನ್ನು ಸೇರಿಸುವುದು, ತೆಗೆದು ಹಾಕುವ ವಿವಾದ ಈಗ ಮುನ್ನೆಲೆಯಲ್ಲಿ ಇದೆ. ಆದರೆ ಇರುವ ಪಾಠಗಳನ್ನು ಮಕ್ಕಳಿಗೆ ಹೇಗೆ ಕಲಿಸಲಾಗುತ್ತಿದೆ, ಮಕ್ಕಳು ಹೇಗೆ ಪಾಠಗಳನ್ನು ಕಲಿಯುತ್ತಿದ್ದಾರೆ ಅಥವಾ ಗ್ರಹಿಸುತ್ತಾರೆ ಎಂಬುದನ್ನು ಗಮನಿಸಿದಾಗ ಕಲಿಸುವ ಮತ್ತು ಕಲಿಯುವ ಪ್ರಕ್ರಿಯೆಯಲ್ಲಿ ನಿರೀಕ್ಷಿತ ಗುಣಮಟ್ಟ ಇಲ್ಲದಿರುವ ಕಡೆ ವಿವಿಧ ಸಮೀಕ್ಷೆಗಳು ಗಮನ ಸೆಳೆಯುತ್ತವೆ.

ಕಳಪೆ ಗುಣಮಟ್ಟಕ್ಕೆ ನಮ್ಮಲ್ಲಿ ಯಾರನ್ನೂ ಹೊಣೆಗಾರರನ್ನಾಗಿ ಮಾಡುವ ಕ್ರಮ ಇಲ್ಲ. ಹೀಗಾಗಿ ಗ್ರಾಮೀಣ ಪ್ರದೇಶದ ಮಕ್ಕಳು ಸತತವಾಗಿ ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಇಂಥ ಮಕ್ಕಳಿಗೆ ಹತ್ತನೆಯ ತರಗತಿಯ ಪರೀಕ್ಷೆಗಳಲ್ಲಿ ಗ್ರೇಸ್ ಅಂಕ ನೀಡುವುದು ಮತ್ತೊಂದು ರೀತಿಯ ವಂಚನೆ. ನಿಗದಿತ ಪಾಠಗಳನ್ನು ಸಮರ್ಪಕವಾಗಿ ಬೋಧನೆ ಮಾಡುವುದು ಅಷ್ಟೇ ಮುಖ್ಯ. ಇಲ್ಲಿ ಶಿಕ್ಷಕನ ಪಾತ್ರ ಬಹಳ ಮುಖ್ಯ. ಆದ್ದರಿಂದ ಪಠ್ಯ ಬದಲಾವಣೆ, ಸೇರ್ಪಡೆ, ಮಾರ್ಪಾಡು ಇತ್ಯಾದಿ ಅಂಶಗಳೊಂದಿಗೆ ಗುಣಮಟ್ಟದ ಕಲಿಯುವಿಕೆ, ಕಲಿಸುವಿಕೆ ಬಗೆಗಿನ ಚರ್ಚೆಗಳು ಕೂಡ ಮುನ್ನೆಲೆಗೆ ಬರಬೇಕು. ಅದನ್ನು ಖಾತರಿಪಡಿಸುವ ಕ್ರಮ ಆಗಬೇಕು. ಇಲ್ಲದಿದ್ದರೆ ಪಠ್ಯ ಕುರಿತು ವಿವಾದ ಕೇವಲ ಎಡ- ಬಲ ಎಂಬ ವಿವಾದವಾಗಿ, ನೈಜ ಶೈಕ್ಷಣಿಕ ಸಮಸ್ಯೆ ಹಾಗೆಯೇ ಉಳಿಯುತ್ತದೆ.

ವೆಂಕಟೇಶ ಮಾಚಕನೂರ, ಧಾರವಾಡ

ಎಸ್ಸೆಸ್ಸೆಲ್ಸಿ: ಅಕ್ರಮಗಳಿಗೆ ಕಾರಣ ಹತ್ತಾರು

'ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲೂ ಅಕ್ರಮ' ಎಂಬ ಸುದ್ದಿ ಓದಿದಾಗ (ಪ್ರ.ವಾ., ಮೇ 26) ನಮ್ಮ ಶಿಕ್ಷಣದ ಗುಣಮಟ್ಟದ ಬಗೆಗೆ ಯೋಚಿಸುವಂತಾಯಿತು. ಒಂದನೇ ತರಗತಿಯಿಂದ ಒಂಬತ್ತನೇ ತರಗತಿಯವರೆಗಿನ ಕಡ್ಡಾಯ ತೇರ್ಗಡೆ ಪದ್ಧತಿ ಕೂಡ ಇದಕ್ಕೊಂದು ಕಾರಣ. ಇದನ್ನು ಮೊದಲು ರದ್ದುಗೊಳಿಸಬೇಕು. ಹೇಗೋ ತೇರ್ಗಡೆ ಹೊಂದುತ್ತಾ ಬಂದು ಎಸ್ಸೆಸ್ಸೆಲ್ಸಿಯಂಥ ಪರೀಕ್ಷೆಯನ್ನು ಏಕಾಏಕಿ ಎದುರಿಸುವುದು ಕೆಲವರಿಗೆ ಕಠಿಣವೇ ಸರಿ. ಮತ್ತೊಂದೆಡೆ ನೂರಕ್ಕೆ ನೂರು ಫಲಿತಾಂಶ ಪಡೆಯಬೇಕೆಂಬ ಒತ್ತಡಗಳು ಬೇರೆ. ಅಕ್ರಮಗಳಿಗೆ ಇಂತಹ ಹತ್ತಾರು ಕಾರಣಗಳಿವೆ.

ಶಾಲೆಗಳಿಗೆ ಒಂದಷ್ಟು ಮೂಲ ಸೌಲಭ್ಯ ಒದಗಿಸಿ ಕೈತೊಳೆದುಕೊಳ್ಳುವುದರಿಂದ ಗುಣಮಟ್ಟ ವೃದ್ಧಿಯಾಗುವುದಿಲ್ಲ. ಬೋಧನೆಯಲ್ಲಿ ಗುಣಾತ್ಮಕ ಬದಲಾವಣೆ ಆಗಬೇಕು. ಅದಕ್ಕೆ ಬೇಕಾದಂತಹ ಶಿಕ್ಷಕರನ್ನು ಮೊದಲು ರೂಪಿಸಬೇಕು. ಸರ್ಕಾರ ಮತ್ತು ಶಿಕ್ಷಣ ತಜ್ಞರು ಇತ್ತ ಗಮನಹರಿಸಲಿ.

ಚಂದ್ರಶೇಖರ ಪುಟ್ಟಪ್ಪ, ಬೆಂಗಳೂರು

ಪ್ರಧಾನಿ ವಾಗ್ದಾಳಿ: ಇಬ್ಬಗೆ ನೀತಿ ತರವಲ್ಲ

ಪ್ರಧಾನಿ ನರೇಂದ್ರ ಮೋದಿ ಅವರು ಹೋದ ಕಡೆಯೆಲ್ಲ 'ಕುಟುಂಬ ಆಧರಿತ ಪಕ್ಷಗಳು ದೇಶದ ದೊಡ್ಡ ಶತ್ರು' ಎಂದು ವಾಗ್ದಾಳಿ ನಡೆಸುತ್ತಿದ್ದಾರೆ (ಪ್ರ.ವಾ., ಮೇ 27). ಹಾಗಿದ್ದರೆ ವರುಣ್ ಗಾಂಧಿ ಮತ್ತು ಮೇನಕಾ ಗಾಂಧಿ ಅವರಿಗೆ ತಮ್ಮದೇ ಪಕ್ಷದ ವತಿಯಿಂದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕೊಟ್ಟಿದ್ದೇಕೆ? ಮೇನಕಾ ಅವರಿಗೆ ಈ ಹಿಂದೆ ಸಚಿವೆ ಸ್ಥಾನ ಕೊಟ್ಟಿದ್ದೇಕೆ?

ತೆಲಂಗಾಣಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಾಡಿದ ಈ ವಾಗ್ದಾಳಿಯನ್ನು ಪಕ್ಕದ ತಮಿಳುನಾಡು ಭೇಟಿಯ ಸಂದರ್ಭದಲ್ಲಿ ಮಾಡಲಿಲ್ಲವೇಕೆ? ತಮಿಳುನಾಡಿನಲ್ಲೂ ಕುಟುಂಬ ಆಧರಿತ ಪಕ್ಷವೇ ಅಧಿಕಾರದಲ್ಲಿ ಇದೆಯಲ್ಲವೇ? ಅದನ್ನು ಗಮನಿಸದಿರುವುದು ಜಾಣ ಕುರುಡಲ್ಲವೇ? 'ಕುಟುಂಬ'ಗಳನ್ನು ಮತದಾರರು ಮಾನ್ಯ ಮಾಡಿ ಚುನಾಯಿಸುತ್ತಿರುವಾಗ, ಜನಾದೇಶಕ್ಕೆ ತಲೆ ಬಾಗುತ್ತೇವೆ ಎಂದು ಬಡಾಯಿ ಕೊಚ್ಚಿಕೊಳ್ಳುವವರ ಅಭ್ಯಂತರವೇಕೆ? ಕುಟುಂಬ ಆಧರಿತ ಪಕ್ಷಗಳು ದೇಶಕ್ಕೆ ಮಾರಕವಾಗಿದ್ದರೆ ಅದರ ನಿಯಂತ್ರಣಕ್ಕೆ ಕಾನೂನು ತರಬಹುದಲ್ಲವೇ?

ಎಂ. ಶ್ರೀಧರ ರಾವ್, ಮರಲಹಳ್ಳಿ, ಕೋಲಾರ

ಕಿವುಡರಿಗೆ ತುತ್ತೂರಿ ದನಿ ಕೇಳಿಸೀತೇ?

'ವಿಭಜನೆಯ ಯತ್ನ ನಿಲ್ಲಿಸಿ, ಸಾಮರಸ್ಯಕ್ಕೆ ಒತ್ತು ನೀಡಿ' ಎಂಬ ಸಂಪಾದಕೀಯದ ಕರೆ (ಪ್ರ.ವಾ., ಮೇ 27) ಸಕಾಲಿಕ. ಆದರೆ ಆಳುವ ಕಿವುಡರಿಗೆ ತುತ್ತೂರಿ ದನಿ ಕೇಳಿಸೀತೇ?! ಏಕೆಂದರೆ, ನಮ್ಮ ಮಾದರಿಯ ಪ್ರಜಾಪ್ರಭುತ್ವ ಸನ್ನಿವೇಶದಲ್ಲಿ, ಸರ್ಕಾರ ಎನ್ನುವ ವ್ಯವಸ್ಥೆ ಇರುವುದೇ ಅನುಮಾನ; ಇರುವುದು ಕೇವಲ ರಾಜಕೀಯ ಪುಢಾರಿಗಳ ಗುಂಪೋ ಎನಿಸುತ್ತದೆ! ಅಸಲಿಗೆ ಧಾರ್ಮಿಕ ಕ್ರೌರ್ಯ ಎಂಬುದೇ ಇರುವುದಿಲ್ಲ. ಕ್ರೌರ್ಯದ ಸಂಬಂಧ ಮನುಷ್ಯರೊಂದಿಗೇ ವಿನಾ ದೇವರು ಅಥವಾ ಧರ್ಮದೊಂದಿಗಲ್ಲ.

ಆರ್.ಕೆ. ದಿವಾಕರ, ಯಲೇನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಸೀದಿಯು ಹಿಂದೆ ದೇವಸ್ಥಾನವಾಗಿತ್ತೇ ಎಂಬುದರ ಪರಿಶೀಲನೆಗೆ ಸಮೀಕ್ಷೆ ನಡೆಸಬೇಕು ಎಂಬ ಬೇಡಿಕೆ 1991ರ ಪೂಜಾ ಸ್ಥಳಗಳ ಕಾಯ್ದೆಯ ಉಲ್ಲಂಘನೆಯೇ?

ದೇಗುಲ ಮೂಲ ಸ್ವರೂಪ ಕಳೆದುಕೊಳ್ಳುವುದು ಸಾಧ್ಯವೇ?

ಹಿಂದೂ ದೇವಾಲಯಗಳು ಕೇವಲ ಪೂಜಾಸ್ಥಳಗಳಲ್ಲ. ದೇವಸ್ಥಾನಗಳಲ್ಲಿ ದೇವರು ವಾಸಿಸುತ್ತಾನೆ/ಳೆ ಎಂಬುದು ಹಿಂದೂಗಳ ಶ್ರದ್ಧೆ. ದಾಳಿ ಮಾಡಿ ದೇವಾಲಯಗಳನ್ನು ನಾಶಗೊಳಿಸಿದ ಮಾತ್ರಕ್ಕೆ ಅವು ತಮ್ಮ ಪೂಜಾರ್ಹತೆಯನ್ನು ಕಳೆದುಕೊಂಡು ತಂತಾನೇ ಬೇರೊಂದು ಧರ್ಮದ ಪೂಜಾ ಕೇಂದ್ರಗಳಾಗಿ ಪರಿವರ್ತನೆಗೊಳ್ಳುತ್ತವೆಯೇ? ಭಗ್ನ ವಿಗ್ರಹಗಳಿಗೆ ಪೂಜೆ ಸಲ್ಲದಿರಬಹುದು, ಹಾಗೆಂದು, ಹಿಂದೂ ದೇವಾಲಯಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಳ್ಳಲು ಸಾಧ್ಯವೇ?

ಪ್ರಜಾವಾಣಿ ಚರ್ಚೆ

• ಶ್ರೀಧರ ಪ್ರಭು

ಸುಪ್ರೀಂ ಕೋರ್ಟ್ ಅಯೋಧ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ 2019ರ ನವೆಂಬರ್‌ನಲ್ಲಿ ನೀಡಿದ ತೀರ್ಪು, ಜಾತ್ಯತೀತತೆ ಮತ್ತು 1991ರ ಪೂಜಾ ಸ್ಥಳಗಳ ಕಾಯ್ದೆಗೆ ವಿನೂತನ ವ್ಯಾಖ್ಯಾನವನ್ನಿತ್ತಿದೆ. ಜಾತ್ಯತೀತತೆಯು ನಮ್ಮ ಸಂವಿಧಾನದ ಮೂಲಭೂತ ಮೌಲ್ಯ ಮತ್ತು ಆಶಯವಾದರೆ, ಪೂಜಾ ಸ್ಥಳಗಳ ಕಾಯ್ದೆಯು ಜಾತ್ಯತೀತತೆಯನ್ನು ಆಚರಣೆಗಿಳಿಸುವ ಮಾಧ್ಯಮವೆಂದು ಸುಪ್ರೀಂ ಕೋರ್ಟ್ ಹೇಳಿದೆ. ಈ ತೀರ್ಮಾನದಲ್ಲಿ ಹೇಳಿರುವಂತೆ ದೇಶದ ಸಮಸ್ತ ಸಾರ್ವಜನಿಕ ಪೂಜಾ ಸ್ಥಳಗಳಲ್ಲಿ (ಅಯೋಧ್ಯೆಯನ್ನು ಹೊರತುಪಡಿಸಿ) 1947ರ ಆಗಸ್ಟ್ 15ರಲ್ಲಿದ್ದಂತೆ ಯಥಾಸ್ಥಿತಿ ಕಾಯ್ದುಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯ. ಅದು ಸರ್ಕಾರದ ಸಾಂವಿಧಾನಿಕ ಜವಾಬ್ದಾರಿಯೂ ಹೌದು.

ಪೂಜಾ ಸ್ಥಳಗಳ ಕಾಯ್ದೆ–1991ರ ಪ್ರಮುಖ ಅಂಶಗಳೆಂದರೆ: ಯಾವುದೇ ಧರ್ಮ, ಪಂಗಡ ಅಥವಾ ಒಳಪಂಗಡಕ್ಕೆ ಸೇರಿದ ಯಾವುದೇ ಪೂಜಾ ಸ್ಥಳವನ್ನು, 1947ರ ಆಗಸ್ಟ್ 15ರ ವೇಳೆ ಇದ್ದ ಸ್ಥಿತಿಯಲ್ಲಿಯೇ ಕಾಯ್ದುಕೊಳ್ಳಬೇಕು ಮತ್ತು ಇನ್ನೊಂದು ಧರ್ಮ, ಪಂಗಡ ಅಥವಾ ಒಳಪಂಗಡದ ಪೂಜಾಸ್ಥಳವಾಗಿ ಪರಿವರ್ತಿಸುವಂತಿಲ್ಲ.

ಈ ಕಾಯ್ದೆಯಡಿ, 'ಪೂಜಾ ಸ್ಥಳ'ವೆಂದರೆ ದೇವಸ್ಥಾನ, ಮಸೀದಿ, ಗುರುದ್ವಾರ, ಇಗರ್ಜಿ, ವಿಹಾರ ಅಥವಾ ಇನ್ನಾವುದೇ ಸಾರ್ವಜನಿಕ ಪೂಜಾ ಸ್ಥಳವೆಂಬ ವಿಸ್ತೃತ ವ್ಯಾಖ್ಯಾನ ನೀಡಲಾಗಿದೆ.

ಈ ಕಾಯ್ದೆಯು 1991ರ ಜುಲೈ 11ರಂದು ಜಾರಿಗೆ ಬಂದಿದೆ. ತದನಂತರ, ದೇಶದ ಯಾವುದೇ ನ್ಯಾಯಾಲಯದಲ್ಲಿ ಎಲ್ಲ ಹಂತಗಳಲ್ಲಿ ವಿಚಾರಣೆಗೆ ಬಾಕಿಯಿದ್ದ ಎಲ್ಲ ಪ್ರಕರಣಗಳು ಅನೂರ್ಜಿತಗೊಂಡಿವೆ. ಅಲ್ಲದೇ, ಈ ದಿನಾಂಕದ ನಂತರ ಪೂಜಾ ಸ್ಥಳಗಳ ಪೂಜಾ ಸ್ಥಿತಿ ಪರಿವರ್ತನೆಗೆ ಯಾವುದೇ ದಾವೆ ಅಥವಾ ಅಪೀಲನ್ನು ದಾಖಲಿಸುವಂತಿಲ್ಲ.

ಕಾಶಿ, ಮಥುರಾಗಳಿಂದ ಮೊದಲ್ಗೊಂಡು ದೇಶದ ವಿವಿಧ ಪೂಜಾ ಸ್ಥಳಗಳ ಸಮೀಕ್ಷೆ ಮತ್ತು ಉತ್ಖನನವನ್ನು ಕೋರಿ ಸಲ್ಲಿಸಿದ ದಾವೆಗಳು ಮತ್ತು ಕೋರ್ಟ್ ಆದೇಶಗಳು, ಸುಪ್ರೀಂ ಕೋರ್ಟಿನ ಅಯೋಧ್ಯಾ ತೀರ್ಮಾನಕ್ಕೆ, ಮತ್ತದರಲ್ಲಿ ಉಲ್ಲೇಖಿಸಿದ ಸಾಂವಿಧಾನಿಕ ಕರ್ತವ್ಯ ಮತ್ತು ಮೌಲ್ಯಗಳಿಗೆ ಪೂರಕವಾಗಿವೆಯೇ? 1991ರ ಪೂಜಾ ಸ್ಥಳಗಳ ಕಾಯ್ದೆಯಲ್ಲಿಯೇ ಇದಕ್ಕೆ ಸ್ಪಷ್ಟವಾದ ಉತ್ತರವಿದೆ.

ಮೊದಲನೆಯದಾಗಿ, ಅಯೋಧ್ಯೆ ರಾಮಮಂದಿರಕ್ಕೆ ಮಾತ್ರವಲ್ಲದೇ ಬೇರೊಂದಿಷ್ಟು ಪೂಜಾಸ್ಥಳ ಮತ್ತು ಪ್ರಕರಣಗಳಿಗೆ 1991ರ ಪೂಜಾ ಸ್ಥಳಗಳ ಕಾಯ್ದೆ ಅನ್ವಯಿಸುವುದಿಲ್ಲ.

'ಪ್ರಾಚೀನ ಸ್ಮಾರಕಗಳು, ಪುರಾತತ್ವ ಸ್ಥಳ ಮತ್ತು ಅವಶೇಷಗಳ ಕಾಯ್ದೆ–1958'ರಲ್ಲಿ ಉಲ್ಲೇಖಿಸಿದ ಪೂಜಾ ಸ್ಥಳಗಳಿಗೆ, 1991ರ ಕಾಯ್ದೆ ಜಾರಿಯಾಗುವ ಮುನ್ನವೇ ತೀರ್ಮಾನವಾದ ಅಥವಾ ಕಕ್ಷಿದಾರರೇ ರಾಜಿ ಮಾಡಿಕೊಂಡ ಪ್ರಕರಣಗಳಿಗೆ, ಕಾಲಮಿತಿ ಕಾಯ್ದೆಯಿಂದಾಗಿ ಯಾವ ಪ್ರಕರಣಗಳಲ್ಲಿ ದಾವೆ ಹೂಡಲು ಸಾಧ್ಯವಿಲ್ಲವೋ, ಅಂತಹ ಪ್ರಕರಣಗಳಿಗೆ 1991ರ ಕಾಯ್ದೆ ಅನ್ವಯಿಸುವುದಿಲ್ಲ.

1991ರ ಕಾಯ್ದೆಯ ಈ ಮಿತಿಗಳನ್ನಾಧರಿಸಿಯೇ ಕುತುಬ್ ಮಿನಾರ್, ಮಥುರಾ ಮತ್ತು ಕಾಶಿ ಪ್ರಕರಣಗಳಲ್ಲೂ ಸಮೀಕ್ಷೆಗೆ ಅವಕಾಶವನ್ನು ಕೋರಲಾಗಿದೆ. 1991ರ ಕಾಯ್ದೆಯಡಿ, ಒಂದು ಪೂಜಾಸ್ಥಳದ ಸ್ವರೂಪ ಪರಿವರ್ತನೆಯಾಗಿದೆಯೇ ಇಲ್ಲವೇ ಎಂಬುದನ್ನು ತೀರ್ಮಾನಿಸಲು ನ್ಯಾಯಾಲಯಗಳು ಪೂಜಾಸ್ಥಳಗಳ ಸಂರಚನೆ ಮತ್ತು ಪೂಜಾ ಸ್ವರೂಪದ ಸಮೀಕ್ಷೆಗಳನ್ನು ನಡೆಸಲೇಬೇಕು. ಹಾಗಾಗಿ ನ್ಯಾಯಾಲಯಗಳು ಆದೇಶಿಸಿರುವ ಸಮೀಕ್ಷೆಗಳು 1991ರ ಕಾಯ್ದೆಯನ್ನು ಯಾವುದೇ ರೀತಿಯಲ್ಲೂ ಉಲ್ಲಂಘಿಸಿಲ್ಲ.

ಪುರಾತತ್ವ ಸ್ಮಾರಕವಾದ್ದರಿಂದ, ಕುತುಬ್ ಮಿನಾರಿಗೆ 1991ರ ಕಾಯ್ದೆಯು ಅನ್ವಯಿಸುವುದಿಲ್ಲ ಎಂಬುದು ಸ್ಪಷ್ಟ. ರಾಷ್ಟ್ರೀಯ ಸ್ಮಾರಕಗಳ ಪ್ರಾಧಿಕಾರ, ವಿಸ್ತೃತ ಸಮೀಕ್ಷೆಯೊಂದನ್ನು ಕೈಗೊಂಡು ಕುವತುಲ್ ಇಸ್ಲಾಂ ಮಸೀದಿ ಮತ್ತದರ ಆವರಣದಲ್ಲಿರುವ ಭಗ್ನ ಹಿಂದೂ ಮಂದಿರಗಳ ಅವಶೇಷಗಳ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಿದೆಯೆನ್ನಲಾಗಿದೆ. ಹೀಗೆ ಸಮೀಕ್ಷೆ ಕೈಗೊಳ್ಳಲು 1991ರ ಕಾಯ್ದೆಯಲ್ಲಿ ಯಾವ ನಿರ್ಬಂಧವೂ ಇಲ್ಲ.

1958ರ ಪ್ರಾಚೀನ ಸ್ಮಾರಕಗಳ ಕಾಯ್ದೆಯ ಕಲಂ 16ರಡಿ ಪ್ರಾಚೀನ ಸ್ಮಾರಕವೊಂದು ಪೂಜಾ ಸ್ಥಳವೂ ಆಗಿದ್ದರೆ, ಇದರ ಸಂರಕ್ಷಣೆಯ ಜವಾಬ್ದಾರಿ ಪುರಾತತ್ವ ಇಲಾಖೆಯದ್ದು. ಪೂಜಾ ಸ್ಥಳದ ಪಾವಿತ್ರ್ಯಕ್ಕೆ ಚ್ಯುತಿ ಬಾರದಂತೆ ಕಾಪಾಡುವುದಲ್ಲದೇ, ಈ ಸ್ಮಾರಕವನ್ನು ಬೇರೆ ಉದ್ದೇಶಗಳಿಗೆ ಬಳಸಬಾರದೆಂಬ ಕಟ್ಟಳೆ 1958ರ ಕಾಯ್ದೆಯಲ್ಲಿದೆ. ಆದರೆ, ಈ ಸ್ಮಾರಕಗಳನ್ನು ಕಾಲಾಂತರದಲ್ಲಿ ಬೇರೊಂದು ಧರ್ಮದ ಪೂಜಾ ಸ್ಥಳವನ್ನಾಗಿ ಪರಿವರ್ತಿಸಿದ್ದರೆ, ಈಗ ಮರು ಪರಿವರ್ತನೆ ಸಾಧ್ಯವಿಲ್ಲವೇ? ಮೂಲ ಸ್ಮಾರಕಗಳ ಆರಾಧಕರಿಗೆ ಪೂಜೆಗೆ ಅವಕಾಶವಿಲ್ಲವೇ? 1958ರ ಕಾಯ್ದೆಯಲ್ಲಿ ಇದಕ್ಕೆಲ್ಲ ನಿರ್ಬಂಧವಿಲ್ಲ.

ತನ್ನ ಒಡೆತನದ ಸ್ಮಾರಕಗಳ ಮೂಲ ಸ್ವರೂಪಕ್ಕೆ ಧಕ್ಕೆ ತರದೇ, ಪುರಾತತ್ವ ಇಲಾಖೆ, ಯಾರಿಗಾದರೂ ಪೂಜೆ ಸಲ್ಲಿಸುವ ಅಧಿಕಾರವನ್ನು ನೀಡಿದರೆ 1958ರ ಕಾನೂನು ನಿರ್ಬಂಧಿಸುವುದಿಲ್ಲ. ಹೀಗಾಗಿ, ಈಗಾಗಲೇ ನ್ಯಾಯಾಲಯದ ಮೆಟ್ಟಿಲೇರಿರುವ ಕುತುಬ್ ಮಿನಾರ್ ಪ್ರಕರಣವೂ ಸೇರಿದಂತೆ, 1991ರ ಕಾಯ್ದೆ ಅನ್ವಯವಾಗದಿರುವ ಎಲ್ಲ ಪ್ರಾಚೀನ ಸ್ಮಾರಕಗಳ ವಿಚಾರದಲ್ಲಿ, ಪುರಾತತ್ವ ಇಲಾಖೆಯ ತೀರ್ಮಾನವೇ ಅಂತಿಮ.

ಕೃಷ್ಣ ಜನ್ಮಭೂಮಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಥುರಾ ಜಿಲ್ಲಾ ನ್ಯಾಯಾಲಯವು ಮೇ 19ರಂದು ನೀಡಿದ ತೀರ್ಪಿನಲ್ಲಿ, ಕೃಷ್ಣ ಜನ್ಮಭೂಮಿಗೆ 1991ರ ಕಾಯ್ದೆ ಅನ್ವಯವಾಗುವುದಿಲ್ಲ ಎಂದು ಹೇಳಿದೆ. ಈ ತೀರ್ಪಿನ ಸಮರ್ಥನೆಗಾಗಿ, 1968ರಲ್ಲಿ ಮಥುರಾ ಮಸೀದಿಯ ಈದ್ಗಾ ಸಮಿತಿ ಮತ್ತು ಶ್ರೀಕೃಷ್ಣ ಜನ್ಮಭೂಮಿ ಸೇವಾ ಸಂಘಗಳು ಸೇರಿ ಮಾಡಿಕೊಂಡ ಕರಾರು ಒಪ್ಪಂದವನ್ನು ಉಲ್ಲೇಖಿಸಿದೆ. ಶ್ರೀಕೃಷ್ಣ ಜನ್ಮಭೂಮಿ ಸೇವಾ ಸಂಘಕ್ಕೆ ಶ್ರೀಕೃಷ್ಣನನ್ನು ಪ್ರತಿನಿಧಿಸುವ ಮತ್ತು ಕೃಷ್ಣ ಜನ್ಮಸ್ಥಾನವನ್ನು ಈದ್ಗಾ ಸಮಿತಿಗೆ ಹಸ್ತಾಂತರಿಸುವ ಅಧಿಕಾರ ಇರಲಿಲ್ಲವೆಂದು ಮೇಲ್ನೋಟಕ್ಕೇ ಸಾಬೀತಾಗಿರುವುದರಿಂದ ಮತ್ತು ಈ ಹಸ್ತಾಂತರ ಪರಸ್ಪರ ಒಪ್ಪಂದದಿಂದ ಮಾಡಿಕೊಂಡ ಕಾರಣ 1991ರ ಕಾಯ್ದೆಯ ಪರಿಧಿಯಿಂದ ಹೊರಗಿದೆ. ಹೀಗಾಗಿ, ಕೃಷ್ಣ ಜನ್ಮಸ್ಥಾನದ ವಿಚಾರದಲ್ಲಿನ ಮಥುರಾ ಜಿಲ್ಲಾ ನ್ಯಾಯಾಲಯದ ತೀರ್ಮಾನ ನ್ಯಾಯಬದ್ಧವಾಗಿದೆ.

ನಮ್ಮ ಕಾನೂನು, ದೇವರ ವಿಗ್ರಹವನ್ನು ಶಾಶ್ವತ ಅಪ್ರಾಪ್ತ ವಯಸ್ಕನೆಂದು ಪರಿಗಣಿಸುತ್ತದೆ. ಹೀಗಾಗಿ, ವಿಗ್ರಹಗಳ ಹೆಸರಿನಲ್ಲಿ ಹೂಡುವ ದಾವೆಗಳಿಗೆ ಕಾಲಮಿತಿ ಕಾಯ್ದೆ ಅನ್ವಯವಾಗುವುದಿಲ್ಲ. ಭಕ್ತನೊಬ್ಬನಿಗೆ ಪೂಜೆ ಸಲ್ಲಿಸುವ ಹಕ್ಕಿರುವಂತೆ, ವಿಗ್ರಹ ಅಥವಾ ದೇವರಿಗೆ ಪೂಜಿಸಲ್ಪಡುವ ಹಕ್ಕೂ ಇದೆ. ಹಾಗೆಯೇ, ವಿಗ್ರಹದ ಪರವಾಗಿ ಭಕ್ತ ಅಥವಾ ಪರಿಜನರು ದಾವೆ ಹೂಡಬಹುದೆಂದು ನೂರಾರು ವರ್ಷಗಳ ಹಿಂದೆಯೇ ತೀರ್ಮಾನವಾಗಿದೆ. ಅಯೋಧ್ಯೆ ಮತ್ತು ಮಥುರಾ ಪ್ರಕರಣಗಳಲ್ಲಿ ಆಯಾ ದೇವರುಗಳ ಹೆಸರಿನಲ್ಲೇ ದಾವೆ ಹೂಡಲಾಗಿದೆ. ಕಾಶಿಯ ವಿಚಾರದಲ್ಲಿ ಭಕ್ತರು ದಾವೆ ಹೂಡಿದ್ದಾರೆ.

'ಧಾರ್ಮಿಕ ಹಕ್ಕು' ಮೂಲಭೂತ ಹಕ್ಕೆಂದು ಸಾಬೀತಾಗಿದೆ. ಸಂವಿಧಾನಬದ್ಧ ಧಾರ್ಮಿಕ ಹಕ್ಕನ್ನು, 1991ರ ಕಾಯ್ದೆಯು ಚ್ಯುತಿಗೊಳಿಸುತ್ತದೆ ಎಂಬ ಪ್ರತಿಪಾದನೆಯಿದೆ. ಇದೇ ಪ್ರತಿಪಾದನೆಯಂತೆ, ಈ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಹಲವು ದಾವೆಗಳನ್ನು ಹೂಡಲಾಗಿದೆ.

1995ರ ವಕ್ಫ್ ಕಾಯ್ದೆಯಡಿ, ಒಂದು ಸ್ಥಿರಾಸ್ತಿ ಒಮ್ಮೆ ವಕ್ಫ್ ಎಂದು ಘೋಷಿತವಾದರೆ ಅದು ಸರ್ವಕಾಲಕ್ಕೂ ವಕ್ಫ್ ಜಮೀನಾಗಿಯೇ ಇರುತ್ತದೆಯೆಂದು ಸುಪ್ರೀಂ ಕೋರ್ಟ್ ತೀರ್ಪನ್ನಿತ್ತಿದೆ. ಇದೇ ನಿಯಮ ಹಿಂದೂಗಳಿಗೂ ಅನ್ವಯವಾಗದೇ?

ಹಿಂದೂ ದೇವಾಲಯಗಳು ಕೇವಲ ಪೂಜಾಸ್ಥಳಗಳಲ್ಲ. ದೇವಸ್ಥಾನಗಳಲ್ಲಿ ದೇವರು ವಾಸಿಸುತ್ತಾನೆ/ಳೆ ಎಂಬುದು ಹಿಂದೂಗಳ ಶ್ರದ್ಧೆ. ದಾಳಿ ಮಾಡಿ ದೇವಾಲಯಗಳನ್ನು ನಾಶಗೊಳಿಸಿದ ಮಾತ್ರಕ್ಕೆ ಅವು ತಮ್ಮ ಪೂಜಾರ್ಹತೆಯನ್ನು ಕಳೆದುಕೊಂಡು ತಂತಾನೇ ಬೇರೊಂದು ಧರ್ಮದ ಪೂಜಾ ಕೇಂದ್ರಗಳಾಗಿ ಪರಿವರ್ತಿತಗೊಳ್ಳುತ್ತವೆಯೇ? ಭಗ್ನ ವಿಗ್ರಹಗಳಿಗೆ ಪೂಜೆ ಸಲ್ಲದಿರಬಹುದು, ಹಾಗೆಂದು, ಹಿಂದೂ ದೇವಾಲಯಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಳ್ಳಲು ಸಾಧ್ಯವೇ?

ಕೋಮುಭಾವನೆಗಳು ಉತ್ತುಂಗಕ್ಕೆ ತಲುಪಿದ್ದ 1940ರ ದಶಕದಲ್ಲಿ ಕಲ್ಕತ್ತೆಯ ಮಹಾಬೋಧಿ ಸಂಘದ ಅಧ್ಯಕ್ಷರಾಗಿದ್ದ ಶ್ಯಾಮಪ್ರಸಾದ್ ಮುಖರ್ಜಿಯವರ ಅವಿರತ ಪ್ರಯತ್ನದಿಂದ, ಅನೇಕ ಶತಮಾನಗಳಿಂದ ಹಿಂದೂಗಳೇ ಪೂಜಿಸುತ್ತಿದ್ದ ಬುದ್ಧಗಯೆಯ ದೇವಸ್ಥಾನವನ್ನು ಬೌದ್ಧರಿಗೆ ಬಿಟ್ಟುಕೊಡಲಾಯಿತು.

ಈ ಉದಾತ್ತ ಪರಂಪರೆಯ ವಾರಸುದಾರರಾದ ನಾವು, ವರ್ತಮಾನದಲ್ಲಿ ರಾಜಕೀಯ ಅಭೀಪ್ಸೆ, ಕಾನೂನು ಕಟ್ಟಳೆಗಳನ್ನೆಲ್ಲ ಒಂದು ಕ್ಷಣ ಬದಿಗಿಡಬೇಕಿದೆ. ಬಂಧುತ್ವ ಭಾವದಿಂದ ಶಾಶ್ವತ ಪರಿಹಾರ ಕಂಡುಕೊಳ್ಳುವೆಡೆ ಸಮಾಜದ ಸಮಸ್ತರೂ ತತ್ಪರರಾಗಬೇಕಿದೆ.

ಲೇಖಕ: ಹೈಕೋರ್ಟ್ ವಕೀಲರು

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 132

ಅಗ್ನಿಗಾಹುತಿಯಾದ ಸಂಧ್ಯೆ

ಸಂಧ್ಯೆಯ ಕೋರಿಕೆಗಳನ್ನು ಕೇಳಿದ ಭಕ್ತವತ್ಸಲನಾದ ಶಿವ ಮತ್ತೂ ಪ್ರಸನ್ನನಾಗಿ 'ಎಲೈ ಸಂಧ್ಯಾದೇವಿ, ನಿನ್ನ ಪಾಪವೆಲ್ಲವೂ ಭಸ್ಮವಾಯಿತು. ನಿನ್ನಲ್ಲಿನ ನನ್ನ ಕೋಪವು ಶಾಂತವಾಯಿತು. ತಪಸ್ಸಿನಿಂದ ನೀನು ಪರಿಶುದ್ಧಳಾಗಿರುವೆ. ನೀನು ಕೇಳಿದ ವರಗಳನ್ನೆಲ್ಲಾ ಕೊಟ್ಟಿರುವೆ. ನಿನ್ನ ಮಹತ್ತಾದ ತಪಸ್ಸಿನಿಂದ ಲೋಕಕ್ಕೆ ಕಲ್ಯಾಣವಾಗಲಿದೆ' ಎಂದ ಪರಶಿವ ಈರೀತಿ ಹೇಳಿದ.

ಪ್ರಾಣಿಗಳಿಗೆ ಮೊದಲನೆಯದು ಬಾಲ್ಯಾವಸ್ಥೆ, ಎರಡನೆಯದು ಕೌಮಾರಾವಸ್ಥೆ, ಆಮೇಲೆ ಯೌವನಾವಸ್ಥೆ ಬರುವುದು. ವಾರ್ಧಕ್ಯಾವಸ್ಥೆಯು ನಾಲ್ಕನೆಯ ಅವಸ್ಥೆ. ಇದರಲ್ಲಿ ಮೂರನೆಯದಾದ ಯೌವನಾಸ್ಥೆಯಲ್ಲಿಯೇ ಪ್ರಾಣಿಗಳು ಕಾಮೇಚ್ಛೆಯುಳ್ಳವರಾಗುವರು. ಕೆಲವೆಡೆ ಕೌಮಾರಾವಸ್ಥೆಯ ಕೊನೆಯಲ್ಲಿಯೂ ಕಾಮ ವಿಕಾರವುಂಟಾಗುವುದು. ನಿನ್ನ ತಪಸ್ಸಿಗೆ ಮೆಚ್ಚಿ ನಾನು ಪ್ರಾಣಿಗಳು ಜನಿಸಿದೊಡನೆಯೇ ಕಾಮ ವಿಕಾರಕ್ಕೊಳಗಾಗಬಾರದೆಂಬ ಮರ್ಯಾದೆಯನ್ನು ಜಗತ್ತಿನಲ್ಲಿ ಸ್ಥಾಪಿಸಿರುವೆ. ನಿನ್ನಂಥ ಪತಿವ್ರತೆಯು ಮತ್ತೊಬ್ಬಳು ಯಾರೂ ಆಗಲಾರರು. ನಿನ್ನ ಪತಿಯ ಹೊರತು ಮಿಕ್ಕ ಯಾವ ಪುರುಷನಾದರೂ ಕಾಮದೃಷ್ಟಿಯಿಂದ ನಿನ್ನನ್ನು ನೋಡಿದರೆ, ಅವನು ನಪುಂಸಕನಾಗುವನು. ನಿನ್ನ ಪತಿಯು ಮಹಾಮಹಿಮನೂ ತಪಸ್ವಿಯೂ ಸುಂದರನೂ ಆಗಿದ್ದು ಏಳು ಕಲ್ಪಗಳವರೆಗೆ ನಿನ್ನೊಡನೆ ಜೀವಿಸಿರುವನು ಎಂದು ಶಿವ ಆಕೆ ಪ್ರಾರ್ಥಿಸಿದ ವರಗಳನ್ನೆಲ್ಲಾ ಅನುಗ್ರಹಿಸಿದ. ಅಲ್ಲದೆ, ಈ ಜನ್ಮದಲ್ಲಿಯೇ ಮಾಡಬೇಕಾದ ಇನ್ನೊಂದು ವಿಷಯವನ್ನು ಸಂಧ್ಯೆಗೆ ಹೇಳಿದ.

ಹಿಂದೆ ನೀನು ಅಗ್ನಿಯಲ್ಲಿ ಶರೀರತ್ಯಾಗಮಾಡುವೆನೆಂದು ಸಂಕಲ್ಪಿಸಿರುವೆ. ಅದನ್ನ ಹೇಗೆ ಮಾಡಬೇಕೆಂಬ ಉಪಾಯವನ್ನು ಹೇಳುವೆನು. ಮೇಧಾತಿಥಿ ಎಂಬ ಮುನಿಯು ಹನ್ನೆರಡು ವರ್ಷ ಪರ್ಯಂತ ನಡೆಯುವಂತಹ ಒಂದು ಯಾಗವನ್ನು ಮಾಡುತ್ತಿದ್ದಾನೆ. ಆ ಯಾಗದ ಉರಿಯುತ್ತಿರುವ ಅಗ್ನಿಯಲ್ಲಿ ನಿನ್ನ ಶರೀರತ್ಯಾಗವನ್ನು ಮಾಡು. ಈ ಬೆಟ್ಟದ ಕೆಳತಪ್ಪಲಲ್ಲಿನ ಚಂದ್ರಭಾಗಾನದಿಯ ದಡದಲ್ಲಿ ತಾಪಸಾಶ್ರಮವಿದೆ. ಅಲ್ಲೇ ಯಾಗವನ್ನು ಮಾಡುತ್ತಿದ್ದಾನೆ. ಮುನಿಗಳಿಗೆ ಕಾಣಿಸದಂತೆ ಆ ಯಾಗಶಾಲೆಗೆ ಮರೆಯಾಗಿ ಹೋಗಿ ಅಗ್ನಿಕುಂಡದಲ್ಲಿ ಶರೀರವನ್ನು ತ್ಯಜಿಸು. ಮುಂದೆ ನನ್ನ ಅನುಗ್ರಹದಿಂದ ಅಗ್ನಿಯಲ್ಲಿ ಜನಿಸಿ ನೀನು ಮೇಧಾತಿಥಿಮುನಿಯ ಪುತ್ರಿಯಾಗುವೆ. ಅಗ್ನಿಗೆ ಬೀಳುವ ಮುನ್ನ ನೀನು ಯಾರನ್ನು ಪತಿಯಾಗಿ ವರಿಸಬೇಕೆಂದಿರುವೆಯೋ, ಅವನನ್ನು ಮನಸ್ಸಿನಲ್ಲಿ ಚಿಂತಿಸುತ್ತಾ ಅಗ್ನಿಯಲ್ಲಿ ಶರೀರವನ್ನು ತ್ಯಜಿಸು. ನೀನು ಈ ಬೆಟ್ಟದಲ್ಲಿ ಗಾಢವಾಗಿ ತಪಸ್ಸನ್ನಾಚರಿಸುತ್ತಲಿರುವಾಗ ನಾಲ್ಕು ಯುಗಗಳು ಕಳೆದುಹೋದುವು. ಆ ನಾಲ್ಕು ಯುಗಗಳಲ್ಲಿ ಮೊದಲನೆಯದಾದ ಕೃತಯುಗವು ಕಳೆದು ತ್ರೇತಾಯುಗವು ಬಂದಿತು. ಆ ಯುಗದ ಮೊದಲನೆಯ ಭಾಗದಲ್ಲಿ ದಕ್ಷಬ್ರಹ್ಮನಿಗೆ ಅನೇಕ ಕನ್ಯೆಯರು ಜನಿಸಿದರು. ಸೌಂದರ್ಯ ಮತ್ತು ಶೀಲ ಸಂಪನ್ನರಾದ ಅವರಿಗೆ ಯೋಗ್ಯವಾಗಿ ಮದುವೆಯೂ ಆಯಿತು. ಆ ಕನ್ಯೆಯರಲ್ಲಿ ಅಶ್ವಿನೀ ಮೊದಲಾದ ಇಪತ್ತೇಳು ಜನ ಕನ್ಯೆಯರನ್ನು ಚಂದ್ರನಿಗೆ ದಕ್ಷನು ಮದುವೆ ಮಾಡಿಕೊಟ್ಟ. ಆದರೆ ಚಂದ್ರನು ಮಿಕ್ಕ ಪತ್ನಿಯರನ್ನೆಲ್ಲಾ ಬಿಟ್ಟು ರೋಹಿಣಿಯೊಬ್ಬಳಲ್ಲಿಯೇ ಹೆಚ್ಚು ಪ್ರೀತಿಯುಳ್ಳವನಾದ.

ಅದಕ್ಕಾಗಿ ದಕ್ಷಪ್ರಜಾಪತಿಯು ತುಂಬಾ ಕೋಪಗೊಂಡು ಚಂದ್ರನನ್ನು 15 ದಿನ ಕೃಶನಾಗಿ, ಮತ್ತೆ 15 ದಿನ ವಿಕಾಸವಾಗುವಂತೆ ಶಪಿಸಿದ. ಚಂದ್ರನ ಶಾಪವನ್ನು ಹೋಗಲಾಡಿಸಲು ನೀನು ತಪಸ್ಸು ಮಾಡುತ್ತ ಕುಳಿತಿರುವ ಪ್ರದೇಶಕ್ಕೆ ದೇವತೆಗಳು ಬಂದಿದ್ದರು. ಆದರೆ ನೀನು ನನ್ನಲ್ಲಿಯೇ ನೆಟ್ಟ ಮನಸ್ಸುಳ್ಳವಳಾಗಿ ಆಕಾಶದೆಡೆಗೆ ನೋಡುತ್ತಾ ಧ್ಯಾನಿಸುತ್ತಲಿದ್ದ ಕಾರಣ, ಬ್ರಹ್ಮನೇ ಮೊದಲಾದ ದೇವತೆಗಳು ನಿನಗೆ ಕಾಣಿಸಲಿಲ್ಲ. ಚಂದ್ರನ ಶಾಪವನ್ನು ಹೋಗಲಾಡಿಸಲು ಬ್ರಹ್ಮನು ಇಲ್ಲಿ ಚಂದ್ರಭಾಗಾನದಿಯನ್ನು ನಿರ್ಮಿಸಿ ಹರಿಯಿಸಿದ. ಅಂದಿನಿಂದ ಮೇಧಾತಿಥಿ ಮುನಿಯು ಈ ನದೀತೀರದಲ್ಲಿ ವಾಸವಾಗಿದ್ದಾನೆ. ಅವನಂತಹ ತಪಸ್ವಿಯು ಹಿಂದೆ ಜನಿಸಿಲ್ಲ. ಮುಂದೂ ಜನಿಸಲಾರರು. ಆ ಮುನಿಯೇ ಈಗ ಜ್ಯೋತಿಷ್ಟೋಮ ಎಂಬ ಮಹಾಯಜ್ಞವನ್ನು ನಡೆಸುತ್ತಿದ್ದಾನೆ. ಆ ಯಾಗದಲ್ಲಿ ಶರೀರವನ್ನು ತ್ಯಜಿಸು. ಈಗ ನೀನು ಅತ್ಯಂತ ಪರಿಶುದ್ಧಳಾಗಿರುವೆ – ಎಂದು ಸಂಧ್ಯೆಗೆ ಉಪದೇಶಿಸಿ, ದೇವದೇವನಾದ ಶಿವನು ಅಲ್ಲಿಯೇ ಅಂತರ್ಧಾನನಾದ.

ಇಲ್ಲಿಗೆ ಶಿವಪುರಾಣದ ರುದ್ರಸಂಹಿತೆಯಲ್ಲಿನ ಸತೀಖಂಡದ ಆರನೆಯ ಅಧ್ಯಾಯವು ಮುಗಿಯುತ್ತದೆ.

ಸಾಮರಸ್ಯಕ್ಕಾಗಿ ಕಾಯ್ದೆಯ ಸಂರಕ್ಷಣೆ ಅಗತ್ಯ

ಧಾರ್ಮಿಕ ಸ್ಥಳವೊಂದರ ಸ್ವರೂಪವು 1947ರಲ್ಲಿ ಹೇಗೆ ಇತ್ತು ಎಂಬುದನ್ನು ದೃಢಪಡಿಸಿಕೊಳ್ಳಬೇಕು ಎಂಬ ಯಾವುದೇ ಬೇಡಿಕೆಯ ಒಳಗೆಯೇ ಹತ್ತಾರು ಸಂಕೀರ್ಣತೆಗಳು ಇವೆ. ಪೂಜಾ ಸ್ಥಳವೊಂದರ ಮೂಲ ಧಾರ್ಮಿಕ ಸ್ವರೂಪವನ್ನು ದೃಢಪಡಿಸಿಕೊಳ್ಳಲು ಬೇಕಾದ ಪುರಾತತ್ವ ಮತ್ತು ಚಾರಿತ್ರಿಕ ಸಾಧನಗಳು ನಮ್ಮ ಬಳಿ ಇವೆಯೇ ಎಂಬಲ್ಲಿಂದ ತೊಡಗಿ, ಇಂತಹ ವಿಚಾರಗಳ ಬಗ್ಗೆ ತೀರ್ಪು ನೀಡಲು ಬೇಕಾದ ಕೌಶಲಗಳು ನ್ಯಾಯಾಲಯಗಳಿಗೆ ಇವೆಯೇ ಎಂಬಲ್ಲಿ ವರೆಗೆ ಈ ಸಂಕೀರ್ಣತೆಗಳು ವ್ಯಾಪಿಸಿವೆ. ಈ ಎಲ್ಲ ಸಂಕೀರ್ಣತೆಗಳನ್ನು ಗಮನದಲ್ಲಿ ಇರಿಸಿಕೊಂಡೇ ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆಯನ್ನು 1991ರಲ್ಲಿ ರೂಪಿಸಲಾಗಿದೆ

• ಜೈನಾ ಕೊಠಾರಿ

ಸುಪ್ರೀಂ ಕೋರ್ಟ್‌ನಲ್ಲಿ ಇತ್ತೀಚೆಗೆ ವಿಚಾರಣೆಗೆ ಒಳಗಾಗಿ ಮತ್ತೆ ವಾರಾಣಸಿ ಜಿಲ್ಲಾ ನ್ಯಾಯಾಲಯಕ್ಕೆ ವಹಿಸಲಾದ ವಾರಾಣಸಿಯ ಜ್ಞಾನವಾಪಿ ಮಸೀದಿ ಪ್ರಕರಣವೂ ಸೇರಿದಂತೆ ಹಲವು ಪ್ರಕರಣಗಳು ಧಾರ್ಮಿಕ ಸ್ಥಳಗಳ ಮೂಲಗಳ ಬಗ್ಗೆ ಸಂಕೀರ್ಣವಾದ ಹಲವು ಪ್ರಶ್ನೆಗಳನ್ನು ಎತ್ತಿವೆ. ತಾಜ್ ಮಹಲ್, ಕುತುಬ್ ಮಿನಾರ್ ಸೇರಿದಂತೆ ಪ್ರಸಿದ್ಧವಾದ ಧಾರ್ಮಿಕ ಕಟ್ಟಡಗಳು ಮತ್ತು ಸ್ಮಾರಕಗಳ ಮೂಲಗಳ ಬಗ್ಗೆ ಪ್ರಶ್ನೆಗಳನ್ನು ಎತ್ತಲಾಗಿದೆ. ಹಿಂದೂ ದೇವಾಲಯಗಳನ್ನು ಧ್ವಂಸ ಮಾಡಿ, ಅದೇ ಸ್ಥಳದಲ್ಲಿ ಅಥವಾ ದೇವಾಲಯದ ಮೇಲೆಯೇ ಇವುಗಳನ್ನು ಕಟ್ಟಲಾಗಿದೆ ಎಂದು ಹೇಳಲಾಗುತ್ತಿದೆ. ಈ ವಿಚಾರದಲ್ಲಿ ಕಾನೂನು ಹೇಳುವುದೇನು?

ಕೆಲವು ಪ್ರಕರಣಗಳಲ್ಲಿ, ನಿರ್ದಿಷ್ಟ ಸ್ಥಳವೊಂದರಲ್ಲಿರುವ ಕಟ್ಟಡದ ಮೂಲ ಸ್ವರೂಪ ಏನು ಎಂಬುದನ್ನು ತಿಳಿಯುವುದಕ್ಕಾಗಿ ನ್ಯಾಯಾಲಯಗಳು ಕೆಲವು ದಶಕಗಳು ಅಥವಾ ಕೆಲವು ಶತಮಾನಗಳಷ್ಟು ಹಿಂದೆ ಹೋಗಬೇಕಾಗಿದೆಯೇ? ಹಾಗೆ ಮಾಡುವುದಕ್ಕೆ ಸಾಧ್ಯವೇ? 1991ರಲ್ಲಿ ಪೂಜಾಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ ರೂಪುಗೊಂಡಿದೆ. ಧಾರ್ಮಿಕ ಸ್ಥಳಗಳ ಸ್ವರೂಪವನ್ನು ನಮಗೆ ಸ್ವಾತಂತ್ರ್ಯ ಬಂದ 1947ರ ಆಗಸ್ಟ್ 15ರಂದು ಇದ್ದ ರೀತಿಯಲ್ಲಿಯೇ ಉಳಿಸಿಕೊಳ್ಳಬೇಕು ಎಂಬುದು ಈ ಕಾಯ್ದೆಯ ಮುಖ್ಯ ಅಂಶವಾಗಿದೆ. ಯಾವುದೇ ಒಂದು ಧರ್ಮದ ಪೂಜಾಸ್ಥಳವನ್ನು ಬೇರೊಂದು ಧರ್ಮದ ಪೂಜಾಸ್ಥಳವಾಗಿ ಪರಿವರ್ತಿಸುವುದನ್ನು ಈ ಕಾಯ್ದೆಯು ನಿಷೇಧಿಸುತ್ತದೆ.

1947ರ ಆಗಸ್ಟ್ 15ಕ್ಕೂ ಹಿಂದೆ ಇದ್ದ ಯಾವುದೇ ಪೂಜಾ ಸ್ಥಳದ ಧಾರ್ಮಿಕ ಸ್ವರೂಪವನ್ನು ಪ್ರಶ್ನಿಸಿ ಯಾವುದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸುವುದನ್ನು ಅಥವಾ ಕಾನೂನು ಪ್ರಕ್ರಿಯೆಗಳನ್ನು ನಡೆಸುವುದನ್ನು ಈ ಕಾಯ್ದೆಯು ನಿಷೇಧಿಸುತ್ತದೆ. ಪೂಜಾ ಸ್ಥಳವು 1947ರ ಆಗಸ್ಟ್ 15ರಂದು ಇದ್ದ ಸ್ಥಿತಿ ಅಬಾಧಿತವಾಗಿಯೇ ಉಳಿಯಬೇಕು ಎಂದು ಕಾಯ್ದೆಯು ಹೇಳುತ್ತದೆ. ಪ್ರಾಚೀನವಾದ ಅಥವಾ ಚಾರಿತ್ರಿಕ ಸ್ಮಾರಕವನ್ನು ಹೊಂದಿರುವ ಪೂಜಾ ಸ್ಥಳವು ಈ ಕಾಯ್ದೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂಬುದನ್ನೂ ಕಾಯ್ದೆಯಲ್ಲಿ ಸ್ಪಷ್ಟಪಡಿಸಲಾಗಿದೆ. ರಾಮ ಜನ್ಮಭೂಮಿ–ಬಾಬರಿ ಮಸೀದಿ ಪ್ರಕರಣವನ್ನು ಈ ಕಾಯ್ದೆಯ ವ್ಯಾಪ್ತಿಯಿಂದ ಹೊರಗೆ ಇರಿಸಲಾಗಿತ್ತು ಮತ್ತು ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಈಗಾಗಲೇ ತೀರ್ಪನ್ನೂ ನೀಡಿದೆ.

ಕಾನೂನು ಹೀಗೆ ಇದ್ದರೂ ಧಾರ್ಮಿಕ ಸ್ಥಳಗಳ ಸ್ವರೂಪವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಹಲವು ಅರ್ಜಿಗಳನ್ನು ನ್ಯಾಯಾಲಯಗಳು ವಿಚಾರಣೆಗೆ ಎತ್ತಿಕೊಂಡಿವೆ. ಕೆಲವು ಧಾರ್ಮಿಕ ಸ್ಥಳಗಳ ಸಮೀಕ್ಷೆಗೂ ಆದೇಶ ಕೊಟ್ಟಿವೆ. ಧಾರ್ಮಿಕ ಸ್ಥಳವೊಂದರ ಮೂಲ ಸ್ವರೂಪವು ಏನು ಎಂಬುದನ್ನು ದೃಢಪಡಿಸಿಕೊಳ್ಳುವುದನ್ನು ಈ ಕಾಯ್ದೆಯು ನಿಷೇಧಿಸಿಲ್ಲ ಎಂದು ಜ್ಞಾನವಾಪಿ ಮಸೀದಿ ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಹೇಳಿದೆ.

ಆದರೆ, ಒಮ್ಮೆ ಇಂತಹ ಸಮೀಕ್ಷೆಗಳಿಗೆ ಅವಕಾಶ ಮಾಡಿಕೊಟ್ಟರೆ ಅದು ಜಾರು ಹಾದಿಯೇ ಆಗುತ್ತದೆ. ಅದು ಮುಂದೆ, ಪೂಜಾಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ–1991 ಅನೂರ್ಜಿತಗೊಳ್ಳಲು ಕಾರಣವಾಗಬಹುದು. ಪೂಜಾ ಸ್ಥಳವೊಂದರ ಧಾರ್ಮಿಕ ಸ್ವರೂಪವನ್ನು ಪ್ರಶ್ನಿಸುವುದಕ್ಕೆ ಇದು ಅವಕಾಶ ಕೊಡಬಹುದು. 1991ರ ಕಾಯ್ದೆಯು ಈ ಅವಕಾಶವನ್ನು ನಿಷೇಧಿಸಿದೆ.

ಪೂಜಾ ಸ್ಥಳಗಳ ಧಾರ್ಮಿಕ ಸ್ವರೂಪವನ್ನು ಪ್ರಶ್ನಿಸಿ ದೇಶದಾದ್ಯಂತ ಹಲವು ವಿವಾದಗಳು ಸೃಷ್ಟಿಯಾದ ಬಳಿಕ, ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ–1991ಕ್ಕೆ ಸಾಂವಿಧಾನಿಕ ಸವಾಲು ಎದುರಾಗಬಹುದು. ಮೂರು ದಶಕಗಳಿಗೂ ಹಳೆಯದಾದ ಈ ಕಾಯ್ದೆಗೆ, 2022ರಲ್ಲಿ ಸವಾಲು ಎದುರಾಗಿದೆ ಎಂಬುದು ಆಸಕ್ತಿಕರ.

ಧಾರ್ಮಿಕ ಸ್ಥಳವೊಂದರ ಸ್ವರೂಪವು 1947ರಲ್ಲಿ ಹೇಗೆ ಇತ್ತು ಎಂಬುದನ್ನು ದೃಢಪಡಿಸಿಕೊಳ್ಳಬೇಕು ಎಂಬ ಯಾವುದೇ ಬೇಡಿಕೆಯ ಒಳಗೆಯೇ ಹತ್ತಾರು ಸಂಕೀರ್ಣತೆಗಳು ಇವೆ. ಪೂಜಾ ಸ್ಥಳವೊಂದರ ಮೂಲ ಧಾರ್ಮಿಕ ಸ್ವರೂಪವನ್ನು ದೃಢಪಡಿಸಿಕೊಳ್ಳಲು ಬೇಕಾದ ಪುರಾತತ್ವ ಮತ್ತು ಚಾರಿತ್ರಿಕ ಸಾಧನಗಳು ನಮ್ಮ ಬಳಿ ಇವೆಯೇ ಎಂಬಲ್ಲಿಂದ ತೊಡಗಿ, ಇಂತಹ ವಿಚಾರಗಳ ಬಗ್ಗೆ ತೀರ್ಪು ನೀಡಲು ಬೇಕಾದ ಕೌಶಲಗಳು ನ್ಯಾಯಾಲಯಗಳಿಗೆ ಇವೆಯೇ ಎಂಬಲ್ಲಿ ವರೆಗೆ ಈ ಸಂಕೀರ್ಣತೆಗಳು ವ್ಯಾಪಿಸಿವೆ.

ಈ ಎಲ್ಲ ಸಂಕೀರ್ಣತೆಗಳನ್ನು ಗಮನದಲ್ಲಿ ಇರಿಸಿಕೊಂಡೇ ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆಯನ್ನು 1991ರಲ್ಲಿ ರೂಪಿಸಲಾಗಿದೆ. ಪೂಜಾ ಸ್ಥಳಗಳ ಧಾರ್ಮಿಕ ಸ್ವರೂಪವನ್ನು ರಕ್ಷಿಸುವುದಕ್ಕಾಗಿ ಸ್ವಾತಂತ್ರ್ಯ ಬಂದ ದಿನಾಂಕವನ್ನು ಗಡಿರೇಖೆಯಾಗಿ ಇರಿಸಿಕೊಳ್ಳಲಾಗಿದೆ. ಹಾಗಾಗಿಯೇ ಪೂಜಾ ಸ್ಥಳಗಳ ಧಾರ್ಮಿಕ ಸ್ವರೂಪವನ್ನು ಪ್ರಶ್ನಿಸಿದ ಅರ್ಜಿಗಳನ್ನು ಪುರಸ್ಕರಿಸಬಾರದು ಮತ್ತು ಪ್ರಕರಣಗಳ ಮರು ವಿಚಾರಣೆ ನಡೆಸಬಾರದು. ದೇಶದಲ್ಲಿರುವ ಎಲ್ಲ ಧರ್ಮಗಳನ್ನು ಗೌರವಿಸುವುದಕ್ಕಾಗಿ ಮತ್ತು ಧರ್ಮಗಳ ನಡುವೆ ಧಾರ್ಮಿಕ ಸಾಮರಸ್ಯವನ್ನು ಕಾಯ್ದುಕೊಳ್ಳುವುದಕ್ಕಾಗಿ ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ–1991ರ ಆಶಯವನ್ನು ಜಾರಿಗೊಳಿಸಬೇಕಾದ ಅಗತ್ಯ ಇದೆ.

ಲೇಖಕಿ: ಸುಪ್ರೀಂ ಕೋರ್ಟ್‌ನಲ್ಲಿ ಹಿರಿಯ ವಕೀಲರು

ಪದಬಂಧ 4971
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ನಿರಂತರ ಎಂದು ಹೀಗೆನ್ನಿ (3)
7.ನವರತ್ನಗಳಲ್ಲಿ ಒಂದಾಗಿರುವ ಹವಳ (3)
9.ಹಾಲಿನಿಂದ ಮಾಡಿದ ಸಿಹಿ ಭಕ್ಷ್ಯ (3)
11.ಗತಿಸಿದ ಪತಿಯೊಡನೆ ಚಿತೆಯೇರುವಿಕೆ (5)
12.ವೃಕ್ಷದ ಹತ್ತಿರ ಸಂಭವಿಸಿದ ಸಾವು (3)
14.ಬೈದಾಟಕ್ಕೊಂದು ಪರ್ಯಾಯ ಪದ (3)
16.ನೂಲು ತೆಗೆಯುವ ಯಂತ್ರ (3)

ಮೇಲಿಂದ ಕೆಳಕ್ಕೆ
1.ಪಾಯಸ ನೆಕ್ಕುತ್ತಿರುವ ಕಾಗೆ! (3)
2.ಖಚಿತವಾಗಿಯೂ ಇದು ಪುಕ್ಕಟೆ! (3)
3.ಕಶ್ಯಪನ ಹೆಂಡತಿ (2)
5.ಶಿರವನ್ನು ಕಡಿಯುವವನು (5)
6.ಸಂವತ್ಸರದ ಹೆಸರೂ ಆಗಿರುವ ರೋಗ! (2)
7.ನಂಜಿನಿಂದ ಕೂಡಿರುವ ಬೆಸ! (3)
8.ಮಣ ಭಾರದ ಹೆಣವನ್ನು ಹೂಳುವ ಜಾಗ (3)
9.ಪಾಕ ಮಾಡುತ್ತಲೇ ಕುಡಿದಿರುವ ಷರಬತ್ತು (3)
10.ಸಿದ್ಧತೆಯನ್ನು ಹೀಗೆನ್ನಿ (3)
13.ಕಾಳಗದ ಕಣ (2)
15.ಲಡಾಯಿ ಜಾಗದಲ್ಲಿರುವ ದಾರದ ಉಂಡೆ (2)
16.ಹೆಬ್ಬೆರಳಿನ ಪಕ್ಕದ ಬೆರಳು (3)
17.ಲೀಲಾಜಾಲವಾಗಿ ನಡೆಸಿದ ಹರಾಜು (3)



4970ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ರದನ 3.ಉತ್ತರ 5.ಭಾವ 6.ಸರಿ 8.ನಸುಕು 9.ತವಕ 11.ಕಮರಿ 12.ವಿಧಾತ 13.ಗುಲಾಮ 15.ಪಾದುಕೆ 17.ಯಮ 19.ಹಾನಿ 20.ತಿಲಕ 21.ರುಮಾಲು

ಮೇಲಿಂದ ಕೆಳಕ್ಕೆ: 1.ರವ 2.ನಯನ 3.ಉಸುಕು 4.ರಸ 5.ಭಾರತ 7.ರಿಪೇರಿ 10.ಕಡಿತ 11.ಕಣಗು 12.ವಿಷಯ 14.ಮಯನಿ 15.ಪಾತಕ 16.ಕೆಸರು 18.ಮತಿ 19.ಹಾಲು

ಸುಡೊಕು 5357

				2		7		3
6		9	5		7		4	
	3			8		6		
	7			9			3	
	9	3	6		8		1	4
4				5		8		
7			8		9			
	5							7
	8			4		9		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5356 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ಗುಂಡಣ್ಣ

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಮೇ 28, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಕೃಷ್ಣ ತ್ರಯೋದಶಿ ಗಂ. 13-10 ನಕ್ಷತ್ರ: ಭರಣಿ ಗಂ. 28-39 ಯೋಗ: ಶೋಭನ ಗಂ. 22-22, ಕರಣ: ವಣಿಜ ಗಂ. 13-10, ವೃಷಭ ಮಾಸದ 13 ನೇ ದಿನ.
ರಾಹುಕಾಲ : ಬೆಳಿಗ್ಗೆ 09:00 – 10:30
ಸೂರ್ಯೋದಯ : 06-06 **ಸೂರ್ಯಾಸ್ತ :** 06-49
ಮುಸ್ಲಿಂ ದಿನಾಂಕ : 26 ಶವ್ವಾಲ್
ಅದೃಷ್ಟ ಸಂಖ್ಯೆ : 10, 13

ಮೇಷ: ಹೊಸ ಯೋಜನೆಗಳಿಗೆ ಚಾಲನೆ ನೀಡುವ ವಿಚಾರವನ್ನು ಸ್ವಲ್ಪ ದಿನ ಮುಂದಕ್ಕೆ ತಳ್ಳುವುದು ಸೂಕ್ತ. ಅನಿವಾರ್ಯದ ಪ್ರಯಾಣಗಳು ಹೆಚ್ಚಾಗಲಿದೆ. ಕಚೇರಿಯಲ್ಲಿ ಸಂತೋಷದ ವಾತಾವರಣ ನಿಮ್ಮಿಂದ ಸೃಷ್ಟಿಯಾಗಲಿದೆ.

ವೃಷಭ: ಸಂಸಾರದ ವಿಷಯಗಳತ್ತ ಗಮನ ಹರಿಸುವಿರಿ. ಆಫೀಸಿನಲ್ಲಿ ಮಹತ್ವದ ಯೋಜನೆಯೊಂದಕ್ಕೆ ನಿಮ್ಮ ಸೃಜನಾತ್ಮಕ ಕಲೆ ಉಪಯೋಗಿಸಿ ಕೊಳ್ಳುವರು, ಅದರ ಫಲವಾಗಿ ಅಧಿಕಾರಿಗಳಿಗೆ ಗಮನಾರ್ಹ ವ್ಯಕ್ತಿಯಾಗುವಿರಿ.

ಮಿಥುನ: ಸಮಾನ ಮನಸ್ಕರಲ್ಲಿ ಒಪ್ಪಂದದಲ್ಲಿ ವ್ಯವಹಾರಗಳನ್ನು ಮಾಡುತ್ತಿರುವವರ ಸಂಘದಲ್ಲಿ ಹಣಕಾಸಿನ ಬಗ್ಗೆ ಸಣ್ಣಪುಟ್ಟ ಭಿನ್ನಾಭಿಪ್ರಾಯ. ಸ್ನೇಹಿತರೊಂದಿಗೆ ಕ್ಲಿಷ್ಟಕರ ಕ್ಷಣಗಳನ್ನು ಕಳೆಯುವಂತಾಗುವುದು.

ಕರ್ಕಾಟಕ: ನಿಮ್ಮಲ್ಲಿ ಹೆಚ್ಚಿನ ಕ್ರಿಯಾತ್ಮಕ ಶಕ್ತಿ ಇದೆ. ಆದರೆ ಕೆಲಸಗಳು ಕಾರ್ಯಗತವಾಗಲು ಆತುರ ಬೇಡ. ಏಕಮುಖ ಪ್ರತಿಭೆಯನ್ನು ನಾಶಮಾಡಿ ಇನ್ನಿತರೇ ವಿಷಯಗಳಿಗೂ ಅಷ್ಟೇ ಪ್ರಾಮುಖ್ಯತೆ ನೀಡಿ. ಷೇರು ದಲ್ಲಾಳಿಗಳಿಗೆ ತೃಪ್ತಿಕರ ದಿನ.

ಸಿಂಹ: ಕೆಲಸದಲ್ಲಿ ಒತ್ತಡ ಹೆಚ್ಚಿರುವುದರಿಂದ ಅತಿಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಿ. ಹೊಸ ಜವಾಬ್ದಾರಿ ವಹಿಸಿ ಬೇಕಾಗುವುದು. ಪ್ರಾಮಾಣಿಕ ಅಧಿಕಾರಿಗಳಿಗೆ ಹಿರಿಯ ಅಧಿಕಾರಿಗಳಿಂದ ಕಿರುಕುಳ ಇರಲಿದೆ.

ಕನ್ಯಾ: ಜಟಿಲ ಸಮಸ್ಯೆ ಬಗೆಹರಿಸಿಕೊಳ್ಳಲು ಸೂಕ್ತ ಸಲಹೆಯನ್ನು ಮಾರ್ಗದರ್ಶಕರಲ್ಲಿ ಕೇಳಿ ತಿಳಿಯುವುದು ಉತ್ತಮ. ಮನೆಯಲ್ಲಿನ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳು ದೂರಾಗುವುದು. ಕಬ್ಬಿಣ ವ್ಯಾಪಾರಸ್ಥರಿಗೆ ಆಶಾದಾಯಕ ದಿನ.

ತುಲಾ: ನಿಮ್ಮ ಯೋಜನೆಗಳು ಕಾರ್ಯಗತ ಗೊಳ್ಳುವುದರ ಬಗ್ಗೆ ಶನೈಶ್ಚರನಲ್ಲಿ ಪೂಜೆ ಪ್ರಾರ್ಥನೆ ನಡೆಸಿ. ಮದುವೆ ಕೆಲಸಗಳಿಗಾಗಿ ಓಡಾಟ. ಹೆಚ್ಚಿನ ಔದಾರ್ಯ ಬುದ್ಧಿಯನ್ನು ತೋರಿದಲ್ಲಿ ವಂಚನೆಗೆ ಒಳಗಾಗುವ ಸನ್ನಿವೇಶಗಳಿವೆ.

ವೃಶ್ಚಿಕ: ವಾಣಿಜ್ಯ ವ್ಯವಹಾರಗಳ ಸಂಬಂಧಪಟ್ಟ ಮುಖ್ಯವಾದ ವ್ಯಕ್ತಿಗಳನ್ನು ಭೇಟಿ ಮಾಡುವ ಕೆಲಸದಲ್ಲಿ ವಿಘ್ನ. ಹೊಸ ಒಪ್ಪಂದ ಮಾಡಿಕೊಳ್ಳುವ ವಿಚಾರದಲ್ಲಿ ಎಚ್ಚರಿಕೆ ವಹಿಸಿ. ವಿದ್ಯಾರ್ಥಿಗಳಿಗೆ ಪ್ರತಿಸ್ಪರ್ಧಿಗಳು ಹುಟ್ಟುವರು.

ಧನು: ಪ್ರಿಯಕರನಲ್ಲಿ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತ ಸಮಯ. ಕಟ್ಟಡದ ಕೆಲಸಗಳು ಪೂರ್ತಿಗೊಂಡು ಮನಸ್ಸಿಗೆ ಸಮಾಧಾನ ಆಗುವುದು. ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಪ್ರಯಾಣ ಬೆಳೆಸುವ ಸಾಧ್ಯತೆ.

ಮಕರ: ಸಹಕಾರಿ ರಂಗದಲ್ಲಿನ ವ್ಯಕ್ತಿಗಳಿಗೆ ಶುಭ ದಿನ. ಕಚೇರಿಯ ತುರ್ತು ಕೆಲಸಗಳತ್ತ ಗಮನ ಕೊಡ ಬೇಕಾಗುವುದು. ಕೆಲಸದಲ್ಲಿ ವಿವೇಚನೆಯ ಕೊರತೆ. ಗೆಲುವು ಸಾಧಿಸಲು ಹೆಜ್ಜೆಹೆಜ್ಜೆಗೂ ವಿವೇಚನೆ ಅಗತ್ಯ.

ಕುಂಭ: ಹಣಕಾಸು ಪರಿಸ್ಥಿತಿ ಉತ್ತಮಗೊಳ್ಳುವುದು. ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ತಯಾರಿ ನಡೆಸಿ. ಕೆಲಸದಲ್ಲಿ ಬದಲಾವಣೆ ಬಯಸಿದಲ್ಲಿ ಬೇರೆ ಸ್ಥಳದಲ್ಲಿ ಕಾರ್ಯ ನಿರ್ವಹಿಸಲು ಸಿದ್ಧರಾಗಿ. ಸಂತೋಷದ ಘಟನೆಗಳು ನಡೆಯುವುದು.

ಮೀನ: ಸಾಮಾಜಿಕ ಸಮಾರಂಭದಲ್ಲಿ ಭಾಗವಹಿಸುವುದರಿಂದ ಮಗನ ಮದುವೆಯ ವಿಚಾರದಲ್ಲಿ ಅನುಕೂಲ. ವಾಹನ ಮಾರಾಟಗಾರರಿಗೆ ಉತ್ತಮ ಆದಾಯ. ಅರಣ್ಯ ಅಧಿಕಾರಿಗಳಿಗೆ ಹೆಚ್ಚಿನ ಕೆಲಸ ಇರಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,170
ಇಂದಿನ ಅಂತ್ಯ	16,352
▲	182
ದಿನದ ಗರಿಷ್ಠ	16,370

ವಿನಿಮಯ ದರ

$ ಡಾಲರ್	77.58
£ ಪೌಂಡ್	97.93
€ ಯುರೊ	83.28
¥ ಯೆನ್ (100ಕ್ಕೆ)	61

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹485

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1590)
ಸೋಯಾ (ರಿಫೈನ್ಡ್)	₹1542 (1545)
ಸೂರ್ಯಕಾಂತಿ (ರಿಫೈನ್ಡ್)	₹1850 (1850)
ಪಾಮೋಲಿನ್	₹1525 (1525)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹315-590
ದ್ವಿತಳಿ (ಬಿ.ವಿ)	₹278-822

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹172
ಆರ್‌ಎಸ್‌ಎಸ್-5	₹165
ಗುಡ್ ಲಾಟ್	₹160

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹800-1000
ಮಧ್ಯಮ	₹600-800
ಸಣ್ಣ	₹300-500

ಚಿನ್ನದ ಧಾರಣೆ ₹ 303, ಬೆಳ್ಳಿ ₹ 1,023 ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನ, ಬೆಳ್ಳಿ ದರ ಏರಿಕೆ ಕಂಡಿದೆ.

10 ಗ್ರಾಂ ಚಿನ್ನದ ದರ ₹ 303ರಂತೆ ಹೆಚ್ಚಾಗಿ ₹ 50,939ಕ್ಕೆ ಏರಿಕೆ ಆಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 1,023 ರಷ್ಟು ಹೆಚ್ಚಾಗಿ ₹ 62,365ಕ್ಕೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆಗೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿಯೂ ಚಿನ್ನದ ದರ ಹೆಚ್ಚಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

₹ 2 ಸಾವಿರ ಮುಖಬೆಲೆಯ ನೋಟುಗಳ ಸಂಖ್ಯೆ ಇಳಿಕೆ

ಮುಂಬೈ (ಪಿಟಿಐ): ದೇಶದಲ್ಲಿ ಚಲಾವಣೆಯಲ್ಲಿ ಇರುವ ₹2 ಸಾವಿರ ಮುಖಬೆಲೆಯ ನೋಟುಗಳ ಸಂಖ್ಯೆ ನಿಧಾನವಾಗಿ ಕಡಿಮೆ ಆಗುತ್ತಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ.

2020ರ ಮಾರ್ಚ್ ಅಂತ್ಯದಲ್ಲಿ ದೇಶದಲ್ಲಿ ಚಲಾವಣೆಯಲ್ಲಿ ಇದ್ದ ಒಟ್ಟು ಕರೆನ್ಸಿ ನೋಟುಗಳಲ್ಲಿ ₹2 ಸಾವಿರ ಮುಖಬೆಲೆಯ ನೋಟುಗಳ ಸಂಖ್ಯೆ 274 ಕೋಟಿ. 2021ರ ಮಾರ್ಚ್ ಅಂತ್ಯದ ವೇಳೆಗೆ 245 ಕೋಟಿಗೆ ಇಳಿಕೆ ಕಂಡಿತು. 2022ರ ಮಾರ್ಚ್ ಅಂತ್ಯದಲ್ಲಿ 214 ಕೋಟಿಗೆ ಇಳಿಕೆ ಆಗಿದೆ ಎಂದು ಆರ್‌ಬಿಐ ಮಾಹಿತಿ ನೀಡಿದೆ.

ಚಲಾವಣೆಯಲ್ಲಿರುವ ನೋಟುಗಳ ಸಂಖ್ಯೆ (ಕೋಟಿಗಳಲ್ಲಿ)

ನೋಟು	2021	2022
₹2,000	245	214
₹500	3,867	4,554

ಮೌಲ್ಯದ ಲೆಕ್ಕದಲ್ಲಿಯೂ ₹ 2 ಸಾವಿರ ಮುಖಬೆಲೆಯ ನೋಟುಗಳ ಪ್ರಮಾಣವು 2021ರಲ್ಲಿ ಶೇ 17.3 ಇದ್ದಿದ್ದು 2022ರಲ್ಲಿ ಶೇ 13.8ಕ್ಕೆ ಇಳಿಕೆ ಆಗಿದೆ.

ಚಲಾವಣೆಯಲ್ಲಿ ಇರುವ ಎಲ್ಲಾ ಮುಖಬೆಲೆಯ ನೋಟುಗಳ ಸಂಖ್ಯೆಯು 2022ರ ಮಾರ್ಚ್ ಅಂತ್ಯದ ವೇಳೆಗೆ 12,437 ಕೋಟಿಯಿಂದ 13,053 ಕೋಟಿಗೆ ಏರಿಕೆ ಆಗಿದೆ. ಮೌಲ್ಯದ ಲೆಕ್ಕದಲ್ಲಿ ₹ 28.27 ಲಕ್ಷ ಕೋಟಿಯಿಂದ ₹ 31.05 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಪ್ರತಿ ಷೇರಿಗೆ ₹ 5 ಲಾಭಾಂಶ: ರುಚಿ ಸೋಯಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರುಚಿ ಸೋಯಾ ಇಂಡಸ್ಟ್ರೀಸ್ ಲಿಮಿಟೆಡ್, 2021–22ನೇ ಹಣಕಾಸು ವರ್ಷಕ್ಕೆ ₹ 2ರ ಮುಖಬೆಲೆಯ ಪ್ರತಿ ಷೇರಿಗೆ ₹ 5 ಲಾಭಾಂಶ ಘೋಷಿಸಿದೆ. ಇದು ಅತ್ಯಂತ ಗರಿಷ್ಠ ಪ್ರಮಾಣದ್ದಾಗಿದೆ ಎಂದು ಕಂಪನಿ ಹೇಳಿಕೊಂಡಿದೆ.

ಕಂಪನಿಯು ಈ ಹಿಂದೆ 2008ರಲ್ಲಿ ಶೇ 25ರಷ್ಟು ಗರಿಷ್ಠ ಲಾಭಾಂಶ ನೀಡಿತ್ತು. 2021–22ನೇ ಹಣಕಾಸು ವರ್ಷದಲ್ಲಿ ಕಂಪನಿಯು ₹ 24,284 ಕೋಟಿ ವರಮಾನ ಗಳಿಸಿದೆ. 2020–21ನೇ ಹಣಕಾಸು ವರ್ಷದಲ್ಲಿ ಇದ್ದ ₹ 16,382 ಕೋಟಿ ವರಮಾನಕ್ಕೆ ಹೋಲಿಸಿದರೆ ಈ ಬಾರಿ ವರಮಾನವು ಶೇ 48ರಷ್ಟು ಹೆಚ್ಚಾಗಿದೆ. ಕಂಪನಿಯ ತೆರಿಗೆ, ಬಡ್ಡಿ, ಸಾಲ ತೀರುವಳಿ (ಇಬಿಐಟಿಡಿಎ) ₹ 1018 ಕೋಟಿಯಿಂದ ₹ 1565 ಕೋಟಿಗೆ ಏರಿಕೆ ಆಗಿದೆ.

2021–22ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಕಂಪನಿಯ ವರಮಾನವು ಶೇ 37ರಷ್ಟು ಹೆಚ್ಚಾಗಿದೆ. ಇಬಿಐಟಿಡಿಎ ಶೇ 54ರಷ್ಟು ಏರಿಕೆ ಕಂಡಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಗೋಧಿ ಕೊರತೆ ಇಲ್ಲ: ತೋಮರ್

ಗ್ವಾಲಿಯರ್ (ಪಿಟಿಐ): ದೇಶದಲ್ಲಿ ಗೋಧಿ ಕೊರತೆ ಇಲ್ಲ. ಆದರೆ, ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡುವುದನ್ನು ತಡೆಯುವ ಉದ್ದೇಶದಿಂದ ಸರ್ಕಾರವು ರಫ್ತು ನಿಷೇಧ ಹೇರಿದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಶುಕ್ರವಾರ ಹೇಳಿದ್ದಾರೆ.

ಕಾರ್ಯಕ್ರಮವೊಂದರ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾರುಕಟ್ಟೆಯಲ್ಲಿ ಸಮತೋಲನ ಕಾಯ್ದುಕೊಳ್ಳುವುದು ಸರ್ಕಾರದ ಜವಾಬ್ದಾರಿ ಆಗಿದೆ. ಹೀಗಾಗಿ ರಫ್ತು ನಿಷೇಧ ಹೇರಲಾಗಿದೆ ಎಂದಿದ್ದಾರೆ.

ಬಂಡವಾಳ ಆಕರ್ಷಣೆಯಲ್ಲಿ ಹಿಂದೆ ಬಿದ್ದಿಲ್ಲ: ಬೊಮ್ಮಾಯಿ

‘₹1 ಲಕ್ಷ ಕೋಟಿ ಹೂಡಿಕೆ ವಿಶ್ವಾಸ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದೇಶಿ ಬಂಡವಾಳ ಸೆಳೆಯುವಲ್ಲಿ ಕರ್ನಾಟಕ ಹಿಂದೆ ಬಿದ್ದಿಲ್ಲ. ದಾವೋಸ್‌ನಲ್ಲಿ ಸರ್ಕಾರದ ಜತೆ ಒಪ್ಪಂದ ಆಗಿರುವ ಮತ್ತು ಹೂಡಿಕೆಗೆ ಆಸಕ್ತಿ ತೋರಿಸಿರುವ ಕಂಪನಿಗಳ ಹೂಡಿಕೆಯ ಮೊತ್ತ ಒಟ್ಟು ಸೇರಿಸಿದರೆ ಸುಮಾರು ₹1 ಲಕ್ಷ ಕೋಟಿ ಹೂಡಿಕೆ ಆಗುವ ಸಾಧ್ಯತೆ ಇದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಕರ್ನಾಟಕವನ್ನು ಆಂಧ್ರದ ಜತೆಗೆ ಹೋಲಿಸಲು ಸಾಧ್ಯವಿಲ್ಲ. ಬೆಂಗಳೂರು ಅಂತರರಾಷ್ಟ್ರೀಯ ನಗರ. ಇಲ್ಲಿ ಬಂಡವಾಳ ಹೂಡಲು ಸಹಿ ಮಾಡಿರುವ ಕಂಪನಿಗಳೂ ಅಂತರರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಕಂಪನಿಗಳಾಗಿವೆ’ ಎಂದೂ ಅವರು ಹೇಳಿದರು.

ದಾವೋಸ್‌ನ ವಿಶ್ವ ಆರ್ಥಿಕ ಶೃಂಗಸಭೆಯಲ್ಲಿ ಪಾಲ್ಗೊಂಡು ಶುಕ್ರವಾರ ಮರಳಿದ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

‘₹1 ಲಕ್ಷ ಕೋಟಿ ಬಂಡವಾಳ ಬರುತ್ತದೆ ಎಂದು ಆಂಧ್ರ ಹೇಳಿಕೊಂಡಿದೆ. ನಮ್ಮಲ್ಲಿ ಹೂಡಿಕೆ ಕಡಿಮೆ ಆಗಿದೆಯೇ’ ಎಂಬ ಪ್ರಶ್ನೆಗೆ, ‘ನಮ್ಮಲ್ಲಿ ₹65 ಸಾವಿರ ಕೋಟಿ ಹೂಡಿಕೆ ಆಗಲಿದೆ. ಸಾಕಷ್ಟು ಕಂಪನಿಗಳು ಒಪ್ಪಂದಕ್ಕೆ ಸಹಿಯನ್ನೂ ಮಾಡಿವೆ’ ಎಂದರು.

‘ಈ ಬಾರಿ ಬೆಂಗಳೂರು ಅಲ್ಲದೆ ರಾಜ್ಯದ ಇತರ ನಗರಗಳಲ್ಲೂ ಹೂಡಿಕೆ ಆಗಲಿದೆ. ಹಿಂದೆ ಹೂಡಿಕೆಗೆ ಹಲವು ಅಡಚಣೆಗಳಿದ್ದವು. ಇದ್ದವು. ನಮ್ಮ ಸರ್ಕಾರ ಅದನ್ನು ನಿವಾರಿಸಿ ಸುಲಲಿತ ವಾಣಿಜ್ಯೋದ್ಯಮಕ್ಕೆ ಅವಕಾಶ ಕಲ್ಪಿಸಿರುವುದನ್ನು ಉದ್ಯಮಿಗಳಿಗೆ ವಿವರಸಲಾಗಿದೆ. ಹಲವು ಉದ್ಯಮಿಗಳು ಹೂಡಿಕೆಗೆ ಮಾಡುವುದಾಗಿ ಉತ್ಸಾಹ ವ್ಯಕ್ತಪಡಿಸಿದ್ದಾರೆ’ ಎಂದು ಬೊಮ್ಮಾಯಿ ಹೇಳಿದರು.

ಬೆಂಗಳೂರಿನಲ್ಲಿ ಮಳೆ ಮತ್ತು ಪ್ರವಾಹದಿಂದ ಸಮಸ್ಯೆ ಆಗುತ್ತಿರುವುದರಿಂದ ಹೂಡಿಕೆಗೆ ತೊಂದರೆ ಆಗಿದೆಯಲ್ಲವೇ ಎಂಬ ಪ್ರಶ್ನೆಗೆ, ದೊಡ್ಡ ನಗರಗಳಲ್ಲಿ ಮಳೆ ಬಂದರೆ ಇದೇ ಸಮಸ್ಯೆ ಇರುತ್ತದೆ. ಜಗತ್ತಿನ ಯಾವುದೇ ನಗರಗಳು ಇದಕ್ಕೆ ಹೊರತಾಗಿಲ್ಲ ಎಂದರು.

ನಗರದಲ್ಲಿ ರಾಜಕಾಲುವೆಗಳನ್ನು ಸರಿಪಡಿಸಲು ನಗರೋತ್ಥಾನ ಯೋಜನೆಯಡಿ ₹6,000 ಕೋಟಿ ಅನುದಾನ ನೀಡಲಾಗುವುದು. ಈ ಮೊತ್ತವನ್ನು ಇದೇ ವರ್ಷ ಖರ್ಚು ಮಾಡಲಾಗುವುದು ಎಂದೂ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಸಚಿವರಾದ ಮುರುಗೇಶ ನಿರಾಣಿ, ವಿ.ಸೋಮಣ್ಣ ಇದ್ದರು

ಇಂಧನ ಕ್ಷೇತ್ರಕ್ಕೆ ₹50 ಸಾವಿರ ಕೋಟಿ

‘ರೆನ್ಯೂ ಪವರ್ ಪ್ರೈ.ಲಿ.ಕಂಪನಿ ₹50 ಸಾವಿರ ಕೋಟಿ ಬಂಡವಾಳ ಹೂಡಿಕೆಗೆ ಒಪ್ಪಂದ ಮಾಡಿಕೊಂಡಿದೆ. 7 ವರ್ಷಗಳಲ್ಲಿ ನವೀಕರಿಸಬಹುದಾದ ಇಂಧನ, ಬ್ಯಾಟರಿ ಸ್ಟೋರೇಜ್, ಗ್ರೀನ್ ಹೈಡ್ರೋಜನ್ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. 30 ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗಲಿದೆ’ ಎಂದು ಸಿ.ಎಂ ಹೇಳಿದರು.

‘ಮೊದಲ ಹಂತದಲ್ಲಿ ಹಾಲಿ ಯೋಜನೆಗಳಿಗೆ ₹11,900 ಕೋಟಿ ಬಂಡವಾಳ ಹೂಡಿಕೆ ಆಗಲಿದ್ದು, 2 ವರ್ಷದಲ್ಲಿ ಯೋಜನೆಗಳು ಕಾರ್ಯಾರಂಭ ಮಾಡಲಿವೆ. ಎರಡನೇ ಹಂತದಲ್ಲಿ 5 ವರ್ಷದಲ್ಲಿ ₹37,500 ಕೋಟಿ ಹೂಡಿಕೆ ಆಗಲಿದೆ ಎಂದರು.

ಜ್ಯೂಬಿಲಿಯಂಟ್, ಹಿಟಾಚಿ ಎನರ್ಜಿ, ಸೀಮೆನ್ಸ್, ಅಬ್ ಇನ್ಬೇವ್, ದಸ್ಸಾಲ್ಟ್ ಸಿಸ್ಟಂ, ನೆಸ್ಲೆ , ಆರ್ಸೆಲಾರ್ ಮಿತ್ತಲ್, ಭಾರ್ತಿ ಎಂಟರ್ ಪ್ರೈಸಸ್ ಕೂಡಾ ಮುಂದೆ ರಾಜ್ಯದಲ್ಲಿ ಬಂಡವಾಳ ಹೂಡಲಿವೆ ಎಂದೂ ಹೇಳಿದರು.

ಓಲಾ ಎಲೆಕ್ಟ್ರಿಕ್ ಕಾರು: ಜಾಗಕ್ಕೆ ಶೋಧ

ನವದೆಹಲಿ (ಪಿಟಿಐ): ಓಲಾ ಎಲೆಕ್ಟ್ರಿಕ್ ಕಂಪನಿಯು ಬ್ಯಾಟರಿ ಸೆಲ್ ಮತ್ತು ಎಲೆಕ್ಟ್ರಿಕ್ ಕಾರು ತಯಾರಿಕಾ ಘಟಕ ಸ್ಥಾಪನೆಗಾಗಿ ಜಾಗ ಹುಡುಕಾಟದಲ್ಲಿದೆ. ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳೊಂದಿಗೆ ಮಾತುಕತೆಯನ್ನೂ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಸೆಲ್ ಗಿಗಾಫ್ಯಾಕ್ಟರಿ ಮತ್ತು ಎಲೆಕ್ಟ್ರಿಕ್ ಕಾರು ಫ್ಯಾಕ್ಟರಿ ಸ್ಥಾಪನೆಗಾಗಿ ಕಂಪನಿಗೆ 1 ಸಾವಿರ ಎಕರೆ ಜಾಗದ ಅಗತ್ಯ ಇದೆ. ಇದು ₹ 10 ಸಾವಿರ ಕೋಟಿ ಹೂಡಿಕೆಯನ್ನು ಆಕರ್ಷಿಸುವ ನಿರೀಕ್ಷೆ ಇದೆ ಎಂದು ಹೇಳಿವೆ.

ಕರ್ನಾಟಕ, ಉತ್ತರ ಪ್ರದೇಶ, ಮಹಾರಾಷ್ಟ್ರ, ಗುಜರಾತ್, ತಮಿಳು ನಾಡು ಮತ್ತು ತೆಲಂಗಾಣ ರಾಜ್ಯಗಳೊಂದಿಗೆ ಕಂಪನಿಯು ಮಾತುಕತೆ ನಡೆಸುತ್ತಿದೆ. ಮುಂದಿನ ತಿಂಗಳಲ್ಲಿ ಮಾತುಕತೆಯನ್ನು ಅಂತಿಮಗೊಳಿಸಲು ಕಂಪನಿ ಮುಂದಾಗಿದೆ ಎಂದು ತಿಳಿಸಿವೆ. ಈ ಬೆಳವಣಿಗೆಯ ಬಗ್ಗೆ ಪ್ರತಿಕ್ರಿಯೆ ನೀಡಲು ಕಂಪನಿಯ ವಕ್ತಾರರು ನಿರಾಕರಿಸಿದ್ದಾರೆ. ಕಂಪನಿಯು ತಮಿಳುನಾಡಿನ ಕೃಷ್ಣಗಿರಿಯಲ್ಲಿ 500 ಎಕರೆ ಪ್ರದೇಶದಲ್ಲಿ ದ್ವಿಚಕ್ರವಾಹನ ತಯಾರಿಕಾ ಘಟಕವನ್ನು ಹೊಂದಿದೆ. ಇದು ವಿಶ್ವದ ಎರಡನೇ ಅತಿದೊಡ್ಡ ದ್ವಿಚಕ್ರ ವಾಹನ ತಯಾರಿಕಾ ಘಟಕವಾಗಿದೆ ಎಂದು ಕಂಪನಿ ಹೇಳಿಕೊಂಡಿದೆ. ಕಂಪನಿಯು 2020ರ ಡಿಸೆಂಬರ್‌ನಲ್ಲಿ ಎಲೆಕ್ಟ್ರಿಕ್ ಸ್ಕೂಟರ್ ತಯಾರಿಕೆ ಆರಂಭಿಸಿತು.

ದ್ವಿಚಕ್ರ ಮತ್ತು ನಾಲ್ಕು ಚಕ್ರಗಳ ವಾಹನಗಳಿಗೆ ಸೆಲ್ ಪೂರೈಸುವ ಉದ್ದೇಶದಿಂದ ಕಂಪನಿಯು ಸೆಲ್ ಗಿಗಾಫ್ಯಾಕ್ಟರಿ ಸ್ಥಾಪಿಸಲು ಮುಂದಾಗಿದೆ. ಎರಡರಿಂದ ಮೂರು ವರ್ಷಗಳಲ್ಲಿ ಕಂಪನಿಯು ತನ್ನ ಮೊದಲ ಎಲೆಕ್ಟ್ರಿಕ್ ಕಾರು ಬಿಡುಗಡೆ ಮಾಡುವ ಆಲೋಚನೆಯನ್ನು ಹೊಂದಿರುವುದಾಗಿ ಕಂಪನಿಯ ಸ್ಥಾಪಕ ಭವಿಷ್ ಅಗರ್‌ವಾಲ್ ಈಚೆಗಷ್ಟೇ ಹೇಳಿದ್ದರು.

ಕರ್ಣಾಟಕ ಬ್ಯಾಂಕ್ ಲಾಭ ಹೆಚ್ಚಳ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ಣಾಟಕ ಬ್ಯಾಂಕ್ 2021-22ರಲ್ಲಿ ₹507.99 ಕೋಟಿ ನಿವ್ವಳ ಲಾಭ ಗಳಿಸಿದೆ. 2020-21ರಲ್ಲಿ ಬ್ಯಾಂಕ್ ₹482.46 ಕೋಟಿ ನಿವ್ವಳ ಲಾಭ ಗಳಿಸಿತ್ತು.

2021-22ರ 4ನೇ ತ್ರೈಮಾಸಿಕದಲ್ಲಿ ₹130.20 ಕೋಟಿಗಳ ನಿವ್ವಳ ಲಾಭ ಗಳಿಸಿದ ಬ್ಯಾಂಕ್, ಕಳೆದ ವಿತ್ತೀಯ ವರ್ಷದ 4ನೇ ತ್ರೈಮಾಸಿಕದಲ್ಲಿ ₹31.36 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದರಿಂದ ಪ್ರಸಕ್ತ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಬ್ಯಾಂಕ್ ದಾಖಲೆಯ ಶೇ 315.18 ರಷ್ಟು ಬೆಳವಣಿಗೆಯನ್ನು ಸಾಧಿಸಿದಂತಾಗಿದೆ.

ಶೇ 40 ಲಾಭಾಂಶ ನೀಡಲು ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಶಿಫಾರಸು ಮಾಡಲಾಯಿತು.



ಮಹಾಬಲೇಶ್ವರ

‘ಬ್ಯಾಂಕಿನ ಒಟ್ಟು ವ್ಯವಹಾರವು ₹1,37,169.88 ಕೋಟಿ ತಲುಪಿದೆ. ಠೇವಣಿ ₹80,386.74 ಕೋಟಿಯಾಗಿದ್ದು, ₹56,783.14 ಕೋಟಿ ಸಾಲ ವಿತರಿಸಲಾಗಿದೆ. ಅತ್ಯಂತ ಕಷ್ಟಕರ ಜಾಗತಿಕ ಸನ್ನಿವೇಶದಲ್ಲೂ ಬ್ಯಾಂಕ್ ಹೊಸ ದಾಖಲೆಗಳನ್ನು ಮಾಡುತ್ತಿರುವುದು ಸಂತೋಷವಾಗಿದೆ’ ಎಂದು ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಮಹಾಬಲೇಶ್ವರ ಎಂ.ಎಸ್. ತಿಳಿಸಿದ್ದಾರೆ.

ವಂಚನೆ: ಸರ್ಕಾರಿ ವಲಯದ ಬ್ಯಾಂಕ್‌ಗಳ ಪಾಲೇ ಹೆಚ್ಚು

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಬ್ಯಾಂಕಿಂಗ್ ವಲಯದಲ್ಲಿ ನಡೆಯುತ್ತಿರುವ ವಂಚನೆ ಪ್ರಕರಣಗಳಲ್ಲಿ ಖಾಸಗಿ ಬ್ಯಾಂಕ್‌ಗಳಿಗೆ ಹೋಲಿಸಿದರೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಆಗಿರುವ ವಂಚನೆಯ ಮೊತ್ತ ಹೆಚ್ಚಿನದ್ದಾಗಿದೆ ಎಂದು ಆರ್‌ಬಿಐನ ವಾರ್ಷಿಕ ವರದಿಯಲ್ಲಿ ಹೇಳಲಾಗಿದೆ.

2021-22ರಲ್ಲಿ ಆಗಿರುವ ಒಟ್ಟಾರೆ ಬ್ಯಾಂಕಿಂಗ್ ವಂಚನೆಯಲ್ಲಿ ಖಾಸಗಿ ಬ್ಯಾಂಕ್‌ಗಳ ಪಾಲು ಶೇ 58.8ರಷ್ಟು ಇದ್ದರೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಪಾಲು ಶೇ 67ರಷ್ಟು ಇದೆ ಎಂದು ತಿಳಿಸಿದೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ 3,100 ವಂಚನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟಾರೆ ₹ 40 ಸಾವಿರ ಕೋಟಿಗೂ ಅಧಿಕ ಮೊತ್ತದ ವಂಚನೆ ಆಗಿದೆ. ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ 5 ಸಾವಿರಕ್ಕೂ ಅಧಿಕ ವಂಚನೆ ಪ್ರಕರಣಗಳು ನಡೆದಿದ್ದು, ಮೊತ್ತವು ಸರ್ಕಾರಿ ಬ್ಯಾಂಕ್‌ಗಳಿಗೆ ಹೋಲಿಸಿದರೆ ಅರ್ಧಕ್ಕಿಂತಲೂ ಕಡಿಮೆ ಇದೆ ಎಂದು ವರದಿ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಕುಮಟ	
ಚಿಪ್ಪು	25569-30109
ಕೋಕ	18089-28889
ಹಳೆಚಾಲಿ	45089-45769
ಹೊಸಚಾಲಿ	35199-38609
ಸಿದ್ದಾಪುರ	
ಬಿಳಿಗೋಟು	22118-32699
ಚಾಲಿ	35099-38999
ಕೋಕ	22001-31000
ಕೆಂಪುಗೋಟು	26089-30389
ರಾಶಿ	46099-48209
ತಟ್ಟಿಬೆಟ್ಟೆ	37899-43209
ಹೊಸನಗರ	
ಬಿಳಿಗೋಟು	25399-28499
ಚಾಲಿ	36200-38099
ಕೆಂಪುಗೋಟು	28299-37300
ರಾಶಿ	43899-50089
ಸಿಪ್ಪೆಗೋಟು	16999-20229
ಶಿರಸಿ	
ಬೆಟ್ಟೆ	38719-48998
ಬಿಳಿಗೋಟು	14099-38679
ಚಾಲಿ	35011-39419
ರಾಶಿ	31905-49799
ಯಲ್ಲಾಪುರ	
ಬಿಳಿಗೋಟು	26899-32299
ಚಾಲಿ	35499-39130
ಕೋಕ	18899-30099
ಕೆಂಪುಗೋಟು	28699-34599
ರಾಶಿ	47750-54600
ತಟ್ಟಿಬೆಟ್ಟೆ	38709-46569
ಶಿವಮೊಗ್ಗ	
ಬೆಟ್ಟೆ	50009-53439
ಗೊರಬಲು	17009-37676
ರಾಶಿ	45369-49939
ಸರಕು	56819-79299

ಮೂಡಿಗೆರೆ ಕಾಫಿ (50 ಕೆ.ಜಿಗೆ)

	ಮುದ್ರೆಮನೆ
ಎಪಿ	16500
ಎಸಿ	8960
ಆರ್‌ಪಿ	9600
ಆರ್‌ಸಿ	4700

‘ಸಾಂಸ್ಥಿಕ ಸುಧಾರಣೆ ಅಗತ್ಯ’

ಮುಂಬೈ (ಪಿಟಿಐ): ಹಣದುಬ್ಬರದ ಒತ್ತಡ ಹೆಚ್ಚುತ್ತಿರುವ ಬೆನ್ನಲ್ಲೇ ಸುಸ್ಥಿರ ಆರ್ಥಿಕ ಬೆಳವಣಿಗೆ ಸಾಧಿಸಲು ಸಾಂಸ್ಥಿಕ ಸುಧಾರಣೆಗಳ ಅಗತ್ಯ ಇದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಹೇಳಿದೆ.

ಸಗಟು ದರ ಹಣದುಬ್ಬರವು (ಡಬ್ಲ್ಯುಪಿಐ) ಗರಿಷ್ಠ ಮಟ್ಟದಲ್ಲಿ ಇರುವುದರಿಂದ ಚಿಲ್ಲರೆ ಹಣದುಬ್ಬರದ ಮೇಲೆ ಒತ್ತಡವು ನಿಧಾನವಾಗಿ ಹೆಚ್ಚಾಗುವ ಸಾಧ್ಯತೆ ಇದೆ ತನ್ನ ವಾರ್ಷಿಕ ವರದಿಯಲ್ಲಿ ಹೇಳಿದೆ.

ಕೈಗಾರಿಕೆಗಳಲ್ಲಿ ಬಳಸುವ ಕಚ್ಚಾ ಸಾಮಗ್ರಿಗಳ ದರವು ಗರಿಷ್ಠ ಮಟ್ಟದಲ್ಲಿದೆ. ಸಾರಿಗೆ ಮತ್ತು ಸಾಗಣೆ ವೆಚ್ಚಗಳು ಹೆಚ್ಚಾಗಿವೆ. ಪೂರೈಕೆ ವ್ಯವಸ್ಥೆಯಲ್ಲಿನ ಅಡಚಣೆಯು ಹಣದುಬ್ಬರದ ಮೇಲೆ ಇನ್ನಷ್ಟು ಪರಿಣಾಮ ಉಂಟುಮಾಡಲಿದೆ. ಉಕ್ರೇನ್ ಬಿಕ್ಕಟ್ಟಿನಿಂದಾಗಿ ಸರಕುಗಳ ಬೆಲೆ ಹೆಚ್ಚಳಕ್ಕೆ ಕಾರಣವಾಗಿದ್ದು, ಭಾರತವನ್ನೂ ಒಳಗೊಂಡು ಜಾಗತಿಕ ಮಟ್ಟದಲ್ಲಿ ಹಣದುಬ್ಬರಹೆಚ್ಚಳಕ್ಕೆಕಾರಣವಾಗುತ್ತಿದೆ ಎಂದು ವಿವರಿಸಿದೆ.

ಹಣದುಬ್ಬರ ನಿಯಂತ್ರಿಸಲು ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕಡಿಮೆ ಮಾಡಿದೆ.

ಸಂಕ್ಷಿಪ್ತ ಸುದ್ದಿ

ಟೆಕ್ಸಾಸ್: ಪತ್ನಿ ಶವಸಂಸ್ಕಾರದ ವೇಳೆ ಪತಿ ಸಾವು

ಟೆಕ್ಸಾಸ್(ರಾಯಿಟರ್ಸ್): ಅಮೆರಿಕದ ಟೆಕ್ಸಾಸ್ ಶಾಲೆಯಲ್ಲಿ ನಡೆದ ಸಾಮೂಹಿಕ ಗುಂಡಿನ ದಾಳಿಯಲ್ಲಿ ಮೃತಪಟ್ಟಿದ್ದ 4ನೇ ತರಗತಿಯ ಶಿಕ್ಷಕಿಯ ಪತಿ ಗುರುವಾರ ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ಗುಂಡಿನ ದಾಳಿಯಲ್ಲಿ ಮೃತಪಟ್ಟಿದ್ದ ಇರ್ಮಾ ಗಾರ್ಸಿಯಾ ಅವರ ಅಂತ್ಯ ಸಂಸ್ಕಾರಕ್ಕೆ ಗುರುವಾರ ಸಿದ್ಧತೆ ನಡೆಯುತ್ತಿತ್ತು. ಈ ವೇಳೆ 24 ವರ್ಷದ ಬಾಳ ಸಂಗಾತಿಯನ್ನು ಕಳೆದುಕೊಂಡ ದುಃಖದಲ್ಲಿ ಜೋ ಗಾರ್ಸಿಯಾ ಅವರಿಗೆ ಹೃದಯಾಘಾತವಾಗಿ, ಕುಸಿದುಬಿದ್ದಿದ್ದಾರೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

ಟೆಕ್ಸಾಸ್ ವಿ.ವಿಯಲ್ಲಿ ಭಾರತದ ಅಧ್ಯಯನ ಕೋರ್ಸ್

ಹ್ಯೂಸ್ಟನ್(ಪಿಟಿಐ): ಅಮೆರಿಕದ ಟೆಕ್ಸಾಸ್ ಸದರ್ನ್ ಯುನಿವರ್ಸಿಟಿ (ಟಿಎಸ್‌ಯು) ಮತ್ತು ಭಾರತದ ಫೌಂಡೇಷನ್ ಫಾರ್ ಇಂಡಿಯಾ ಸ್ಟಡೀಸ್ (ಎಫ್‌ಐಎಸ್) ಜಂಟಿ ಸಹಭಾಗಿತ್ವದಲ್ಲಿ ಭಾರತದ ಕುರಿತ ಅಧ್ಯಯನ ಕೋರ್ಸ್‌ಗಳನ್ನು ಹ್ಯೂಸ್ಟನ್ ನಗರದ ಪದವಿ ಶಾಲೆಯಲ್ಲಿ ಆರಂಭಿಸಿವೆ.

ಅಮೆರಿಕದಲ್ಲಿ ಭಾರತದ ಕುರಿತ ಅಧ್ಯಯನ ಉತ್ತೇಜಿಸುವ ಈ ಪಾಲುದಾರಿಕೆಯು, ಎಫ್‌ಐಎಸ್ ಸಹಕಾರದೊಂದಿಗೆ ವಿಶ್ವವಿದ್ಯಾನಿಲಯದಲ್ಲಿ ಭಾರತ ಕೇಂದ್ರಿತ ಶೈಕ್ಷಣಿಕ ಕೋರ್ಸ್‌ಗಳನ್ನು ರೂಪಿಸಿ, ಕಾರ್ಯಗತಗೊಳಿಸಲಿದೆ ಎಂದು ಟಿಎಸ್‌ಯು ಪ್ರಕಟಣೆ ತಿಳಿಸಿದೆ.

‘ಭಾರತೀಯರು ನೀಡಿದ ಕೊಡುಗೆಗಳನ್ನು ಮತ್ತು ಭಾರತೀಯ ಪರಂಪರೆಯನ್ನು ಭವಿಷ್ಯದ ಪೀಳಿಗೆಗೆ ಪರಿಚಯಿಸುವ ಶಾಶ್ವತ ಕೆಲಸ ಮಾಡುತ್ತೇವೆ’ ಎಂದು ಫೌಂಡೇಷನ್ ಫಾರ್ ಇಂಡಿಯಾ ಸ್ಟಡೀಸ್ ಸಂಸ್ಥಾಪಕ ಅಧ್ಯಕ್ಷ ಕೃಷ್ಣ ವಾವಿಲಾಲ ತಿಳಿಸಿದರು.

ಲಂಕಾ: ಇಂಧನ ಆಮದಿಗೆ ಖಾಸಗಿ ಕಂಪನಿಗೆ ಅವಕಾಶ

ಕೊಲಂಬೊ(ಪಿಟಿಐ): ದೇಶದಲ್ಲಿರುವ ಖಾಸಗಿ ಕಂಪನಿಗಳು ಇಂಧನ ಆಮದು ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ ಎಂದು ಶ್ರೀಲಂಕಾದ ಇಂಧನ ಸಚಿವ ಕಾಂಚನ ವಿಜೆಸೇಕರ ಹೇಳಿದ್ದಾರೆ.

ಈ ಮೂಲಕ ಸರ್ಕಾರಿ ಸ್ವಾಮ್ಯದ ರಿಟೇಲ್ ಇಂಧನ ಸಂಸ್ಥೆ ಸಿಲೋನ್ ಪೆಟ್ರೋಲಿಯಂ ಕಾರ್ಪೊರೇಷನ್ (ಸಿಪಿಸಿ) ಮೇಲಿನ ಒತ್ತಡವನ್ನು ತಗ್ಗಿಸುವ ಯತ್ನಕ್ಕೆ ಲಂಕಾ ಸರ್ಕಾರ ಮುಂದಾಗಿದೆ.

ಕೈಗಾರಿಕೆಗಳ ಜನರೇಟರ್‌ಗಳು ಮತ್ತು ಸಾಮಗ್ರಿಗಳ ಕಾರ್ಯ ನಿರ್ವಹಣೆಗೆ ಇಂಧನ ಮತ್ತು ಡೀಸೆಲ್ ಪೂರೈಸಲು ವಿದೇಶಗಳಿಂದ ಇಂಧನ ಆಮದು ಮಾಡಿಕೊಳ್ಳಲು ಖಾಸಗಿ ಇಂಧನ ಸಂಸ್ಥೆಗಳಿಗೆ ಅವಕಾಶ ನೀಡಲಾಗಿದೆ. ಇದು ಭಾರಿ ಪ್ರಮಾಣದಲ್ಲಿ ಇಂಧನ ಪೂರೈಸುವ ಇಂಧನ ಕೇಂದ್ರಗಳು ಮತ್ತು ಸಿಪಿಸಿ ಮೇಲಿನ ಒತ್ತಡವನ್ನು ಕಡಿಮೆ ಮಾಡಲಿದೆ ಎಂದು ಶುಕ್ರವಾರ ಸಚಿವ ವಿಜೆಸೇಕರ ಅವರು ಟ್ವೀಟ್ ಮಾಡಿದ್ದಾರೆ.

ಸೆನ್ಸೆಕ್ಸ್ ಏರಿಕೆ

ಮುಂಬೈ (ಪಿಟಿಐ): ಐ.ಟಿ., ಬ್ಯಾಂಕ್ ಮತ್ತು ವಾಹನ ವಲಯದ ಷೇರುಗಳು ಉತ್ತಮ ಖರೀದಿ ವಹಿವಾಟಿಗೆ ಒಳಗಾದವು. ಇದರಿಂದ ದೇಶದ ಷೇರುಪೇಟೆಗಳಲ್ಲಿ ಶುಕ್ರವಾರವೂ ಸಕಾರಾತ್ಮಕ ವಹಿವಾಟು ಮುಂದುವರಿಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 632 ಅಂಶ ಏರಿಕೆಯಾಗಿ 54,884 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಮುಂಬೈ ಧಾರಣೆ

ಶೇಂಗಾ

27-5-2022

ಜಾವಾ 70/80(ಹೊಸ)	10100-10150
ಜಾವಾ 80/90(ಹೊಸ)	9450-9500
ದಪ್ಪ ಮಧ್ಯಪ್ರದೇಶ(ಹೊಸ)	10800-10850
ದಪ್ಪ ಗುಜರಾತ್(ಹೊಸ)	9900-9950

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590(1600)
ಒಂದು ವಾರದ ಡೆಲಿವರಿ	1585 (1595)
ಸೋಯಾ ಕಚ್ಚಾ	1505 (1505)
ಪಾಮ್ ವಾರದ ಡೆಲಿವರಿ	1523 (1523)
ಸೂರ್ಯಕಾಂತಿ ಎಣ್ಣೆ ಕಚ್ಚಾ	1780 (1780)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,000 (50,800)
ಬೆಳ್ಳಿ ಕೆ.ಜಿ 62,500 (61,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

ಎಂಎನ್ಸಿಗೆ ಅಕೌಂಟೆಂಟ್ಸ್ ರಿಸೆಪ್ಷನಿಸ್ಟ್ ಆಫೀಸ್ ಅಕೌಂಟ್ಸ್ ಅಸಿಸ್ಟೆಂಟ್ಸ್ ಕಂಪ್ಯೂಟರ್ ಆಪರೇಟರ್ಸ್ ಕ್ಲಾರ್ಕ್ಸ್ ಟೆಲಿಕಾಲರ್ಸ್ ಪರ್ಚೇಸ್ ಸ್ಟೋರ್ಕೀಪರ್ಸ್ "ರಮ್ಯ" 7204367465/ 8050107101

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

WANTED DRIVERS with experience of 10 experience in around jayanagar. Contact 9845151230/ 7483417642

General

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC,Degree ಸಂಬಳ 15000 to 28000 ಸಂಪರ್ಕಿಸಿರಿ 9980814578, 9980812378

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17,800 - 68,000/-, 9538811104, 9538811223

Hospital & Medical Jobs

ತಕ್ಷಣ ಬೇಕಾಗಿದ್ದಾರೆ. ಮಹಿಳೆಯರಿಗೆ, ಪುರುಷರಿಗೆ ಹೋಂನರ್ಸಿಂಗ್ ಕೆಲಸ ಖಾಲಿಯಿದೆ. ಸಂಬಳ 11,000-24,000 ಊಟ ವಸತಿ ಉಚಿತ. 9739292222, 9035113222.

Situation Required

WANTED MARRIED Hindu couple husband as driver not more than 35 years and wife as Cook for a family of 5 at Bangalore Good salary quarters and food Police verification will be made Call 9741900909

EC INDIA Bommanahalli Req Marketing Manager, Marketing Executive, Office Assistant, E:ecindia2@gmail.com, #8925328666, 9791108211

Multiple Vacancy

ಬೇಕಾಗಿದ್ದಾರೆಬೆಂಗಳೂರಿನ ಕಂಪನಿಯೊಂದರಲ್ಲಿ ಟ್ರೈನರ್ಸ್, ಲೀಡರ್ಸ್, ಅಸಿಸ್ಟೆಂಟ್ ಮ್ಯಾನೇಜರ್, ಬ್ರಾಂಚ್ ಮ್ಯಾನೇಜರ್, ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 30. ವಿದ್ಯಾರ್ಹತೆ SSLC ಮೆಲ್ಪಟ್ಟವರು. ಸಂಬಳ ಟ್ರೈನಿಂಗ್ ಸಮಯದಲ್ಲಿ10,000ದಿಂದ 12,000 ಟ್ರೈನಿಂಗ್ ಮುಗಿದ ನಂತರ25,000 ದಿಂದ 50,000ದ ವರೆಗೆ ನೀಡಲಾಗುವುದು.ಉಚಿತ ವಸತಿ, ಆಸಕ್ತಿಯುಳ್ಳವರು ಕರೆಮಾಡಿ 9110686982

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಶಿಕ್ಷಣ

Correspondence Courses

ನೇರ ಪರೀಕ್ಷೆಗಳು DIRECT EXAMS ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ PUC,SCIENCE, COMMERCE, ARTS ಉನ್ನತ ಶಿಕ್ಷಣಕ್ಕೆ /ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಮಾನಸ ಎಜುಕೇಷನ್ ಟ್ರಸ್ಟ್(ರಿ) ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ. 9740258276

ಪ್ರವಾಸ

Travel

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6 ದಿನಗಳು. 09.06.2022 ಅಹೋಬಲ, ನವನರಸಿಂಹ.,ಶ್ರೀಶೈಲಾ, ಮಹಾನಂದಿ ಮಂತ್ರಾಲಯಾ 7200/. 16.06.2022 ರಾಮೇಶ್ವರ, ಕನ್ಯಾಕುಮಾರಿ, ಮದುರೈ ಇತ್ಯಾದಿ 7200/. ಕಾಶಿ,ವೈಷ್ಣೋದೇವಿ ಇತ್ಯಾದಿ ಪ್ರವಾಸಗಳಿಗಾಗಿ ಸಂಪರ್ಕಿಸಿ: 9448390735 9731159966

ಭವಿಷ್ಯ

Astrology

★॥ಶ್ರೀಹುಲಿಗೆಮ್ಮ ಚೌಡೇಶ್ವರಿ ಜೋತಿಷ್ಯರು॥★ ಸ್ತ್ರೀಪುರುಷ ವಶೀಕರಣ ಸಂಭೋಗ ವಶೀಕರಣ ಇನ್ನುಯಾವುದೇ ಘೋರ ನಿಗೂಡ ಗುಪ್ತಕಠಿಣ ಸಮಸ್ಯೆಗಳಿಗೆ 11ನಿಮಿಷಗಳಲ್ಲಿ ಶಾಶ್ವತ ಪರಿಹಾರ ನಂಬಿ ಕರೆಮಾಡಿ 9606735267

★॥ಶ್ರೀಪಾತಾಳಭುವನೇಶ್ವರಿ॥★ ಆರಾಧನೆಯಿಂದ ಪ್ರೀತಿಪ್ರೇಮ ಸ್ತ್ರೀಪುರುಷ ವಶೀಕರಣ, ದಾಂಪತ್ಯಕಿರಿಕಿರಿ, ಕಂಕಣಭಾಗ್ಯ, ಸಾಲದಭಾದೆ, ಸಂತಾನಭಾಗ್ಯ ಇನ್ನೂಯಾವುದೇ ಕಠಿಣ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. "ಆತ್ಮರಾಮ್ ಭಟ್" 9900933145

★॥ಶ್ರೀಶಾಕಾಂಬರಿದೇವಿ॥★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಗಂಡ ಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 1ದಿನದಲ್ಲಿ ಶಾಶ್ವತ ಪರಿಹಾರ. 9900222591

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ

Classifieds EDUCATION SPECIAL

For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in

SPECIAL RATES FOR
Admission Notice,
Education Success
Congratulation Ads

ಫ್ರೆಂಚ್ ಓಪನ್ ಟೆನಿಸ್: ಕೊಕೊ ಗಫ್‌ಗೆ ಮಣಿದ ಕನೆಪಿ

ಪ್ಯಾರಿಸ್ (ಎಎಫ್‌ಪಿ): ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಕಣಕ್ಕೆ ಇಳಿದಿರುವವರ ಪೈಕಿ ಅತಿ ಹೆಚ್ಚು ವಯಸ್ಸಿನ ಆಟಗಾರ್ತಿ ಕಯಾ ಕನೆಪಿ ವಿರುದ್ಧ ಜಯ ಗಳಿಸಿದ ಯುವ ಟೆನಿಸ್ ಪಟು ಕೊಕೊ ಗಫ್ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಶುಕ್ರವಾರ ನಡೆದ ಪಂದ್ಯದಲ್ಲಿ ಅಮೆರಿಕದ 18 ವಯಸ್ಸಿನ ಕೊಕೊ ಗಫ್ 36ರ ಹರೆಯದ ಎಸ್ಟೋನಿಯಾದ ಕನೆಪಿ ಅವರನ್ನು 6-3, 6-4ರಲ್ಲಿ ಸೋಲಿಸಿದರು. 18ನೇ ಶ್ರೇಯಾಂಕದ ಕೊಕೊ ಗಫ್ ಸತತ ಎರಡನೇ ವರ್ಷ 16ರ ಘಟ್ಟ ಪ್ರವೇಶಿಸಿದರು.

ಮುಚೋವಗೆ ಗಾಯ; ಅಮಾಂಡ ಮುನ್ನಡೆ: ಜೆಕ್ ಗಣರಾಜ್ಯದ ಕರೋಲಿನಾ ಮುಚೋವ ಮೂರನೇ ಸುತ್ತಿನ ಪಂದ್ಯದ ಮೂರನೇ ಸೆಟ್‌ನಲ್ಲಿ ಹಿಮ್ಮಡಿ ನೋವಿನಿಂದ ಬಳಲಿ ನಿವೃತ್ತಿ ಘೋಷಿಸಿದ ಕಾರಣ ಎದುರಾಳಿ ಅಮೆರಿಕದ ಅಮಾಂಡ ಅನಿಸಿಮೊವ ಮುಂದಿನ ಹಂತಕ್ಕೆ ಪ್ರವೇಶಿಸಿದರು. ಮೊದಲ ಸೆಟ್‌ನಲ್ಲಿ ಅಮೋಘ ಆಟದ ಮೂಲಕ ಗಮನ ಸೆಳೆದ ಮುಚೋವ 7-6ರಲ್ಲಿ ಜಯ ಸಾಧಿಸಿದ್ದರು. ಆದರೆ ಎರಡನೇ ಸೆಟ್‌ನಲ್ಲಿ 2-6ರ ಹಿನ್ನಡೆ ಕಂಡರು. ನಿರ್ಣಾಯಕ ಸೆಟ್‌ನಲ್ಲಿ 0-3ಯಿಂದ ಹಿನ್ನಡೆ ಅನುಭವಿಸಿದ್ದ ವೇಳೆ ನಿವೃತ್ತರಾದರು.

ನಡಾಲ್‌ಗೆ 300ನೇ ಗೆಲುವು: ಸ್ಪೇನ್‌ನ ರಫೆಲ್ ನಡಾಲ್ ಗ್ರ್ಯಾನ್‌ಸ್ಲಾಂ ಟೂರ್ನಿಗಳಲ್ಲಿ 300ನೇ ಜಯ ಸಾಧಿಸುವ ಮೂಲಕ ಟೂರ್ನಿಯ 3ನೇ ಸುತ್ತು ಪ್ರವೇಶಿಸಿದರು. ಹಾಲಿ ಚಾಂಪಿಯನ್ ಸರ್ಬಿಯಾದ ನೊವಾಕ್ ಜೊಕೊವಿಚ್ ಕೂಡ 3ನೇ ಸುತ್ತಿಗೆ ಲಗ್ಗೆ ಇರಿಸಿದರು.

ಕೊರೆಂಟಿನ್ ಮೌಟೆಟ್ ವಿರುದ್ಧ ನಡಾಲ್ 6-3, 6-1, 6-4ರಲ್ಲಿ ಜಯ ಗಳಿಸಿದರೆ ಜೊಕೊವಿಚ್ 6-2, 6-3, 7-6 (7/4)ರಲ್ಲಿ ಸ್ಲೊವಾಕಿಯಾದ ಅಲೆಕ್ಸ್ ಮೊಲ್ಕಾನ್‌ಗೆ ಸೋಲುಣಿಸಿದರು.

ಮೂರನೇ ಸುತ್ತಿನ ಫಲಿತಾಂಶಗಳು: ಪುರುಷರು: ಅರ್ಜೆಂಟೀನಾದ ಡೀಗೊ ಸ್ವಾರ್ಟ್ಸ್‌ಮ್ಯಾನ್‌ಗೆ ಬಲ್ಗೇರಿಯಾದ ಗ್ರಿಗರ್ ದಿಮಿಟ್ರೊವ್ ವಿರುದ್ಧ 6-3, 6-1, 6-2ರಲ್ಲಿ ಜಯ.ಮಹಿಳೆಯರ ವಿಭಾಗ: ಬೆಲಾರಸ್‌ನ ಅಲೆಕ್ಸಾಂಡ್ರ ಸಾಸ್ನೊವಿಚ್‌ಗೆ ಜರ್ಮನಿಯ ಏಂಜಲಿಕ್ ಕರ್ಬರ್ ವಿರುದ್ಧ 6-4, 7-6 (7/5)ರಲ್ಲಿ ಗೆಲುವು; ಅಮೆರಿಕದ ಕೊಕೊ ಗಫ್‌ಗೆ ಎಸ್ಟೋನಿಯಾದ ಕಯಾ ಕನೇಪಿ ವಿರುದ್ಧ 6-3, 6-4ರಲ್ಲಿ ಜಯ.

ಕೊಕೊ ಗಫ್ –ಎಎಫ್‌ಪಿ ಚಿತ್ರ

ಮಣಿಕಂದನ್ ಎಂ, ಸಮುದ್ರದ ಅಲೆಗಳನ್ನು ಸೀಳಿ ಮುನ್ನಡೆದರು– ಪ್ರಜಾವಾಣಿ ಚಿತ್ರ/ ಇರ್ಷಾದ್ ಮಹಮ್ಮದ್

ಸರ್ಫಿಂಗ್: ಹೀಟ್ಸ್‌ನಲ್ಲಿಯೇ ಪಚೈಗೆ ಆಘಾತ

ಕ್ವಾರ್ಟರ್‌ಫೈನಲ್‌ಗೆ ರಮೇಶ್, ಮಣಿ

ಮಂಗಳೂರು: ಆತಿಥೇಯ ಕರ್ನಾಟಕದ ರಮೇಶ್ ಬೂದಿಹಾಳ ಮತ್ತು ತಮಿಳುನಾಡಿದ ಡಿ. ಮಣಿಕಂದನ್ ಶುಕ್ರವಾರ ಇಲ್ಲಿ ಆರಂಭವಾದ ಇಂಡಿಯನ್ ಓಪನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನ ಮೂರನೇ ಆವೃತ್ತಿಯ ಕ್ವಾರ್ಟರ್‌ಫೈನಲ್‌ಗೆ ಅರ್ಹತೆ ಗಿಟ್ಟಿಸಿದ್ದಾರೆ.

ಶನಿವಾರ ಇಲ್ಲಿ ನಡೆದ ಹೀಟ್ಸ್‌ನಲ್ಲಿ ತಮಿಳುನಾಡಿನ ಅಂತರ ರಾಷ್ಟ್ರೀಯ ಸರ್ಫರ್ ಸೇಕರ್ ಪಚೈ ನಿರಾಶೆ ಅನುಭವಿಸಿದರು. ಆದರೆ ಸ್ಟ್ಯಾಂಡ್ ಅಪ್ ಪೆಡಲಿಂಗ್ ವಿಭಾಗದಲ್ಲಿ ಗೆಲ್ಲುವ ಹುಮ್ಮಸ್ಸಿನಲ್ಲಿದ್ದಾರೆ.

ಶುಕ್ರವಾರ ಒಟ್ಟು 8 ಹಿಟ್ಸ್‌ಗಳಾಗಿದ್ದು, 16 ಮಂದಿ ಸರ್ಫರ್‌ಗಳು ಕ್ವಾರ್ಟರ್ ಫೈನಲ್‌ಗೆ ಆಯ್ಕೆ ಆಗಿದ್ದಾರೆ. ಸೂರ್ಯ ಪಿ., ರಫುಲ್ ಜಿ., ಶ್ರೀಕಾಂತ್ ಡಿ., ಹರೀಶ್ ಎಂ., ವಿಘ್ನೇಶ್ ವಿ., ರುಬಾನ್ ವಿ., ಶಿವರಾಜ್ ಬಾಬು, ಮಣಿಕಂದನ್ ಎಂ., ಮಣಿವಣ್ಣನ್ ಟಿ., ರಮೇಶ್ ಬೂದಿಹಾಳ., ಸಂತೋಷನ್. ಹಾಗೂ ಸಂಜಯಕುಮಾರ್ ಎಸ್ ಆಯ್ಕೆಯಾಗಿದ್ದಾರೆ.

ಅಂಗವಿಕಲರ ಕ್ರಿಕೆಟ್: ಕರ್ನಾಟಕ ಶುಭಾರಂಭ

ಹುಬ್ಬಳ್ಳಿ: ಕರ್ನಾಟಕ ತಂಡದವರು ಇಲ್ಲಿ ಶುಕ್ರವಾರ ಆರಂಭವಾದ ದಕ್ಷಿಣ ವಲಯ ಮಟ್ಟದ ಅಂಗವಿಕಲರ ಟ್ವೆಂಟಿ–20 ಕ್ರಿಕೆಟ್ ಟೂರ್ನಿಯ ಆರಂಭದ ಎರಡೂ ಪಂದ್ಯಗಳಲ್ಲಿ ಗೆಲುವು ಸಾಧಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಸಂಪಾದಿಸಿದ್ದಾರೆ.

ಕರ್ನಾಟಕ ತಂಡ ತನ್ನ ಮೊದಲ ಪಂದ್ಯದಲ್ಲಿ ಗೋವಾ ವಿರುದ್ಧ 137 ರನ್‌ಗಳ ಗೆಲುವು ಪಡೆಯಿತು. ಮೊದಲು ಬ್ಯಾಟ್ ಮಾಡಿದ ರಾಜ್ಯ ತಂಡ 20 ಓವರ್‌ಗಳಲ್ಲಿ 6ವಿಕೆಟ್ ಕಳೆದುಕೊಂಡು 204 ರನ್ ಗಳಿಸಿತು. ಎದುರಾಳಿ ಗೋವಾ 12.5 ಓವರ್‌ಗಳಲ್ಲಿ 67 ರನ್ ಗಳಿಸಿ ಆಲೌಟ್ ಆಯಿತು. ಇನ್ನೊಂದು ಪಂದ್ಯದಲ್ಲಿ ಆಂಧ್ರವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಕರ್ನಾಟಕ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 184 ರನ್ ಗಳಿಸಿತು. ಆಂಧ್ರ 13.4 ಓವರ್‌ಗಳಲ್ಲಿ 71 ರನ್‌ಗೆ ಆಲೌಟ್ ಆಯಿತು.

ಬ್ಯಾಸ್ಕೆಟ್‌ಬಾಲ್: ಬೆಂಗಳೂರು ತಂಡಗಳಿಗೆ ಗೆಲುವು

ಬೆಂಗಳೂರು: ಸ್ಥಳೀಯ ಪ್ರೇಕ್ಷಕರ ಸಂಭ್ರಮದ ನಡುವೆ ಬೆಂಗಳೂರು ಪುರುಷರ ಮತ್ತು ಮಹಿಳೆಯರ ತಂಡಗಳು ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಆಯೋಜಿಸಿರುವ ಐಎನ್‌ಬಿಎಲ್ 3x3 ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಫೈನಲ್ಸ್‌ನ ಮೊದಲ ದಿನ ಜಯಭೇರಿ ಮೊಳಗಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪುರುಷರ 'ಬಿ' ಗುಂಪಿನ ಪಂದ್ಯದಲ್ಲಿ ಬೆಂಗಳೂರು ತಂಡ 21–16ರಲ್ಲಿ ಕೋಲ್ಕತ್ತವನ್ನು ಮಣಿಸಿತು. ಮಹಿಳೆಯರ 'ಇ' ಗುಂಪಿನ ಪಂದ್ಯದಲ್ಲಿ ಬೆಂಗಳೂರು ತಂಡ 7–14ರಲ್ಲಿ ಭಾವನಗರ ತಂಡಕ್ಕೆ ಮಣಿಯಿತು.

18 ವರ್ಷದೊಳಗಿನ ಪುರುಷರ 'ಎ' ಗುಂಪಿನ ಹಣಾಯಣಿಯಲ್ಲಿ ಕೊಚ್ಚಿ ವಿರುದ್ಧ ಬೆಂಗಳೂರು 19–14ರಲ್ಲಿ ಜಯ ಗಳಿಸಿತು. ಮತ್ತೊಂದು ಪಂದ್ಯದಲ್ಲಿ ಪುದುಚೇರಿಯನ್ನು 19–11ರಲ್ಲಿ ಗೆದ್ದಿತು.

18 ವರ್ಷದೊಳಗಿನ ಮಹಿಳೆಯರ 'ಬಿ' ಗುಂಪಿನ ಪಂದ್ಯದಲ್ಲಿ ಬೆಂಗಳೂರು ಪೂರ್ವ ತಂಡ ಗುವಾಹಟಿ ವಿರುದ್ಧ 13–8ರಲ್ಲಿ ಜಯ ಗಳಿಸಿತು. ಮತ್ತೊಂದು ಪಂದ್ಯದಲ್ಲಿ ಹೈದರಾಬಾದ್ ತಂಡವನ್ನು 12–5ರಲ್ಲಿ ಬೆಂಗಳೂರು ಪೂರ್ವ ತಂಡ ಸೋಲಿಸಿತು. 'ಇ' ಗುಂಪಿನ ಪಂದ್ಯದಲ್ಲಿ ಬೆಂಗಳೂರು ದಕ್ಷಿಣ 11–10ರಲ್ಲಿ ಚೆನ್ನೈ ಇಗ್ಮೋರ್ ತಂಡವನ್ನು ಮಣಿಸಿತು.

ಬೆಂಗಳೂರು ದಕ್ಷಿಣ ತಂಡದ ಪ್ರಿಯಾಂಕ ಅವರನ್ನು ತಡೆಯಲು ಪ್ರಯತ್ನಿಸಿದ ಚೆನ್ನೈ ಎಗ್ಮೋರ್‌ನ ಕಲ್ಪಿತ ಪಾರ್ಥಸಾರಥಿ –ಪ್ರಜಾವಾಣಿ ಚಿತ್ರ/ಬಿ.ಎಚ್.ಶಿವಕುಮಾರ್

ಟೆಸ್ಟ್ ಕ್ರಿಕೆಟ್: ಶ್ರೀಲಂಕಾ ಜಯಭೇರಿ

ಢಾಕಾ (ಪಿಟಿಐ): ವೇಗದ ಬೌಲರ್ ಅಷಿತ ಫರ್ನಾಂಡೊ (51ಕ್ಕೆ6) ಬೌಲಿಂಗ್ ನೆರವಿನಿಂದ ಶ್ರೀಲಂಕಾ ತಂಡವು ಶುಕ್ರವಾರ ಮುಕ್ತಾಯವಾದ ಎರಡನೇ ಟೆಸ್ಟ್‌ನಲ್ಲಿ ಬಾಂಗ್ಲಾದೇಶದ ಎದುರು 10 ವಿಕೆಟ್‌ಗಳಿಂದ ಜಯಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0ಯಿಂದ ಗೆದ್ದಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾ: 116.2 ಓವರ್‌ಗಳಲ್ಲಿ 365, ಶ್ರೀಲಂಕಾ: 165.1 ಓವರ್‌ಗಳಲ್ಲಿ 506. ಎರಡನೇ ಇನಿಂಗ್ಸ್: ಬಾಂಗ್ಲಾದೇಶ: 55.3 ಓವರ್‌ಗಳಲ್ಲಿ 169 (ಮುಷ್ಫೀಕರ್ ರಹೀಂ 23, ಲಿಟನ್ ದಾಸ್ 52, ಶಕೀಬ್ ಅಲ್ ಹಸನ್ 58, ರಜಿತಾ 40ಕ್ಕೆ2, ಅಶಿತ ಫರ್ನಾಂಡೊ 51ಕ್ಕೆ6) ಶ್ರೀಲಂಕಾ: 3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 29 (ಒಷಾಡ ಫರ್ನಾಂಡೊ ಔಟಾಗದೆ 21, ದಿಮುತ ಕರುಣರತ್ನೆ ಔಟಾಗದೆ 7) ಫಲಿತಾಂಶ:ಶ್ರೀಲಂಕಾ ತಂಡಕ್ಕೆ 10 ವಿಕೆಟ್‌ಗಳ ಜಯ ಮತ್ತು 1–0ಯಿಂದ ಸರಣಿ ಜಯ.

ಏಷ್ಯಾಕಪ್ ಹಾಕಿ: ಭಾರತಕ್ಕೆ ಜಪಾನ್ ಸವಾಲು

ಜಕಾರ್ತ (ಪಿಟಿಐ): ಗುಂಪುಹಂತದಲ್ಲಿ ನಿರಾಶೆಯ ಕೂಪದಿಂದ ಪುಟಿದೆದ್ದು ಭರ್ಜರಿ ಜಯ ಗಳಿಸಿರುವ ಭಾರತ ತಂಡ ಏಷ್ಯಾ ಕಪ್ ಹಾಕಿ ಟೂರ್ನಿಯ ಸೂಪರ್–4 ಹಂತದ ಮೊದಲ ಪಂದ್ಯದಲ್ಲಿ ಶನಿವಾರ ಜಪಾನ್ ವಿರುದ್ಧ ಸೆಣಸಲಿದೆ.

ಗುಂಪು ಹಂತದಲ್ಲಿ ಜಪಾನ್ ವಿರುದ್ಧ ಸೋತ ಭಾರತ ಸೇಡು ತೀರಿಸಿಕೊಳ್ಳುವ ಹುಮ್ಮಸ್ಸಿನಲ್ಲಿದ್ದು ಫೈನಲ್ ಪ್ರವೇಶದ ಹಾದಿ ಸುಗಮಗೊಳಿಸುವ ನಿರೀಕ್ಷೆಯನ್ನೂ ಹೊಂದಿದೆ.

ಅಷ್ಟೊಂದು ಬಲಿಷ್ಠವಲ್ಲದ ಆತಿಥೇಯ ಇಂಡೊನೇಷ್ಯಾ ವಿರುದ್ಧದ ಕೊನೆಯ ಪಂದ್ಯದಲ್ಲಿ ಭಾರತ 16–0ಯಿಂದ ಜಯ ಗಳಿಸಿತ್ತು.

ಗುಂಪು ಹಂತದ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಜೊತೆ 1-1ರಲ್ಲಿ ಡ್ರಾ ಮಾಡಿಕೊಂಡಿದ್ದ ಭಾರತ ನಂತರ ಜಪಾನ್‌ಗೆ 2–5ರಲ್ಲಿ ಮಣಿದಿತ್ತು. ಹೀಗಾಗಿ ಕೊನೆಯ ಪಂದ್ಯದಲ್ಲಿ 15–0ಯಿಂದ ಗೆದ್ದರಷ್ಟೇ ಸೂಪರ್–4 ಹಂತಕ್ಕೇರುವ ಸಾಧ್ಯತೆ ಇತ್ತು. ಈ ಸವಾಲನ್ನು ಸಮರ್ಥವಾಗಿ ಎದುರಿಸಿದ ತಂಡ ಪಾಕಿಸ್ತಾನವನ್ನು ಟೂರ್ನಿಯಿಂದ ಹೊರದಬ್ಬುವಲ್ಲಿ ಯಶಸ್ವಿಯಾಗಿತ್ತು. ಆ ತಂಡದ ವಿಶ್ವಕಪ್ ಪ್ರವೇಶದ ಕನಸನ್ನೂ ಭಗ್ನಗೊಳಿಸಿತ್ತು. 12 ಮಂದಿ ಹೊಸಬರನ್ನು ಒಳಗೊಂಡ ತಂಡವನ್ನು ಟೂರ್ನಿಯಲ್ಲಿ ಭಾರತ ಕಣಕ್ಕೆ ಇಳಿಸಿದೆ. ಸೂಪರ್–4ರ ಹಂತದಲ್ಲಿ ಭಾರತ ತಂಡ ಜಪಾನ್, ದಕ್ಷಿಣ ಕೊರಿಯಾ ಮತ್ತು ಮಲೇಷ್ಯಾವನ್ನು ಎದುರಿಸಬೇಕಾಗಿದೆ. ಎಲ್ಲ ತಂಡಗಳು ಒಂದೊಂದು ಬಾರಿ ಮುಖಾಮುಖಿಯಾಗಲಿದ್ದು ಅಗ್ರ 2 ಸ್ಥಾನ ಗಳಿಸುವ ತಂಡಗಳು ಫೈನಲ್ ಪ್ರವೇಶಿಸಲಿವೆ.

ಡ್ರ್ಯಾಕ್ ಫ್ಲಿಕ್ಕರ್‌ಗಳ ಕೊರತೆ: ಪರಿಣಾಮಕಾರಿ ಡ್ರ್ಯಾಕ್ ಫ್ಲಿಕ್ಕರ್‌ಗಳ ಕೊರತೆ ಭಾರತ ತಂಡವನ್ನು ಕಾಡುತ್ತಿದ್ದು ಇದಕ್ಕೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಿದೆ. ರೂಪಿಂದರ್ ಪಾಲ್ ಸಿಂಗ್ ಮತ್ತು ಅಮಿತ್ ರೋಹಿದಾಸ್ ಅವರ ಅನುಪಸ್ಥಿತಿ ತಂಡವನ್ನು ಕಾಡುತ್ತಿದೆ. ಬೀರೇಂದರ್ ಲಾಕ್ರಾ ನೇತೃತ್ವದ ರಕ್ಷಣಾ ವಿಭಾಗ ವೇಗದ ಆಟಕ್ಕೆ ಹೆಸರಾಗಿರುವ ಜಪಾನ್ ವಿರುದ್ಧ ಹೆಚ್ಚು ಪರಿಣಾಮಕಾರಿಯಗಿ ಆಡಬೇಕಾಗಿದೆ.

ಸೂಪರ್–4 ಹಂತದ ಇಂದಿನ ಪಂದ್ಯಗಳು	
ಮಲೇಷ್ಯಾ–ಕೊರಿಯಾ	
ಆರಂಭ	ಮಧ್ಯಾಹ್ನ 2.30
ಭಾರತ–ಜಪಾನ್	
ಆರಂಭ	ಸಂಜೆ 5.00
(ಸಮಯ: ಭಾರತೀಯ ಕಾಲಮಾನ)	

ಜೋಸ್ ಬಟ್ಲರ್ ಶತಕದ ಭರಾಟೆ: ಪ್ರಸಿದ್ಧ ಮೂರು ವಿಕೆಟ್: ಫೈನಲ್‌ಗೆ ರಾಜಸ್ಥಾನ ರಾಯಲ್ಸ್

ಈ ಸಲವೂ ಕಪ್ ಬೆಂಗಳೂರಿಗಿಲ್ಲ!

ಜೋಸ್ ಬಟ್ಲರ್ ಆಟದ ವೈಖರಿ– ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಸತತ ಹದಿನೈದನೇ ವರ್ಷವೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಕಪ್ ಗೆಲ್ಲುವ ಕನಸು ಕಮರಿತು.

ಕನ್ನಡಿಗ ಪ್ರಸಿದ್ಧಕೃಷ್ಣ ಪರಿಣಾಮಕಾರಿ ಬೌಲಿಂಗ್ ಮತ್ತು ಜೋಸ್ ಬಟ್ಲರ್ ಅಮೋಘ ಶತಕದ ಬಲದಿಂದ ರಾಜಸ್ಥಾನ ರಾಯಲ್ಸ್ ತಂಡವು ಶುಕ್ರವಾರ ನಡೆದ ಎರಡನೇ ಕ್ವಾಲಿಫೈಯ-ರ್‌ನಲ್ಲಿ 7 ವಿಕೆಟ್‌ಗಳಿಂದ ಬೆಂಗಳೂರು ತಂಡವನ್ನು ಸೋಲಿಸಿತು. ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ರಾಜಸ್ಥಾನ ತಂಡವು ಗುಜರಾತ್ ಟೈಟನ್ಸ್ ಎದುರು ಕಣಕ್ಕಿಳಿಯಲಿದೆ.

2008ರಲ್ಲಿ ರಾಜಸ್ಥಾನ ತಂಡವು ಶೇನ್ ವಾರ್ನ್ ನಾಯಕತ್ವದ-ಲ್ಲಿ ಪ್ರಶಸ್ತಿ ಗೆದ್ದಿತ್ತು. ತಂಡದ ಮಾಜಿ ನಾಯಕ ಮತ್ತು ಕೋಚ್ ಆಗಿದ್ದ ವಾರ್ನ್ ಈಚೆಗೆ ನಿಧನರಾಗಿದ್ದಾ-ರೆ. ಈ ಬಾರಿ ಟ್ರೋಫಿ ಜಯಿಸಿ ವಾರ್ನ್ ಅವರಿಗೆ ಸಮರ್ಪಿಸುವ ಛಲದಲ್ಲಿ ಸಂಜು ಸ್ಯಾಮ್ಸನ್ ಬಳಗವಿದೆ.

ಟಾಸ್ ಗೆದ್ದ ರಾಜಸ್ಥಾನ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪ್ರಸಿದ್ಧಕೃಷ್ಣ ಮತ್ತು ಒಬೆದ್ ಮೆಕಾಯ್ ತಲಾ ಮೂರು ವಿಕೆಟ್ ಗಳಿಸಿದರು. ಇದರಿಂದಾಗಿ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 157 ರನ್ ಗಳಿಸಿತು. ಅದಕ್ಕುತ್ತರವಾಗಿ ರಾಜಸ್ಥಾನ ತಂಡವು 18.1 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 161 ರನ್ ಗಳಿಸಿ ಗೆದ್ದಿತು.

ಜೋಸ್ ಬಟ್ಲರ್ (ಅಜೇಯ 106; 60ಎ, 4X10, 6X6) ಈ ಬಾರಿಯ ಟೂರ್ನಿಯಲ್ಲಿ ನಾಲ್ಕನೇ ಶತಕ ಪೂರೈಸಿದರು. ವಿರಾಟ್ ಕೊಹ್ಲಿಯ ದಾಖಲೆಯನ್ನು ಸರಿಗಟ್ಟಿದರು. ಯಶಸ್ವಿ ಜೈಸ್ವಾಲ್ (21 ರನ್) ಮತ್ತು ಬಟ್ಲರ್ ಇನಿಂಗ್ಸ್‌ಗೆ ಉತ್ತಮ ಆರಂಭ ನೀಡಿದರು. ಕೇವಲ ಐದು ಓವರ್‌ಗಳಲ್ಲಿ 61 ರನ್‌ಗಳು ಸೇರಿದವು. ಜೋಶ್ ಹ್ಯಾಜಲ್‌ವುಡ್ ಬೌಲಿಂಗ್‌ನಲ್ಲಿ ಯಶಸ್ವಿ ಔಟಾದಾಗ ಜೊತೆಯಾಟವೂ ಮುರಿಯಿತು. ಆದರೆ, ಬಟ್ಲರ್ ಆಟಕ್ಕೆ ತಡೆಯೇ ಇರಲಿಲ್ಲ. 23 ಎಸೆತಗಳಲ್ಲಿ ಅರ್ಧಶತಕ ತಲುಪಿದರು.

ಸಂಜು 23 ರನ್ ಗಳಿಸಿ ಹಸರಂಗಾ ಬೌಲಿಂಗ್‌ನಲ್ಲಿ ಔಟಾದರು. ದೇವದತ್ತ ಪಡಿಕ್ಕಲ್ ಕೂಡ 9 ರನ್ ಗಳಿಸಿ ನಿರ್ಗಮಿಸಿದರು. ಬಟ್ಲರ್ ತಾವೆದುರಿಸಿದ 59ನೇ ಎಸೆತದಲ್ಲಿ ಶತಕ ಪೂರೈಸಿದರು. ನಂತರದ ಎಸೆತದಲ್ಲಿ ಸಿಕ್ಸರ್ ಗಳಿಸಿ, ತಂಡವನ್ನು ಗೆಲುವಿನ ಗೆರೆ ದಾಟಿಸಿದರು.

ಪ್ರಸಿದ್ಧ ಮಿಂಚು: ಫಫ್ ಡುಪ್ಲೆಸಿ ಬಳಗಕ್ಕೆ ಬೆಂಗಳೂರು ಹುಡುಗ ಪ್ರಸಿದ್ಧ ಕೃಷ್ಣ ಪೆಟ್ಟುಕೊಟ್ಟರು. ಅವರ ಸ್ವಿಂಗ್ ಮೋಡಿಗೆ ವಿರಾಟ್ ಕೊಹ್ಲಿ, ದಿನೇಶ್ ಕಾರ್ತಿಕ್ ಮತ್ತು ಹಸರಂಗಾ ಅವರ ವಿಕೆಟ್ ಪತನವಾದವು. ಇದರಿಂದಾಗಿ ಆರ್‌ಸಿಬಿ ತಂಡದ ಆರಂಭ ಮತ್ತು ಮಧ್ಯಮ ಕ್ರಮಾಂಕಕ್ಕೆ ಪೆಟ್ಟುಬಿತ್ತು. ಅವರಿಗೆ ತಕ್ಕ ಜೊತೆ ನೀಡಿದ ಮೆಕಾಯ್ (23ಕ್ಕೆ3) ಕೂಡ ಉತ್ತಮ ಬೌಲಿಂಗ್ ಮಾಡಿದರು. ರಾಜಸ್ಥಾನ ಬೌಲರ್‌ಗಳು ಆರ್‌ಸಿಬಿಯಿಂದ ದೊಡ್ಡ ಜೊತೆಯಾಟಗಳು ದಾಖಲಾಗದಂತೆ ನೋಡಿಕೊಂಡರು.

ರಜತ್ ಅರ್ಧಶತಕ: ಎಲಿಮಿನೇಟರ್ ಪಂದ್ಯದಲ್ಲಿ ಶತಕ ದಾಖಲಿಸಿದ್ದ ರಜತ್ ಪಾಟೀದಾರ್ (58; 42; 4X4, 6X3) ಇಲ್ಲಿ ಅರ್ಧಶತಕ ಗಳಿಸಿದರು. ಅವರ ಚೆಂದದ ಬ್ಯಾಟಿಂಗ್‌ನಿಂದಾಗಿ ತಂಡವು ಗೌರವಯುತ ಮೊತ್ತ ಪೇರಿಸಲು ಸಾಧ್ಯವಾಯಿತು.

ಪ್ರಸಿದ್ಧ ಬೌಲಿಂಗ್ ಮಾಡಿದ ಆರನೇ ಓವರ್‌ನಲ್ಲಿ ರಜತ್ ಜೀವದಾನ ಪಡೆದರು. ಇದರ ಲಾಭ ಪಡೆದು ಅರ್ಧಶತಕದ ಗಡಿ ದಾಟಿದರು. ಅಶ್ವಿನ್ ಬೌಲಿಂಗ್‌ನಲ್ಲಿ ಜೋಸ್ ಬಟ್ಲರ್‌ಗೆ ಕ್ಯಾಚಿತ್ತ ರಜತ್ ಇನಿಂಗ್ಸ್‌ಗೆ ತೆರೆಬಿತ್ತು.

ಪ್ರಸಿದ್ಧ ಕೃಷ್ಣ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 8ಕ್ಕೆ 157 (20 ಓವರ್)

ವಿರಾಟ್ ಸಿ ಸಂಜು ಬಿ ಪ್ರಸಿದ್ಧ 7 (8 ಎ, 6x1), ಫಫ್ ಸಿ ಅಶ್ವಿನ್ ಬಿ ಮೆಕಾಯ್ 25 (27 ಎ, 6x3), ರಜತ್ ಸಿ ಬಟ್ಲರ್ ಬಿ ಅಶ್ವಿನ್ 58 (42 ಎ, 6x4, 6x3), ಗ್ಲೆನ್ ಮ್ಯಾಕ್ಸ್‌ವೆಲ್ ಸಿ ಮೆಕಾಯ್ ಬಿ ಬೌಲ್ಟ್ 24 (13 ಎ, 6x1, 6x2), ಮಹಿಪಾಲ್ ಸಿ ಅಶ್ವಿನ್ ಬಿ ಮೆಕಾಯ್ 8 (10 ಎ), ದಿನೇಶ್ ಸಿ ಪರಾಗ್ ಬಿ ಪ್ರಸಿದ್ಧ 6 (7 ಎ), ಶಹಬಾಜ್ ಔಟಾಗದೆ 12 (8 ಎ, 6x1, 6x1), ವನಿಂದು ಬಿ ಪ್ರಸಿದ್ಧ 0 (1 ಎ), ಹರ್ಷಲ್ ಬಿ ಮೆಕಾಯ್ 1 (2 ಎ), ಹ್ಯಾಜಲ್‌ವುಡ್ ಔಟಾಗದೆ 1 (2 ಎ)

ಇತರೆ: (ಬೈ 4, ಲೆಗ್‌ಬೈ 4, ವೈಡ್ 7) 15

ವಿಕೆಟ್ ಪತನ: 1-9 (ವಿರಾಟ್ ಕೊಹ್ಲಿ, 1.5), 2-79 (ಫಫ್ ಡುಪ್ಲೆಸಿ, 10.4), 3-111 (ಗ್ಲೆನ್ ಮ್ಯಾಕ್ಸ್‌ವೆಲ್, 13.6), 4-130 (ರಜತ್ ಪಾಟೀದಾರ್, 15.3), 5-141 (ಮಹಿಪಾಲ್ ರುಮ್ರೋರ್, 17.4), 6-146 (ದಿನೇಶ್ ಕಾರ್ತಿಕ್, 18.1), 7-146 (ವನಿಂದು ಹಸರಂಗ, 18.2), 8-154 (ಹರ್ಷಲ್ ಪಟೇಲ್, 19.1)

ಬೌಲಿಂಗ್: ಟ್ರೆಂಟ್ ಬೌಲ್ಟ್ 4-0-28-1, ಪ್ರಸಿದ್ಧ ಕೃಷ್ಣ 4-0-22-3, ಒಬೆದ್ ಮೆಕಾಯ್ 4-0-23-3, ರವಿಚಂದ್ರನ್ ಅಶ್ವಿನ್ 4-0-31-1, ಯಜುವೇಂದ್ರ ಚಾಹಲ್ 4-0-45-0

ರಾಜಸ್ಥಾನ ರಾಯಲ್ಸ್ 3ಕ್ಕೆ 161 (18.1 ಓವರ್)

ಯಶಸ್ವಿ ಸಿ ಕೊಹ್ಲಿ ಬಿ ಹ್ಯಾಜಲ್‌ವುಡ್ 21 (13ಎ, 4X1, 6X2), ಬಟ್ಲರ್ ಔಟಾಗದೆ 106 (60ಎ, 4X10, 6X6), ಸ್ಯಾಮ್ಸನ್ ಸ್ಟಂಪ್ಡ್ ಕಾರ್ತಿಕ್ ಬಿ ಹಸರಂಗ 23 (21ಎ, 4X1, 6X2), ದೇವದತ್ತ ಸಿ ಕಾರ್ತಿಕ್ ಬಿ ಹ್ಯಾಜಲ್‌ವುಡ್ 9 (12ಎ), ಹೆಟ್ಮೆಯರ್ ಔಟಾಗದೆ 2 (3ಎ))

ವಿಕೆಟ್ ಪತನ: 1-61 (ಯಶಸ್ವಿ ಜೈಸ್ವಾಲ್, 5.1), 2-113 (ಸಂಜು ಸ್ಯಾಮ್ಸನ್, 11.4), 3-148 (ದೇವದತ್ತ ಪಡಿಕ್ಕಲ್, 16.5)

ಬೌಲಿಂಗ್: ಮೊಹಮ್ಮದ್ ಸಿರಾಜ್ 2-0-31-0, ಜೋಶ್ ಹ್ಯಾಜಲ್‌ವುಡ್ 4-0-23-2, ಗ್ಲೆನ್ ಮ್ಯಾಕ್ಸ್‌ವೆಲ್ 3-0-17-0, ಶಹಬಾಜ್ ಅಹಮದ್ 2-0-35-0, ಹರ್ಷಲ್ ಪಟೇಲ್ 3.1-0-29-0, ವನಿಂದು ಹಸರಂಗ 4-0-26-1

ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ ಏಳು ವಿಕೆಟ್ ಜಯ

ಲಿವರ್‌ಪೂಲ್– ಮ್ಯಾಡ್ರಿಡ್ ಮುಖಾಮುಖಿ



ಪ್ಯಾರಿಸ್ (ರಾಯಿಟರ್ಸ್): ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಫೈನಲ್‌ಗೆ ಸಜ್ಜಾಗುತ್ತಿರುವ ಲಿವರ್‌ಪೂಪ್ ತಂಡದ ಮಿಡ್‌ಫೀ-ಲ್ಡರ್‌ಗಳಾದ ಥಿಯಾಗೊ ಅಲ್ಕಂತರ ಮತ್ತು ಫ್ಯಾಬಿನ್ಹೊ ಅವರು ಫಿಟ್ ಆಗಿದ್ದು ಪಂದ್ಯಕ್ಕೆ ಲಭ್ಯರಿರುವರು.

ಶನಿವಾರ ರಾತ್ರಿ ನಡೆಯಲಿರುವ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಲಿವರ್‌ಪೂಲ್ ತಂಡ ರಿಯಲ್ ಮ್ಯಾಡ್ರಿಡ್ ವಿರುದ್ಧ ಸೆಣಸಲಿದೆ. ಥಿಯಾಗೊ ಮತ್ತು ಫ್ಯಾಬಿನ್ಹೊ ಅವರು ಫಿಟ್ ಆಗಿದ್ದಾರೆ ಎಂದು ರಿಯಲ್ ಮ್ಯಾಡ್ರಿಡ್‌ನ ಮ್ಯಾನೇಜರ್ ಜಾರ್ಜನ್ ಕ್ಲಾಪ್ ತಿಳಿಸಿದ್ದಾರೆ. ಕಳೆದ ಭಾನುವಾರ ನಡೆದ ಪ್ರೀಮಿಯರ್ ಲೀಗ್ ಫೈನಲ್ ಪಂದ್ಯದಲ್ಲಿ ಥಿಯಾಗೊ ಮೊದಲಾ-ರ್ಧದಲ್ಲೇ ಮಾಂಸಖಂಡದ ಸೆಳೆತಕ್ಕೆ ಒಳಗಾಗಿ ಅಂಗಣ ತೊರೆದಿದ್ದರು. ವೊಲ್ವೆ-ರ್‌ಹ್ಯಾಂಪ್ಟನ್ ವಾಂಡರರ್ಸ್ ಎದುರಿನ ಆ ಪಂದ್ಯದಲ್ಲಿ ಬದಲಿ ಆಟಗಾರ ಕಣಕ್ಕೆ ಇಳಿದಿದ್ದರು. ಮೇ 10ರಂದು ನಡೆದ ಆ್ಯಸ್ಟನ್ ವಿಲ್ಲಾ ಎದುರಿನ ಪಂಧ್ಯದಲ್ಲಿ ತಂಡ 2–1ರಲ್ಲಿ ಜಯ ಗಳಿಸಿತ್ತು. ಆ ಪಂದ್ಯದಲ್ಲಿ ಗಾಯಾಳುವಾಗಿ ಫ್ಯಾಬಿನ್ಹೊ ಹೊರಹೋಗಿದ್ದರು.

ಮಹಿಳಾ ಟಿ20 ಚಾಲೆಂಜ್

ಮಹಿಳಾ ಟಿ20 ಚಾಲೆಂಜ್ ಫೈನಲ್

ಸೂಪರ್‌ನೋವಾಸ್– ವೆಲೋಸಿಟಿ

ಸ್ಥಳ: ಎಂಸಿಎ ಕ್ರೀಡಾಂಗಣ, ಪುಣೆ

ಆರಂಭ: ರಾತ್ರಿ 7.30

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	818
ರಾಹುಲ್	ಲಖನೌ	616
ಕ್ವಿಂಟನ್ ಡಿಕಾಕ್	ಲಖನೌ	508

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹಸರಂಗ	ಬೆಂಗಳೂರು	26
ಯಜುವೇಂದ್ರ	ರಾಜಸ್ಥಾನ	26
ಕಗಿಸೊ	ಪಂಜಾಬ್	23

ದಿನೇಶ್ ಕಾರ್ತಿಕ್‌ಗೆ ವಾಗ್ದಂಡನೆ

ಅಹಮದಾಬಾದ್ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಕೆಟ್‌ಕೀಪರ್–ಬ್ಯಾಟರ್ ದಿನೇಶ್ ಕಾರ್ತಿಕ್ ಅವರು ಐಪಿಎಲ್ ನಿಯಮ ಉಲ್ಲಂಘನೆ ಮಾಡಿದ್ದರಿಂದ ಎಚ್ಚರಿಕೆ ನೀಡಲಾಗಿದೆ.

‘ಈಚೆಗೆ ನಡೆದಿದ್ದ ಎಲಿಮಿನೇಟರ್ ಪಂದ್ಯದಲ್ಲಿ ದಿನೇಶ್ ಅಶಿಸ್ತು ತೋರಿದ್ದಾರೆ. ಇದು ಲೆವೆಲ್ ಒನ್ ಅಪರಾಧವಾಗಿದೆ. ಪಂದ್ಯ ರೆಫರಿಯ ತೀರ್ಪು ಅಂತಿಮವಾಗಿದ್ದು,ದಿನೇಶ್ ಅವರನ್ನು ವಾಗ್ದಂಡನೆಗೊಳಪಡಿಸಲಾ-ಗಿದೆ’ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅರುಣಾ ದೂರು: ತನಿಖೆಗೆ ಸಮಿತಿ

ನವದೆಹಲಿ (ಪಿಟಿಐ): ಫಿಟ್ನೆಸ್ ಪರೀಕ್ಷೆಯ ಸಂದರ್ಭದಲ್ಲಿ ಅನುಮತಿ ಪಡೆಯದೆಯೇ ವಿಡಿಯೊ ಚಿತ್ರೀಕರಣ ಮಾಡಲಾಗಿದೆ ಎಂದು ಜಿಮ್ನಾಸ್ಟ್ ಅರುಣಾ ಬುದ್ಧ ರೆಡ್ಡಿ ದೂರಿರುವ ಹಿನ್ನೆಲೆಯಲ್ಲಿ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ತನಿಖೆಗೆ ಮೂವರ ಸಮಿತಿ ರಚಿಸಿದೆ. ಸಾಯ್ ಕಾರ್ಯನಿರ್ವಾಹಕ ನಿರ್ದೇಶಕಿ ರಾಧಿಕಾ ಶ್ರೀರಾಮ್ ಅವರಿಗೆ ತಂಡದ ನೇತೃತ್ವ ವಹಿಸಲಾಗಿದ್ದು ಕೋಚ್ ಕಮಲೇಶ್ ತಿವಾನ ಮತ್ತು ಉಪನಿರ್ದೇಶಕ ಕೈಲಾಶ್ ಮೀನಾ ಇದ್ದಾರೆ.



ಜೂನ್ 18ರಿಂದ ಬ್ಯಾಸ್ಕೆಟ್‌ಬಾಲ್

ಬೆಂಗಳೂರು: ಕರ್ನಾಟಕ ಬ್ಯಾಸ್ಕೆಟ್ ಬಾಲ್ ಸಂಸ್ಥೆಯು (ಕೆಎಸ್‌ಬಿಬಿಎ) ಜೂನ್ 18ರಿಂದ 23ರವರೆಗೆ ಪುರುಷರ ರಾಜ್ಯ ಸಿ ಡಿವಿಷನ್ ಲೀಗ್ (ಎಸ್. ರಂಗರಾಜನ್ ಸ್ಮಾರಕ ಟ್ರೋಫಿ) ಚಾಂಪಿಯನ್‌ಷಿಪ್ ಆಯೋಜಿಸಲಿದೆ. ರಾಜ್ಯದ 54 ತಂಡಗಳುಲ್ಲಿ ಪಾಲ್ಗೊಳ್ಳಲಿವೆ ಎಂದು ಪ್ರಕಟಣೆ ತಿಳಿಸಿದೆ.

ರಾಜ್ಯ ಜೂನಿಯರ್, ಸಬ್ ಜೂನಿಯರ್ ಈಜು ಚಾಂಪಿಯನ್‌ಷಿಪ್: ಇಶಾನ್ ಮೆಹ್ರಾ, ಧೀನಿಧಿ ಮಿಂಚು

ದಾಖಲೆ ಉತ್ತಮಪಡಿಸಿಕೊಂಡ ರಿಧಿಮಾ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಬೆಂಗಳೂರಿನ ಬಸವನಗುಡಿ ಈಜು ಕೇಂದ್ರದ (ಬಿಎಸಿ) ರಿಧಿಮಾ ವೀರೇಂದ್ರಕುಮಾರ ಅವರು ರಾಜ್ಯ ಈಜು ಸಂಸ್ಥೆ, ಕೆಎಲ್‌ಇ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿ ಸಹಯೋಗದಲ್ಲಿ ಇಲ್ಲಿನ ಸುವರ್ಣ ಜೆಎನ್‌ಎಂಸಿ ಈಜುಕೊಳದಲ್ಲಿ ಶುಕ್ರವಾರ ನಡೆದ ರಾಜ್ಯ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸತತ 2ನೇ ದಿನವೂ ದಾಖಲೆ ಬರೆದರು.

ಬಾಲಕಿಯರ (ಜೂನಿಯರ್ ಗುಂಪು–1) 50 ಮೀ. ಬ್ಯಾಕ್‌ಸ್ಟ್ರೋ-ಕ್‌ನಲ್ಲಿ ಗುರುವಾರ ದಾಖಲೆ ನಿರ್ಮಿಸಿದ್ದ ಅವರು, ಶುಕ್ರವಾರ (ಜೂನಿಯರ್ ಗುಂಪು–1) 100 ಮೀ. ಬ್ಯಾ-ಕ್‌ಸ್ಟ್ರೋಕ್‌ನಲ್ಲಿ (1:04.60ಸೆ.) ಗುರಿ ಮುಟ್ಟಿದರು. ಈ ಮೂಲಕ ಬೆಳಗಾವಿಯಲ್ಲಿ ತಾವೇ ನಿರ್ಮಿಸಿದ್ದ (1:05.71ಸೆ.) ಸಮಯ ಉತ್ತಮಪಡಿ-ಸಿಕೊಂಡರು.

ಡಿಕೆವಿ ಈಜು ಕೇಂದ್ರದ ಎ.ಜೆದಿದಾಹ್, ಡಾಲ್ಫಿನ್ ಈಜು ಕೇಂದ್ರದ ಮಾನವಿ ವರ್ಮಾ, ಇಶಾನ್ ಮೆಹ್ರಾ, ಧಿನಿಧಿ ದೆಸಿಂಘು, ಬಸವನಗುಡಿ ಈಜು ಕೇಂದ್ರದ ಎಸ್.ಲಕ್ಷ್ಯ ದಾಖಲೆ ನಿರ್ಮಿಸಿದರು. ಬಾಲಕಿಯರ (ಜೂನಿಯರ್ ಗುಂಪು–2) 100 ಮೀ. ಬಟರ್‌ಫ್ಲೈನಲ್ಲಿ ಧಿನಿಧಿ ದೆಸಿಂಘು (1:04.26ಸೆ.) ಗುರಿ ತಲುಪಿ ಹಾಷಿಕಾ ರಾಮಚಂದ್ರ (1:05.51ಸೆ.) ದಾಖಲೆ ಮುರಿದರು. ಬಾಲಕಿಯರ (ಜೂನಿಯರ್ ಗುಂಪು–1) 200 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಎಸ್.ಲಕ್ಷ್ಯ (ಬಸವನಗುಡಿ ಈಜು ಕೇಂದ್ರ;2:46. 53ಸೆ.) ಗುರಿ ಮುಟ್ಟಿದರು. ಈ ಮೂಲಕ ತಮ್ಮ ಹಳೆಯ ಸಮಯ (2:47.54ಸೆ.) ಉತ್ತಮ ಪಡಿಸಿಕೊಂಡರು.

ಮೂರನೇ ದಿನ ದ ಫಲಿತಾಂಶ: ಗುಂಪು–2ರ 200 ಮೀ. ಮಿಡ್ಲೆ: ಆರ್.ನವನೀತ್‌ಗೌಡ (ಡಾಲ್ಫಿನ್ ಈಜು ಕೇಂದ್ರ;2:19.79ಸೆ.)–1, ಯಶ್ ಕಾರ್ತಿಕ್ (ಬಿಎಸಿ;2:23.89ಸೆ.)–2, ಅಮನ್ ಸುಣಗಾರ (ಬೆಳಗಾವಿಯ ಸ್ವಿಮ್ಮರ್ಸ್ ಕ್ಲಬ್;2:24.91ಸೆ.)–3.ಗುಂಪು–1ರ 100 ಮೀ. ಬ್ಯಾಕ್‌ಸ್ಟ್ರೋಕ್: ಉತ್ಕರ್ಷ್ ಪಾಟೀಲ (ಬಿಎಸಿ;58.81ಸೆ.)–1, ಧ್ಯಾನ್ ಎಂ. (ಗ್ಲೋಬಲ್ ಈಜು ಕೇಂದ್ರ;1:01.68ಸೆ.)–2, ಆಕಾಶ ಮಾಣೆ (ಬಿಎಸಿ;1.02.00ಸೆ.)–3. ಗುಂಪು–2ರ 100 ಮೀ. ಬ್ಯಾಕ್‌ಸ್ಟ್ರೋಕ್: ಇಶಾನ್ ಮೆಹ್ರಾ (1:02.86ಸೆ.)–1, ಕುಶಾಲ್ ಕೆ. (ಬಿಎಸಿ;1:03.86ಸೆ.)–2, ಅಮನ್ ಸುಣಗಾರ (ಬೆಳಗಾವಿಯ ಸ್ವಿಮ್ಮರ್ಸ್ ಕ್ಲಬ್;1:04.95ಸೆ.)–3. ಸಬ್ ಜೂನಿಯರ್ ಗುಂಪು–3ರ 200 ಮೀ. ಮಿಡ್ಲೆ: ವಿಹಾನ್ ಚತುರ್ವೇದಿ (ಬಿಎಸಿ; 2:46.76ಸೆ.)–1, ಜಾಸ್ ಸಿಂಗ್ (ಮತ್ಸ್ಯ ಐಎನ್‌ಸಿ;2:45. 51ಸೆ.)–2, ವೈಭವ ಪ್ರತಾಪ್ (ಡಿಕೆವಿ ಈಜು ಕೇಂದ್ರ;2:48.83ಸೆ.)–3. ಬಾಲಕಿಯರ (ಜೂನಿಯರ್) ವಿಭಾಗ: ಗುಂಪು–1ರ 200 ಮೀ. ಮಿಡ್ಲೆ: ಎ.ಜೆದಿದಾಹ್ (2:29.51ಸೆ.)–1, ಎಸ್.ಲಕ್ಷ್ಯ (ಬಿಎಸಿ-;2.35.83ಸೆ.)–2, ಅಂಶು ದೇಶಪಾಂಡೆ (ಡಾಲ್ಫಿನ್ ಈಜು ಕೇಂದ್ರ;2:40.01ಸೆ.)–3. ಗುಂಪು–2ರ 200 ಮೀ. ಮಿಡ್ಲೆ: ಮಾನವಿ ವರ್ಮಾ (2:29.20ಸೆ.)–1, ವಿನಿತಾ ನಯನಾ (ಬಿಎಸಿ; 2:37.05ಸೆ.)–2, ಪ್ರಿಯಾಂಶಿ ಮಿಶ್ರಾ (ಗಫ್ರೆಯ್ ಸ್ವಿಮ್ಮಿಂಗ್ ಪ್ರೋಗ್ರಾಮ್;2:38.90ಸೆ.)–3.ಗುಂಪು–1ರ 100 ಮೀ. ಬ್ಯಾಕ್‌ಸ್ಟ್ರೋಕ್: ರಿಧಿಮಾ ವೀರೇಂದ್ರಕುಮಾರ (1:04.60ಸೆ.)–1, ನಿನಾ ವೆಂಕಟೇಶ (1:08.17ಸೆ.)–2, ಶಾಲಿನಿ ದೀಕ್ಷಿತ್ (ಇಬ್ಬರೂ ಡಾಲ್ಫಿನ್ ಈಜು ಕೇಂದ್ರ; 1:08.51ಸೆ.)–3.

ಗುಂಪು–2ರ 100 ಮೀ. ಬ್ಯಾಕ್‌ಸ್ಟ್ರೋಕ್: ಪ್ರಿಯಾಂಶಿ ಮಿಶ್ರಾ (ಗಫ್ರೆಯ್ ಸ್ವಿಮ್ಮಿಂಗ್ ಪ್ರೋ-ಗ್ರಾಮ್;1:13.12ಸೆ.)–1, ನಕ್ಷತ್ರಾ ಗೌತಮ (ಬಿಎಸಿ; 1:13.46ಸೆ.)–2, ಸುದ್ಧಿ ಶಾಹ್ (ಡಾಲ್ಫಿನ್ ಈಜು ಕೇಂದ್ರ;1:14.75ಸೆ.)–3. ಸಬ್ ಜೂನಿಯರ್: ಗುಂಪು–3ರ 200 ಮೀ. ಮೆಡ್ಲೆ: ಶೆಲಿನ್ ಸುನೀಲ್ (ಡಾಲ್ಫಿನ್ ಈಜು ಕೇಂದ್ರ;2:48.31ಸೆ.)–1, ತ್ರಿಶಾ ಸಿಂಧು (2:49.95ಸೆ.)–2, ಸಾನ್ವಿ ಮೈಗು (ಇಬ್ಬರೂ ಡಿಕೆವಿ ಈಜು ಕೇಂದ್ರ;2:57.37ಸೆ.)–3.

ಬಸವನಗುಡಿ ಈಜು ಕೇಂದ್ರದ ರಿಧಿಮಾ ವೀರೇಂದ್ರಕುಮಾರ ಸಂಭ್ರಮ / ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ನೆಟ್ಟಕಲ್ಲಪ್ಪ ಕೇಂದ್ರದ ನಯನ್‌ಗೆ ಚಿನ್ನ

ಬೆಂಗಳೂರಿನ ನೆಟ್ಟಕಲ್ಲಪ್ಪ ಈಜು ಕೇಂದ್ರದ ನಯನ್ ವಿಘ್ನೇಶ ಜೂನಿಯರ್ ಗುಂಪು–1ರ 200 ಮೀಟರ್ ಮೆಡ್ಲೆ ವಿಭಾಗದಲ್ಲಿ ಚಿನ್ನದ ನಗು ಬೀರಿದರು.

ಇವರು 2:14.3 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದರು. ಡಾಲ್ಫಿನ್ ಈಜು ಕೇಂದ್ರದ ವಿದಿತ್ ಶಂಕರ (ಕಾಲ: 2:17.64ಸೆ.) ಮತ್ತು ಬಸವನಗುಡಿ ಈಜು ಕೇಂದ್ರದ ಪವನ ಧನಂಜಯ (2:19.77ಸೆ.) ಕ್ರಮವಾಗಿ ನಂತರದ ಎರಡು ಸ್ಥಾನಗಳನ್ನು ಪಡೆದುಕೊಂಡರು.

ಚೆಸೇಬಲ್ ಮಾಸ್ಟರ್ಸ್ ಆನ್‌ಲೈನ್ ಚೆಸ್: ಪ್ರಜ್ಞಾನಂದ ರನ್ನರ್‌ಅಪ್

ಚೆನ್ನೈ (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಮೆಲ್ಟ್‌ವಾಟರ್ ಚಾಂಪಿಯನ್ಸ್ ಚೆಸ್ ಟೂರ್ ಚೆಸೇಬಲ್ ಮಾಸ್ಟರ್ಸ್ ಆನ್‌ಲೈನ್ ಟೂರ್ನಿಯಲ್ಲಿ ಎರಡನೇ ಸ್ಥಾನ ಗಳಿಸಿದರು.

ಶುಕ್ರವಾರ ಕೊನೆಗೊಂಡ ಫೈನಲ್‌ನಲ್ಲಿ 16 ವರ್ಷದ ಪ್ರಜ್ಞಾನಂದ ಚೀನಾದ ದಿಂಗ್ ಲಿರೆನ್ ವಿರುದ್ಧ ಟೈಬ್ರೇಕ್‌ನಲ್ಲಿ ಸೋಲನುಭವಿಸಿದರು.

ಗುರುವಾರ ಆರಂಭವಾದ ಪಂದ್ಯದಲ್ಲಿ ಮೊದಲ ಸೆಟ್‌ಅನ್ನು 1.5–2.5ರಿಂದ ಕೈಚೆಲ್ಲಿದ್ದ ಪ್ರಜ್ಞಾನಂದ, ಎರಡನೇ ಸೆಟ್‌ಅನ್ನು 2.5–1.5ರಿಂದ ತಮ್ಮದಾಗಿಸಿಕೊಂ-ಡು ತಿರುಗೇಟು ನೀಡಿದರು. ಹೀಗಾಗಿ ಫಲಿತಾಂಶ ನಿರ್ಧರಿಸಲು ಟೈಬ್ರೇಕ್ ಮೊರೆಹೋಗಲಾಯಿತು.

ಪ್ರಜ್ಞಾನಂದ

ಟೈಬ್ರೇಕ್‌ನ ಮೊದಲ ಬ್ಲಿಟ್ಜ್ ಗೇಮ್ ಡ್ರಾನಲ್ಲಿ ಕೊನೆಗೊಂಡಿತು. ಎರಡನೇ ಗೇಮ್‌ನಲ್ಲಿ ತಮ್ಮ ಅನುಭವವನ್ನು ಒರೆಗೆ ಹಚ್ಚಿದ 29 ವರ್ಷದ ಲಿರೆನ್ ಜಯ ಸಾಧಿಸಿದರು. ಅದರೊಂದಿಗೆ ಪಂದ್ಯವನ್ನೂ ಗೆದ್ದರು.

ಪ್ರಜ್ಞಾನಂದ ಟೂರ್ನಿಯುದ್ದಕ್ಕೂ ಅಮೋಘ ಲಯದಲ್ಲಿದ್ದರು. ಪ್ರಿಲಿಮನರಿ ಸುತ್ತಿನಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಸೋಲುಣಿಸಿದ್ದರು. ಸೆಮಿಫೈನಲ್‌ನಲ್ಲಿ ನೆದರ್ಲೆಂಡ್ಸ್‌ನ ಅನೀಶ್ ಗಿರಿ ಅವರಿಗೆ ಆಘಾತ ನೀಡಿದ್ದರು.

ಐಡಬ್ಲ್ಯುಎಲ್ ಫುಟ್‌ಬಾಲ್: ಗೋಕುಲಂ ಕೇರಳ ತಂಡಕ್ಕೆ ಪ್ರಶಸ್ತಿ

ಭುವನೇಶ್ವರ (ಪಿಟಿಐ): ಗೋಕುಲಂ ಕೇರಳ ಫುಟ್‌ಬಾಲ್ ಕ್ಲಬ್ ಸತತ ಎರಡನೇ ಬಾರಿ ಇಂಡಿಯನ್ ವಿಮೆನ್ಸ್ ಲೀಗ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದೆ. ಬುಧವಾರ ನಡೆದ ಪಂದ್ಯದಲ್ಲಿ ತಂಡವು 3–1ರಿಂದ ಸೇತು ಎಫ್‌ಸಿಗೆ ಸೋಲುಣಿಸಿತು.

ಟೂರ್ನಿಯಲ್ಲಿ ಉಭಯ ತಂಡಗಳು ಸತತ 10 ಪಂದ್ಯಗಳಲ್ಲಿ ಜಯ ಸಾಧಿಸಿದ್ದವು. ಪ್ರಶಸ್ತಿ ಜಯಿಸಲು ಒಂದು ಪಂದ್ಯ ಮಾತ್ರ ಗೆಲ್ಲಬೇಕಿತ್ತು. ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಜಿದ್ದಾಜಿದ್ದಿನ ಹಣಾಹಣಿಯಲ್ಲಿ ತಮಿಳುನಾಡಿನ ಸೇತು ಎಫ್‌ಸಿಗೆ ಮೂರನೇ ನಿಮಿಷದಲ್ಲೇ ಮುನ್ನಡೆ ಲಭಿಸಿತು. ರೇಣುರಾಣಿ ತಂಡಕ್ಕೆ ಗೋಲು ಗಳಿಸಿಕೊಟ್ಟರು. 14ನೇ ನಿಮಿಷದಲ್ಲಿ ಲೈತೊಂಗ್ಮಬ್ ಆಶಾಲತಾ ದೇವಿ ಗಳಿಸಿದ ಗೋಲಿನಿಂದ ಗೋಕುಲಂ ಸಮಬಲ ಸಾಧಿಸಿತು.

33ನೇ ನಿಮಿಷದಲ್ಲಿ ಎಲ್‌ಶಾದ್ದಾಯಿ ಅಚೆಂಪಾಂಗ್ ಮತ್ತು 40ನೇ ನಿಮಿಷದಲ್ಲಿ ಮನೀಷಾ ಕಲ್ಯಾಣ್ ಕಾಲ್ಚಳಕ ತೋರಿ ಗೋಕುಲಂ ಕೇರಳ ತಂಡದ ಗೆಲುವಿಗೆ ಕಾರಣರಾದರು.



ಮಾನಸಿಕ ಸ್ವಾಸ್ಥ್ಯಕ್ಕೆ ಹದಿನೈದು ನಿಮಿಷ...

ಮನಸ್ವಿ

ಒತ್ತಡ, ಇತ್ತೀಚೆಗೆ ನಮ್ಮ ಜೀವನಶೈಲಿಯ ಭಾಗವಾಗಿದೆ.ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ವಿವಿಧ ರೀತಿಯ ಒತ್ತಡಗಳನ್ನು ಎದುರಿಸುತ್ತಿರುತ್ತೇವೆ. ಅದರಲ್ಲೂ ಮಾನಸಿಕ ಒತ್ತಡದಿಂದ ಬಳಲುವವರ ಸಂಖ್ಯೆ ತುಸು ಹೆಚ್ಚೇ ಇದೆ. ಈ ಮಾನಸಿಕ ಒತ್ತಡಗಳು ಮನಸ್ಸಿನ ಸ್ವಾಸ್ಥ್ಯ ಕೆಡಿಸುತ್ತವೆ.

ಆದರೆ 'ಮೆಂಟಲ್ ಹೈಜಿನ್' ಅಥವಾ ಮನಸ್ಸು ಆರೋಗ್ಯವಾಗಿದ್ದರೆ ಮಾನಸಿಕ ಒತ್ತಡವನ್ನು ಕಡಿಮೆ ಮಾಡಿಕೊಳ್ಳಬಹುದು. ಪ್ರತಿದಿನ ಮನಸ್ಸನ್ನು ಸ್ವಾಸ್ಥ್ಯವಾಗಿಟ್ಟುಕೊಳ್ಳಲು ದೀರ್ಘ ಸಮಯಬೇಕಿಲ್ಲ. ಬೆಳಗಿನ 15 ನಿಮಿಷ ಸಮಯವನ್ನು ಮೀಸಲಿಟ್ಟರೆ ಸಾಕು. ಇಡೀ ದಿನವನ್ನು ಖುಷಿಯಿಂದ ಕಳೆಯಬಹುದು. ಹಾಗಾದರೆ 15 ನಿಮಿಷಗಳ ಸಮಯದಿಂದ ಮನಸ್ಸಿನ ಒತ್ತಡವನ್ನು ಕಡಿಮೆ ಮಾಡಿಕೊಳ್ಳುವುದು ಹೇಗೆ?

ಹೊಸ ಚಟುವಟಿಕೆಗಳನ್ನು ಕಲಿಯಿರಿ

ಮಾನಸಿಕ ಆರೋಗ್ಯ ಸ್ವಾಸ್ಥವಾಗಿರಬೇಕೆಂದರೆ ಮನಸ್ಸು ಹಾಗೂ ದೇಹವನ್ನು ಬೇರೆ ಬೇರೆ ಚಟುವಟಿಕೆಯಲ್ಲಿ ತೊಡಗಿಕೊಳ್ಳುವಂತೆ ಮಾಡಬೇಕು.

ಉದಾಹರಣೆಗೆ; ಮುಂಜಾನೆ ಎದ್ದ ಕೂಡಲೇ, ಲಘುವಾದ ವಾಕಿಂಗ್ ಮುಗಿಸಿ, ಉಸಿರಾಟಕ್ಕೆ ಸಂಬಂಧಿಸಿದ ವ್ಯಾಯಾಮ ಮಾಡಿ. ನಂತರ ಶಾಂತ ಮನಸ್ಸಿನಿಂದ ನಿಧಾನಕ್ಕೆ ಉಸಿರು ತೆಗೆದುಕೊಂಡು ಕಾಫಿ ಹೀರಿ ಅಥವಾ ಹಿತವಾದ ಸಂಗೀತ ಕೇಳುತ್ತಾ ಕಾಫಿ ಕುಡಿಯಲು ಅಭ್ಯಾಸ ಮಾಡಿ.

ಮನೆಯ ಹೂದೋಟದಲ್ಲಿ ಕುಳಿತು ತಂಗಾಳಿಯನ್ನು ಆಸ್ವಾದಿಸಿ. ಇದರಿಂದ ಮನಸ್ಸಿಗೆ ಖುಷಿ ಸಿಗುತ್ತದೆ. ಇದೇ ರೀತಿ ನಿಮ್ಮ ಮನಸ್ಸಿಗೆ ಖುಷಿ ನೀಡುವ, ಒತ್ತಡ ನಿವಾರಿಸುವ, ಮನಸ್ಸನ್ನು ಶುದ್ಧ ಮಾಡುವ ಹೊಸ ಚಟುವಟಿಕೆಗಳನ್ನು ನಿತ್ಯ ಕಲಿಯುತ್ತಲೇ ಇರಿ.

ನಿಮ್ಮ ಅನುಭವವನ್ನು ಬರೆದಿಡಿ

ಈ ರೀತಿ 15 ನಿಮಿಷಗಳ ಹೊಸ ಚಟುವಟಿಕೆಯಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಂಡ ಮೇಲೆ ನಿಮಗಾದ ಅನುಭವವನ್ನು ಪ್ರತಿನಿತ್ಯ ಒಂದು ಪುಸ್ತಕದಲ್ಲಿ ದಾಖಲಿಸುತ್ತಿರಿ.

ನೀವು ಅಳವಡಿಸಿಕೊಂಡಿದ್ದ ಯಾವ ಹೊಸ ಚಟುವಟಿಕೆ ನಿಮ್ಮ ಮನಸ್ಸಿನ ಮೇಲೆ ಯಾವ ರೀತಿ ಪರಿಣಾಮ ಬೀರಿತು ಎಂಬುದನ್ನು ಬರೆದಿಡಿ. ಈ ಚಟುವಟಿಕೆಯ ನಂತರ ನಿಮ್ಮ ಮನಸ್ಸು ಶಾಂತವಾಗಿತ್ತೆ? ದಿನವಿಡೀ ಚೈತನ್ಯದಿಂದ ಕೂಡಿತ್ತೆ? ಒತ್ತಡವನ್ನು ನಿಭಾಯಿಸಲು ನಿಮ್ಮಿಂದ ಸಾಧ್ಯವಾಯಿತೇ? ನಿಮ್ಮಲ್ಲಿ ಯಾವೆಲ್ಲಾ ರೀತಿಯ ಬದಲಾವಣೆಗಳಾಗಿದ್ದವು ಎಂಬ ಸಣ್ಣ ಸಣ್ಣ ಅಂಶವನ್ನೂ ಬರೆದಿಡಿ. ಇವುಗಳಲ್ಲಿ ನಿಮ್ಮ ಮನಸ್ಸಿಗೆ ಹೆಚ್ಚು ಖುಷಿ ನೀಡಿದ ಚಟುವಟಿಕೆಯ ಮೇಲೆ ಹೆಚ್ಚು ಗಮನ ಹರಿಸಿ. ಇದರಿಂದ ತಕ್ಷಣಕ್ಕೆ ನಿಮ್ಮಲ್ಲಾದ ಬದಲಾವಣೆಯ ಬಗ್ಗೆ ನಿಮಗೆ ಅರಿವಿಗೆ ಬಾರದಿದ್ದರೂ ನಿಧಾನಕ್ಕೆ ನಿಮ್ಮ ಮಾನಸಿಕ ಸ್ವಾಸ್ಥ್ಯದ ಬಗ್ಗೆ ಅರಿವು ಮೂಡುತ್ತದೆ.

ಧ್ಯಾನವೂ ಇರಲಿ

ಕೆಲವೊಮ್ಮೆ ನೀವು ಕಲಿತ ಹೊಸ ಚುಟವಟಿಕೆ ನಿಮ್ಮ ಮನಸ್ಸಿನ ಒತ್ತಡವನ್ನು ಕಡಿಮೆ ಮಾಡದೇ ಇರಬಹುದು. ಯಾಕೆಂದರೆ ಎಲ್ಲವೂ ಎಲ್ಲಾ ಸಮಯದಲ್ಲೂ ಕೆಲಸ ಮಾಡುವುದಿಲ್ಲ. ಅಂತ ಸಮಯದಲ್ಲಿ, ನೀವು ಮಾಡುತ್ತಿರುವ ಕೆಲಸದಿಂದ ಐದಾರು ನಿಮಿಷ ಬಿಡುವ ಪಡೆದು, ಅದೇ ಬಿಡುವಿನ ಐದು ನಿಮಿಷಗಳ ಕಾಲ ಕುಳಿತಲ್ಲೇ ಧ್ಯಾನ ಮಾಡುವುದನ್ನು ರೂಢಿಸಿಕೊಳ್ಳಿ.

ಕೆಲವೊಮ್ಮೆ ಪ್ರತಿನಿತ್ಯ 15 ನಿಮಿಷಗಳ ಕಾಲ ಮಾಡುವ ಚಟುವಟಿಕೆ ಮನಸ್ಸಿಗೆ ಹಿತ ನೀಡದಿರಬಹುದು. ಅಂತಹ ಸಮಯದಲ್ಲಿ ವಾರಕ್ಕೊಮ್ಮೆ ದೂರದವರೆಗೆ ನಡೆದಾಡಿ(ಲಾಂಗ್‌ವಾಕ್). ಯೋಗ ಮಾಡಿ. ಸೈಕ್ಲಿಂಗ್ ಮಾಡಿ. ಒಂದು ಲಾಂಗ್ ಬೈಕ್ ರೈಡಿಂಗ್ ಮಾಡಿಬನ್ನಿ. ಈ ಚಟುವಟಿಕೆಗಳು ಖಂಡಿತಾ ಮನಸ್ಸಿಗೆ ಖುಷಿ ನೀಡುತ್ತವೆ.

ಕನಿಷ್ಠ ವಾರದಲ್ಲಿ ಒಮ್ಮೆ ಡಿಜಿಟಲ್ ಪರಿಕರಗಳಿಂದ ದೂರವಿರುವುದನ್ನು ಅಭ್ಯಾಸ ಮಾಡಿ. ಆಫೀಸ್ ಇ–ಮೇಲ್, ಗ್ರೂಪ್ ಮೆಸೇಜ್, ಟಿವಿ ವೀಕ್ಷಣೆ, ಮೊಬೈಲ್ ಬಳಕೆ.. ಇಂಥವುಗಳಿಂದ ದೂರವಿರುವುದನ್ನು ಅಭ್ಯಾಸ ಮಾಡಿ.

ಅದಿತಿ ಈಗ 'ಅಲೆಕ್ಸಾ'

ಅದಿತಿ ಪ್ರಭುದೇವ

ಅದಿತಿ ಪ್ರಭುದೇವ ಹೆಸರು ಬದಲಿಸಿಕೊಂಡ್ರಾ?... ಊಹುಂ ಇಲ್ಲ. ಅವರು ಅಭಿನಯಿಸುತ್ತಿರುವ ಚಿತ್ರದ ಹೆಸರು 'ಅಲೆಕ್ಸಾ'. ಚಿತ್ರದ ಶೂಟಿಂಗ್ ಈಗ ಮುಕ್ತಾಯದ ಹಂತದಲ್ಲಿದೆ.

ಜೀವಾ ನಿರ್ದೇಶನದ ಈ ಚಿತ್ರಕ್ಕೆ ಇತ್ತೀಚೆಗೆ ರಾಮಮೂರ್ತಿ ನಗರದ ಬಳಿ ಸಾಹಸ ಚಿತ್ರೀಕರಣ ನಡೆಯಿತು. ಖ್ಯಾತ ಸಾಹಸ ನಿರ್ದೇಶಕ ರವಿವರ್ಮ ಸಾಹಸ ಸಂಯೋಜನೆಯಲ್ಲಿ ಭರ್ಜರಿ ಕ್ಲೈಮ್ಯಾಕ್ಸ್ ಚಿತ್ರೀಕರಣ ನಡೆದಿದೆ. ಅದಿತಿ ಪ್ರಭುದೇವ, ಪವನ್ ತೇಜ್ ಈ ಸಾಹಸ ಸನ್ನಿವೇಶದಲ್ಲಿ ಭಾಗವಹಿಸಿದ್ದರು.

ಕಳೆದ 24 ವರ್ಷಗಳಿಂದ ಜೀವಾ ಅವರಿಗೆ ಕನ್ನಡ ಚಿತ್ರರಂಗದೊಂದಿಗೆ ನಂಟು. ಹೆಸರಾಂತ ತಂತ್ರಜ್ಞರ ಜೊತೆ ಕೆಲಸ ಮಾಡಿರುವ ಜೀವಾ ಅವರು ಪ್ರಜ್ವಲ್ ದೇವರಾಜ್ ಅಭಿನಯದ 25ನೇ ಚಿತ್ರ 'ಭುಜಂಗ' ಚಿತ್ರವನ್ನು ನಿರ್ದೇಶಿಸಿದ್ದರು. ಇದು ಅವರ ನಿರ್ದೇಶನದ ಎರಡನೇ ಚಿತ್ರ.

ಕ್ರೈಂ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ನಿರ್ದೇಶಕರೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ.

ವಿ.ಚಂದ್ರು ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಡಾ.ನಾಗೇಂದ್ರಪ್ರಸಾದ್ ಹಾಡುಗಳನ್ನು ಬರೆದಿದ್ದು, ಎ.ಪಿ.ಒ ಸಂಗೀತ ನೀಡಿದ್ದಾರೆ. ಸಾಯಿ ಸತೀಶ್ ಛಾಯಾಗ್ರಹಣ, ಉಮೇಶ್ ಸಂಕಲನ, ಚಂದ್ರು, ರಾಮು ನೃತ್ಯ ನಿರ್ದೇಶನ ಹಾಗೂ ರವಿವರ್ಮ, ಮಾಸ್ ಮಾದ, ವಿಕ್ರಮ್ ಮೋರ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ಅದಿತಿ ಪ್ರಭುದೇವ ವಿಶೇಷ ತನಿಖಾಧಿಕಾರಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಪವನ್ ತೇಜ್ ನಾಯಕನಾಗಿ ಅಭಿನಯಿಸುತ್ತಿದ್ದಾರೆ. ನಾಗಿಣಿ ಧಾರಾವಾಹಿ ಖ್ಯಾತಿಯ ನಾಗಾರ್ಜುನ್, ಮೇಘಾಶ್ರೀ, ಹನುಮಂತೇಗೌಡ, ಚಂದ್ರಕಲಾ ಮೋಹನ್, ಮಿಮಿಕ್ರಿ ಗೋಪಿ, ಮೈಸೂರು ಮಲ್ಲೇಶ್ ಹಾಗೂ ಮನಮೋಹನ್ ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

'ದೂರದರ್ಶನ' ಚಿತ್ರೀಕರಣ ಪೂರ್ಣ

ಪೃಥ್ವಿ ಅಂಬಾರ್ ನಟನೆಯ 'ದೂರದರ್ಶನ' ಸಿನಿಮಾದ ಚಿತ್ರೀಕರಣ ಮುಗಿದಿದೆ. ಈಗ ಪೋಸ್ಟ್ ಪ್ರೊಡಕ್ಷನ್ ನಡೆಯುತ್ತಿದೆ. ಹಾಗಿದ್ದರೆ ಏನಿದೆ 'ದೂರದರ್ಶನ'ದಲ್ಲಿ?

ಕರಾವಳಿ ಮತ್ತು ಪಶ್ಚಿಮ ಘಟ್ಟಗಳ ನಡುವಿನ ಒಂದು ಚಿಕ್ಕ ಊರಿಗೆ ಟಿ.ವಿ ಬಂದ ಮೇಲೆ ಹೇಗೆಲ್ಲಾ ಪ್ರಭಾವ ಬೀರುತ್ತದೆ ಎನ್ನುವುದನ್ನು ಹೇಳಿದೆ 'ದೂರದರ್ಶನ'. ಅಂದಿನ ಕಾಲಘಟ್ಟದಲ್ಲಿ ಇದ್ದಂತಹ ಹಲವಾರು ಪ್ರಚಲಿತ ವಿದ್ಯಮಾನಗಳನ್ನು ನೋಡುಗರು ಮೆಲುಕು ಹಾಕುವಂತೆ ಮಾಡುವ ಕಥಾಹಂದರ ಇರುವ ಸಿನಿಮಾ ಇದಾಗಿದೆ. ಆಕರ್ಷಕ ಶೀರ್ಷಿಕೆಯಡಿ ತಯಾರಾಗಿರುವ ಈ ಸಿನಿಮಾ 80ರ ದಶಕಕ್ಕೆ ನೋಡುಗರನ್ನು ಕರೆದೊಯ್ಯುವಂತೆ ಮಾಡುತ್ತದೆ ಎನ್ನುವುದು ಚಿತ್ರತಂಡದ ಮಾತು.

ಪೃಥ್ವಿ ಅಂಬಾರ್

'ದಿಯಾ' ಸಿನಿಮಾ ಮೂಲಕ ಪ್ರೇಕ್ಷಕರ ಮನೆ ಮನ ಗೆದ್ದಿರುವ ಮಂಗಳೂರಿನ ಪ್ರತಿಭೆ ಪೃಥ್ವಿ ಅಂಬಾರ್ 'ದೂರದರ್ಶನ' ಸಿನಿಮಾದಲ್ಲಿ ನಾಯಕ. ಪೃಥ್ವಿಗೆ ಜೋಡಿಯಾಗಿ ಅಯಾನಾ ನಟಿಸಿದ್ದಾರೆ. ಪ್ರಮುಖ ಪಾತ್ರದಲ್ಲಿ ಉಗ್ರಂ ಮಂಜು ಕಾಣಿಸಿಕೊಂಡಿದ್ದಾರೆ. ಹರಿಣಿ, ದೀಪಕ್ ರೈ ಪಾಣಾಜೆ, ರಘು ರಮಣಕೊಪ್ಪ, ಹುಲಿ ಕಾರ್ತಿಕ್, ಸೂರಜ್ ಮಂಗಳೂರು, ಸೂರ್ಯ ಕುಂದಾಪುರ ಸೇರಿದಂತೆ ಮತ್ತಿತರ ತಾರಾಗಣ ಸಿನಿಮಾದಲ್ಲಿದೆ.

'ಟ್ರಂಕ್' ಸಿನಿಮಾದಲ್ಲಿ ಸಂಭಾಷಣೆ ಹಾಗೂ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿರುವ, ಹಲವು ಕಿರುಚಿತ್ರಗಳನ್ನು ನಿರ್ದೇಶನ ಮಾಡಿರುವ ಸುಕೇಶ್ ಶೆಟ್ಟಿ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದು, ಸಿನಿಮಾಗೆ ಕಥೆ, ಚಿತ್ರಕಥೆಯನ್ನೂ ಬರೆದಿದ್ದಾರೆ. ಇದು ಇವರ ಮೊದಲ ಸಿನಿಮಾ.

ನೈಜಘಟನೆ ಹಾಗೂ ಕಾಲ್ಪನಿಕ ಸನ್ನಿವೇಶ ಬೆರೆತ ಸಿನಿಮಾವಾಗಿರುವ ದೂರದರ್ಶನ ಚಿತ್ರೀಕರಣ ಮಂಗಳೂರು ಪುತ್ತೂರು ಮಧ್ಯದ ಆರ್ಲಪದವಿನಲ್ಲಿ 38 ದಿನಗಳ ಕಾಲ ನಡೆದಿದೆ. ವಿಎಸ್ ಮೀಡಿಯಾ ಎಂಟರ್‌ಪ್ರೈಸಸ್ ಬ್ಯಾನರ್ ಅಡಿ ರಾಜೇಶ್ ಭಟ್ ಸಿನಿಮಾಗೆ ಬಂಡವಾಳ ಹೂಡಿದ್ದಾರೆ. ಉಗ್ರಂ ಮಂಜು ಎಕ್ಸಿಕ್ಯೂಟಿವ್ ಪ್ರೊಡ್ಯೂಸರ್. ವಾಸುಕಿ ವೈಭವ್ ಸಂಗೀತ ಸಂಯೋಜನೆ, ಅರುಣ್ ಸುರೇಶ್ ಕ್ಯಾಮೆರಾ ವರ್ಕ್, ನಂದೀಶ್ ಟಿ.ಜಿ. ಸಂಭಾಷಣೆ, ಪ್ರದೀಪ್ ಆರ್. ರಾವ್ ಸಂಕಲನ ಸಿನಿಮಾಕ್ಕಿದೆ.

'love..ಲಿ'ಯಲ್ಲ ಈ ವಸಿಷ್ಠ ಸಿಂಹ!

ನಟ ವಸಿಷ್ಠ ಸಿಂಹ ನಾಯಕನಾಗಿ ನಟಿಸುತ್ತಿರುವ ಹೊಸ ಸಿನಿಮಾ 'love..ಲಿ'ಯ ಚಿತ್ರೀಕರಣ ಆರಂಭವಾಗಿದ್ದು, ಇದೀಗ ಚಿತ್ರದ ಫಸ್ಟ್‌ಲುಕ್ ಅನ್ನು ಚಿತ್ರತಂಡ ಬಿಡುಗಡೆ ಮಾಡಿದೆ.

ರಕ್ತಸಿಕ್ತ ಕೈಯಲ್ಲಿ ಲಾಂಗ್ ಹಿಡಿದು ಸಿಗರೇಟ್ ಎಳೆಯುತ್ತಾ ಬರುವ ವಸಿಷ್ಠ ಸಿಂಹ ರಾ ಲುಕ್‌ನಲ್ಲಿ ಇಲ್ಲಿ ಕಾಣಿಸಿಕೊಂಡಿದ್ದಾರೆ. ವಸಿಷ್ಠ ಅವರ ಈ ಶೇಡ್‌ಗೆ ಅಭಿಮಾನಿಗಳು ಫಿದಾ ಆಗಿದ್ದಾರೆ. ಸದ್ಯಕ್ಕೆ ಬೆಂಗಳೂರಿನಲ್ಲಿ ಚಿತ್ರದ ಆ್ಯಕ್ಷನ್ ಸೀಕ್ವೆನ್ಸ್‌ನ ಚಿತ್ರೀಕರಣ ನಡೆಯುತ್ತಿದೆ. ನೈಜ ಘಟನೆಗಳನ್ನು ಆಧರಿಸಿದ 'love..ಲಿ' ಸಿನಿಮಾವನ್ನು ಚೇತನ್ ಕೇಶವ್ ನಿರ್ದೇಶನ ಮಾಡುತ್ತಿದ್ದು, ರವೀಂದ್ರ ಕುಮಾರ್ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಹರೀಶ್‌ಕೊಂಬೆ ಕ್ಯಾಮೆರಾ, ಅನೂಪ್ ಸಿಳೀನ್ ಸಂಗೀತ ಸಂಯೋಜನೆ ಮಾಡಲಿದ್ದಾರೆ.

ನಾಯಕ ನಟನಾಗಿಯೂ, ಖಳನಾಯಕನಾಗಿಯೂ ಬೆಳ್ಳಿಪರದೆಯ ಮೇಲೆ ಮಿಂಚಿದ್ದ ವಸಿಷ್ಠ ಸಿಂಹ ಸದ್ಯಕ್ಕೆ ತಾವು ನಾಯಕನಾಗಿ ನಟಿಸಿರುವ 'ಕಾಲಚಕ್ರ' ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಜೊತೆಗೆ 'ತಲ್ವಾರ್‌ಪೇಟೆ' ಸಿನಿಮಾದಲ್ಲಿ ಹೀರೊ ಆಗಿ ನಟಿಸುತ್ತಿದ್ದಾರೆ. 'ಡಾಲಿ' ಧನಂಜಯ್ ನಟನೆಯ 'ಹೆಡ್‌ಬುಷ್' ಸೇರಿದಂತೆ ತೆಲುಗಿನ ಕಲೆ ಚಿತ್ರಗಳಲ್ಲೂ ವಸಿಷ್ಠ ಬಣ್ಣಹಚ್ಚಿದ್ದಾರೆ.

ವಸಿಷ್ಠ ಸಿಂಹ

'ಕ್ಷೇತ್ರಪತಿ' ರೈತನ ಕಥೆಯಂತೆ

'ಗುಲ್ಟು' ಚಿತ್ರದ ಅಭಿನಯದಿಂದ ಕನ್ನಡಿಗರ ಮನಗೆದ್ದ ನಟ ನವೀನ್ ಶಂಕರ್. ಈಗ 'ಕ್ಷೇತ್ರಪತಿ'ಯಾಗಿದ್ದಾರೆ.

'ಕ್ಷೇತ್ರಪತಿ'ಯ ಫಸ್ಟ್ ಲುಕ್‌ನ್ನು ಡಾಲಿ ಧನಂಜಯ ಬಿಡುಗಡೆ ಮಾಡಿ ಶುಭ ಕೋರಿದರು. ನಿರ್ದೇಶಕ ಸಿಂಪಲ್ ಸುನಿ ಸಹ ಕಾರ್ಯಕ್ರಮಕ್ಕೆ ಆಗಮಿಸಿ ಹಾರೈಸಿದರು.

'ಜಯನಗರ 4ನೇ ಬ್ಲಾಕ್' ಕಿರುಚಿತ್ರ ಮಾಡುತ್ತಿದ್ದಾಗ ನವೀನ್, ನಾನು ಭೇಟಿಯಾಗುತ್ತಿದ್ದೆವು. ಯಾವುದೇ ಹಿನ್ನೆಲೆ ಇಲ್ಲದೆ ನವೀನ್ ಇಷ್ಟು ಬೆಳೆದಿರುವುದು ನಿಜಕ್ಕೂ ಹೆಮ್ಮೆ. ಚಿತ್ರದಲ್ಲಿ ನವೀನ್ ಬಸವ ಎಂಬ ಪಾತ್ರ ಮಾಡಿದ್ದಾರೆ. ಈ ಬಸವನಿಗೆ ನಮ್ಮ ಕ್ರಾಂತಿಕಾರಿ ಬಸವಣ್ಣನವರು ಆದರ್ಶವಾಗಲಿ. ಚಿತ್ರ ಜಯಭೇರಿ ಬಾರಿಸಲಿ' ಎಂದು ಹಾರೈಸಿದ ಡಾಲಿ, ನಾನು ಹಾಗೂ ನವೀನ್ ಶಂಕರ್ 'ಹೊಯ್ಸಳ' ಚಿತ್ರದಲ್ಲಿ ಒಟ್ಟಾಗಿ ನಟಿಸುತ್ತಿರುವುದಾಗಿ ತಿಳಿಸಿದರು.

'ನಾನು ಖಾಸಗಿ ಕಂಪನಿಯೊಂದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ. 'ಗುಲ್ಟು' ಸಿನಿಮಾ ನೋಡಿ ಅಭಿಮಾನಿಯಾದೆ. ನಾನು ಯಾರ ಬಳಿಯೂ ಸಹ ನಿರ್ದೇಶಕನಾಗಿ ಕೆಲಸ ಮಾಡಿಲ್ಲ. ಇದು ಮೊದಲ ಚಿತ್ರ. ರೈತನಿಗೆ ಸಂಸ್ಕೃತದಲ್ಲಿ 21 ಹೆಸರುಗಳಿವೆ. ಅದರಲ್ಲಿ 'ಕ್ಷೇತ್ರಪತಿ' ಸಹ ಒಂದು. ಇದೊಂದು ಅಪ್ಪ-ಮಗನ ಬಾಂಧವ್ಯದ ಚಿತ್ರವೂ ಹೌದು. ಗದಗಿನ ತಿಮ್ಮಾಪುರ ಎಂಬ ಊರಿನಲ್ಲೇ ಹೆಚ್ಚಿನ ಚಿತ್ರೀಕರಣ ಮಾಡಿದ್ದೇವೆ' ಎಂದರು ನಿರ್ದೇಶಕ ಶ್ರೀಕಾಂತ್ ಕಟಗಿ.

ರವಿ ಬಸ್ರೂರ್ ಅವರ ಸಂಗೀತ ಈ ಚಿತ್ರಕ್ಕಿದೆ. ಇನ್ನೂ ಈ ಚಿತ್ರದ ಬಗ್ಗೆ ಹೇಳಬೇಕೆಂದರೆ 'ನಾನು ಬಸವ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೀನಿ. ಬಸವ ಎಂಜಿನಿಯರಿಂಗ್ ವಿದ್ಯಾರ್ಥಿ. ತನ್ನಿಷ್ಟಕ್ಕೆ ತಾನು ಇರುವಾತ. ಆತನ ಜೀವನದಲ್ಲಿ ನಡೆಯುವ ಅನಿರೀಕ್ಷಿತ ಘಟನೆಯೊಂದರ ಮೂಲಕ ಈತ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ. ಈ ಬಸವ ನನ್ನೊಳಗೆ, ನಿಮ್ಮೊಳಗೆ ಇದ್ದಾನೆ. ಕೆಲವರಿಗೆ ಅವನು ಜೀವಂತ. ಇನ್ನೂ ಕೆಲವರಿಗೆ ಆತ ಇಲ್ಲ. ಚಿತ್ರ ನೋಡಿದ ಮೇಲೆ ಅದರ ಬಗ್ಗೆ ತಿಳಿಯುತ್ತದೆ' ಎಂದು ಕಥೆಯ ಬಗ್ಗೆ ನವೀನ್ ಶಂಕರ್ ವಿವರಿಸಿದರು.

'ಅಶೋಕ ಬ್ಲೇಡ್' ಸಾವಿರ ಜನರ ಯುದ್ಧದ ಕಥೆ

'ಅಶೋಕ ಬ್ಲೇಡ್'ಗೆ ಬೆಂಗಳೂರಿನ ಧರ್ಮಗಿರಿ ಶ್ರೀಮಂಜುನಾಥಸ್ವಾಮಿ ದೇವಸ್ಥಾನದಲ್ಲಿ ಇತ್ತೀಚೆಗೆ ಚಾಲನೆ ಸಿಕ್ಕಿದೆ. ನೀನಾಸಂ ಸತೀಶ್ ಈ ಚಿತ್ರದ ನಾಯಕ. ಚಿತ್ರದ ಮೊದಲ ಸನ್ನಿವೇಶಕ್ಕೆ ಪಿ.ಶೇಷಾದ್ರಿ ಆರಂಭಫಲಕ ತೋರಿದರು. ಟಿ.ಎನ್.ಸೀತಾರಾಂ ಕ್ಯಾಮೆರಾ ಚಾಲನೆ ಮಾಡಿದರು.

ವಿನೋದ್ ದೋಂಡಾಳೆ ಚಿತ್ರದ ನಿರ್ದೇಶಕರು. ನರಹರಿ ನಿರ್ಮಾಪಕರು. 'ವರ್ಧನ್ ಮತ್ತು ದೀಪಕ್ ನಾಯ್ಡು ಅವರ ಜತೆ ಸೇರಿ 10 ವರ್ಷಗಳ ಹಿಂದೆ ಒಂದು ಪ್ರೊಡಕ್ಷನ್ ಹೌಸ್ ಪ್ರಾರಂಭಿಸಿ, ಹಲವು ಧಾರಾವಾಹಿಗಳನ್ನು ನಿರ್ಮಾಣ ಮಾಡಿದ್ದೇವೆ. ಒಂದು ಚಿತ್ರ ನಿರ್ಮಾಣ ಮಾಡುವ ಯೋಚನೆ ಇತ್ತು. ಟಿ.ಕೆ. ದಯಾನಂದ್ ಅವರ ಹತ್ತಿರ ಒಂದೊಳ್ಳೆಯ ಕಥೆ ಇದೆ ಎಂದು ಗೊತ್ತಾಯಿತು. ಕಥೆ ಇಷ್ಟವಾಯಿತು. ಇದೇ ನಮ್ಮ ಸಂಸ್ಥೆಯ ಮೊದಲ ಚಿತ್ರವಾಗಬೇಕು ಎಂದು ತೀರ್ಮಾನಿಸಿ ಚಿತ್ರ ಮಾಡುತ್ತಿದ್ದೇವೆ. ಸತೀಶ್ ನೀನಾಸಂ ಸಹ ಕೈ ಜೋಡಿಸಿದ್ದಾರೆ. ವರ್ತಕರು ಮತ್ತು ಕಾರ್ಮಿಕರ ನಡುವೆ ನಡೆಯುವ ಯುದ್ಧದ ಕುರಿತು ಈ ಚಿತ್ರಲ್ಲಿ ಹೇಳುವ ಪ್ರಯತ್ನ ಮಾಡುತ್ತಿದ್ದೇವೆ' ಎಂದು ವಿನೋದ್ ದೋಂಡಾಳೆ ಮಾಹಿತಿ ನೀಡಿದರು

ವೃದ್ಧಿ ಕ್ರಿಯೇಷನ್ಸ್ ಹಾಗೂ ಸತೀಶ್ ಪಿಕ್ಚರ್ ಹೌಸ್ ಜಂಟಿಯಾಗಿ ಚಿತ್ರವನ್ನು ನಿರ್ಮಾಣ ಮಾಡುತ್ತಿವೆ.

ಪಿಟ್ಯುಟರಿ ಟ್ಯೂಮರ್ ಸಾಮಾನ್ಯವಾದುದಲ್ಲ.

ಅದನ್ನು ಹೊರತೆಗೆಯಲು ಪರಿಣಿತರ ಅಗತ್ಯವಿದೆ ಅವರು ತುಂಬ ವಿರಳ.



ಪಿಟ್ಯುಟರಿ ಟ್ಯೂಮರ್‌ನಿಂದ ನೀವು ಹೊರಬರಲು ಆಸ್ಟರ್ ಪರಿಣಿತರಿಂದ ಇತ್ತೀಚಿನ ತಂತ್ರಜ್ಞಾನಗಳನ್ನು ಬಳಸಿ ಅತ್ಯುತ್ತಮ ಫಲಿತಾಂಶಗಳನ್ನು ನೀಡುತ್ತಿದೆ.

ಅತ್ಯಾಧುನಿಕ ನ್ಯೂರೋ ತಂತ್ರಜ್ಞಾನಗಳು:
ಟ್ಯೂಮರ್ ಅನ್ನು ಹೊರತೆಗೆಯಲು ಇಂಟ್ರಾಅಪರೇಟಿವ್ ಎಂಆರ್‌ಐ, ಇಂಟ್ರಾಅಪರೇಟಿವ್ ನ್ಯೂರೋಮಾನಿಟರಿಂಗ್ ಮತ್ತು ನ್ಯೂರೋ ನ್ಯಾವಿಗೇಶನಲ್ ಸರ್ಜಿಕಲ್ ತಂತ್ರಜ್ಞಾನದ ಬಳಕೆ.

ಬಹುಶಿಸ್ತೀಯ ವಿಧಾನ :
ರೋಗದ ಸಮಗ್ರ ನಿರ್ಣಯ, ಮೌಲ್ಯಮಾಪನ ಮತ್ತು ಚಿಕಿತ್ಸೆಗಾಗಿ ವಿವಿಧ ತಜ್ಞರ ತಂಡವು ಅತ್ಯುತ್ತಮ ರೀತಿಯ ಚಿಕಿತ್ಸೆ ನೀಡುವ ಸಾಮರ್ಥ್ಯ ಹೊಂದಿದೆ.

ವ್ಯಕ್ತಿಗತ ಚಿಕಿತ್ಸೆ :
ರೋಗಿಯ ವಯಸ್ಸು, ಪ್ರಸ್ತುತ ಸ್ಥಿತಿ, ವೈದ್ಯಕೀಯ ಇತಿಹಾಸ ಮತ್ತು ಟ್ಯೂಮರ್ ಅನುಸಾರವಾಗಿ ಚಿಕಿತ್ಸೆ ನೀಡಲಾಗುವುದು.

Aster NEUROSCIENCES

Aster CMI HOSPITAL
#43/2, ನ್ಯೂ ಏರ್‌ಪೋರ್ಟ್ ರಸ್ತೆ, ಹೆಬ್ಬಾಳ, ಬೆಂಗಳೂರು-92.
080 4342 0100

Aster RV HOSPITAL
ಸಿಎ–37, 24ನೇ ಮೈನ್, 1ನೇ ಘಟ್ಟ ಜೆ.ಪಿ.ನಗರ, ಬೆಂಗಳೂರು-78
080 6604 0400

ಪ್ರಜಾವಾಣಿ ಶನಿವಾರ, 28 ಮೇ 2022

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಅಕ್ಕಿ ತೊಳೆದ ನೀರಿನಿಂದ ಮುಖ ತೊಳೆಯುವುದರಿಂದ ಮುಖದ ಕಾಂತಿ ಹೆಚ್ಚುತ್ತದೆ. ಅಲ್ಲದೇ ಕಲೆಗಳೂ ಕಡಿಮೆಯಾಗುತ್ತವೆ.

ಇರುವುದೆಲ್ಲವ ಬಿಟ್ಟು ಹುಡುಕುವುದೇನನ್ನು?

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

- **ನಾನು 24 ವರ್ಷದ ಯುವತಿ. ಸರ್ಕಾರಿ ಉದ್ಯೋಗದಲ್ಲಿದ್ದೇನೆ. ತರಬೇತಿಯಲ್ಲಿದ್ದಾಗ ಪರಿಚಯವಾದ ವಿವಾಹಿತನೊಬ್ಬನನ್ನು ನಾಲ್ಕು ವರ್ಷಗಳಿಂದ ಪ್ರೀತಿಸುತ್ತಿದ್ದೇನೆ. ಮದುವೆಯಾಗುವುದು ಸಾಧ್ಯವಿಲ್ಲ ಎಂದು ಅವರು ಹೇಳಿದ್ದರೂ ನಾನು ಸ್ವಚ್ಛ ಮನಸ್ಸಿನಿಂದ ಅವರನ್ನು ಇಷ್ಟಪಡುತ್ತಿದ್ದೇನೆ. ಅವರ ಮನೆಯಲ್ಲಿ ವಿಷಯ ತಿಳಿದು ಅವರು ನನ್ನನ್ನು ತಪ್ಪಿಸುತ್ತಿದ್ದಾರೆ. ಜೀವನವನ್ನೆಲ್ಲಾ ಅವರ ನೆನಪಿನಲ್ಲಿ ಕಳೆಯಲು ಸಿದ್ಧಳಿದ್ದೇನೆ. ನಮ್ಮ ಮನೆಯಲ್ಲಿ ಮದುವೆಯ ಪ್ರಸ್ತಾಪ ಮಾಡುತ್ತಿದ್ದಾರೆ. ನನಗೆ ಒಪ್ಪಿಕೊಳ್ಳಲಾಗುತ್ತಿಲ್ಲ. ನಾನೇ ಮನೆಗೆ ದೊಡ್ಡ ಮಗಳಾಗಿದ್ದು, ಮನೆಗೆ ಆಧಾರವಾಗಿರುವುದರಿಂದ ಸಾಯಲೂ ಆಗುತ್ತಿಲ್ಲ. ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ.

ದೀರ್ಘವಾದ ಪತ್ರ ನಿಮ್ಮ ಮಾನಸಿಕ ನೋವು, ಗೊಂದಲ, ಹೋರಾಟಗಳನ್ನು ನಿಚ್ಚಳವಾಗಿ ಹೇಳುತ್ತಿದೆ. ಸ್ವಲ್ಪ ನಿಂತು ಯೋಚಿಸಿ. ನಾನು ಹುಡುಕುತ್ತಿರುವುದು ಏನನ್ನು? ವ್ಯಕ್ತಿಯನ್ನೋ ಅಥವಾ ವ್ಯಕ್ತಿಯೊಬ್ಬನಿಂದ ದೊರೆಯಬಹುದಾದ ಪ್ರೀತಿಯನ್ನೋ? ಪ್ರೀತಿಯ ಭಾವನಾತ್ಮಕ ಅಗತ್ಯ ನಮಗೆಲ್ಲರಿಗೂ ಇರುವುದು ಸಹಜ. ಅಂತಹ ಪ್ರೀತಿ ಒಬ್ಬ ವ್ಯಕ್ತಿಯಿಂದ ದೊರೆತಾಗ ಅವನು ಪ್ರೀತಿಯ ಸಂಕೇತವಾಗುತ್ತಾನೆ. ಹಾಗಾಗಿ ವ್ಯಕ್ತಿಗೆ ಅಂಟಿಕೊಳ್ಳುತ್ತೇವೆ. ದುರಾದೃಷ್ಟವೋ ಏನೋ ನಿಮ್ಮ ಪ್ರೀತಿಯ ಅಗತ್ಯವನ್ನು ಪೂರೈಸಿದ ವ್ಯಕ್ತಿ ದೀರ್ಘಕಾಲದ ಸಂಬಂಧಕ್ಕೆ ಸೂಕ್ತವಾಗಿಲ್ಲ. ಇದು ಗೊತ್ತಿದ್ದರೂ ಅವನಿಂದ ದೂರ ಹೋಗಲಾಗದೆ ಕೊರಗುತ್ತಿದ್ದೀರಲ್ಲವೇ?

ಈಗ ಯೋಚಿಸಿ. ಹೀಗೆ ಅಂಟಿಕೊಳ್ಳುವ ಸ್ವಭಾವವನ್ನು ನಾನು ಹೇಗೆ ಬೆಳೆಸಿಕೊಂಡೆ? ಇದರ ಬೇರುಗಳು ನಿಮ್ಮ ಬಾಲ್ಯದ ಅನುಭವಗಳಲ್ಲಿರುತ್ತವೆ. ಕಳೆದುಕೊಳ್ಳುವ ಭಯ ಮತ್ತು ಹೊಸದನ್ನು ಹುಡುಕಿಕೊಳ್ಳಲಾರೆನೇನೋ ಎನ್ನುವ ಹಿಂಜರಿಕೆ ನಿಮ್ಮನ್ನು ಅವಾಸ್ತವಿಕ ಪ್ರೀತಿಯ ಪಂಜರದಲ್ಲಿ ಬಂಧಿಸಿದೆ. ಕಳೆದುಕೊಳ್ಳುವುದಕ್ಕೆ ಸಿದ್ಧರಾಗದಿದ್ದರೆ ಹೊಸದೇನೂ ಸಿಗುವುದಿಲ್ಲ. ಕಳೆದುಕೊಂಡಿರುವುದರ ದುಃಖ ಅಸಹಾಯಕತೆಗಳನ್ನು ತೀವ್ರವಾಗಿ ಅನುಭವಿಸಿ ಹೊರಹಾಕಿ. ನೋವು ಅಸಹಾಯಕತೆಗಳನ್ನು ಒಪ್ಪಿಕೊಳ್ಳುತ್ತಲೇ ನಿಮ್ಮೊಳಗೆ ಹುದುಗಿ ಕುಳಿತಿರುವ ಪ್ರೀತಿಗಾಗಿ ಕಾತರಿಸುತ್ತಿರುವ ಒಬ್ಬ

ಗೌರವಯುತ ಯುವತಿಯನ್ನು ಗುರುತಿಸಿ. ಅವಳನ್ನು ಗೌರವಿಸಿ. ನಂತರ ನಿಧಾನವಾಗಿ ನಾನು ಆ ವ್ಯಕ್ತಿಯಲ್ಲಿ ಆಕರ್ಷಕ ಎನ್ನಿಸುವಂಥದ್ದೇನನ್ನು ಕಂಡೆ ಎಂದು ಯೋಚಿಸಿ. ಅಂತಹ ಸಾವಿರಾರು ವ್ಯಕ್ತಿಗಳು ನಿಮ್ಮ ಸುತ್ತಲೂ ಇದ್ದಾರೆ. ನಿಮ್ಮ ಆತ್ಮಗೌರವವನ್ನು ಬಿಟ್ಟುಕೊಡದೆ ಅಂತವರನ್ನು ಹುಡುಕಿ. ಹತ್ತಿರದಲ್ಲಿ ಮನೋಚಿಕಿತ್ಸಕರಿದ್ದರೆ ಸಹಾಯ ಪಡೆಯಿರಿ.

- **ನಾನು 28 ವರ್ಷದ ಯುವಕ. ಸಣ್ಣ ಹುದ್ದೆಯಲ್ಲಿದ್ದು ಉನ್ನತ ಹುದ್ದೆ ಪಡೆಯಲು ಸ್ಪರ್ಧಾತ್ಮಕ ಪರೀಕ್ಷೆಗೆ ಓದುತ್ತಿದ್ದೇನೆ. ಓದುವುದನ್ನು ಬಿಟ್ಟರೆ ನನಗೆ ಹವ್ಯಾಸಗಳಿಲ್ಲ. ನನಗೆ ಭಯ ಆತಂಕ ಹೆಚ್ಚಾಗಿದೆ. ಜನರ ಜೊತೆ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡಲು ಸಾಧ್ಯವಾಗುತ್ತಿಲ್ಲ. ಒಬ್ಬನೇ ಇದ್ದಾಗ ಬೇಸರ, ಉದ್ವೇಗ ಹೆಚ್ಚಾಗಿ ನೀಲಿಚಿತ್ರಗಳ ಮೊರೆಹೋಗುತ್ತೇನೆ. ನನ್ನ ಸಮಸ್ಯೆಗಳಿಗೆ ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ.

ಭಯ, ಆತಂಕ, ಹಿಂಜರಿಕೆಗಳಲ್ಲಾ ನಿಮ್ಮ ಪ್ರತಿಕ್ಷಣದ ಅನುಭವಗಳು. ಇವುಗಳ ಮೂಲ ಎಲ್ಲಿರಬಹುದು? ನೀವು ಏನನ್ನೋ ಹುಡುಕುತ್ತಿದ್ದೀರಲ್ಲವೇ? ಇದನ್ನು ತಿಳಿಯಲು ಒಬ್ಬರೇ ಕುಳಿತು ನಿಮ್ಮ ಅಂತರಂಗಕ್ಕೆ ಹೋಗಿ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಿ. ಹೆಚ್ಚಿನ ಸಂಬಳದ ಹೊರತಾಗಿ ದೊಡ್ಡ ಹುದ್ದೆ ನನಗೆ ಮಾನಸಿಕವಾಗಿ ಏನನ್ನು ಕೊಡುತ್ತದೆ? ಹುದ್ದೆಯನ್ನು ಪಡೆದುಕೊಳ್ಳಲಾಗದಿದ್ದರೆ ನನಗೆ ನನ್ನ ಬಗ್ಗೆ ಏನನ್ನಿಸುತ್ತದೆ? ಹುದ್ದೆಯೊಂದಿಗೆ ನನ್ನ ವ್ಯಕ್ತಿತ್ವದ ಯಾವ ಅಂಶಗಳನ್ನು ಜೋಡಿಸಿಕೊಂಡಿದ್ದೇನೆ? ನಿಧಾನವಾಗಿ ನಿಮಗೆ ಹೊಳೆಯಬಹುದಾದ ಅಂಶವೆಂದರೆ ದೊಡ್ಡ ಹುದ್ದೆಯೇ ನಿಮ್ಮ ಆತ್ಮಗೌರವದ, ಜೀವನದ ಸಾರ್ಥಕತೆಯ ಆಧಾರ ಎಂದು ನೀವಂದುಕೊಂಡಿದ್ದೀರಿ. ಅದನ್ನು ಪಡೆಯಲು ಸಾಧ್ಯವಾಗದಿದ್ದರೆ ಎನ್ನುವ ಅನುಮಾನಗಳೇ ನಿಮ್ಮ ಭಯ ಆತಂಕಗಳ ಮೂಲ. ಈಗ ಯೋಚಿಸಿ. ದೊಡ್ಡ ಹುದ್ದೆಯ ಹೊರತಾಗಿ ನಿಮ್ಮೊಳಗೆ ಒಬ್ಬ ಉತ್ತಮ ವ್ಯಕ್ತಿ ಇರಬೇಕಲ್ಲವೇ? ಒಳ್ಳೆಯ ಸ್ನೇಹಿತ, ಪ್ರೇಮಿ, ಸುಸಂಸ್ಕೃತ ಪ್ರಜೆ, ಪ್ರಾಮಾಣಿಕ ಕೆಲಸಗಾರ ಮುಂತಾದವು. ನಿಮ್ಮೊಳಗಿರುವ ಇಂತಹ ಅಪ್ಪಟ ವ್ಯಕ್ತಿಯನ್ನು ಗುರುತಿಸಿ ಆನಂದಿಸಿ. ಅವನನ್ನು ಹೊರಗೆ ತಂದು ತೋರಿಸಿ. ಹಾಗೆಯೇ ದೊಡ್ಡ ಹುದ್ದೆಯ ಪ್ರಯತ್ನವನ್ನೂ ಮುಂದುವರೆಸಿ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ bhoomika@prajavani.co.in

ಸೌಂದರ್ಯವರ್ಧನೆಗೆ ಸಹಜ ಮಾರ್ಗ!

ಇತ್ತೀಚೆಗೆ ಕಿರುತೆರೆ ನಟಿಯೊಬ್ಬರು ದೇಹದ ಕೊಬ್ಬು ಕರಗಿಸುವುದಕ್ಕಾಗಿ ಶಸ್ತ್ರಚಿಕಿತ್ಸೆಗೆ ಒಳಗಾಗಿ ಜೀವವನ್ನೇ ಕಳೆದುಕೊಂಡರು. ದೇಹದ ಸೌಂದರ್ಯ ವೃದ್ಧಿಗಾಗಿ ಇಂಥ ಅವೈಜ್ಞಾನಿಕ ಮಾರ್ಗಗಳನ್ನು ಅನುಸರಿಸಿದ ಹಲವು ಸೆಲಬ್ರಿಟಿಗಳು ಬೇರೆ ಬೇರೆ ಕಾಯಿಲೆಗಳಿಂದ ತೊಂದರೆಗೀಡಾಗಿರುವ ಘಟನೆಗಳು ಸಾಕಷ್ಟು ಇವೆ. ಹಾಗಿದ್ದರೆ ಸೌಂದರ್ಯವರ್ಧನೆಗಿರುವ ಸಹಜ ಮಾರ್ಗಗಳೇನು? ಒಂದು ನೋಟ...

ಡಾ. ವೀಣಾ ಅರ್ಹಂತ್

ಸುಂದರವಾಗಿ ಕಾಣಬೇಕು ಎಂಬುದು ಎಲ್ಲರ ಮಹದಾಸೆ. ಅದರಲ್ಲೂ ಮಹಿಳೆಯರಲ್ಲಿ ತುಸು ಹೆಚ್ಚು. ವಿಶೇಷವಾಗಿ ಸಿನಿಮಾ, ಕ್ರಿಕೆಟ್, ಫ್ಯಾಷನ್ ಸೇರಿದಂತೆ ವಿವಿಧ ಕ್ಷೇತ್ರಗಳ ಸೆಲೆಬ್ರಿಟಿ ಹಾಗೂ ಕೆಲವು ಶ್ರೀಮಂತ ವರ್ಗದ ಮಹಿಳೆಯರಿಗೆ ದೇಹ ಸೌಂದರ್ಯ ರಕ್ಷಣೆ ಬಗ್ಗೆ ಅತೀವ ಕಾಳಜಿ. ಇಂಥವರು ಯೋಗ, ವ್ಯಾಯಾಮ, ಉತ್ತಮ ಆಹಾರ ಪದ್ಧತಿ, ಉತ್ತಮ ಜೀವನಶೈಲಿಯಂತಹ ಸೂಕ್ತ ಮಾರ್ಗದಲ್ಲಿ ಅಂಗಸೌಷ್ಟವ ರಕ್ಷಿಸಿಕೊಳ್ಳುವುದನ್ನು ಬಿಟ್ಟು, ದಿಢೀರೆಂದು ಅಂದ ವರ್ಧಿಸಿಕೊಳ್ಳಲು ಕೃತಕವಾಗಿ ದೇಹಾಕಾರ ಬದಲಿಸಿಕೊಳ್ಳುವ ಹುಚ್ಚು ಹವ್ಯಾಸಕ್ಕೆ ಬೀಳುತ್ತಿದ್ದಾರೆ. ಸ್ವಾಭಾವಿಕವಾಗಿ ರೂಪುಗೊಂಡಿರುವ ದೇಹವನ್ನು ಸರ್ಜರಿಗಳ ಮೂಲಕವೋ, ಔಷಧ ಸೇವಿಸುವ, ಅತಿಯಾಗಿ ಡಯೆಟ್ ಮಾಡುವ ಮೂಲಕವೋ ಅಂದ ಹೆಚ್ಚಿಸಿಕೊಳ್ಳುವುದು ಅಪಾಯಕಾರಿಯೂ ಹೌದು.

ಏನೇನು ಪರಿಣಾಮಗಳು?

ಜೀವನಶೈಲಿ, ಆಹಾರಕ್ರಮದಲ್ಲಾಗುವ ವ್ಯತ್ಯಾಸ, ದೈಹಿಕ ಶ್ರಮದ ಕೊರತೆ, ಕಾಲ ಕಾಲಕ್ಕೆ ದೇಹದೊಳಗೆ ಆಗುವ ಹಾರ್ಮೋನುಗಳ ಏರುಪೇರು... ಇಂಥ ಹಲವು ಕಾರಣಗಳಿಂದ ದೇಹದ ಸೌಂದರ್ಯದಲ್ಲಿ ವ್ಯತ್ಯಾಸವಾಗುವುದು ಸಹಜ.

ಸ್ಥೂಲಕಾಯ, ಮೈ ಬಣ್ಣ, ಎತ್ತರ ಎನ್ನುವುದು ಕೆಲವರಲ್ಲಿ ಆನುವಂಶೀಯವಾಗಿರುತ್ತದೆ. ಸ್ವಾಭಾವಿಕ ಗುಣಗಳನ್ನು ಮಾರ್ಪಡಿಸುವುದು ಕಷ್ಟ. ನೈಸರ್ಗಿಕ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಬಹುದಷ್ಟೇ. ಆದರೆ, ಕೆಲವರು ಇವೆಲ್ಲವನ್ನೂ ಮೀರಿ ದೇಹದ ಸೌಂದರ್ಯವೃದ್ಧಿಗೆ ಸಿಕ್ಕ ಸಿಕ್ಕ ಸಲಹೆಗಳು, ಅವೈಜ್ಞಾನಿಕ ಆಹಾರ ಪದ್ಧತಿಯನ್ನು ಅನುಸರಿಸಿ, ಅಡ್ಡ ಪರಿಣಾಮಗಳಿಂದ ಅನಾರೋಗ್ಯಕ್ಕೆ ತುತ್ತಾಗುತ್ತಾರೆ.

ಒಂದಷ್ಟು ಮನೆ ಮದ್ದು..

ಯೋಗ, ವ್ಯಾಯಾಮದಂತಹ ದೈಹಿಕ ಕಸರತ್ತು, ಪೌಷ್ಟಿಕಯುಕ್ತ ಆಹಾರ, ಜೀವನಶೈಲಿಯ ಜೊತೆಗೆ, ಮನೆಯಲ್ಲೇ ಲಭ್ಯವಿರುವ ಆಹಾರದಿಂದಲೂ ಬೊಜ್ಜು, ಕೊಬ್ಬು ಕರಗಿಸಬಹುದು. ಚರ್ಮದ ಆರೋಗ್ಯವನ್ನೂ ರಕ್ಷಿಸಬಹುದು. ಅಂಥ ಮನೆ ಮದ್ದುಗಳು ಇಲ್ಲಿವೆ.

ಲೋಳೆಸರ(ಅಲೋವೆರಾ) ಜ್ಯೂಸ್

ಪ್ರತಿನಿತ್ಯ 2 ಚಮಚ ತಾಜಾ ಅಲೋವೆರಾ ಜ್ಯೂಸ್‌ಗೆ ಅರ್ಧ ಕಪ್ ಬೆಚ್ಚಗಿನ ನೀರು ಸೇರಿಸಿ. ಖಾಲಿ ಹೊಟ್ಟೆಯಲ್ಲಿ ನಿರಂತರ ಮೂರು ತಿಂಗಳವರೆಗೆ ಸೇವಿಸಿ. ಇದರಿಂದ ಬೊಜ್ಜು ಕರಗುತ್ತದೆ. ಜೊತೆಗೆ ಚರ್ಮದ ಕಾಂತಿ ಹೆಚ್ಚುತ್ತದೆ. ಕೂದಲು ಆರೋಗ್ಯವಾಗಿರುತ್ತದೆ.

ಗ್ರೀನ್ ಟೀ

ಕುದ್ದಿರುವ ನೀರಿಗೆ ಗ್ರೀನ್ ಟೀ ಬ್ಯಾಗ್ ಮುಳುಗಿಸಿ. ಡಿಕಾಕ್ಷನ್‌ಗೆ ಕಾಲು ಚಮಚ ತಾಜಾ ನಿಂಬೆರಸ ಬೆರೆಸಿ. ಬಿಸಿ ಬಿಸಿಯಾಗಿ ಕುಡಿಯಿರಿ. ಇದು ಕೊಬ್ಬು ಕರಗಿಸಲು ನೆರವಾಗುತ್ತದೆ.

ಬಾದಾಮಿ ಸೇವನೆ

ಪ್ರತಿನಿತ್ಯ 5 ರಿಂದ 6 ನೆನೆಸಿದ ಬಾದಾಮಿಯ ಸಿಪ್ಪೆ ತೆಗೆದು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವಿಸಬೇಕು. ಇದರಲ್ಲಿರುವ ಒಮೆಗಾ 3 ಕೊಬ್ಬಿನ ಆಮ್ಲಗಳು ತೂಕ ಇಳಿಸಲು ನೆರವಾಗುತ್ತವೆ. ಚರ್ಮದ ಕಾಂತಿಯೂ ವೃದ್ಧಿಯಾಗುತ್ತದೆ.

ಪರಿಹಾರವೇನು?

ದೇಹದ ಸೌಂದರ್ಯಕ್ಕಾಗಿ, ಆರೋಗ್ಯ ಸಮಸ್ಯೆ ಸರಿಪಡಿಸಿಕೊಳ್ಳಲು ಆಯುರ್ವೇದ, ಯೋಗ, ಪ್ರಕೃತಿ ಚಿಕಿತ್ಸೆಯಲ್ಲಿ ಸಾಕಷ್ಟು ಪರಿಹಾರಗಳಿವೆ. ಆಯುರ್ವೇದ ಪದ್ಧತಿಯಲ್ಲಿ ಶೋಧನ, ಶಮನ ಚಿಕಿತ್ಸೆ ಎಂದು ಎರಡು ವಿಧವಾಗಿದ್ದು, ಪ್ರತಿ ವ್ಯಕ್ತಿಯ ಶಕ್ತಿ ಆಧರಿಸಿ, ದೇಹ ಪಕೃತಿ, ರೋಗಕ್ಕೆ ಅನುಸಾರವಾಗಿ, ಯಾವುದೇ ಅಡ್ಡ ಪರಿಣಾಮಗಳಿಲ್ಲದೆ ಚಿಕಿತ್ಸೆ ನೀಡಲಾಗುತ್ತದೆ. ಶೋಧನ ಚಿಕಿತ್ಸೆಯಲ್ಲಿ ಪಂಚಕರ್ಮ ವಿಧಾನಗಳು ಮತ್ತು ಶಮನ ಚಿಕಿತ್ಸೆಯಲ್ಲಿ ರೋಗಿಯ ಲಕ್ಷಣಗಳಿಗೆ ಅನುಸಾರವಾಗಿ, ಧಾತುಗತ, ದೋಷಗತ ಚಿಕಿತ್ಸೆ ಮಾಡಲಾಗುತ್ತದೆ.

ನೀವೇ ಮಾಡಬಹುದಾದದ್ದು

ದಿನನಿತ್ಯ ಅರ್ಧ ಗಂಟೆ ನಡೆದಾಡಿ. ಕಡ್ಡಾಯವಾಗಿ ನಿತ್ಯ ಯೋಗಾಸನ ಅಥವಾ ವ್ಯಾಯಾಮ ಮಾಡಿ. ಯೋಗಾಸನದಲ್ಲಿ ಸೂರ್ಯ ನಮಸ್ಕಾರ, ಭುಜಂಗಾಸನ, ಧನುರಾಸನದಂತಹ ಆಸನಗಳು ಬೊಜ್ಜು ಕರಗಿಸಲು ನೆರವಾಗುತ್ತವೆ. ದೇಹದ ತೂಕ ಇಳಿಸುವ ಜೊತೆಗೆ, ಸೌಂದರ್ಯವನ್ನು ಹೆಚ್ಚಿಸುತ್ತವೆ.

ಪ್ರಾಣಾಯಾಮ, ಧ್ಯಾನ ಮನಸ್ಸನ್ನು ಆರೋಗ್ಯವಾಗಿಡುತ್ತವೆ. ಮಾನಸಿಕ ಒತ್ತಡ ನಿವಾರಣೆಗೂ ಸಹಕಾರಿ. ಈ ಚಟುವಟಿಕೆಗಳ ಅಭ್ಯಾಸವಿಲ್ಲದಿದ್ದರೆ, ತಜ್ಞರು/ ಪರಿಣತರಿಂದ ತರಬೇತಿ ಪಡೆದು ನಂತರ ಅನುಷ್ಠಾನಕ್ಕೆ ತನ್ನಿ. ಯಾವುದೇ ಕಾರಣಕ್ಕೂ ತಪ್ಪು ತಪ್ಪಾಗಿ ಯೋಗ, ಪ್ರಾಣಾಯಾಮ ಮಾಡಬೇಡಿ.

ಸತ್ವಯುತ ಆಹಾರ ಸೇವನೆ

- ನಾರಿನಂಶವಿರುವ ತಾಜಾ ಹಣ್ಣುಗಳನ್ನು ತಿನ್ನಬೇಕು. ಊಟದಲ್ಲಿ ವೈವಿಧ್ಯಮಯ ತಾಜಾ, ಸ್ಥಳೀಯ ತರಕಾರಿಗಳನ್ನು ಬಳಸಿ. ಬೇಳೆ, ಕಾಳುಗಳಲ್ಲಿ ಪ್ರೊಟಿನ್ ಅಂಶ ಹೆಚ್ಚಾಗಿರುತ್ತದೆ. ತರಕಾರಿಗಳ ಜೊತೆಗೆ, ಬೇಳೆ-ಕಾಳುಗಳನ್ನು ಸೇವಿಸಿ.
- ಟೊಮೆಟೊ, ಸೌತೆಕಾಯಿ, ಸೋರೆಕಾಯಿ, ಕ್ಯಾಬೇಜ್‌ನಂತಹ ತರಕಾರಿಗಳಲ್ಲಿ ಅಧಿಕ ಪ್ರಮಾಣದ ನೀರಿನಂಶವಿದೆ. ಇಂಥವುಗಳನ್ನು ಸೇವಿಸುವುದರಿಂದ ದೇಹ ಮತ್ತು ಚರ್ಮದ ಆರೋಗ್ಯ ಸುಧಾರಿಸುತ್ತದೆ. ನಿಂಬೆ, ಕಿತ್ತಳೆ, ಮೋಸಂಬಿಯಂತಹ ಸಿಟ್ರಸ್ ಅಂಶವಿರುವ ಹಣ್ಣುಗಳನ್ನು ತಿನ್ನುವುದರಿಂದ ಚಯಾಪಚಯ ಕ್ರಿಯೆ ಹೆಚ್ಚುತ್ತದೆ. ರೋಗ ನಿರೋಧಕ ಶಕ್ತಿಯೂ ಹೆಚ್ಚುತ್ತದೆ.
- ಬಾದಾಮಿ, ಆಕ್ರೋಟ್, ಗೋಡಂಬಿ, ಪಿಸ್ತಾ, ಅಗಸೆ ಬೀಜಗಳಂತಹ ಒಣ ಬೀಜಗಳಲ್ಲಿ ಪ್ರೊಟೀನ್, ಖನಿಜಾಂಶ, ನಾರಿನ ಅಂಶ, ಆರೋಗ್ಯಕರ ಕೊಬ್ಬು ಹೊಂದಿರುವುದರಿಂದ ಚರ್ಮದ ಆರೋಗ್ಯ ರಕ್ಷಣೆ ಮಾಡುತ್ತವೆ.
- ಆಹಾರವನ್ನು ಸೇವಿಸುವಷ್ಟೇ ಪ್ರಮಾಣದಲ್ಲಿ ನೀರು ಸೇವಿಸುವುದು ಬಹಳ ಮುಖ್ಯ. ನಿತ್ಯ 8 ರಿಂದ 10 ಲೋಟ ನೀರು ಕುಡಿಯಬೇಕು. ಇದರಿಂದ ದೇಹದಲ್ಲಿರುವ ನಂಜಿನ ಅಂಶಗಳು ಹೊರಗೆ ಹೋಗಲು ಸಹಾಯವಾಗುತ್ತದೆ. ಇದು ದೇಹದ ಆರೋಗ್ಯ ಮತ್ತು ಸೌಂದರ್ಯವನ್ನು ರಕ್ಷಿಸುತ್ತದೆ.
- ನೆನಪಿರಲಿ: ಸಂಸ್ಕರಿತ ಆಹಾರ, ಜಂಕ್ ಫುಡ್, ಬಿಳಿ ಬ್ರೆಡ್, ಪಾಸ್ತಾ, ಸ್ಯಾಂಡ್‌ವಿಚ್ ಸೇವನೆಯಿಂದ ದೂರವಿರಿ. ಸಕ್ಕರೆ ಪ್ರಮಾಣವನ್ನು ಕಡಿಮೆ ಮಾಡಿ. ಸಾಧ್ಯವಾದರೆ ನೈಸರ್ಗಿಕ ಸಕ್ಕರೆ ಬಳಸಿ.

ನಿದ್ದೆಯೂ ಮುಖ್ಯ

ಯೋಗ, ಧ್ಯಾನ, ಪ್ರಾಣಾಯಾಮದಂತಹ ಚಟುವಟಿಕೆಗಳಷ್ಟೇ ನಿದ್ದೆಯೂ ಬಹಳ ಮುಖ್ಯ. ಪ್ರತಿ ನಿತ್ಯ 7 ರಿಂದ 8 ಗಂಟೆಗಳ ಕಾಲ ನಿದ್ರಿಸುವುದರಿಂದ ಉತ್ತಮ ಆರೋಗ್ಯ ಮತ್ತು ಸೌಂದರ್ಯ ಎರಡನ್ನೂ ಕಾಪಾಡಿಕೊಳ್ಳಬಹುದು.

ಇಂಥ ಸಣ್ಣ ಬದಲಾವಣೆಗಳು ದೊಡ್ಡ ಪರಿಣಾಮ ಬೀರುತ್ತವೆ. ಸರಿಯಾದ ಆಹಾರಕ್ರಮ, ವ್ಯಾಯಾಮ, ಯೋಗದಿಂದ ನೈಸರ್ಗಿಕವಾಗಿ ಸೌಂದರ್ಯವನ್ನು ಕಾಪಾಡಿಕೊಳ್ಳಬಹುದು. ಈ ಕ್ರಮಗಳ ಅನುಸರಣೆಯಲ್ಲಿ ಏನಾದರೂ ಗೊಂದಲವಿದ್ದರೆ ತಜ್ಞರ ಸಲಹೆ ಪಡೆದುಕೊಳ್ಳಿ.

(ಲೇಖಕರು ಆಯುರ್ವೇದ ವೈದ್ಯೆ)

ಎಳೆ ಮಕ್ಕಳಿಗೆ ಬಗೆಬಗೆ ತಿನಿಸು

> **“ಆರು ತಿಂಗಳವರೆಗೆ ತಾಯಿಯ ಎದೆಹಾಲೇ ಅಮೃತ. ತಾಯಿ ಹಾಲು ಸಾಕಾಗದಿದ್ದರೆ ವೈದ್ಯರು ಸೂಚಿಸುವ ಫಾರ್ಮುಲಾ ಹಾಲು ಉಣಿಸಬಹುದು. ಆರು ತಿಂಗಳಿಗೆ ಮುಂಚೆ ಅನ್ನ ಅಥವಾ ಬೇರೆ ಆಹಾರ ಕೊಡುವುದನ್ನು ಸಾಧ್ಯವಾದಷ್ಟು ತಪ್ಪಿಸಿ.”**
>
> **ಡಾ. ಅನಿಲ್ ಕುಮಾರ್**
>
> ಮಕ್ಕಳ ತಜ್ಞ, ಮಣಿಪಾಲ ಆಸ್ಪತ್ರೆ, ಮೈಸೂರು

ಹರವು ಸ್ಫೂರ್ತಿ

ಜನಿಸಿದ ಆರು ತಿಂಗಳ ನಂತರ ಮಗುವಿಗೆ ಮೇಲಾಹಾರ ನೀಡಲು ಆರಂಭಿಸುವಾಗ ಏನು ಕೊಡಬೇಕು, ಏನು ಕೊಡಬಾರದು ಎಂಬ ಬಗ್ಗೆ ಕೆಲವು ಅಮ್ಮಂದಿರಿಗೆ ಗೊಂದಲವಿರುತ್ತದೆ. ಅಲ್ಲದೆ ಮಗುವಿನ ಬೆಳವಣಿಗೆಗೆ ಬೇಕಾದ ಪೂರಕ ಪೋಷಕಾಂಶಗಳು ಕೇವಲ ತಾಯಿಯ ಎದೆ ಹಾಲಿನಿಂದಲೇ ಸಿಗುವುದಿಲ್ಲ. ಹಾಗಾಗಿ ಯಾವ ಪದಾರ್ಥಗಳಿಂದ ಮಗುವಿಗೆ ಆಹಾರ ತಯಾರಿಸಬಹುದು? ಈ ಕುರಿತ ಮಾಹಿತಿ ಹಾಗೂ ಕೆಲವು ರೆಸಿಪಿಗಳು ಇಲ್ಲಿದೆ

ರಾಗಿ ಸರಿ

ಬೇಕಾಗುವ ಸಾಮಗ್ರಿಗಳು: ರಾಗಿ 1ಕೆ.ಜಿ, ಗೋಧಿ ಒಂದು ಬಟ್ಟಲು, ಅಕ್ಕಿ ಒಂದು ಬಟ್ಟಲು, ಕಡಲೆಬೇಳೆ, ಉದ್ದಿನಬೇಳೆ, ಹೆಸರುಬೇಳೆ, ಬಟಾಣಿ, ಮೆಂತ್ಯೆ, ಸೋಯಾಬೀನ್ ತಲಾ 2 ಚಮಚ, ಒಂದು ಕರಿಮೆಣಸಿನ ಕಾಳು, ಲವಂಗ ಒಂದು, ಒಂದು ಇಂಚು ಜಾಯಿಕಾಯಿ, ಒಂದು ಇಂಚು ಬಜೆ ಬೇರು.

ಮಾಡುವ ವಿಧಾನ: ರಾಗಿ ಮೊಳಕೆ ಬರಿಸಿ ನೆರಳಲ್ಲಿ ಒಣಗಿಸಿ, ಸ್ವಲ್ಪ ಬಿಸಿ ಮಾಡಿಕೊಳ್ಳಬೇಕು. ಉಳಿದ ಎಲ್ಲಾ ಸಾಮಗ್ರಿಗಳನ್ನು ಸ್ವಲ್ಪ ಬಿಸಿ ಮಾಡಿಕೊಳ್ಳಬೇಕು. ಎಲ್ಲವನ್ನು ಒಟ್ಟಿಗೆ ಸೇರಿಸಿ ಪುಡಿಮಾಡಿ, ತೆಳುವಾದ ಬಟ್ಟೆಯಿಂದ ಜರಡಿ ಹಿಡಿದಿಟ್ಟುಕೊಳ್ಳಬೇಕು. ಒಂದು ಚಮಚ ಪುಡಿಗೆ ನೀರು ಮಿಶ್ರಣ ಮಾಡಿ ಕುದಿಸಿಕೊಳ್ಳಬೇಕು.

ಮೊದಲ ಬಾರಿ ತಿನ್ನಿಸುವಾಗ ಗಂಜಿಯ ಹದಕ್ಕೆ ರಾಗಿ ಸರಿ ಮಾಡಿಕೊಳ್ಳಬೇಕು. ಇದನ್ನು ಸ್ವಲ್ಪ ಸ್ವಲ್ಪವೇ ಮಗುವಿಗೆ ತಿನ್ನಿಸಬೇಕು. ಇದು ಅಭ್ಯಾಸವಾದ ನಂತರ ಪ್ರತಿ ತಿಂಗಳೂ ಒಂದೊಂದು ಚಮಚ ಹೆಚ್ಚಿಸುತ್ತಾ ಗಟ್ಟಿ ಹದ ಬರುವಂತೆ ಮಾಡಿಕೊಳ್ಳಬಹುದು. ಅದಕ್ಕೆ ಸ್ವಲ್ಪ ತುಪ್ಪ ಸೇರಿಸಿ ತಿನ್ನಿಸಬಹುದು. ರುಚಿಗೆ ಕಲ್ಲು ಸಕ್ಕರೆ ಅಥವ ಬೆಲ್ಲ ಸೇರಿಸಬಹುದು. ಒಂದು ವರ್ಷದ ನಂತರ ಒಂದು ಚಮಚ ಒಣಹಣ್ಣುಗಳು, ನಟ್ಸ್ ಪುಡಿ ಸೇರಿಸಿ ತಿನ್ನಿಸಬಹುದು.

ಉಪ್ಪು, ಸಕ್ಕರೆ ತಪ್ಪಿಸಿ



ಎಳೆ ಮಕ್ಕಳಿಗೆ ಉಪ್ಪು ಸಕ್ಕರೆಯನ್ನು ಜೀರ್ಣಿಸಿಕೊಳ್ಳುಲು ಕಷ್ಟವಾಗುತ್ತೆ. ರುಚಿಗೆ ಎಂದು ನಾವು ಉಪ್ಪು ಅಥವಾ ಸಕ್ಕರೆ ಸೇರಿಸುವುದರಿಂದ ಮಕ್ಕಳ ಕಿಡ್ನಿಗೆ ಹೆಚ್ಚಿನ ಒತ್ತಡ ಬೀಳುತ್ತದೆ. ಎರಡು ವರ್ಷದವರೆಗೂ ಮಗುವಿನ ಅಂಗಾಂಗಗಳೂ ಅತಿ ಸೂಕ್ಷ್ಮವಾಗಿರುತ್ತವೆ. ಅದಕ್ಕೆ ಹೆಚ್ಚಿನ ಒತ್ತಡ ನೀಡಬಾರದು. ಸುಲಭವಾಗಿ ಜೀರ್ಣವಾಗುವ ಲಘು ಆಹಾರವನ್ನು ನೀಡಬೇಕು.

ಡಾ. ಅಶ್ವಿನಿ ಎಂ.ಜೆ., ಎಸ್‌ಡಿಎಂ ಆಯುರ್ವೇದ ಕಾಲೇಜಿನ ಶಾಲಾಕ್ಯ ತಂತ್ರ (ಇಎನ್‌ಟಿ) ವಿಭಾಗದ ಮುಖ್ಯಸ್ಥೆ, ಹಾಸನ

ಕಿಚಡಿ

ಬೇಕಾಗುವ ಸಾಮಗ್ರಿಗಳು: ಒಂದು ಚಮಚ ಅಕ್ಕಿ, ಒಂದು ಚಮಚ ಬೇಳೆ, ಒಂದು ಚಮಚ ಹೆಸರು ಬೇಳೆ, ಸ್ವಲ್ಪ ಆಲೂಗೆಡ್ಡೆ, ಬೀಟ್‌ರೂಟ್, ಕ್ಯಾರೆಟ್ ಹಾಗೂ ಪಾಲಕ್, ನುಗ್ಗೆಸೊಪ್ಪು

ಮಾಡುವ ವಿಧಾನ: ಅಕ್ಕಿ, ಬೇಳೆಗಳೊಂದಿಗೆ ತರಕಾರಿ ಸೊಪ್ಪು ಸೇರಿಸಿ ಕುಕ್ಕರ್‌ನಲ್ಲಿ ಚೆನ್ನಾಗಿ ಬೇಯಿಸಿಕೊಳ್ಳಬೇಕು. ನಂತರ ತರಿತರಿಯಾಗಿ ಬ್ಲೆಂಡ್ ಮಾಡಿಕೊಳ್ಳಬೇಕು. ಕೈಯಲ್ಲೇ ಚೆನ್ನಾಗಿ ಹಿಚುಕಿ ತಿನ್ನಿಸಬಹುದು. ಮಗುವಿಗೆ 7 ತಿಂಗಳಾದ ನಂತರ ಈ ಕಿಚಡಿ ನೀಡಬಹುದು. ಈ ಕಿಚಡಿಗೆ ಹೆಚ್ಚು ಉಪ್ಪು ಸೇರಿಸಬೇಡಿ.

ತರಕಾರಿ ಹಾಗೂ ಹಣ್ಣಿನ ಪ್ಯೂರಿ

ಗೆಣಸು, ಆಲೂಗೆಡ್ಡೆ, ಕ್ಯಾರೆಟ್, ಬೀಟ್‌ರೂಟ್, ಕುಂಬಳಕಾಯಿ ಹಾಗೂ ಬಾಳೆಹಣ್ಣು, ಪಪ್ಪಾಯ, ಸಪೋಟಾ, ದಾಳಿಂಬೆ, ಸೀಬೆಹಣ್ಣು, ಸೇಬು, ಬಟರ್‌ಫ್ರೂಟ್‌ನಲ್ಲಿ ಹೆಚ್ಚು ಪೋಷಕಾಂಶವಿರುವುದರಿಂದ ಮಕ್ಕಳಿಗೆ ನೀಡುವುದು ಒಳ್ಳೆಯದು. ಒಂದು ಬಾರಿ ಒಂದೇ ಹಣ್ಣಿನ ಅಥವಾ ತರಕಾರಿಯ ಪ್ಯೂರಿ ಮಾಡಿಕೊಡಬೇಕು.

ಹಣ್ಣುಗಳನ್ನು ಹಬೆಯಲ್ಲಿ ಬೇಯಿಸಿ ಸ್ಮ್ಯಾಶ್ ಮಾಡಿ ನೇರವಾಗಿ ಮಗುವಿಗೆ ನೀಡಬಹುದು. ಪ್ಯೂರಿ ಮಾಡಲು ಹಾಲು ಬಳಸಬಾರದು. ತೀರ ಗಟ್ಟಿ ಎನಿಸಿದರೆ ಸ್ವಲ್ಪ ಬಿಸಿ ನೀರು ಸೇರಿಸಿಕೊಳ್ಳಬಹುದು. ತರಕಾರಿಗಳನ್ನು ಕೂಡ ಇದೇ ರೀತಿ ಹಬೆಯಲ್ಲಿ ಬೇಯಿಸಿ ಸ್ಮ್ಯಾಶ್ ಮಾಡಿ ಕೊಡಬಹುದು.

ಒಣಹಣ್ಣುಗಳ ಪ್ಯೂರಿ

ಎಂಟು ತಿಂಗಳ ನಂತರ ಒಣಹಣ್ಣುಗಳ ಪ್ಯೂರಿ ನೀಡಬಹುದು. ಬಾದಾಮಿ, ಗೋಡಂಬಿ, ವಾಲ್‌ನಟ್, ಪಿಸ್ತಾ, ಕಡಲೇಕಾಯಿ, ಕುಂಬಳಕಾಯಿ ಬೀಜ, ಖರ್ಜೂರ, ಅಂಜೂರ, ಜರ್ದಾಳು (ಏಪ್ರಿಕಾಟ್), ಒಣ ದ್ರಾಕ್ಷಿಯನ್ನು ರಾತ್ರಿಯೇ ನೆನೆಹಾಕಿ ಬೆಳಿಗ್ಗೆ ಹಬ್ಬೆಯಲ್ಲಿ ಬೇಯಿಸಿ, ರುಬ್ಬಿ ಪೇಸ್ಟ್ ಮಾಡಿ ತಿನ್ನಿಸಬಹುದು. ಇದಕ್ಕೆ ಹಣ್ಣುಗಳನ್ನು ಸೇರಿಕೊಡಬಹುದು. ಹೆಚ್ಚು ಪೋಷಕಾಂಶವಿರುವ ಕಾರಣ ಕೆಲವು ಮಕ್ಕಳಿಗೆ ಜೀರ್ಣವಾಗುವುದಿಲ್ಲ. ಒಂದು ಚಮಚ ಪ್ಯೂರಿ ತಿನ್ನಿಸಲು ಆರಂಭಿಸಿ ನಂತರ ನಿಧಾನವಾಗಿ ಒಂದು ಬಟ್ಟಲವರೆಗೆ ಹೆಚ್ಚಿಸಿಕೊಳ್ಳಬಹುದು.